prajavani.net prajavani
ಸೋಮವಾರ, ಜೂನ್ 29, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 179 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ವಿಂಬಲ್ಡನ್ ಕಣಕ್ಕೆ ಸೆರೆನಾ
ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಸೋಮವಾರ ಆರಂಭವಾಗಲಿರುವ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಅಮೆರಿಕದ 44 ವರ್ಷದ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಕಣಕ್ಕಿಳಿಯಲಿದ್ದಾರೆ.

ಮುಂದೆಯೂ ನಾವೇ ಅಧಿಕಾರಕ್ಕೆ:ಡಿಕೆಶಿ 5
ಟೌನ್‌ಶಿಪ್ ವಿರೋಧಿಸಿ 'ಅಪ್ಪಿಕೊ ಚಳವಳಿ' 7

ಮನೆ ಮನೆ ಭೇಟಿ ನಾಳೆಯಿಂದ

ಜೂನ್ 30ರಿಂದ ಜುಲೈ 29ರವರೆಗೆ ಮತದಾರರಿಗೆ ಗಣತಿ ನಮೂನೆ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪೂರ್ವಸಿದ್ಧತೆಗಳು ಅಂತಿಮಗೊಂಡಿದ್ದು, ಮತಗಟ್ಟೆ ಮಟ್ಟದ ಅಧಿಕಾರಿಗಳು ಜೂನ್ 30ರ ಮಂಗಳವಾರದಿಂದ ಮನೆ–ಮನೆ ಭೇಟಿ ಆರಂಭಿಸಲಿದ್ದಾರೆ.

ಇನ್ನೊಂದೆಡೆ ರಾಜಕೀಯ ಪಕ್ಷಗಳು, ಸಾಮಾಜಿಕ ಸಂಘಟನೆಗಳು ಎಸ್‌ಐಆರ್ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಿವೆ.

ರಾಜ್ಯದಲ್ಲಿ ಎಸ್‌ಐಆರ್ ನಡೆಸಲು ಭಾರತೀಯ ಚುನಾವಣಾ ಆಯೋಗವು ಮೇ 15ರಂದು ವೇಳಾಪಟ್ಟಿ ಪ್ರಕಟಿಸಿತ್ತು. ಅದರ ಬೆನ್ನಲ್ಲೇ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ಎಸ್‌ಐಆರ್ ಪ್ರಕ್ರಿಯೆಗೆ ಒಟ್ಟು 59,050 ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ), 5,905 ಬಿಎಲ್‌ಒ ಮೇಲ್ವಿಚಾರಕರು, 336 ಸಹಾಯಕ ಮತದಾರರ ನೋಂದಣಾಧಿಕಾರಿ ಮತ್ತು 224 ಮತದಾರರ ನೋಂದಣಾಧಿಕಾರಿಗಳನ್ನು ನಿಯೋಜನೆ ಮಾಡಿತ್ತು.

ಈ ಪೈಕಿ ಮತದಾರರ ನೋಂದಣಾಧಿಕಾರಿಗಳಿಗೆ ತರಬೇತಿಯನ್ನು ಮೇ 20ರಿಂದ ಆರಂಭಿಸಲಾಗಿತ್ತು. ಮುಂದುವರಿದು, ಸಹಾಯಕ ಮತದಾರರ ನೋಂದಣಾಧಿಕಾರಿ, ಬಿಎಲ್‌ಒ ಮೇಲ್ವಿಚಾರಕರಿಗೆ ತರಬೇತಿ ನೀಡಲಾಗಿತ್ತು. ಮೊದಲ ಹಂತದಲ್ಲಿ 59,050 ಬಿಎಲ್‌ಒಗಳಿಗೆ ಜೂನ್ 20ರಿಂದ ತರಬೇತಿ ಮತ್ತು ಎನ್ಯೂಮರೇಷನ್ ಅರ್ಜಿಗಳ (ಗಣತಿ ನಮೂನೆ) ಮುದ್ರಣ ಕಾರ್ಯ ಆರಂಭಿಸಲಾಗಿತ್ತು.

ಈಗ ತರಬೇತಿ ಮತ್ತು ಗಣತಿ ನಮೂನೆಗಳ ಮುದ್ರಣ ಕಾರ್ಯ ಬಹುತೇಕ ಮುಗಿದಿದ್ದು, ಬಿಎಲ್‌ಒಗಳು ಮಂಗಳವಾರದಿಂದ ತಮ್ಮ ವ್ಯಾಪ್ತಿಯ ಮನೆಗಳಿಗೆ ಭೇಟಿ ನೀಡಲಿದ್ದಾರೆ. ಭೇಟಿಯ ವೇಳೆ ಆಯಾ ಕುಟುಂಬದಲ್ಲಿರುವ ಮತದಾರರ ಗಣತಿ ನಮೂನೆಗಳನ್ನು ವಿತರಿಸಲಿದ್ದಾರೆ. ಜತೆಗೆ, ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಲಿದ್ದಾರೆ. ಜುಲೈ 29ರವರೆಗೂ ಈ ಕಾರ್ಯ ನಡೆಯಲಿದೆ.

ಆಗಸ್ಟ್ 5ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟ ಮಾಡಲಾಗುತ್ತದೆ. ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

ಎಸ್‌ಐಆರ್

ರಾಜಕೀಯ ಪಕ್ಷಗಳಿಂದ ತರಬೇತಿ

ಎಸ್‌ಐಆರ್ ಪ್ರಕ್ರಿಯೆ ಹೇಗೆ ನಡೆಯುತ್ತದೆ, ಯಾವೆಲ್ಲಾ ದಾಖಲೆ ಪತ್ರಗಳನ್ನು ಇರಿಸಿಕೊಳ್ಳಬೇಕು ಎಂಬುದರ ಬಗ್ಗೆ ಕಾರ್ಯಕರ್ತರು ಮತ್ತು ಮತದಾರರಿಗೆ ಅರಿವು ಮೂಡಿಸಲು ರಾಜಕೀಯ ಪಕ್ಷಗಳು ಜಾಗೃತಿ ಕಾರ್ಯಕ್ರಮವನ್ನು ಆರಂಭಿಸಿವೆ.

ಕಾಂಗ್ರೆಸ್ ತಮ್ಮ ಮತಗಟ್ಟೆ ಮಟ್ಟದ ಏಜೆಂಟರಿಗೆ (ಬಿಎಲ್‌ಎ) ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ತರಬೇತಿ ಕಾರ್ಯಾಗಾರಗಳನ್ನು ಈಗಾಗಲೇ ಆಯೋಜಿಸಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಿ ಎಂದು ಸೂಚಿಸಿದ್ದು, ಅವರಿಗೆ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಿದೆ. ಬಿಜೆಪಿಯು ತನ್ನ ಮತಗಟ್ಟೆ ಮಟ್ಟದ ಏಜೆಂಟರು ಮತ್ತು ಪಕ್ಷದ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. 7

ವೇಳಾಪಟ್ಟಿ	
ಪ್ರಕ್ರಿಯೆ	ಅವಧಿ
ಬಿಎಲ್‌ಒಗಳಿಂದ ಮನೆ–ಮನೆ ಭೇಟಿ	ಜೂನ್ 30ರಿಂದ ಜುಲೈ 29
ಕರಡು ಮತದಾರರ ಪಟ್ಟಿ ಪ್ರಕಟ	ಆಗಸ್ಟ್ 5
ಕ್ಲೇಮು ಮತ್ತು ಆಕ್ಷೇಪ ಸಲ್ಲಿಕೆ	ಆಗಸ್ಟ್ 5ರಿಂದ ಸೆಪ್ಟೆಂಬರ್ 4
ಕ್ಲೇಮು ಮತ್ತು ಆಕ್ಷೇಪಗಳ ಕುರಿತು ನೋಟಿಸ್ ನೀಡುವಿಕೆ ಹಾಗೂ ವಿಲೇವಾರಿ	ಆಗಸ್ಟ್ 5ರಿಂದ ಅಕ್ಟೋಬರ್ 2ರವರೆಗೆ
ಅಂತಿಮ ಮತದಾರರ ಪಟ್ಟಿ ಪ್ರಕಟಣೆ	ಅಕ್ಟೋಬರ್ 7

> **ಜೂನ್ 30ರಿಂದ ಎಸ್‌ಐಆರ್ ಪ್ರಾರಂಭವಾಗುತ್ತಿದೆ. ಬಿಜೆಪಿಯು ಈ ದೇಶದ ಶ್ರಮಿಕರು, ಕಾರ್ಮಿಕರ ಮತಗಳನ್ನು ಅಳಿಸುತ್ತಿದೆ. ಎಲ್ಲರೂ ಇದರ ಬಗ್ಗೆ ಎಚ್ಚರದಿಂದ ಇರಬೇಕು**
> **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

'ಎಚ್ಚರವಿಲ್ಲದಿದ್ದರೆ ಪ್ರಜಾಪ್ರಭುತ್ವದ ಮಾರಣಹೋಮ'

ಮೈಸೂರು: 'ದೇಶದ ಸಂವಿಧಾನ ಉಳಿವಿಗೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಪ್ರತಿಯೊಬ್ಬರೂ ಜಾಗೃತಿ ವಹಿಸಬೇಕು. ಇಲ್ಲವಾದರೆ ಈ ದೇಶ ಮತ್ತೆ ಸರ್ವಾಧಿಕಾರಕ್ಕೆ ಹೋಗಲಿದ್ದು, ಪ್ರಜಾಪ್ರಭುತ್ವದ ಮಾರಣಹೋಮ ಆಗುತ್ತದೆ' ಎಂದು ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದರಾಮಯ್ಯ ಎಚ್ಚರಿಸಿದರು.

ಸಿದ್ದರಾಮಯ್ಯ

ಇಲ್ಲಿನ ಜೆ.ಕೆ.ಮೈದಾನದಲ್ಲಿ ಭಾನುವಾರ ಕಾಂಗ್ರೆಸ್ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಎಸ್‌ಐಆರ್ ಜಾಗೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

'ಮತದಾನ ಎಲ್ಲ ವಯಸ್ಕರ ಹಕ್ಕು. ಇದನ್ನು ಮೊಟಕುಗೊಳಿಸುವ ಅಧಿಕಾರ ಯಾರಿಗೂ ಇಲ್ಲ' ಎಂದರು.

'ಸದ್ಯ ನಡೆದಿರುವ ಎಸ್‌ಐಆರ್ ಪ್ರಕ್ರಿಯೆಯು ಜನಪ್ರತಿನಿಧಿಗಳ ಅಳಿವು- ಉಳಿವಿನ ಪ್ರಶ್ನೆ. 2004ರ ವಿಧಾನಸಭೆ ಚುನಾವಣೆಯಲ್ಲಿ ಸಂತೇಮರಹಳ್ಳಿ ಕ್ಷೇತ್ರದಿಂದ ಎ.ಆರ್. ಕೃಷ್ಣಮೂರ್ತಿ ಒಂದು ಮತದಿಂದ ಸೋತರು. ಹೀಗಾಗಿ ಪ್ರತಿ ಮತವೂ ಅಮೂಲ್ಯ. ಜಾಗೃತಿ ವಹಿಸಿ ಪ್ರತಿ ಅರ್ಹ ಮತದಾರನೂ ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳುವುದು ಎಲ್ಲ ಹಾಲಿ–ಮಾಜಿ ಶಾಸಕರು, ಸಂಸದರ ಜವಾಬ್ದಾರಿ. ಪಕ್ಷದ ಕಾರ್ಯಕರ್ತರು ಮುಂದಿನ ಒಂದು ತಿಂಗಳು ಎಲ್ಲ ಕೆಲಸ ಬದಿಗೊತ್ತಿ. ನಮಗೆ ಸಂವಿಧಾನ ಬದ್ಧವಾಗಿ ಕಾರ್ಯ ನಿರ್ವಹಿಸುವ ಚುನಾವಣಾ ಆಯೋಗ ಇಲ್ಲ ಎಂಬುದು ನೆನಪಿನಲ್ಲಿರಲಿ' ಎಂದು ಹೇಳಿದರು.

ಕಷ್ಟ ಆಗಲಿದೆ: 'ಬಿಜೆಪಿಯು ಎಸ್‌ಐಆರ್ ಹೆಸರಿನಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳ ಮತದಾರರ ಹೆಸರನ್ನು ಕೈಬಿಡಲು ಹೊರಟಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ದೇಶದಲ್ಲಿ ಶೇ 36ರಷ್ಟು ಮಂದಿ ಬಿಜೆಪಿ ಪರವಾಗಿ ಮತಹಾಕಿದ್ದರೆ, ಉಳಿದ ಶೇ 64ರಷ್ಟು ಮಂದಿ ಅವರ ವಿರುದ್ಧವಾಗಿ ಇದ್ದಾರೆ. ಅವರಲ್ಲಿ ಶೇ 10ರಷ್ಟು ಜನರ ಹೆಸರು ಕೈಬಿಟ್ಟರೂ ಕಷ್ಟ ಆಗಲಿದೆ' ಎಂದು ತಿಳಿಸಿದರು.

'ಲೋಕಸಭೆಯಲ್ಲಿ 2019ರಲ್ಲಿ ಬಿಜೆಪಿ 303 ಸ್ಥಾನ ಇದ್ದದ್ದು ಈಗ 240ಕ್ಕೆ ಇಳಿದಿದೆ. ಇದಕ್ಕೆ ಅವರ ದುರಾಡಳಿತ ಕಾರಣ. ಅವರೆಂದೂ ಬಹುಮತ ಪಡೆದು ಅಧಿಕಾರಕ್ಕೆ ಬಂದಿಲ್ಲ. ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕಿಂತ ಸರ್ವಾಧಿಕಾರದಲ್ಲೇ ಅವರಿಗೆ ನಂಬಿಕೆ. ಹೀಗಾಗಿಯೇ ಒಂದು ದೇಶ, ಒಂದು ಚುನಾವಣೆ ಎಂದು ಪ್ರತಿಪಾದನೆ ಮಾಡುತ್ತಿದ್ದಾರೆ' ಎಂದು ದೂರಿದರು.

'ಜೂನ್ 30ರಿಂದ ಜುಲೈ 29ರವರೆಗೆ ನಡೆಯಲಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸಕ್ರಿಯವಾಗಿ ಪಾಲ್ಗೊಂಡು, ಹೆಸರು ಮತದಾರರ ಪಟ್ಟಿಯಿಂದ ಕೈತಪ್ಪದಂತೆ ನೋಡಿಕೊಳ್ಳಬೇಕು' ಎಂದು ಕೋರಿದರು. 7

ಅಪ್ಪಿಕೊ ಚಳವಳಿ

ಪ್ರಜಾವಾಣಿ ಚಿತ್ರ:

ಬಿಡದಿ ಟೌನ್‌ಶಿಪ್ ವಿರೋಧಿಸಿ ಹೋರಾಟ ನಡೆಸುತ್ತಿರುವ ರೈತರು, ಯೋಜನಾ ಪ್ರದೇಶದಲ್ಲಿ ಮರಗಿಡಗಳ ನಾಶ ವಿರೋಧಿಸಿ ಬನ್ನಿಗಿರಿ ಗ್ರಾಮದಲ್ಲಿ ತೆಂಗು ಮತ್ತು ಅಡಿಕೆ ಮರಗಳನ್ನು ಅಪ್ಪಿಕೊಂಡು ಚಳವಳಿ ನಡೆಸಿದರು

ಬಂಧಿತರ ಮನೆಗಳಲ್ಲಿ ಶೋಧ

ರಾಮಮಂದಿರದಲ್ಲಿ ಕಾಣಿಕೆ–ದೇಣಿಗೆ ಕಳವು ಪ್ರಕರಣ

ಅಯೋಧ್ಯೆ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿನ ರಾಮಮಂದಿರದಲ್ಲಿ ಕಾಣಿಕೆ ಹಾಗೂ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಅಯೋಧ್ಯೆಯ ಪೊಲೀಸರು 8 ಮಂದಿ ಆರೋಪಿಗಳ ಮನೆಗಳಲ್ಲಿ ಭಾನುವಾರ ಏಕಕಾಲಕ್ಕೆ ಶೋಧ ನಡೆಸಿದರು.

ಆರೋಪಿಗಳಾದ ಲವ್‌ಕುಶ್ ಮಿಶ್ರಾ, ಅವಿನಾಶ್ ಶುಕ್ಲಾ ಹಾಗೂ ರಾಮಶಂಕರ್ ಯಾದವ್ ಸೇರಿದಂತೆ ಇತರೆ ಆರೋಪಿಗಳ ಮನೆಗಳಲ್ಲಿ ಸ್ಥಳೀಯ ಮ್ಯಾಜಿಸ್ಟ್ರೇಟ್‌ಗಳ ಜೊತೆಗೂಡಿ ಶೋಧ ನಡೆಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. 8 ಮಂದಿ ಆರೋಪಿಗಳನ್ನು ಜೂನ್ 29ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಇದಾದ ಎರಡು ದಿನಗಳ ಅಂತರದಲ್ಲಿ ಈ ಶೋಧ ನಡೆದಿದೆ. 5

'ಸುಪ್ರೀಂ ನೇತೃತ್ವದಲ್ಲಿ ತನಿಖೆಯಾಗಲಿ'

ತಿರುವನಂತಪುರಂ (ಪಿಟಿಐ): 'ರಾಮಮಂದಿರದ ಕಾಣಿಕೆ ಕಳವು ಪ್ರಕರಣವು ಗಂಭೀರ ವಿಚಾರವಾಗಿದ್ದು, ಸುಪ್ರೀಂ ಕೋರ್ಟ್ ಮೇಲುಸ್ತುವಾರಿಯಲ್ಲಿ ತನಿಖೆ ನಡೆಸಬೇಕು' ಎಂದು ಸಿಪಿಎಂನ ಹಿರಿಯ ಮುಖಂಡ ಹಾಗೂ ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಒತ್ತಾಯಿಸಿದ್ದಾರೆ. 5

'ಅಂಗಡಿಯನ್ನಾಗಿಸಿದ ಬಿಜೆಪಿ'

ಪರ್ಭಣಿ (ಮಹಾರಾಷ್ಟ್ರ) (ಪಿಟಿಐ): 'ಅಯೋಧ್ಯೆಯ ರಾಮಮಂದಿರವನ್ನು ವಾಣಿಜ್ಯೀಕರಣಗೊಳಿಸಿದ ಬಿಜೆಪಿಯು, ಹಿಂದುತ್ವ ಸಿದ್ಧಾಂತಕ್ಕೆ ದ್ರೋಹವೆಸಗಿದೆ' ಎಂದು ಶಿವಸೇನಾ (ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ಆರೋಪಿಸಿದ್ದಾರೆ.

'ರಾಮಮಂದಿರವು ಹಿಂದೂಗಳ ಪಾಲಿಗೆ ಸ್ಫೂರ್ತಿಯ ಮೂಲವಾಗಿತ್ತು. ಯಾವ ಕಾರಣಕ್ಕಾಗಿ ವಾಣಿಜ್ಯೀಕರಣಗೊಳಿಸಲಾಯಿತು' ಎಂದು ಪ್ರಶ್ನಿಸಿದ್ದಾರೆ.

ಒಳ ಉಡುಪಿನಲ್ಲಿ ಚಿನ್ನ ಕಳ್ಳಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬೈನಿಂದ ಬೆಂಗಳೂರಿಗೆ ವಿಮಾನದಲ್ಲಿ ಬಂದಿದ್ದ 60 ವರ್ಷದ ವ್ಯಕ್ತಿಯನ್ನು ಬಂಧಿಸಿರುವ ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು, ಒಳಉಡುಪುಗಳಲ್ಲಿ ಪೇಸ್ಟ್ ರೂಪದಲ್ಲಿ ಅಡಗಿಸಿಟ್ಟಿದ್ದ 24 ಕ್ಯಾರೆಟ್‌ನ ಸುಮಾರು 2 ಕೆ.ಜಿ. ಚಿನ್ನ ವಶಪಡಿಸಿಕೊಂಡಿದ್ದಾರೆ.

ಜೂನ್ 25ರಂದು ವೀರಪ್ಪ ಷಣ್ಮುಗ ರೆಡ್ಡಿ ಎಂಬವರನ್ನು ಅಧಿಕಾರಿಗಳು ಬಂಧಿಸಿ, ತೀವ್ರ ವಿಚಾರಣೆಗೆ ಒಳಪಡಿಸಿದರು. ಚಿನ್ನ ಕಳ್ಳಸಾಗಣೆ ಹಿಂದೆ ದೊಡ್ಡ ಜಾಲ ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಆರೋಪಿಗೆ ಅಂತರರಾಷ್ಟ್ರೀಯ ಕಳ್ಳಸಾಗಣೆ ಜಾಲದ ಸಂಪರ್ಕ ಇರುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಹಾಗೂ ಚೆನ್ನೈನಲ್ಲಿರುವ ಆರೋಪಿಯ ನಿವಾಸಗಳಲ್ಲಿ ಶೋಧ ನಡೆಸಿದ ವೇಳೆ ಚಿನ್ನ, ಬೆಳ್ಳಿ ಹಾಗೂ ಭಾರತೀಯ ಮತ್ತು ವಿದೇಶಿ ಕರೆನ್ಸಿ ವಶಪಡಿಸಿಕೊಳ್ಳಲಾಗಿದೆ.

ಗುಪ್ತಚರ ಇಲಾಖೆಯ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ್ದಾರೆ. 4

ಕಡಲ ಭದ್ರತೆ: ಸಹಕಾರ ವೃದ್ಧಿಗೆ ಪಣ

ವಿಕ್ಟೋರಿಯ (ಸೆಷೆಲ್ಸ್) (ಪಿಟಿಐ): ರಕ್ಷಣೆ ಮತ್ತು ಕಡಲ ಭದ್ರತೆ, ಡಿಜಿಟಲ್ ಪಾವತಿ, ಬಾಹ್ಯಾಕಾಶ, ಆರೋಗ್ಯ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸುವುದಾಗಿ ಭಾರತ ಹಾಗೂ ಸೆಷೆಲ್ಸ್ ಘೋಷಿಸಿವೆ. 11

ಚಿನಕುರುಳಿ ಪ್ರಕಾಶ್ ಶೆಟ್ಟಿ

18 ಇಲಾಖೆಗಳ 11,938 ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ತಯಾರಿ

ಹುದ್ದೆ ಭರ್ತಿ: ಕೆಇಎಯತ್ತ ಒಲವು

• ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರದ 18 ಇಲಾಖೆಗಳಲ್ಲಿನ ವಿವಿಧ ವೃಂದಗಳ 11,938 ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿದ್ಧತೆ ನಡೆಸಿದೆ. ಅಕ್ರಮಗಳಿಗೆ ಆಸ್ಪದ ಇಲ್ಲದಂತೆ, ಪಾರದರ್ಶಕತೆಯಿಂದ ತ್ವರಿತಗತಿಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ಕಾರಣಕ್ಕೆ ಬಹುತೇಕ ಇಲಾಖೆಗಳು ಖಾಲಿ ಹುದ್ದೆಗಳ ಭರ್ತಿಗೆ ಕೆಪಿಎಸ್‌ಸಿ ಬದಲು ಕೆಇಎ ಕಡೆಗೆ ಒಲವು ತೋರಿಸುತ್ತಿವೆ.

ಪೊಲೀಸ್ ಕಾನ್‌ಸ್ಟೆಬಲ್ (ಸಿವಿಲ್) 3,991, ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ (ಸಿಎಆರ್/ಡಿಎಆರ್) 1,600, ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) 1,687 ಸೇರಿ ಗೃಹ ಇಲಾಖೆಯ ವಿವಿಧ ವೃಂದಗಳ ಒಟ್ಟು 7,813, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಿವಿಧ ವೃಂದಗಳ 1,320, ವಾಣಿಜ್ಯ ತೆರಿಗೆ ಇಲಾಖೆಯ 706 ಹುದ್ದೆಗಳು ಸೇರಿದಂತೆ ಉಳಿಕೆ ಮೂಲ ವೃಂದಗಳ ಒಟ್ಟು 9,244 ಹಾಗೂ ಕಲ್ಯಾಣ ಕರ್ನಾಟಕ ವೃಂದದ 2,694 ಹುದ್ದೆಗಳ ನೇಮಕಾತಿಗೆ ಕೆಇಎ ತಯಾರಿ ನಡೆಸಿದೆ.

ಇಲಾಖೆಗಳಿಂದ ಜೂನ್ 20ರವರೆಗೆ ಸ್ವೀಕೃತವಾದ ಎಲ್ಲ ನೇಮಕಾತಿ ಪ್ರಸ್ತಾವಗಳಿಗೆ ಸಿದ್ಧಪಡಿಸಿರುವ ವೇಳಾಪಟ್ಟಿಯ ಮಾಹಿತಿಯನ್ನು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಕಾರ್ಯದರ್ಶಿಗೆ ಸಲ್ಲಿಸಿದ್ದಾರೆ. ಈ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ದಿನ, ತಾತ್ಕಾಲಿಕ ಮತ್ತು ಅಂತಿಮ ಕೀ ಉತ್ತರ ಪ್ರಕಟಣೆ, ಅಂಕ ಪ್ರಕಟಣೆ, ಅರ್ಹರಾದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ, ಆಯ್ಕೆ ಪಟ್ಟಿ ಪ್ರಕಟಣೆಗೆ ನಿಗದಿಪಡಿಸಿರುವ ದಿನಾಂಕಗಳ ಮಾಹಿತಿಯನ್ನೂ ಅವರು ನೀಡಿದ್ದಾರೆ.

ಈ ಕುರಿತು ಮಾತನಾಡಿದ ಪ್ರಸನ್ನ, 'ಪರೀಕ್ಷಾ ಪೂರ್ವ ಮತ್ತು ಪರೀಕ್ಷಾ ನಂತರದ ಪ್ರಕ್ರಿಯೆಗಳನ್ನು ಕಾಲಮಿತಿಯಲ್ಲಿ ನಡೆಸಲು ಅಗತ್ಯವಾದ ಸಿಬ್ಬಂದಿಯನ್ನು ಮುಖ್ಯಮಂತ್ರಿ ಯವರ ನಿರ್ದೇಶನದಂತೆ ಮುಖ್ಯ ಕಾರ್ಯದರ್ಶಿ ಒದಗಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ. ಹೀಗಾಗಿ, ವೇಳಾ ಪಟ್ಟಿಯಂತೆ ನೇಮಕಾತಿಗೆ ಕಾರ್ಯ ಕೈಗೊಳ್ಳಲು ಸಾಧ್ಯವಾಗಿದೆ' ಎಂದರು. 5

'ಕೆಪಿಎಸ್‌ಸಿ ಕಾಯಕಲ್ಪ: ಶೀಘ್ರ ವರದಿ'

ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಡೆಯಲು ಮತ್ತು ಮತ್ತಷ್ಟು ಸುಧಾರಣೆಗಳನ್ನು ತರುವ ಉದ್ದೇಶದಿಂದ ರಚಿಸಲಾಗಿರುವ ಶಾಸಕ ಆರ್.ವಿ. ದೇಶಪಾಂಡೆ ನೇತೃತ್ವದ ಸದನ ಸಮಿತಿಯು ಶೀಘ್ರದಲ್ಲಿ ವರದಿ ಸಲ್ಲಿಸಲು ತಯಾರಿ ನಡೆಸಿದೆ. ಕೆಪಿಎಸ್‌ಸಿಗೆ ಕಾಯಕಲ್ಪ, ಪ್ರತಿವರ್ಷ ನಿಗದಿತ ಸಮಯದಲ್ಲಿ ಅಧಿಸೂಚನೆ ಹೊರಡಿಸಿ, ಪರೀಕ್ಷಾ ಫಲಿತಾಂಶ ಪ್ರಕಟಿಸಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವುದು, ಆಯೋಗದಲ್ಲಿನ ಆಂತರಿಕ ಸಂಘರ್ಷಕ್ಕೆ ಪೂರ್ಣ ವಿರಾಮ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಶಿಫಾರಸುಗಳ ವರದಿ ನೀಡಲು ಮೂರು ತಿಂಗಳ ಅವಧಿ ಇದ್ದರೂ, ಅದಕ್ಕೂ ಮೊದಲೇ ವರದಿ ಸಲ್ಲಿಸಲು ಸಮಿತಿ ಮುಂದಾಗಿದೆ.

ಆರು ಸಭೆಗಳನ್ನು ನಡೆಸಿರುವ ಸಮಿತಿಯು ಎಲ್ಲ ಆಯಾಮಗಳ ಕುರಿತು ಚರ್ಚೆ ನಡೆಸಿದೆ. ಕೆಪಿಎಸ್‌ಸಿ ಕಾರ್ಯದರ್ಶಿ ಮತ್ತು ಡಿಪಿಎಆರ್ ಕಾರ್ಯದರ್ಶಿ ಜೊತೆ ವಿಚಾರ ವಿನಿಮಯ ನಡೆಸಿರುವ ಸಮಿತಿಯು, ಕೆಪಿಎಸ್‌ಸಿ ಮತ್ತು ಕೆಇಎ ನಡುವಿನ ಕಾರ್ಯವೈಖರಿಯ ವ್ಯತ್ಯಾಸದ ಮಾಹಿತಿ ಪಡೆದುಕೊಂಡಿದೆ. 5

> **ಅಕ್ರಮಗಳಿಗೆ ಅವಕಾಶ ಇಲ್ಲದಂತೆ ವ್ಯವಸ್ಥಿತವಾಗಿ, ವೇಳಾಪಟ್ಟಿ ಪ್ರಕಾರ ತ್ವರಿತಗತಿಯಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದೇವೆ**
> **ಎಚ್. ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಯಾವೆಲ್ಲ ಇಲಾಖೆಗಳಿಗೆ ಕೆಇಎಯಿಂದ ನೇಮಕಾತಿ

ಇಲಾಖೆ	ಹುದ್ದೆಗಳು
ಕೃಷಿ	945
ಗೃಹ	7,813
ಕೈಮಗ್ಗ ಮತ್ತು ಜವಳಿ	22
ಪ್ರವಾಸೋದ್ಯಮ	18
ಕ್ರೈಸ್	1,320
ಕಾಡಾ ನಿರ್ದೇಶನಾಲಯ	112
ಹಿಂದುಳಿದ ವರ್ಗಗಳ ಕಲ್ಯಾಣ	386
ಕೆಆರ್‌ಐಡಿಎಲ್	54
ಪರಿಶಿಷ್ಟ ಪಂಗಡಗಳ ಕಲ್ಯಾಣ	200
ಕೆಐಎಡಿಬಿ	44
ವಾಣಿಜ್ಯ ತೆರಿಗೆ	706
ಅಂತರ್ಜಲ ನಿರ್ದೇಶನಾಲಯ	17
ರಾಜ್ಯ ವಿಮಾ ಯೋಜನೆ ಇಲಾಖೆ	289
ನೋಂದಣಿ ಮತ್ತು ಮುದ್ರಾಂಕ	10
ಕಾರ್ಖಾನೆಗಳು, ಬಾಯ್ಲರುಗಳ ಇಲಾಖೆ	2

ಕ್ರಯಪತ್ರ ಉಪೇಕ್ಷೆ ಸಲ್ಲ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಆಸ್ತಿ ನೋಂದಣಿ ಪ್ರಮಾಣಪತ್ರವನ್ನು (ಕ್ರಯ ಪತ್ರ) ಗಂಭೀರವಲ್ಲದ ಸಣ್ಣ ಪುಟ್ಟ ಕಾರಣಗಳಿಗಾಗಿ ಕಡೆಗಣಿಸುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

69 ವರ್ಷಗಳ ಹಿಂದೆ ಕಾರ್ಯಗತಗೊಳಿಸಿದ್ದ 'ಕ್ರಯ ಪತ್ರ' ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕಿಶೋರ್ ಮಿಶ್ರಾ ಹಾಗೂ ಎನ್.ವಿ. ಅಂಜಾರಿಯಾ ನೇತೃತ್ವದ ನ್ಯಾಯಪೀಠ, 'ಸಂಬಂಧಿಸಿದ ದಾಖಲೆಯನ್ನು ಸುಳ್ಳು ಎಂದು ಸಾಬೀತುಪಡಿಸುವುದು ಪ್ರಶ್ನಿಸುವವರಿಗೆ ಸಂಬಂಧಿಸಿದ್ದಾಗಿರುತ್ತದೆ. ವಂಚನೆ, ಮೂಲಭೂತವಾದ ದೋಷ, ತಿರುಚಿದ ಆರೋಪ ಕುರಿತು ಸೂಕ್ತ ಪುರಾವೆಗಳನ್ನು ಸಲ್ಲಿಸಿದರೆ ಮಾತ್ರ ಅಂತಹ ಪ್ರಮಾಣಪತ್ರವನ್ನು ಅನೂರ್ಜಿತಗೊಳಿಸಬಹುದಾಗಿದೆ' ಎಂದು ಸ್ಪಷ್ಟಪಡಿಸಿದೆ.

'ಉಯಿಲು' ಅಥವಾ 'ದಾನಪತ್ರ'ಗಳಂತೆ 'ಕ್ರಯ ಪತ್ರ'ದ ಸಿಂಧುತ್ವಕ್ಕೆ ಶಾಸನಬದ್ಧ ದೃಢೀಕರಣದ ಅವಶ್ಯವಿಲ್ಲ. ಸಣ್ಣ ಪುಟ್ಟ ದೋಷಗಳನ್ನು ಮುಂದಿಟ್ಟುಕೊಂಡು ನೈಜ ಕ್ರಯ ಪತ್ರದ ಬಗ್ಗೆ ಅನುಮಾನಪಡಲಾಗದು' ಎಂದು ತಿಳಿಸಿದೆ.

1957, ಜೂನ್ 4ರ ಸೇಲ್ ಡೀಡ್‌ನ ಅನ್ವಯ, ಉತ್ತರಾಖಂಡದ ಹರಿದ್ವಾರ (ಹಿಂದೆ ಉತ್ತರ ಪ್ರದೇಶಕ್ಕೆ ಸೇರಿತ್ತು) ಜಿಲ್ಲೆಯ ನರಸೀಪುರ್ ಕಲಾನ್ ಗ್ರಾಮದಲ್ಲಿ 15 'ಬಿಘಾ' (ಒಂದು ಬಿಘಾ ಎಂದರೆ ಸುಮಾರು 0.62 ಎಕರೆ) ಅಳತೆಯ ಕೃಷಿ ಭೂಮಿ ಖರೀದಿಸಿದ್ದ ಶರಾಫತ್ ಅಲಿ ಹಾಗೂ ಇತರರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿ, 2026ರ ಜೂನ್ 23ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಲ್ಲಿ ಈ ಅಂಶಗಳನ್ನು ಉಲ್ಲೇಖಿಸಿದೆ.

ಖರೀದಿದಾರರು ಆ ವೇಳೆ ಅಪ್ರಾಪ್ತ ವಯಸ್ಸಿನವರಾಗಿದ್ದರು. ನಂತರ ಆ ಜಮೀನನ್ನು ಅವರ ಸ್ವಾಧೀನಕ್ಕೆ ನೀಡಲಾಗಿತ್ತು. 11

ಕರೀಕಟ್ಟಿಯ ಸರ್ಕಾರಿ ಶಾಲೆಗಳಲ್ಲಿ ₹13 ಲಕ್ಷ ಠೇವಣಿ ಸಂಗ್ರಹ

ಸಂಭ್ರಮ, ಸೂತಕಕ್ಕೆ ಶಾಲೆಗೆ ದೇಣಿಗೆ

• ಇಮಾಮ್‌ಹುಸೇನ್ ಗೂಡುನವರ

ಒಳ್ಳೆ ಸುದ್ದಿ

ಕರೀಕಟ್ಟಿಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ

ಕರೀಕಟ್ಟಿ (ಬೆಳಗಾವಿ): ಈ ಊರಲ್ಲಿ ಯಾರಾದರು ಹಿರಿಯರು ಮೃತಪಟ್ಟರೆ, ಅವರ ಸ್ಮರಣಾರ್ಥವಾಗಿ ಆಯಾ ಕುಟುಂಬದವರು ಇಲ್ಲಿನ ಸರ್ಕಾರಿ ಶಾಲೆಗಳಲ್ಲಿ ಠೇವಣಿ ಇರಿಸುತ್ತಾರೆ. ಅಂತ್ಯಕ್ರಿಯೆ ವೇಳೆಯಲ್ಲೇ ಎಷ್ಟು ಮೊತ್ತ ಕೊಡುತ್ತೇವೆ ಎಂದೂ ಘೋಷಿಸುತ್ತಾರೆ. ಅಲ್ಲದೆ, ತಾವು ಅಂದುಕೊಂಡ ಶುಭ ಕಾರ್ಯ ನಡೆದರೂ ಗ್ರಾಮಸ್ಥರು ಖುಷಿಯಿಂದ ಠೇವಣಿ ಇರಿಸುತ್ತಾರೆ.

ಗ್ರಾಮಸ್ಥರು ಇರಿಸುವ ಠೇವಣಿ ಮೂಲಕ ಸವದತ್ತಿ ತಾಲ್ಲೂಕಿನ ಕರೀಕಟ್ಟಿಯ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರೌಢಶಾಲೆ ಗಮನ ಸೆಳೆದಿವೆ. ಇವೆರಡೂ ಶಾಲೆಗಳಲ್ಲಿ ₹13 ಲಕ್ಷ ನಿಶ್ಚಿತ ಠೇವಣಿ ಸಂಗ್ರಹವಾಗಿದೆ.

ಗ್ರಾಮಸ್ಥರಷ್ಟೇ ಅಲ್ಲದೆ; ಈ ಶಾಲೆಗಳಲ್ಲಿ ಕೆಲಸ ಮಾಡಿ ವರ್ಗಾವಣೆಯಾಗುವ, ಕೆಲಸದಿಂದ ನಿವೃತ್ತಿ ಹೊಂದುವ ಶಿಕ್ಷಕರೂ ಠೇವಣಿ ಇರಿಸಿದ್ದಾರೆ.

ರಾಷ್ಟ್ರೀಯ ಬ್ಯಾಂಕ್‌ನಲ್ಲಿ ಎರಡೂ ಶಾಲೆಗಳ ಮುಖ್ಯಶಿಕ್ಷಕರ ಹೆಸರಿನಲ್ಲಿ ತೆರೆದಿರುವ ಖಾತೆಗಳಲ್ಲಿ ಜಮೆಯಾದ ಹಣದ ಬಡ್ಡಿ ಮೊತ್ತದಲ್ಲಿ, ಪ್ರತಿ ವರ್ಷ ಸಾಧಕ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತದೆ.

ಸಾರ್ವಜನಿಕರ ಸಹಭಾಗಿತ್ವದಲ್ಲಿ ಮುನ್ನಡೆಯುತ್ತಿರುವ ಶಾಲೆಗಳಲ್ಲಿ ದಾಖಲಾತಿ ಸಹ ಹೆಚ್ಚಾಗಿದೆ.

ಠೇವಣಿ ಇರಿಸುವ ಜತೆಗೆ, ವಿವಿಧ ಕಲಿಕೋಪಕರಣಗಳನ್ನು ಗ್ರಾಮಸ್ಥರು, ಹಳೇ ವಿದ್ಯಾರ್ಥಿಗಳು ಶಾಲೆಗಳಿಗೆ ಕೊಡಿಸಿದ್ದಾರೆ. ವಿಶ್ವೇಶ್ವರ ಮೊಕಾಶಿ ಸ್ಮರಣಾರ್ಥವಾಗಿ ಅವರ ಪುತ್ರಿ ಡಾ.ಜ್ಯೋತಿ ಜೀವನ್ನವರ ₹1.23 ಲಕ್ಷ ಮೌಲ್ಯದ ಸ್ಮಾರ್ಟ್ ಬೋರ್ಡ್ ಕೊಡಿಸಿದ್ದಾರೆ. ಸಿಂಗಪುರದಲ್ಲಿ ಇರುವ ಉಮೇಶ ಬಾಳಿ ಅವರು, ತಮ್ಮ ತಂದೆ ಸ್ಮರಣಾರ್ಥವಾಗಿ ₹35 ಸಾವಿರ ಠೇವಣಿ ಇರಿಸಿದ್ದಾರೆ. ಜತೆಗೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆಯುವ ಮೂವರಿಗೆ ಪ್ರತಿವರ್ಷ ₹10 ಸಾವಿರ ನಗದು ಬಹುಮಾನ ಕೊಡುತ್ತಾರೆ. 7

> **ಠೇವಣಿ ಇರಿಸುತ್ತಿರುವ ಕರೀಕಟ್ಟಿ ಗ್ರಾಮಸ್ಥರ ಕಾರ್ಯ ಪ್ರಶಂಸನೀಯ. ಬೇರೆ ಊರಿನವರೂ ಇದೇ ಮಾದರಿಯಲ್ಲಿ ಹೆಜ್ಜೆ ಇರಿಸಬೇಕು**
> **ಎ.ಎ.ಖಾಜಿ,** ಬಿಇಒ, ಸವದತ್ತಿ

> **ಐದು ವರ್ಷಗಳ ಹಿಂದೆ ತಂದೆ ಮೃತಪಟ್ಟರು. ತಂದೆ ಸ್ಮರಣಾರ್ಥವಾಗಿ ಎರಡೂ ಶಾಲೆಗಳಲ್ಲಿ ತಲಾ ₹50 ಸಾವಿರ ಠೇವಣಿ ಇರಿಸಿದ್ದೇನೆ**
> **ವೀರಣ್ಣ ಬಾಗೋಜಿ,** ಗ್ರಾಮಸ್ಥ, ಕರೀಕಟ್ಟಿ

DAYANANDA SAGAR UNIVERSITY

INDIA'S AI FIRST UNIVERSITY
POWERED BY NVIDIA

INDIA'S AI AMBITION NOW HAS AN ADDRESS

20	160	1.44EF	28.8TB	NVLink
NVIDIA DGX B200 Nodes	Blackwell B200 GPUs	(FP8) AI Compute	HBM3E GPU Memory	NVIDIA NVLink Architecture

INDIA'S FIRST ACADEMIC AI FACTORY

Not a lab. A launch pad.
20 NVIDIA DGX B200 Nodes.
Zero limits.



KCET CODE E240

COMEDK CODE E182

DSU'S SIX FUTURE-DEFINING CENTRES OF EXCELLENCE POWERED BY ITS AI FACTORY

- AI MAKERSPACE
- ELECTRONICS MAKERSPACE
- MECHANICAL MAKERSPACE
- ROBOTICS
- AR / VR / XR
- CYBER RANGE

AI-POWERED PROGRAMS

- Aerospace Engineering
- Artificial Intelligence & Robotics
- Computer Science & Engineering
- CSE (Artificial Intelligence)
- Computer Science & Technology
- CSE (Cyber Security)
- CSE (Data Science)
- Mechanical Engineering
- CSE (Artificial Intelligence & Machine Learning)
- CSE (Artificial Intelligence & Data Science)
- Computer Science & Medical Engineering
- Electronics & Communication Engineering

ADMISSIONS OPEN

admissions@dsu.edu.in
080 4646 1800
www.dsu.edu.in

DSU Main Campus:
Harohalli, Kanakapura Road
Bengaluru-562 112

DSU City Innovation Campus:
Kudlu Gate, Hosur Main Road,
Bengaluru-560 068

NAAC A+

ಪ್ರಗತಿಯ ಸೇತುವೆ
ರೈಲು ಸಂಪರ್ಕವನ್ನು ಬಲಪಡಿಸುವತ್ತ

ಸುರಕ್ಷಿತ, ಸುಸ್ಥಿರ ಮತ್ತು ಎಲ್ಲರಿಗೂ ಸುಲಭವಾಗಿ ಲಭ್ಯವಾಗುವ ಮೂಲಸೌಕರ್ಯನಿರ್ಮಾಣಕ್ಕೆ ನಾವು ಬದ್ಧರಾಗಿದ್ದೇವೆ.
– ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಚನ್ನಪಟ್ಟಣದ ಎಲಿಕೇರಿ ಗೇಟ್‌ನಲ್ಲಿ ರಸ್ತೆ ಮೇಲ್ಸೇತುವೆಯ

ಲೋಕಾರ್ಪಣೆ

ಮತ್ತು

ಯಲಹಂಕ ರೈಲು ನಿಲ್ದಾಣದಲ್ಲಿ ಹೆಚ್ಚುವರಿ ನಿಲುಗಡೆಯನ್ನು ಒದಗಿಸುವುದರೊಂದಿಗೆ ಕೊಯಮತ್ತೂರು - ಮುಂಬಯಿ ಎಕ್ಸ್‌ಪ್ರೆಸ್‌ಗೆ

ಹಸಿರು ನಿಶಾನೆ

ಪ್ರಯೋಜನಗಳು

- ಉತ್ತಮ ರೈಲು ಹಾಗೂ ರಸ್ತೆ ಸಂಪರ್ಕ, ಸ್ಥಳೀಯ ವ್ಯಾಪಾರ ಮತ್ತು ಪ್ರಾದೇಶಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ
- ಚನ್ನಪಟ್ಟಣದಲ್ಲಿ ಲೆವೆಲ್ ಕ್ರಾಸಿಂಗ್‌ಗಳಲ್ಲಿನ ಕಾಯುವಿಕೆಯನ್ನು ನಿವಾರಿಸುವುದರಿಂದ ರಸ್ತೆಯಲ್ಲಿ ವಾಹನಗಳ ಸಂಚಾರ ಸುಗಮವಾಗಿ, ವೇಗವಾಗಿ ಹಾಗೂ ಸುರಕ್ಷಿತವಾಗಿ ಸಾಗಲಿದೆ
- ಯಲಹಂಕದಿಂದ ಕೊಯಮತ್ತೂರು, ಪುಣೆ ಮತ್ತು ಮುಂಬಯಿಗೆ ನೇರ ಸಂಪರ್ಕವನ್ನು ಒದಗಿಸುತ್ತದೆ
- ಮುಂಬಯಿ ಮತ್ತು ಕೊಯಮತ್ತೂರಿಗೆ ನೇರ ಸಂಪರ್ಕದಿಂದಾಗಿ ಯಲಹಂಕದ ನಿವಾಸಿಗಳಿಗೆ ಸುಧಾರಿತ ರೈಲು ಸಂಪರ್ಕವನ್ನು ಒದಗಿಸುತ್ತದೆ

ಇವರಿಂದ

ವಿ. ಸೋಮಣ್ಣ

ಕೇಂದ್ರ ರೈಲ್ವೆ ಮತ್ತು ಜಲ ಶಕ್ತಿ ರಾಜ್ಯ ಸಚಿವರು

29.06.2026

ಬೆಳಗ್ಗೆ 10.45 ಗಂಟೆ
ಎಲ್‌ಸಿ ಸಂ.47, ಎಲಿಕೇರಿ ಗೇಟ್, ಚನ್ನಪಟ್ಟಣ

ಸಂಜೆ 03:45 ಗಂಟೆ
ಯಲಹಂಕ ರೈಲು ನಿಲ್ದಾಣ

ಎಲ್ಲರಿಗೂ ಹಾರ್ದಿಕ ಸುಸ್ವಾಗತ

ಭಾರತೀಯ ರೈಲ್ವೆ
www.indianrailways.gov.in
Follow us on: /RailMinIndia

PUB/247/AAS/PRB/SWR/2026-27

ನಿಮ್ಮ ಹಳೆಯ ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ಮರೆತುಬಿಟ್ಟಿರುವಿರಾ?

ಆರ್‌ಬಿಐ, ನಿಮಗೆ ಸೇರಿದ್ದನ್ನು ಮರಳಿಪಡೆಯಲು ನೆರವಾಗುತ್ತದೆ.

ನಿಮ್ಮ ಬ್ಯಾಂಕಿನ ನಿಷ್ಕ್ರಿಯ ಖಾತೆಗಳಲ್ಲಿರುವ(2 ವರ್ಷಗಳಿಂದ 10 ವರ್ಷಗಳವರೆಗೂ ಚಲನೆ ಇಲ್ಲದವು) ಹಣ / ಕ್ಲೇಂ ಮಾಡದ ಡೆಪಾಸಿಟ್‌ಗಳು (10 ವರ್ಷಕ್ಕಿಂತ ಹೆಚ್ಚಿನವು) ಆರ್‌ಬಿಐ ನ ಡಿಇಎ ಫಂಡ್‌ಗೆ ವರ್ಗಾಯಿಸಲ್ಪಡುತ್ತವೆ. ನೀವು ಅಥವಾ ನಿಮ್ಮ ಕಾನೂನುಬದ್ಧ ವಾರಸುದಾರರು ಅದನ್ನು ಯಾವಾಗ ಬೇಕಾದರೂ ಕ್ಲೇಂ ಮಾಡಬಹುದು.

ನಿಮ್ಮ ಹಣವನ್ನು ಕ್ಲೇಂ ಮಾಡಲು 3 ಸುಲಭ ಹೆಜ್ಜೆಗಳು

1. ನಿಮ್ಮ ಬ್ಯಾಂಕ್ ನ ಯಾವುದೇ ಶಾಖೆಗೆ ಭೇಟಿ ಕೊಡಿ, ಅದು ನಿಮ್ಮ ಶಾಖೆ ಆಗಿಲ್ಲದಿದ್ದರೂ ಸರಿ.
2. ಕೆವೈಸಿ ದಾಖಲೆಗಳೊಂದಿಗೆ ಒಂದು ಫಾರಂ ಸಲ್ಲಿಸಿ (ಆಧಾರ್, ಪಾಸ್‌ಪೋರ್ಟ್, ವೋಟರ್ ಐಡಿ ಅಥವಾ ಡ್ರೈವಿಂಗ್ ಲೈಸೆನ್ಸ್)
3. ಪರಿಶೀಲನೆಯ ನಂತರ ನಿಮ್ಮ ಹಣವನ್ನು ಬಡ್ಡಿಯೊಂದಿಗೆ (ಏನಾದರೂ ಇದ್ದಲ್ಲಿ) ಪಡೆಯಿರಿ.

ನಿಮ್ಮ ಕ್ಲೇಂ ಆಗಿಲ್ಲದ ಠೇವಣಿಗಳ ಬಗ್ಗೆ ತಿಳಿಯಲು

ನಿಮ್ಮ ಬ್ಯಾಂಕಿನ ವೆಬ್‌ಸೈಟ್ ಹುಡುಕಿ ಅಥವಾ ಆರ್‌ಬಿಐ ನ UDGAM ಪೋರ್ಟಲ್ ಪರಿಶೀಲಿಸಿ (https://udgam.rbi.org.in)
ಪ್ರಸ್ತುತ 30 ಬ್ಯಾಂಕ್‌ಗಳನ್ನು ಕವರ್ ಮಾಡಲಾಗುತ್ತಿದೆ.

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಹೆಚ್ಚಿನ ವಿವರಗಳಿಗಾಗಿ, ಭೇಟಿಕೊಡಿ: https://rbikehtahai.rbi.org.in
ಫೀಡ್‌ಬ್ಯಾಕ್‌ಗಾಗಿ ಇಲ್ಲಿಗೆ ಬರೆಯಿರಿ: rbikehtahai@rbi.org.in
ಅಧಿಕೃತ ವಾಟ್ಸಪ್ ನಂಬರ್ 99990 41935

ಜನಹಿತಕ್ಕಾಗಿ ಜಾರಿ, ಇವರಿಂದ
भारतीय रिज़र्व बैंक
RESERVE BANK OF INDIA
www.rbi.org.in

Government of Gujarat

Shri Narendra Modi
Hon'ble Prime Minister

Shri Bhupendrabhai Patel
Hon'ble Chief Minister, Gujarat

CENTRAL GUJARAT
29th | 30th JUNE 2026

Inauguration by
Shri Bhupendrabhai Patel
Hon'ble Chief Minister, Gujarat

in the august presence of
Shri Manohar Lal
Hon'ble Union Minister, Power and Housing & Urban Affairs, Government of India

Shri Harsh Sanghavi
Hon'ble Deputy Chief Minister, Gujarat

29th June 2026, Monday | 10:30 AM
GSFC University, Vadodara, Gujarat

"Vibrant Gujarat Regional Conference will open a new direction for Gujarat's industrial excellence."
- Harsh Sanghavi, Deputy Chief Minister, Gujarat

Focus Sectors

Semiconductor & Electronics · Chemicals & Petrochemicals · Green Energy Ecosystem · Auto & Auto Components · Dairy & Food Processing · Tourism & Culture · Startups & MSMEs · Aerospace & Defence · IT & ITeS · Biotech · Pharmaceuticals · Fintech · Education · Skill Development

Key Features of the Conference

- Inaugural Ceremony
- Sector-specific Seminars
- Country Seminars
- Regional Awards (MSMEs/Artisans)
- Regional MSME Conclave
- B2B/B2G Meetings
- Vendor Development Programme
- Panel Discussions
- Round Table Conference
- Reverse Buyer-Seller Meet
- Udyami Mela
- Trade Show/Exhibition
- Excursion/Industrial Visits
- Valedictory Session

Vibrant Gujarat Regional Exhibition 29th June - 3rd July, 2026 | 10:00 AM to 06:00 PM

Scan QR code for website

Partner Countries: Japan, Rwanda, UAE, Ukraine

Partner Organisations: JETRO, US-India, AMCHAM India, FEBI, IICCI, FINCHAM India, Finland Chamber of Commerce in India, kotra, icbc, U.S.-India Business Council, UIBC, ACMA

Scan QR code for location

Live Telecast on: CMOGuj CMOGuj CMOGujarat CMOGujarat vibrantgujarat vibrantgujarat vibrant_gujarat vibrantgujarat

ಸೂರ್ಯೋದಯ: 5:56 ಸೂರ್ಯಾಸ್ತ : 6:49 | ಚಂದ್ರೋದಯ: ಸಂ. 5:39 ಚಂದ್ರಾಸ್ತ: ಬೆ. 4:15 | ಭಾನುವಾರದ ಉಷ್ಣಾಂಶ : ಗರಿಷ್ಠ 31° ಕನಿಷ್ಠ 21°
ಸೋಮವಾರ ● ಜೂನ್ 29, 2026
ಸೋಮವಾರದ ಉಷ್ಣಾಂಶ 30° ಗರಿಷ್ಠ 21° ಕನಿಷ್ಠ | ಮಂಗಳವಾರ 30° : 21° | ಬುಧವಾರ 30° : 21° | ಗುರುವಾರ 30° : 20°
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ತುಂತುರು ಮಳೆ ಸಾಧ್ಯತೆ

ದಟ್ಟಣೆ ಕಡಿಮೆ ಮಾಡಲು ಸುರಂಗ ರಸ್ತೆ

ಹೆಬ್ಬಾಳ: 2.2 ಕಿ.ಮೀ ಉದ್ದದ ಮೂರು ಪಥದ ಜೋಡಿ ಸುರಂಗ ಮಾರ್ಗಕ್ಕೆ ಶಂಕುಸ್ಥಾಪನೆ ನೆರವೇರಿಸಿದ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಹೆಬ್ಬಾಗಿಲಿನಂತಿರುವ ಹೆಬ್ಬಾಳದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಮೇಖ್ರಿ ವೃತ್ತದಿಂದ ಹೆಬ್ಬಾಳ ಜಂಕ್ಷನ್‌ವರೆಗೆ 2.2 ಕಿ.ಮೀ. ಸುರಂಗ ರಸ್ತೆ ನಿರ್ಮಾಣಗೊಳ್ಳಲಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಹೆಬ್ಬಾಳ ಮೂರು ಪಥ ಜೋಡಿ ಸುರಂಗ ಮಾರ್ಗಕ್ಕೆ ಭಾನುವಾರ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, 'ಕಟ್ ಅಂಡ್ ಕವರ್' ಸುರಂಗವು ಟೋಲ್ ಮುಕ್ತವಾಗಿರಲಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುದಾನದಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ' ಎಂದು ವಿವರಿಸಿದರು.



'ಜನರ ಬದುಕಿನಲ್ಲಿ ಬದಲಾವಣೆ ತರಲು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದೇವೆ. 50 ವರ್ಷಕ್ಕೆ ಯೋಜನೆ ರೂಪಿಸುತ್ತಿದ್ದೇವೆ. ನಾನು ನಗರಾಭಿವೃದ್ಧಿ ಸಚಿವನಾಗಿದ್ದಾಗ ಹೆಬ್ಬಾಳದಿಂದ ಮುಂದಕ್ಕೆ ಕಾವೇರಿ ನೀರು ನೀಡಲು ಅನುಮತಿ ಇರಲಿಲ್ಲ. ಈಗ ಮೇಕೆದಾಟು ಯೋಜನೆ ಕುರಿತಂತೆ ಸುಪ್ರೀಂ ಕೋರ್ಟ್ ನಮ್ಮ ಪರವಾಗಿ ತೀರ್ಪು ನೀಡಿದೆ. ನಮ್ಮ ನೀರು ನಮ್ಮ ಹಕ್ಕು ಎಂದು ನಾವೆಲ್ಲರೂ ಹೆಜ್ಜೆ ಹಾಕಿದ್ದೆವು. ಇದಕ್ಕೆ ಫಲ ಸಿಕ್ಕಿದೆ' ಎಂದು ಹೇಳಿದರು.

ಯೋಜನೆ ವಿವರ: ಈ ಯೋಜನೆಯು 'ಮಧ್ಯಂತರ ಕ್ರಮ'ವಾಗಿದ್ದು, 17 ಕಿಮೀ ಉದ್ದದ ಹೆಬ್ಬಾಳ-ಸಿಲ್ಕ್ ಬೋರ್ಡ್ ಪ್ರಸ್ತಾವಿತ ಸುರಂಗ ರಸ್ತೆಗಿಂತ ಭಿನ್ನವಾಗಿದೆ. ಅಂದಾಜು ₹1,139.67 ಕೋಟಿ ವೆಚ್ಚದ ಕಿರು ಸುರಂಗ ಮಾರ್ಗದ ಕಾಮಗಾರಿಯನ್ನು ಹೈದರಾಬಾದ್ ಮೂಲದ ನಿರ್ಮಾಣ ಸಂಸ್ಥೆಯಾದ ರಿತ್ವಿಕ್ ಪ್ರಾಜೆಕ್ಟ್ ಲಿಮಿಟೆಡ್, ಎಂಐಆರ್ ಇಂಡಿಯಾ ಲಿಮಿಟೆಡ್ ಸಹಭಾಗಿತ್ವದಲ್ಲಿ ಕೈಗೆತ್ತಿಕೊಳ್ಳಲಿದೆ. ಆರು ಪಥಗಳನ್ನು ಹೊಂದಿರಲಿದೆ.

ಯಲಹಂಕ ವಾಯುಪಡೆ ನಿಲ್ದಾಣದ ಬಳಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸುತ್ತಿರುವ ಅಂಡರ್‌ಪಾಸ್‌ಗಿಂತ ಉದ್ದವಿದ್ದು, ಈ ವಿಧಾನದಡಿಯಲ್ಲಿ ನಿರ್ಮಾಣವಾಗಲಿರುವ ಬೆಂಗಳೂರಿನ ಅತಿ ಉದ್ದದ ಸುರಂಗ ರಸ್ತೆ ಇದಾಗಲಿದೆ. 320 ಮೀಟರ್ ಉದ್ದದ ಸುರಂಗದಂತಹ ಅಂಡರ್‌ಪಾಸ್ ಮೇಲ್ಸೇತುವೆಯಿಂದ ಸುಮಾರು ಆರು ಮೀಟರ್ ಆಳದಲ್ಲಿ ಹಾದುಹೋಗುತ್ತದೆ.

ನಕ್ಷೆ ಪ್ರಕಾರ, ಹೆಬ್ಬಾಳ ಸುರಂಗವು ಹೆಬ್ಬಾಳ ರೈಲ್ವೆ ಮಾರ್ಗದ ಕೆಳಗೆ, ಫ್ಲೈಓವರ್ ಲೂಪ್‌ರ್ಯಾಂಪ್ (ಕೆಆರ್‌ಪುರದ ರಸ್ತೆ) ಅಡಿಯಲ್ಲಿ ಮತ್ತು ಕೆರೆಯ ಪಕ್ಕದಲ್ಲಿ ಹಾದುಹೋಗಲಿದೆ. ಸುರಂಗ ರಸ್ತೆಗೆ ದಾರಿ ಮಾಡಿಕೊಡಲು ಬಳ್ಳಾರಿ ರಸ್ತೆಯಲ್ಲಿ ಕೆಲವು ಭಾಗಗಳನ್ನು ಅಗೆಯುವುದರಿಂದ ಕಾಮಗಾರಿ ನಡೆಯವಾಗ ಕೆಲವು ತಿಂಗಳು ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ.

ಸಚಿವರಾದ ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ಬೈರತಿ ಸುರೇಶ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಅಧಿಕಾರಿಗಳು ಉಪಸ್ಥಿತರಿದ್ದರು.

ಹೆಬ್ಬಾಳ–ಮೇಖ್ರಿ ಸರ್ಕಲ್ ನಡುವೆ ನಿರ್ಮಾಣಗೊಳ್ಳಲಿರುವ ಸುರಂಗ ಮಾರ್ಗದ ಕಾಮಗಾರಿಗೆ ಎನ್‌.ಎ. ಹ್ಯಾರಿಸ್, ಕೆ.ಜೆ. ಜಾರ್ಜ್, ಬೈರತಿ ಸುರೇಶ್, ಡಿ.ಕೆ. ಶಿವಕುಮಾರ್, ಕೃಷ್ಣ ಬೈರೇಗೌಡ ಭೂಮಿ ಪೂಜೆ ನೆರವೇರಿಸಿದರು – ಪ್ರಜಾವಾಣಿ ಚಿತ್ರ

'ದುಡ್ಡು ಕೊಟ್ಟು ಹೋಗುವವರು ಹೋಗುತ್ತಾರೆ'

'ಹೆಬ್ಬಾಳದಿಂದ ರೇಷ್ಮೆ ಸಂಸ್ಥೆವರೆಗೆ 17 ಕಿ.ಮೀ ಉದ್ದದ ಸುರಂಗ ಯೋಜನೆಯ ಪ್ರಸ್ತಾವ ಸಲ್ಲಿಸಲಾಗಿದೆ. ಮೂರು-ನಾಲ್ಕು ವರ್ಷಗಳಲ್ಲಿ ಯೋಜನೆ ಮುಗಿಯಲಿದೆ. ಈ ಸುರಂಗ ರಸ್ತೆಯಲ್ಲಿ ದುಡ್ಡು ಕೊಟ್ಟು ಹೋಗುವವರು ಹೋಗುತ್ತಾರೆ. ನಿಮಗೇನು ತೊಂದರೆ' ಎಂದು ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

'ಸುರಂಗ ರಸ್ತೆಯಿಂದಾಗಿ ಜನರ ಸಮಯ ಉಳಿಯುತ್ತದೆ. ಹಿಡಿದ ಕೆಲಸವನ್ನು ಮಾಡಬೇಕು. ಜನರ ಸಮಯ ಉಳಿಸುವುದು ಮುಖ್ಯ. ಜನರು ಸಂಜೆ 5-6 ಗಂಟೆ ಮೇಲೆ ಕೆಲಸ ಮುಗಿಸಿ ಮನೆ ಸೇರಬೇಕು. ಇದಕ್ಕೆ ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ' ಎಂದರು.

'ಸಮಾಧಿ ತೋಡುತ್ತಿದ್ದೀರಿ'

'₹1,139 ಕೋಟಿ ವೆಚ್ಚದ, 2 ಕಿ.ಮೀ ಉದ್ದದ ಸುರಂಗ ಮಾರ್ಗ ಅವೈಜ್ಞಾನಿಕ ಯೋಜನೆ. ಈ ಮೂಲಕ ನೀವು ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸಮಾಧಿ ತೋಡುತ್ತಿದ್ದೀರಿ' ಎಂದು ಸಂಸದ ತೇಜಸ್ವಿ ಸೂರ್ಯ ಟೀಕಿಸಿದರು.

'ಬೆಂಗಳೂರಿನ ಸಂಚಾರ ಸಮಸ್ಯೆಯನ್ನು ಪರಿಹರಿಸಲು ವಿಫಲವಾಗಿರುವ ಒಂದು ಅವೈಜ್ಞಾನಿಕ ಪರಿಹಾರ. ಈ ಸುರಂಗ ಮಾರ್ಗವು ವಾಹನ ದಟ್ಟಣೆಯಿಂದ ತುಂಬಿರುತ್ತದೆ ಎಂದು ಸರ್ಕಾರದ ಯೋಜನಾ ವರದಿಯೇ ಒಪ್ಪಿಕೊಂಡಿದೆ' ಎಂದರು.

'ಸದಾಶಿವನಗರದ ವಿಐಪಿಗಳು, ಮುಖ್ಯಮಂತ್ರಿಗಳು ಮತ್ತು ವಿಮಾನ ನಿಲ್ದಾಣಕ್ಕೆ ಹೋಗಲು ಈ ರಸ್ತೆಯನ್ನು ಬಳಸುವ ನಗರದ ಗಣ್ಯರು, ಕೆಲವೇ ಕೆಲವು ಪ್ರಭಾವಿ ವ್ಯಕ್ತಿಗಳ ಜೀವನವನ್ನು ಸುಗಮಗೊಳಿಸಲು ಈ ಯೋಜನೆ ರೂಪಿಸಿದಂತೆ ಕಾಣುತ್ತಿದೆ' ಎಂದು ಹೇಳಿದರು.

ಸಿ.ಎಂ ಹೇಳಿದ ಅಂಗೈ ಉಜ್ಜಿಕೊಳ್ಳುವ ಕಥೆ

'ಬೀರಬಲ್ ಬಗ್ಗೆ ಅಕ್ಬರ್‌ನ ಆಸ್ಥಾನದಲ್ಲಿ ಅಸಮಾಧಾನ ಉಂಟಾದಾಗ ಎಲ್ಲರನ್ನು ಸೇರಿಸಿ ಅಕ್ಬರ್ ಒಂದು ಪ್ರಶ್ನೆ ಕೇಳುತ್ತಾನೆ. ಅಂಗೈಯಲ್ಲಿ ಏಕೆ ಕೂದಲಿಲ್ಲ ಎಂಬ ಪ್ರಶ್ನೆಗೆ ಬೇರೆಯವರು ಬೇರೆ ಬೇರೆ ಉತ್ತರ ನೀಡಿದರು. ಬೀರಬಲ್ ಸರದಿ ಬಂದಾಗ, ನೀವು ಮಹಾದಾನಿಗಳು ದಾನ ಮಾಡಿ ಮಾಡಿ ಕೈಯಲ್ಲಿ ಕೂದಲು ಇಲ್ಲ ಎಂದು ಉತ್ತರಿಸಿದ. ಹಾಗಾದರೆ ನಿಮ್ಮ ಕೈಯಲ್ಲಿ ಏಕೆ ಕೂದಲಿಲ್ಲ ಎಂದು ಅಕ್ಬರ್ ಮರು ಪ್ರಶ್ನಿಸಿದಾಗ, 'ನಾನು ದಾನ ಪಡೆದು ಪಡೆದು ಕೂದಲು ಇಲ್ಲದಾಗಿದೆ' ಎಂದು ಬೀರಬಲ್ ಹೇಳಿದ. ಸಭಿಕರ ಕೈಯಲ್ಲಿ ಏಕೆ ಕೂದಲಿಲ್ಲ ಎಂದಾಗ, 'ನಮಗೆ ಸಿಗಲಿಲ್ಲವಲ್ಲ ಎಂಬ ಹೊಟ್ಟೆ ಉರಿಯಲ್ಲಿ ಕೈ ಉಜ್ಜಿ ಉಜ್ಜಿ ಕೂದಲು ಬೆಳೆದಿಲ್ಲ' ಎಂದು ಬೀರಬಲ್ ಹೇಳಿದ್ದ. ಜೆಡಿಎಸ್ ಹಾಗೂ ಬಿಜೆಪಿಯವರು ಅದೇ ರೀತಿ ತಮಗೆ ಸಿಗಲಿಲ್ಲ ಎಂದು ಅಂಗೈಗಳನ್ನು ಉಜ್ಜಿಕೊಳ್ಳುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಮಾರ್ಮಿಕವಾಗಿ ಕಥೆ ಹೇಳಿದರು.

ನಾನೂ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದೇನೆ. ಅಕ್ಬರ್, ಬೀರಬಲ್ ಕಥೆ ಹೇಳುವುದು ಬೇಡ. ರಾಜ್ಯದ ಜನರ, ರೈತರ ಕಷ್ಟಗಳ ಬಗ್ಗೆ ಮುಖ್ಯಮಂತ್ರಿ ಗಮನ ಹರಿಸಲಿ
ಎಚ್‌.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಸುದ್ದಿ 2 ನಿಮಿಷ

'ನಿನ್ನೆಯೇ ಕುಮಾರಸ್ವಾಮಿಯನ್ನು ಜೈಲಿಗೆ ಕಳಿಸುತ್ತಿದ್ದೆವು'

ರಾಮನಗರ: 'ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಜೈಲಿಗೆ ಕಳಿಸುವ ಉದ್ದೇಶ ನಮಗಿದ್ದಿದ್ದರೆ ನಿನ್ನೆಯೇ ಕಳಿಸುತ್ತಿದ್ದೆವು. ಆದರೆ, ಅವರು ಜೈಲಿಗೆ ಹೋಗುವುದು ಬೇಡ' ಎಂದು ಶಾಸಕ ಎಚ್‌.ಸಿ.ಬಾಲಕೃಷ್ಣ ಹೇಳಿದರು.

'ನನ್ನನ್ನು ಜೈಲಿಗೆ ಕಳಿಸುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳುತ್ತಿದ್ದಾರೆ' ಎಂದು ಬೈರಮಂಗಲದಲ್ಲಿ ಎಚ್‌ಡಿಕೆ ಭಾಷಣ ಮಾಡಿದ್ದರು. ಈ ಕುರಿತು ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ನಾವು ಮೈ ಮರೆತು ನಿದ್ದೆ ಹೋಗದಂತೆ ಎಚ್ಚರಿಸಲು ಕುಮಾರಸ್ವಾಮಿ ಇರಬೇಕು. ಅದಕ್ಕಾಗಿ ಜೈಲಿಗೆ ಕಳಿಸದೆ ಬಿಟ್ಟಿದ್ದೇವೆ' ಎಂದರು.

'ಟೌನ್‌ಶಿಪ್ ವಿರುದ್ಧದ ಹೋರಾಟದಲ್ಲಿ ರೈತರು ಮಾತ್ರ ಇರುವುದರಿಂದ ರಾಜಕಾರಣಿಗಳು ಭಾಗವಹಿಸಬಾರದೆಂದು ನಾವು ನಿರ್ಧರಿಸಿದ್ದೆವು. ಆದರೆ, ಇದೀಗ ಹೋರಾಟ ರಾಜಕೀಯಗೊಂಡಿದೆ. ಅಲ್ಲಿ ರೈತರ ಬದಲು ಜೆಡಿಎಸ್ ಕಾರ್ಯಕರ್ತರೇ ಹೆಚ್ಚಾಗಿದ್ದಾರೆ. ಈ ಕುರಿತು ಮುಂದೆ ನಾವೇನು ಮಾಡಬೇಕೆಂಬುದರ ಕುರಿತು ಪಕ್ಷದ ನಾಯಕರ ಜತೆ ಚರ್ಚಿಸುತ್ತೇವೆ' ಎಂದು ತಿಳಿಸಿದರು.



'ಯೋಜನಾ ಪ್ರದೇಶದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಟೌನ್‌ಶಿಪ್ ಪರ ಹೋರಾಟ ಬೆಂಬಲಿಸುವಂತೆ ಒತ್ತಾಯಿಸುತ್ತಿದ್ದಾರೆ. ಸದ್ಯ ಅಲ್ಲಿನ ವಾಸ್ತವ ಸ್ಥಿತಿ ಹೇಗಿದೆ ಎಂಬುದರ ಕುರಿತು ಜನರಿಗೆ ನಾವು ತಿಳಿಸಬೇಕಿದೆ. ಇಲ್ಲದಿದ್ದರೆ, ಜೆಡಿಎಸ್ ಮಾಡುತ್ತಿರುವ ಅಪಪ್ರಚಾರವೇ ನಿಜ ಎಂಬ ಸಂದೇಶ ಹೋಗುತ್ತದೆ' ಎಂದು ಹೇಳಿದರು.

ಪಾಲಿಕೆ ಚುನಾವಣೆ: ಜೆಡಿಎಸ್‌ನಿಂದ ಹೆಚ್ಚು ಮಹಿಳಾ ಅಭ್ಯರ್ಥಿಗಳು ಕಣಕ್ಕೆ

ಬೆಂಗಳೂರು: 'ಜಿಬಿಎ ಪಾಲಿಕೆಗಳ ಚುನಾವಣೆಯಲ್ಲಿ ಪಕ್ಷದಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗುತ್ತದೆ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಭಾನುವಾರ ಪಕ್ಷದ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಜೆಡಿಎಸ್‌ನ ಜಿಬಿಎ ಮಹಿಳಾ ಘಟಕದ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಅದಕ್ಕೂ ಮುನ್ನ ನಗರದ ಬನಶಂಕರಿ ಮತ್ತು ಹೆಬ್ಬಾಳ ವಾರ್ಡ್‌ಗಳ ಮಹಿಳಾ ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡರು.

'ಮಹಿಳೆಯರನ್ನು ನಿರ್ಲಕ್ಷಿಸಿ, ಪಕ್ಷ ಕಟ್ಟಲು ಸಾಧ್ಯವಿಲ್ಲ. ಹಾಗೆಯೇ ಮಹಿಳೆಯರನ್ನು ಅಲಕ್ಷಿಸಿ ಚುನಾವಣೆಯನ್ನೂ ಎದುರಿಸಲಾರೆವು. ಮಹಿಳೆಯರಿಗೆ ಸಮಪಾಲು ನೀಡಲಿದ್ದೇವೆ. ಅದರಂತೆಯೇ ಜಿಬಿಎ ಒಟ್ಟು ಸ್ಥಾನಗಳ ಪೈಕಿ 180ಕ್ಕೂ ಹೆಚ್ಚು ವಾರ್ಡುಗಳನ್ನು ಮಹಿಳೆಯರಿಗೆ ಮೀಸಲು ಇಡಲಾಗಿದೆ'.

'ವೈಯಕ್ತಿಕ ವರ್ಚಸ್ಸಿನ ಜತೆಗೆ, ಪಕ್ಷ ಸಂಘಟನೆಯ ಶಕ್ತಿ ಇದ್ದವರನ್ನು ಅಭ್ಯರ್ಥಿಗಳನ್ನಾಗಿ ಪರಿಗಣಿಸಲಾಗುವುದು. ಪಕ್ಷನಿಷ್ಠೆಯ ಜತೆಗೆ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡವರಿಗೆ ಅವಕಾಶ ನೀಡಲಾಗುವುದು' ಎಂದು ಹೇಳಿದರು.

ಕೃಷ್ಣ, ಆರುಷಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಆರುಷಿ

ಕಾಪು (ಉಡುಪಿ ಜಿಲ್ಲೆ): ಬೆಂಗಳೂರಿನ ಕೃಷ್ಣ ಮತ್ತು ದಕ್ಷಿಣ ಕನ್ನಡದ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವಾ ಭಾನುವಾರ ಇಲ್ಲಿ ಮುಕ್ತಾಯಗೊಂಡ ರಾಜ್ಯ ಶಾಲಾ ವಿದ್ಯಾರ್ಥಿಗಳ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಇತರ ವಿಭಾಗದ ಫಲಿತಾಂಶಗಳು: ಬಾಲಕರು: 15 ವರ್ಷದೊಳಗಿನವರು: ಆರುಷ್ ಭಟ್ (ದಕ್ಷಿಣ ಕನ್ನಡ;5.5 ಪಾಯಿಂಟ್ಸ್)–1, ರಿತೇಶ್ ಕೆ (ಉಡುಪಿ;5 ಪಾ)–2; 13 ವರ್ಷದೊಳಗಿನವರು: ಇಂದ್ರಜೀತ್ ಮಜುಂದಾರ್ (ಬೆಂಗಳೂರು;6.5)–1, ಈಶ್ವರ್ ವೀರಪ್ಪನ್ (ಮೈಸೂರು; 6)–2; 11 ವರ್ಷದೊಳಗಿವನರು: ಶ್ರಗ್ವಿದಾ ಎಸ್ (ಬೆಂಗಳೂರು;6.5)–1, ಕೆ.ಸೆಂಥಿಲ್ ಕುಮಾರ್ (ಬೆಂಗಳೂರು ಗ್ರಾಮಾಂತರ;6)–2; 9 ವರ್ಷದೊಳಗಿನವರು: ಗಹನ್ ಸಿ.ಡಿ (ಮೈಸೂರು; 6.5)–1, ಹರ್ಷಿತ್ ಪಾಟೀಲ (ಕೊಪ್ಪಳ;6)–2, 7 ವರ್ಷದೊಳಗಿವನರು: ಅತ್ರೇಯ ರಾಮ್ (ದಕ್ಷಿಣ ಕನ್ನಡ;6)–1, ಸಾಮ್ರಾಟ್ ಎಸ್ (ಬೆಂಗಳೂರು;5)–2.

ಬಾಲಕಿಯರು: 15 ವರ್ಷದೊಳಗಿನವರು: ಆದ್ಯಾ ಶೆಟ್ಟಿ (ದಕ್ಷಿಣ ಕನ್ನಡ;4)–1, ಕೃಪಾ ಉಕ್ಕಲಿ (ಬೆಂಗಳೂರು;4)–2; 13 ವರ್ಷದೊಳಗಿನವರು: ಇಂದುಶೀತಲ (ಬೆಂಗಳೂರು;6)–1, ರಿಜೆಲಿ ಅಲಿಡಾ ಡಿಸೋಜ (ದಕ್ಷಿಣ ಕನ್ನಡ;4.5)–2; 11 ವರ್ಷದೊಳಗಿನವರು: ಸಾನ್ವಿತಾ ಶೆಟ್ಟಿ (ಶಿವಮೊಗ್ಗ;5.5)–1, ಆರುಷಿ ರೈ (ದಕ್ಷಿಣ ಕನ್ನಡ;5)–2; 9 ವರ್ಷದೊಳಗಿನವರು: ದಾರ್ಶ್ವಿ ರೈ (ಬೆಂಗಳೂರು;5.5)–1, ನಿಧಿಶ್ರೀ (ತುಮಕೂರು;5)–2; 7 ವರ್ಷದೊಳಗಿನವರು: ಹನ್ವಿಕಾ ರಾವ್ (ಮೈಸೂರು;4.5)–1, ಅವನಿ ದಾತನ್ (ದಕ್ಷಿಣ ಕನ್ನಡ;4)–2.

ಸಂವಾದ ಕಾರ್ಯಕ್ರಮದಲ್ಲಿ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಕಳವಳ

'ಬಿಜೆಪಿ ಪಟ್ಟಿ ಸೃಷ್ಟಿಸುವ ಎಸ್‌ಐಆರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯು ತನಗೆ ಬೇಕಾದವರನ್ನಷ್ಟೇ ಮತದಾರರನ್ನಾಗಿ ಉಳಿಸಿಕೊಳ್ಳುವ ಪ್ರಕ್ರಿಯೆಯೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್)' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಸಮುದಾಯ ಕರ್ನಾಟಕವು ನಗರದಲ್ಲಿ ಭಾನುವಾರ ಆಯೋಜಿಸಿದ್ದ, 'ಸಮಗ್ರ ಮತದಾರರ ಪರಿಷ್ಕರಣೆ ಮುಂದೇನು? ಸಾಂಸ್ಕೃತಿಕ ರಂಗದ ವಿಶ್ಲೇಷಣೆ' ಸಂವಾದವನ್ನು ಉದ್ದೇಶಿಸಿ ಮಾತನಾಡಿದರು.

'ಎಸ್‌ಐಆರ್ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ತಮಗೆ ಬೇಕಾದ ಮತದಾರರ ಪಟ್ಟಿಯನ್ನು ಸೃಷ್ಟಿಸಿಕೊಳ್ಳುತ್ತಿವೆ' ಎಂದು ಆರೋಪಿಸಿದರು.

'10 ವರ್ಷಗಳಿಂದ ದೇಶದಲ್ಲಿ ಬಹುತೇಕ ಯಾವ ಕಾರ್ಯವೂ ಸಾಂವಿಧಾನಿಕವಾಗಿ, ಕಾನೂನುಬದ್ಧವಾಗಿ ನಡೆಯುತ್ತಿಲ್ಲ. ಅದರ ಮುಂದುವರೆದ ಭಾಗವೇ ಎಸ್‌ಐಆರ್. ಎಸ್‌ಐಆರ್ ಒಂದು ಸಾಂಸ್ಕೃತಿಕ ಅತಿಕ್ರಮಣ. ಒಂದು ಧರ್ಮ, ಕೆಲವು ಜಾತಿ ಸಮುದಾಯ ಮತ್ತು ವರ್ಗದ ಜನರನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಹೊರಗಿಡುವ ಹುನ್ನಾರ' ಎಂದು ಆಪಾದಿಸಿದರು.

'ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಬೇಕಾಗಿರುವಂತೆಯೇ ದೇಶದಲ್ಲಿ ಕಾನೂನು ರೂಪುಗೊಳ್ಳುತ್ತಿದೆ. ಎಸ್‌ಐಆರ್ ಅನ್ನೂ ಅವುಗಳ ಅನುಕೂಲಕ್ಕಾಗಿಯೇ ರೂಪಿಸಲಾಗಿದೆ. ಎಸ್‌ಐಆರ್‌ನಲ್ಲಿ ಪೌರತ್ವ ಸಾಬೀತು ಮಾಡಲು ನಿಗದಿಪಡಿಸಲಾಗಿರುವ 11 ದಾಖಲೆ ಪತ್ರಗಳು ಎಲ್ಲ ಭಾರತೀಯರಲ್ಲಿ ಇರಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಎಲ್ಲ ಭಾರತೀಯರ ಬಳಿ ದಾಖಲೆ ಪತ್ರಗಳು ಇರುವುದು ಸಾಧ್ಯವಿಲ್ಲ ಎಂಬ ವಾಸ್ತವವನ್ನು ಭಾರತೀಯ ಚುನಾವಣಾ ಆಯೋಗವು ಮನಗಾಣಬೇಕಿತ್ತು. ಆದರೆ, ಆಯೋಗವು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಕಪಿಮುಷ್ಠಿಯಲ್ಲಿ ಸಿಲುಕಿದೆ. ಬಿಜೆಪಿ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಶತಾಯಗತಾಯ ಎಲ್ಲ ಚುನಾವಣೆಗಳನ್ನು ಗೆಲ್ಲಬೇಕು ಎಂದು ಬಿಜೆಪಿ ಹೊರಟಿದೆ. ಅದರ ಪರಿಣಾಮವಾಗಿ ನಮ್ಮೆಲ್ಲರ ಮತದಾನದ ಹಕ್ಕಿಗೆ ಅಪಾಯ ಎದುರಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಸಾಮಾಜಿಕ ಕಾರ್ಯಕರ್ತ ಶಿವಸುಂದರ್, 'ಎಸ್‌ಐಆರ್ ನಡೆಸಲು ಆಯೋಗವು ಯಾವ ನಿಯಮಗಳನ್ನು ಬೇಕಾದರೂ ರೂಪಿಸಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಆ ತೀರ್ಪಿನಿಂದ ಎದುರಾಗಿರುವ ಅಪಾಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಎಸ್‌ಐಆರ್ ವಿರುದ್ಧ ಈಗ ಹೋರಾಡುವುದಕ್ಕಿಂತ, ಎಸ್‌ಐಆರ್‌ನಲ್ಲಿ ನಮ್ಮ ಮತದಾನದ ಹಕ್ಕನ್ನು ಹೇಗೆ ಉಳಿಸಿಕೊಳ್ಳಬೇಕು ಎಂಬುದರತ್ತ ಗಮನ ಕೇಂದ್ರೀಕರಿಸಬೇಕು' ಎಂದರು.

ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಶಿಕ್ಷಣ ತಜ್ಞ ಶ್ರೀಪಾದ ಭಟ್, ಜಾಗೃತ ಕರ್ನಾಟಕ ಸಂಚಲಕ ಬಿ.ಸಿ.ಬಸವರಾಜು ಸೇರಿ ಹಲವು ಸಂವಾದದಲ್ಲಿ ಭಾಗಿಯಾಗಿದ್ದರು.

ಪ್ರತಿಭಟನೆ ನಾಳೆ

'ಎಸ್‌ಐಆರ್ ವಿರೋಧಿಸಿ ರಾಜ್ಯದಾದ್ಯಂತ ಇದೇ 30ರಂದು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸುತ್ತೇವೆ' ಎಂದು ಎಸ್‌ಐಆರ್ ವಿರೋಧಿ ಒಕ್ಕೂಟದ ಪದಾಧಿಕಾರಿಗಳಾದ ಜೆ.ಎಂ.ವೀರಸಂಗಯ್ಯ ಮತ್ತು ಕೆ.ಎಲ್.ಅಶೋಕ್ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯಲಿದೆ. ಪ್ರತಿಭಟನೆಯಲ್ಲಿ ಭಾಗಿಯಾಗುವವರು ತಮ್ಮ ಬಾಯಿ ಮತ್ತು ತೋಳುಗಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಪ್ರತಿರೋಧ ತೋರಲಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

'ನಮ್ಮ ಗ್ರಾಮ ನಮ್ಮ ಜವಾಬ್ದಾರಿ', 'ನಮ್ಮ ಏರಿಯಾ ನಮ್ಮ ಜವಾಬ್ದಾರಿ' ಘೋಷಣೆಯ ಮೇರೆಗೆ ಗ್ರಾಮ ಪಂಚಾಯಿತಿ, ವಾರ್ಡ್ ಪ್ರದೇಶಗಳಲ್ಲಿ 'ಮತ ಕಾವಲು ಸಮಿತಿ'ಗಳನ್ನು ರಚಿಸುವ ಅಭಿಯಾನವನ್ನೂ ಪ್ರಾರಂಭಿಸುತ್ತಿದ್ದೇವೆ ಎಂದಿದ್ದಾರೆ.

ನಗರದಲ್ಲಿ ಇಂದು

ಕನ್ನಡ ಭಾಷಾ ಕಾರ್ಯಾಗಾರ: ಅಧ್ಯಕ್ಷತೆ: ಮನೋಜ್ ಕುಮಾರ ಕೊಳ್ಳಾ, ಉಪಸ್ಥಿತಿ: ಹೊ.ನ.ನೀಲಕಂಠೇಗೌಡ, ತಿಮ್ಮಯ್ಯ, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ (ಪಿಯು), ಸ್ಥಳ: ಮಂಗಳ ಮಂಟಪ, ಎನ್‌ಎಂಕೆಆರ್‌ವಿ ಪಿಯು ಕಾಲೇಜು, ಜಯನಗರ 3ನೇ ಬ್ಲಾಕ್, ಬೆಳಿಗ್ಗೆ 9.30

ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ: ಉಪಸ್ಥಿತಿ: ಕೆ.ಜೆ.ಜಾರ್ಜ್, ಕೆ.ಬಲರಾಮ್, ಆಯೋಜನೆ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಮತ್ತು ಅಸೋಸಿಯೇಷನ್‌ಗಳ ಒಕ್ಕೂಟ, ಸ್ಥಳ: ತ್ರಿಪುರವಾಸಿನಿ, ಗೇಟ್ ನಂ 2, ಅರಮನೆ ಮೈದಾನ, ಬೆಳಿಗ್ಗೆ 10

'ಭೀಮ ಭಕ್ತಿ ಗಾನಲಹರಿ' ಭೀಮಸೇನ್ ಜೋಶಿ ಸಂಸ್ಮರಣೆ: ಗಾಯನ: ರಾಘವೇಂದ್ರ ಭಟ್ ಸಾಗರ, ಮುಖ್ಯ ಅತಿಥಿ: ಎ.ಪದ್ಮರಾಜು, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶರ, ಸಂಜೆ 6.30

ಕುವೆಂಪು ನೆನಪು: ಉದ್ಘಾಟನೆ: ದಿನೇಶ್ ಗುಂಡೂರಾವ್, ಉಪನ್ಯಾಸ: ವೈಎಸ್‌ವಿ ದತ್ತ, ಕುವೆಂಪು ಗೌರವ ಪುರಸ್ಕಾರ: ಸಾ.ರಾ. ಗೋವಿಂದು, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ಕುವೆಂಪು ಪ್ರತಿಮೆ ಆವರಣ, ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಕಾಡಿನ ಕೊಳಲು' ಕುವೆಂಪು ಕವಿತೆಗಳ ಗೀತ ನೃತ್ಯ: ಸಂಯೋಜನೆ: ಪಿ.ಮಾನಸ, ಮಾರ್ಗದರ್ಶನ: ಜಯಪ್ರಕಾಶಗೌಡ, ಪರಿಕಲ್ಪನೆ ಮತ್ತು ನಿರೂಪಣಾ ಸಾಹಿತ್ಯ: ಎಸ್.ಬಿ.ಶಂಕರಗೌಡ, ಎಸ್.ತುಕಾರಾಂ, ಆರ್.ಮಹದೇವಪ್ಪ, ಅನಿತಾ ಮಂಗಲ, ಅರವಿಂದ ಪ್ರಭು, ಆಯೋಜನೆ: ಮನೋಜ್ಞ ನೃತ್ಯ ಕಲಾ ಅಕಾಡೆಮಿ, ಮಂಡ್ಯ ಕರ್ನಾಟಕ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಸಂಕ್ಷಿಪ್ತ ಸುದ್ದಿ

ಜುಲೈ 10ರಿಂದ 'ಸಸ್ಯ ಸಂತೆ'

ಬೆಂಗಳೂರು: ಇಲ್ಲಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಜುಲೈ 10ರಿಂದ 12ರವರೆಗೆ 'ಸಸ್ಯ ಸಂತೆ' ನಡೆಯಲಿದ್ದು, ಮಾರಾಟದ ಜೊತೆಗೆ ಕೃಷಿ ಶಿಕ್ಷಣ ನೀಡಲಾಗುತ್ತಿದೆ. 'ಬೆಳೆ ಸಂಗ್ರಹಾಲಯ' ಗಮನ ಸೆಳೆಯಲಿದೆ.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಆಯೋಜಿರುವ ಸಂತೆಯಲ್ಲಿ ನೂರಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗುತ್ತಿದ್ದು, ಹಣ್ಣು, ಹೂವು ಹಾಗೂ ಆಲಂಕಾರಿಕ ಸಸ್ಯಗಳು, ಔಷಧೀಯ ಮತ್ತು ಸುಗಂಧ ಸಸಿಗಳು, ಎರೆಹುಳು ಗೊಬ್ಬರ, ಹೂಕುಂಡದ ಮಣ್ಣು ಮಿಶ್ರಣ, ಜೈವಿಕ ಕೀಟನಾಶಕ, ತರಕಾರಿ-ಹೂವಿನ ಬೀಜಗಳು ಮತ್ತು ಉದ್ಯಾನ ಪರಿಕರ ಸೇರಿದಂತೆ ವಿವಿಧ ವಸ್ತುಗಳನ್ನು ಮಳಿಗೆಗಳಲ್ಲಿ ಮಾರಾಟಕ್ಕಿಡಬಹುದು. ಮಾರಾಟ ಮಳಿಗೆ ಕಾಯ್ದಿರಿಸಲು ಮೊಬೈಲ್– 77950 72699 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಆಹಾರ ಉತ್ಸವ

ಬೆಂಗಳೂರು: ಬಾರ್ಬಿಕ್ಯೂ ನೇಷನ್, 'ಟೇಸ್ಟ್ ಆಫ್ ದ ಸೆವೆನ್ ಸಿಸ್ಟರ್ಸ್– ಮೇಘಾಲಯದಿಂದ ಅರುಣಾಚಲ ಪ್ರದೇಶದವರೆಗಿನ ಪಾಕಯಾನ' ಎಂಬ ವಿಶೇಷ ಆಹಾರ ಉತ್ಸವವನ್ನು ಜೆ.ಪಿ ನಗರ ಶಾಖೆಯಲ್ಲಿ ಜೂನ್ 24ರಿಂದ 28ರವರೆಗೆ ಆಯೋಜಿಸಿತ್ತು.

ಈ ಉತ್ಸವದಲ್ಲಿ 'ಮಾಸ್ಟರ್ ಶೆಫ್ ಇಂಡಿಯಾ' 8ನೇ ಆವೃತ್ತಿಯ ಪ್ರಥಮ ರನ್ನರ್ ಅಪ್, ಶೆಫ್ ನಂಬಿ ಮರಾಕ್ ಅವರು ಈಶಾನ್ಯ ಭಾರತದ ಆಹಾರ ಸಂಸ್ಕೃತಿಯನ್ನು ನಗರದ ಜನರಿಗೆ ಉಣಬಡಿಸಿದರು. ಅರುಣಾಚಲ ಪ್ರದೇಶ, ಅಸ್ಸಾಂ, ಮೇಘಾಲಯ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರಾ ರಾಜ್ಯಗಳ ವಿಶೇಷ ಖಾದ್ಯಗಳು, ಪ್ರಾದೇಶಿಕ ಸಿಹಿ ತಿನಿಸುಗಳ ಸ್ವಾದವನ್ನು ಪರಿಚಯಿಸಿದರು.

ಮೇಘಾಲಯದ ಶೆಫ್ ನಂಬಿ ಮರಾಕ್ ಅವರು 'ಟ್ರೈಬಲ್ ಶೆಫ್' ಎಂದೇ ಪ್ರಸಿದ್ಧರಾಗಿದ್ದು, ಈಶಾನ್ಯ ಭಾರತದ ಸ್ಥಳೀಯ ಪದಾರ್ಥಗಳು, ಸಂಪ್ರದಾಯಿಕ ಖಾದ್ಯಗಳು ಹಾಗೂ ಅವುಗಳ ಕಥೆಗಳನ್ನು ಹಲವು ವರ್ಷಗಳಿಂದ ಜನರಿಗೆ ಹೇಳುತ್ತಿದ್ದಾರೆ.

ಬಾರ್ಬಿಕ್ಯೂ ನೇಷನ್ ತನ್ನ ಗ್ರಾಹಕರಿಗೆ ವಿಶಿಷ್ಟ ಪಾಕಾನುಭವಗಳನ್ನು ನೀಡಲು ಆಗಾಗ್ಗ ಇಂಥ ಆಹಾರ ಉತ್ಸವವನ್ನು ಆಯೋಜಿಸುತ್ತಿದೆ.

ಭದ್ರ ಶೈಕ್ಷಣಿಕ ಬುನಾದಿ ಅತ್ಯಗತ್ಯ: ಬಂಜಗೆರೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲೇ ಮಕ್ಕಳಿಗೆ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಗಟ್ಟಿ ಬುನಾದಿ ಹಾಕಬೇಕು' ಎಂದು ಲೇಖಕ ಬಂಜಗೆರೆ ಜಯಪ್ರಕಾಶ್ ಪ್ರತಿಪಾದಿಸಿದರು.

ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ಸಿದ್ಧನಹಳ್ಳಿಯ ಬುದ್ಧ–ಬಸವ–ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಜಾನಪದ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, 'ಶಿಕ್ಷಣ, ಆರೋಗ್ಯ, ಉದ್ಯೋಗ ಉಳ್ಳವರ ಪಾಲಾಗುತ್ತಿದೆ. ಹೀಗಾಗಿ ಗ್ರಾಮೀಣ ಮಕ್ಕಳ ಜೀವನ ಮಟ್ಟ ಸುಧಾರಿಸಲು ಉತ್ತಮ ಶಿಕ್ಷಣ ಅಗತ್ಯ' ಎಂದರು.

ಕವಯಿತ್ರಿ ಆಶಾ ಶಿವುಗೌಡ, ಸಾಹಿತಿ ಆಗುಂಬೆ ಎಸ್. ನಟರಾಜ್ ಮಾತನಾಡಿದರು. ಇದೇ ವೇಳೆ ಶಿವಮಲ್ಲಯ್ಯ ಅವರ ಬಿತ್ತನೆ ಹಾಗೂ ಎರಡು ನಾಟಕ ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಪ್ರಶಸ್ತಿ ಪ್ರದಾನ: ವಿವಿಧ ಕ್ಷೇತ್ರಗಳ ಸಾಧಕರಾದ ನಿಡಸಾಲೆ ಪುಟ್ಟಸ್ವಾಮಯ್ಯ (ಪುಸ್ತಕ ಸಂಸ್ಕೃತಿ), ಮಹಾಂತೇಶ್ ನಿಟ್ಟೂರು (ವಿಜ್ಞಾನ), ಯು.ಸಿ. ಚನ್ನೇಗೌಡ (ಸಾಹಿತ್ಯ), ನಾಗರತ್ನ ಹಿರೇಮಠ್ (ಯೋಗ), ಸಾ.ಮ.ಮಾಯಣ್ಣ (ಸಾಂಸ್ಕೃತಿಕ), ಸಿ.ಪುಟ್ಟಸ್ವಾಮಿ (ಶೈಕ್ಷಣಿಕ), ಭೀಮಪ್ಪ ಪೂಜಾರಿ (ಜಾನಪದ) ಮಂಡಿಬೆಲೆ ರಾಜಣ್ಣ (ಮಾಧ್ಯಮ), ಬಿಜೆಜಿ ಸತ್ಯಶ್ರೀ (ಕಾನೂನು), ಬಿ.ಎಸ್.ಮೋರಟಗಿ (ಸಹಕಾರ) ಅವರಿಗೆ ಶ್ರೀ ಕುವೆಂಪು ಸಿರಿಗನ್ನಡ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೂರು ದಿನಗಳ ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನದ ಸಮಾರೋಪದಲ್ಲಿ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಪ್ರತಿಪಾದನೆ

ಸಾಹಿತ್ಯ ಉತ್ಸವಗಳ ಸ್ವರೂಪ ಬದಲಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯ ಉತ್ಸವಗಳ ಯಾಂತ್ರಿಕ ಸ್ವರೂಪವನ್ನು ಮುರಿದು ಹೊಸದಾಗಿ ಕಟ್ಟಬೇಕು. ಇಲ್ಲದಿದ್ದರೆ, ಪ್ರತಿ ಶ್ರಾವಣ ಮಾಸದಲ್ಲಿ ಮಹಿಳೆಯರನ್ನು ಕರೆದು ಅರಿಶಿನ-ಕುಂಕುಮ ಕೊಟ್ಟಂತಾಗುತ್ತದೆ' ಎಂದು ವಿಮರ್ಶಕ ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಪ್ರತಿಪಾದಿಸಿದರು.

ಬಹುಮುಖಿ ಸಂಸ್ಥೆಯು ಇಲ್ಲಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನದ ಸಮಾರೋಪ ಭಾಷಣ ಮಾಡಿದ ಅವರು, 'ಉತ್ಸವಗಳಲ್ಲಿ ಕಾವ್ಯ ವಾಚನ, ಕವಿಗಳೊಂದಿಗೆ ಸಂವಾದಗಳು, ಪುಸ್ತಕ ಬಿಡುಗಡೆ ಕಾರ್ಯಕ್ರಮಗಳು ಯಾಂತ್ರಿಕವಾಗಿ ನಡೆಯುತ್ತಿವೆ. ಇಂಥ ಯಾಂತ್ರಿಕ ಚೌಕಟ್ಟನ್ನು ಮುರಿದು ಹೊಸ ಬಗೆಯಲ್ಲಿ ಕಟ್ಟಬೇಕು' ಎಂದು ಪ್ರತಿಪಾದಿಸಿದರು.



'ಬಹುಮುಖಿ' ಸಂಸ್ಥೆಯು ಭಾನುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಕಾವ್ಯ ಸಮ್ಮಿಲನದ ಸಮಾರೋಪ ಸಮಾರಂಭದಲ್ಲಿ ಕಜಾಕಸ್ತಾನದ ಕವಿ ಸಯಾತ್ ಕಮ್ಶಿಗರ್ ಅವರ ಮಾತಿಗೆ ಗಣ್ಯರು ಗಮನ ಕೊಟ್ಟ ಕ್ಷಣ. ಮೋಹನ್ ಕೊಂಡಜ್ಜಿ, ಶ್ರೀಹರ್ಷ, ಪ್ರೊ.ಬರಗೂರು ರಾಮಚಂದ್ರಪ್ಪ, ಪ್ರೊ.ಓ.ಎಲ್.ನಾಗಭೂಷಣಸ್ವಾಮಿ ಮತ್ತು ಉದಯನ್ ವಾಜಪೇಯಿ ಪಾಲ್ಗೊಂಡರು – ಪ್ರಜಾವಾಣಿ ಚಿತ್ರ

ಸಮಾರೋಪಕ್ಕೂ ಮುನ್ನ ನಡೆದ ಗೋಷ್ಠಿಯಲ್ಲಿ ಕವಿಗಳೊಂದಿಗೆ ಸಂವಾದ ನಡೆಸಿದ ವಿಮರ್ಶಕಿ ಪ್ರೊ.ಎಂ.ಎಸ್.ಆಶಾದೇವಿ, 'ಬುದ್ಧ ಈಗ ಕವಿಗಳೆಲ್ಲರ ಆಶ್ರಯತಾಣವಾಗಿದ್ದಾನೆ. ಬುದ್ಧನ ಬಗ್ಗೆ ಕಡ್ಡಾಯವಾಗಿ ಪದ್ಯ ಬರೆಯಬೇಕೆಂಬ ಸನ್ನಿವೇಶವಿದೆ' ಎಂದು ಅಭಿಪ್ರಾಯಪಟ್ಟರು.

ಮಧ್ಯಾಹ್ನದ ಗೋಷ್ಠಿಯಲ್ಲಿ ಸಂವಾದ ನಡೆಸಿದ ಅವರು, 'ಕಾವ್ಯವನ್ನು ಓದುವವರ ಸಂಖ್ಯೆ ಕಡಿಮೆಯಾಗಿದೆ ಎಂದು ನಿರಾಶರಾಗಿರುವ ಹೊತ್ತಿನಲ್ಲಿ, 12ನೇ ಶತಮಾನದಲ್ಲಿ ಕಾವ್ಯವು ವಹಿಸಿದ ನಿರ್ಣಾಯಕ ಪಾತ್ರವನ್ನು ಮತ್ತೊಮ್ಮೆ ವಹಿಸಬೇಕು' ಎಂದರು.

'ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರೊ.ಕಿ.ರಂ.ನಾಗರಾಜ ಅವರು ಹೊರತಂದ 'ಆಪತ್ಕಾಲೀನ ಕವಿತೆಗಳು' ಸಂಕಲನದ ಮಾದರಿಯಲ್ಲೇ ಈ ದಶಕದಲ್ಲಿ ಆಪತ್ಕಾಲೀನ ಕಾವ್ಯವನ್ನು ಸಂಗ್ರಹಿಸಬೇಕು. ಕಾವ್ಯ ಒಳಗೊಳ್ಳುವ ರೂಪಕಗಳ ಜೊತೆ ಹುಡುಗಾಟವಾಡದೆ, ಜನರಿಗೂ ಅದನ್ನು ತಲುಪಿಸಬೇಕು' ಎಂದರು.

'ಆಮಿಷಗಳು ಮತ್ತು ಆತ್ಮವಂಚನೆಯ ಈ ಕಾಲದಲ್ಲಿ ಅಜ್ಞಾನ, ವಿಕಾರಗಳನ್ನು ಕಳೆದುಕೊಳ್ಳಲು ದೈತ್ಯ ಶಕ್ತಿಯಾಗಿ ನಿಲ್ಲುವ ಸಾಹಿತ್ಯವನ್ನು ಅಡಗುತಾಣವಾಗಿ ಮಾತ್ರವಲ್ಲದೆ, ಉಸಿರಾಡುವ ತಾಣವನ್ನಾಗಿಯೂ ಮಾಡಿಕೊಳ್ಳಬೇಕು' ಎಂದರು.

ಕಜಾಕಸ್ತಾನದ ಕವಿ ಸಯಾತ್ ಕಮ್ಶಿಗರ್ ಅವರು ತಮ್ಮ ದೇಶದ ಜಾನಪದ ಗೀತೆಯೊಂದನ್ನು ಹಾಡಿ ಗಮನಸೆಳೆದರು. ಹಿಂದಿ ಕವಿ ಉದಯನ್ ವಾಜಪೇಯಿ ಪಾಲ್ಗೊಂಡರು.

ಗೋಷ್ಠಿಗಳಲ್ಲಿ ಎ.ಜೆ.ಥಾಮಸ್, ಬಿ.ಆರ್. ರವಿಕಾಂತೇಗೌಡ, ಗೋಪಾಲ ತ್ರಾಸಿ, ಸೊಯ್ಮೊರಾ ಮುನಾಜ್, ರತಿ ಸಕ್ಸೇನಾ, ಮಧುರಾಣಿ ಎಚ್.ಎಸ್, ಪ್ರಭಾಲ್ ಕುಮಾರ್ ಬಾಸು, ಎಚ್.ಎಲ್.ಪುಷ್ಪಾ, ಚೈತ್ರ ಶಿವಯೋಗಿಮಠ ಕವಿತೆಗಳನ್ನು ಓದಿದರು. ಜ್ಯೋತಿ, ಬಿ.ಎನ್.ಮಲ್ಲೇಶ್ ಸಂವಾದ ನಡೆಸಿದರು. ಸಂಘಟಕ ಶ್ರೀಹರ್ಷ ಪಾಲ್ಗೊಂಡರು.

ಬಾರದ ಯುವಜನ: ವಿಷಾದ

ಸಮ್ಮಿಲನ ಅಂತರರಾಷ್ಟ್ರೀಯ ಮಟ್ಟದ್ದಾದರೂ ಯುವಜನರ ಉಪಸ್ಥಿತಿ ಇಲ್ಲದಿದ್ದುದು ಸಮಾರೋಪ ಸಮಾರಂಭದಲ್ಲಿ ವಿಷಾದವನ್ನು ಮೂಡಿಸಿತು. ಸಮಾರೋಪ ಭಾಷಣ ಮಾಡಿದ ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ ಮತ್ತು ಮೋಹನ್ ಕೊಂಡಜ್ಜಿಯವರು ಈ ಬಗ್ಗೆ ವಿಶೇಷವಾಗಿ ಉಲ್ಲೇಖಿಸಿದರು.

'ಇಂಥ ಸಮ್ಮಿಲನ, ಉತ್ಸವಗಳನ್ನು ಏರ್ಪಡಿಸುವಲ್ಲಿ ಹೆಚ್ಚಿನ ಸಂಘಟನೆಯ ಶಕ್ತಿಯನ್ನು ವಿನಿಯೋಗಿಸಬೇಕು. ದೊಡ್ಡ ಸಭಾಂಗಣವೇ ಬೇಕೆನ್ನುವ ಬದಲು, ಚಿಕ್ಕ ಸ್ಥಳಗಳಲ್ಲೂ ಏರ್ಪಡಿಸಬೇಕು. ಕವಿಗಳ ವಾಸ್ತವ್ಯ ಮತ್ತು ಸಮ್ಮಿಲನ ಚಟುವಟಿಕೆಗಳನ್ನು ಒಂದೇ ಸ್ಥಳದಲ್ಲಿ ಏರ್ಪಡಿಸಿದ್ದರೆ ದೇಶಾಂತರದ ಕವಿಗಳು ಪರಸ್ಪರ ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತಿತ್ತು' ಎಂದು ಪ್ರತಿಪಾದಿಸಿದರು.

ರಾಮನ ಹುಂಡಿಯ ಕಿಂಡಿ!

ಸಮಾರೋಪಕ್ಕೂ ಮುನ್ನ ನಡೆದ ಗೋಷ್ಠಿಯಲ್ಲಿ ಕವಿ ಸಂಗಮೇಶ ಉಪಾಸೆ ಅವರು ಓದಿದ 'ರಾಮನ ಹುಂಡಿಯ ಕಿಂಡಿ!' ಗಮನ ಸೆಳೆಯಿತು.

ಅಯೋಧ್ಯೆ ರಾಮಮಂದಿರದ ದೇಣಿಗೆ ಮತ್ತು ಹುಂಡಿ ಕಳವು ಪ್ರಕರಣವನ್ನು ಕೇಂದ್ರದಲ್ಲಿರಿಸಿಕೊಂಡು, ಶ್ರೀರಾಮ ದೇವರನ್ನು ಸಂಬೋಧಿಸಿ ಬರೆದ ಕವನದ ಬಗ್ಗೆ ಗೋಷ್ಠಿಯ ನಂತರವೂ ಕವಿಯೊಂದಿಗೆ ಇತರೆ ಕವಿಗಳು ಚರ್ಚಿಸಿದರು.

BANGALORE TURF CLUB LTD.
Post Box No. 5038, Race Course Road, Bangalore-560001
EPABX : 22262391/2/3 Extn: 225, 480,
Email: purchase@btcraces.com | CIN: U99999KA1962PLC001449

Invites Quotations for Supply of urine sample collection kits

Sealed quotations are invited from reputed manufacturers, authorized distributors and suppliers for the Supply of equine Urine Sample Collection Kits as per the specifications advertised by Bangalore Turf Club Limited web site : **www.bangaloreraces.com**

The quotation should be submitted in a sealed cover "Equine Urine Sample Collection Kits" on or before 08th July 2026.

Bangalore Turf Club Limited reserves the right to accept or reject any quotation without assigning any reason thereof.

Date : 29-06-2026
Bengaluru
Sd/-
Secretary

ಮಾದಕ ದ್ರವ್ಯ ಮುಕ್ತ ರಾಷ್ಟ್ರ ನಿರ್ಮಾಣ ಸಂಕಲ್ಪ

ರಾಜೀವ್ ಗಾಂಧಿ ಆರೋಗ್ಯ ವಿವಿ ಸಂಸ್ಥಾಪನಾ ದಿನಾಚರಣೆಯಲ್ಲಿ ಮೊಳಗಿದ ಯುವ ಧ್ವನಿ • ಮಾದಕ ವ್ಯಸನದ ವಿರುದ್ಧ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ವೇತ ವರ್ಣದ ಟೀ-ಶರ್ಟ್ ಹಾಗೂ ವರ್ಣರಂಜಿತ ಟೋಪಿಗಳನ್ನು ಧರಿಸಿದ್ದ ಸಾವಿರಾರು ವಿದ್ಯಾರ್ಥಿಗಳು, ಮಾದಕ ದ್ರವ್ಯ ಮುಕ್ತ ಭಾರತ ನಿರ್ಮಾಣಕ್ಕೆ ಒಕ್ಕೊರಲಿನಿಂದ ಪ್ರತಿಜ್ಞೆ ಕೈಗೊಂಡರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 31ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸಮಾರಂಭ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಯಿತು. ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ವಿದ್ಯಾರ್ಥಿಗಳು, ವಿ.ವಿ ಹಮ್ಮಿಕೊಂಡಿ ರುವ 'ನಶಾ ಮುಕ್ತ ಭಾರತ ಅಭಿಯಾನ'ಕ್ಕೆ ಕೈಜೋಡಿಸಿದರು. ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊ ಮತ್ತು ದಿಶಾಭೋದ್ ಫೌಂಡೇಷನ್ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಾದಕ ವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆಯನ್ನು ಆಚರಿಸಿ, ಮಾದಕ ವ್ಯಸನದ ಅಪಾಯದ ಬಗ್ಗೆ ಜಾಗೃತಿ ಮೂಡಿಸಲಾಯಿತು.

> ಮಾದಕ ವಸ್ತುಗಳ ಹಾವಳಿ ಕುಟುಂಬ, ಸಮುದಾಯ ಹಾಗೂ ರಾಷ್ಟ್ರದ ಭವಿಷ್ಯಕ್ಕೆ ಗಂಭೀರ ಸವಾಲಾಗಿದೆ. ಇದರ ವಿರುದ್ಧ ಜಯ ಸಾಧಿಸಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು
> **ಥಾವರಚಂದ್ ಗೆಹಲೋತ್,** ರಾಜ್ಯಪಾಲ

> ಆರೋಗ್ಯ ಸೇವೆಯ ಮೂಲತತ್ವ ಮಾನವೀಯತೆಯೇ ಆಗಿರುತ್ತದೆ. ತಾಂತ್ರಿಕ ಪ್ರಗತಿಯಿಂದ ದಯೆಯ ಮಹತ್ವ ಕಡಿಮೆಯಾಗಲು ಸಾಧ್ಯವಿಲ್ಲ
> **ಎಸ್. ಅಬ್ದುಲ್ ನಜೀರ್,** ಆಂಧ್ರಪ್ರದೇಶದ ರಾಜ್ಯಪಾಲ

ವಿಶ್ವವಿದ್ಯಾಲಯದ ಈ ಕಾರ್ಯ ಚಟುವಟಿಕೆಯನ್ನು ಶ್ಲಾಘಿಸಿದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, 'ಮಾದಕ ದ್ರವ್ಯ ಮುಕ್ತ ರಾಷ್ಟ್ರ ನಿರ್ಮಾಣದ ಸಂಕಲ್ಪ ಕೈಗೊಳ್ಳಲು ಇದು ಸೂಕ್ತ ಸಮಯ. ವಿಶ್ವವಿದ್ಯಾಲಯಗಳು ಪದವಿಗಳನ್ನು ನೀಡುವ ಸಂಸ್ಥೆಗಳು ಮಾತ್ರ ಆಗಿರದೆ, ದೇಶದ ಭವಿಷ್ಯದ ದೃಷ್ಟಿಯಿಂದ ನಾಯಕತ್ವ ಮನೋಭಾವ, ಉತ್ತಮ ಮೌಲ್ಯಗಳು ಮತ್ತು ವ್ಯಕ್ತಿತ್ವವನ್ನು ರೂಪಿಸುವ ಕೇಂದ್ರಗಳಾಗಿವೆ. ಮಾದಕ ವ್ಯಸನದ ಸ್ವರೂಪ ಇತ್ತೀಚೆಗೆ ವೇಗವಾಗಿ ಬದಲಾಗುತ್ತಿದ್ದು, ಯುವಜನರನ್ನೇ ಗುರಿಯಾಗಿಸಿಕೊಂಡು ಮಾದಕ ದ್ರವ್ಯಗಳನ್ನು ಪೂರೈಕೆ ಮಾಡಲಾಗುತ್ತಿದೆ. ಆದ್ದರಿಂದ ದೃಢ ಸಂಕಲ್ಪದೊಂದಿಗೆ ಮಾದಕ ದ್ರವ್ಯದ ವಿರುದ್ಧ ಯುವಜನರು ಹೋರಾಟ ನಡೆಸಿ, ಸಮಾಜದಲ್ಲಿ ಜಾಗೃತಿ ಮೂಡಿಸಬೇಕು' ಎಂದರು.

'ಆರೋಗ್ಯ ವೃತ್ತಿಪರರು ಸಮಾಜ ದಲ್ಲಿ ಅತ್ಯಂತ ವಿಶ್ವಾಸಾರ್ಹ ವ್ಯಕ್ತಿಗಳಾಗಿ ದ್ದಾರೆ. ಪ್ರತಿಯೊಬ್ಬ ವೈದ್ಯಕೀಯ ಪದವೀಧರರೂ ಕೇವಲ ವೈದ್ಯರಾಗದೆ, ಸಹಾನುಭೂತಿಯುಳ್ಳ ಆರೋಗ್ಯ ರಾಯಭಾರಿಗಳಾಗಿ ಹೊರಹೊಮ್ಮಬೇಕು. ದೆಹಲಿ ವಿಶ್ವವಿದ್ಯಾಲಯವನ್ನು ಈಗಾಗಲೇ ಮಾದಕ ವಸ್ತು ಮುಕ್ತ ಕ್ಯಾಂಪಸ್ ಎಂದು ಘೋಷಿಸಲಾಗಿದೆ. ಅದೇ ರೀತಿ, ಕರ್ನಾಟಕದಲ್ಲಿನ ವಿಶ್ವ-ವಿದ್ಯಾಲಯಗಳು ಮಾದಕ ವಸ್ತು ಮುಕ್ತ ಕ್ಯಾಂಪಸ್ ಆಗಿ, ದೇಶಕ್ಕೆ ಮಾದರಿಯಾಗಬೇಕು. ಇಡೀ ರಾಷ್ಟ್ರವನ್ನು ಮಾದಕ ವಸ್ತುವಿನಿಂದ ಮುಕ್ತಗೊಳಿಸಲು ನಾಯಕನ ಸ್ಥಾನದಲ್ಲಿ ಕರ್ನಾಟಕ ನಿಲ್ಲಬೇಕು' ಎಂದು ಕರೆ ನೀಡಿದರು.

ಸಮಾರಂಭದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಮಾದಕ ದ್ರವ್ಯದ ವಿರುದ್ಧ ಹೋರಾಡುವುದಾಗಿ ಪ್ರತಿಜ್ಞೆ ಕೈಗೊಂಡರು

25 ಸಾವಿರ ವಿದ್ಯಾರ್ಥಿಗಳು: ಕ್ರೀಡಾಂಗಣದಲ್ಲಿದ್ದ ಸುಮಾರು 25 ಸಾವಿರ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದ ವಿ.ವಿ ಕುಲಪತಿ ಡಾ. ಭಗವಾನ್ ಬಿ.ಸಿ., 'ವಿಶ್ವವಿದ್ಯಾಲಯವು ಮಾದಕ ದ್ರವ್ಯದ ವಿರುದ್ಧ ಸಮರ ಸಾರಿದೆ. ಮಾದಕ ದ್ರವ್ಯಗಳ ವಿರೋಧಿ ಅಭಿಯಾನದಲ್ಲಿ ಮಾದಕ ದ್ರವ್ಯಗಳ ಸೇವನೆಯಿಂದಾಗುವ ಅಪಾಯದ ಬಗ್ಗೆ ರಾಜ್ಯದಾದ್ಯಂತ ಜಾಗೃತಿ ಮೂಡಿಸಲಾಗುತ್ತಿದೆ. ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಜತೆಗೆ, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಕೈಜೋಡಿಸಿದ್ದಾರೆ. ಮಾದಕ ದ್ರವ್ಯ ಮುಕ್ತ ಹೋರಾಟದಲ್ಲಿ ವಿದ್ಯಾರ್ಥಿಗಳೇ ರಾಯಭಾರಿಗಳು' ಎಂದು ಹೇಳಿದರು.

'ರಾಜ್ಯವು ದೇಶದ ವೈದ್ಯಕೀಯ ರಾಜಧಾನಿ'

'ಕರ್ನಾಟಕದಲ್ಲಿ ಇರುವಷ್ಟು ಆಸ್ಪತ್ರೆಗಳು ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಕರ್ನಾಟಕ ದೇಶದ ವೈದ್ಯಕೀಯ ರಾಜಧಾನಿಯೂ ಆಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ದೇಶದಲ್ಲೇ ಅತಿ ದೊಡ್ಡ ಆರೋಗ್ಯ ವಿ.ವಿಯಾಗಿದ್ದು, ಅತಿ ಹೆಚ್ಚು ವೈದ್ಯರನ್ನು ನೀಡಿದೆ. ನಮ್ಮ ರಾಜ್ಯದಲ್ಲಿ 70 ವೈದ್ಯಕೀಯ ಕಾಲೇಜುಗಳಿದ್ದು, ದೇಶದ ಬೇರೆ ಯಾವುದೇ ರಾಜ್ಯದಲ್ಲಿ ಇಷ್ಟು ವೈದ್ಯಕೀಯ ಕಾಲೇಜುಗಳಿಲ್ಲ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಆಂಧ್ರ ಪ್ರದೇಶ ರಾಜ್ಯಪಾಲ ಎಸ್. ಅಬ್ದುಲ್ ನಜೀರ್ ಅವರು ದತ್ತಿ ಉಪನ್ಯಾಸ ನೀಡಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಆರೋಗ್ಯ ಸಚಿವ ಯು.ಟಿ. ಖಾದರ್ ಉಪಸ್ಥಿತರಿದ್ದರು.

ಶಿವಾಜಿ ಚಿತ್ರಕ್ಕೆ ಜನಾರ್ದನ್ ರಾವ್ ನಿಕ್ಕಂ ಪುಷ್ಪಾರ್ಚನೆ ಮಾಡಿದರು. ಎಂ.ಪೆರಿಯಸ್ವಾಮಿ, ನಾರಾಯಣ ರಾವ್ ನೆಲ್ಲೋಡೆ, ಶಿವಲಿಂಗರಾವ್ ವಿ.ನಿಕ್ಕಂ, ಮನೋಹರ್ ಎನ್.ಜಾಧವ್, ನಾಮದೇವರಾವ್ ನಿಕ್ಕಂ, ಕೃಷ್ಣೋಜಿರಾವ್ ಚೌಹಾಣ್, ವಿಠ್ಠಲ್ ರಾವ್ ಮೋರೆ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಶಿವಾಜಿ ಜಯಂತಿ ಸಂಭ್ರಮ

ಬೆಂಗಳೂರು: ಶಿವಾಜಿನಗರದಲ್ಲಿ ಭಾನುವಾರ ಛತ್ರಪತಿ ಶಿವಾಜಿ ಅವರ 399ನೇ ಜಯಂತಿ ಸಡಗರದಿಂದ ನಡೆಯಿತು. ಇದೇ ವೇಳೆ ಮರಾಠ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 'ವಿಜಯ್ ಭವಾನಿ ಕ್ಷೇಮಾಭಿವೃದ್ಧಿ ಸಂಘ'ವು ನಗದು, ಫಲಕ ನೀಡಿ ಪ್ರೋತ್ಸಾಹಿಸಿತು.

ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ತಹಶೀಲ್ದಾರ್ ಜನಾರ್ದನ್ ರಾವ್ ನಿಕ್ಕಂ, 'ಶಿವಾಜಿ ಅವರ ಹೋರಾಟ, ಮಾತೃಭೂಮಿ ಮೇಲಿನ ಪ್ರೀತಿ ನಮಗೆ ಸ್ಫೂರ್ತಿಯಾಗಬೇಕು' ಎಂದರು.

'ಶಿವಾಜಿ 350ಕ್ಕೂ ಹೆಚ್ಚು ಯುದ್ಧಗಳಲ್ಲಿ ಪಾಲ್ಗೊಂಡು ಸಾಮ್ರಾಜ್ಯ ಕಟ್ಟಿದರು. ಅಲೆಕ್ಸಾಂಡರ್ 17ನೇ ಮತ್ತು ನೆಪೋಲಿಯನ್ 16ನೇ ವಯಸ್ಸಿನಲ್ಲಿ ಯುದ್ಧಭೂಮಿಗೆ ಬಂದರೆ, ಶಿವಾಜಿ 14ನೇ ವಯಸ್ಸಿನಲ್ಲಿ ಕದನಕ್ಕಿಳಿದಿದ್ದರು' ಎಂದು ಸ್ಮರಿಸಿದರು.

'ಶಿವಾಜಿ ನೇತೃತ್ವದ ಮರಾಠ ಸೇನೆಯಲ್ಲಿ 2 ಲಕ್ಷ ಯೋಧರಿದ್ದರು. ಜನರ ಪ್ರೀತಿ ಸಂಪಾದಿಸಿದ್ದ ಅವರು ಯುದ್ಧಭೂಮಿಯಲ್ಲಿಯೇ ಬಹುದಿನಗಳನ್ನು ಕಳೆದು, ದೇಶವನ್ನು ರಕ್ಷಿಸಿದರು. ಚಕ್ರವರ್ತಿಯಾಗಿದ್ದರೂ ಸರಳ ಜೀವನ ನಡೆಸಿದರು' ಎಂದರು.

ಎಸ್‌ಎಸ್‌ಎಲ್‌ಸಿ, ಪಿಯು, ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಉತ್ತಮ ಅಂಕಗಳಿಸಿದ ಮೋಹಿತ್, ವರ್ಷಾ, ಪ್ರಿಯಾಂಕಾ, ಎಸ್. ರೋಷಿನಿ, ವಿ.ಸಂಜನಾ, ಆರ್, ಅಕ್ಷತಾ, ಆರ್.ಹರ್ಷಿತಾ, ಅಕ್ಷತಾ ಕೀರ್ತಿ, ಎಸ್.ತೇಜಸ್, ಆರ್, ಅರ್ಜುನ್, ದರ್ಶನ್, ಎಸ್.ಸತೀಶ್, ವಿ.ರತೀಶ್, ಎಸ್.ಗೌತಮ್, ಯೋಗಾ, ಪರಿಣಿತಾ, ತೇಜ್, ವಿ.ಸಂಜನಾ, ಮೃದಿನಿ, ಚೇತನ್ ಅನುಪಮ್, ಡಿ.ವೈಷ್ಣವಿ ಅವರಿಗೆ ಪ್ರೋತ್ಸಾಹಧನ ನೀಡಲಾಯಿತು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಅಭಿಮತ

ಪುಸ್ತಕದಿಂದ ಕ್ರಾಂತಿಕಾರಕ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜ್ಞಾನ ದಾಸೋಹವು ಶ್ರೇಷ್ಠ ದಾಸೋಹವಾಗಿದ್ದು, ಪುಸ್ತಕದಿಂದ ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆ ಸಾಧ್ಯ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ ಅಭಿಪ್ರಾಯಪಟ್ಟರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 2025ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ದೇಶದಲ್ಲಿ ಅಪೂರ್ವ ಜ್ಞಾನ ಭಂಡಾರವಿದೆ. ವಚನಗಳು ಪುಸ್ತಕ ರೂಪದಲ್ಲಿ ಬಂದ ನಂತರ ನಾವೆಲ್ಲರೂ ಅವನ್ನು ಓದುವಂತಾಯಿತು. ಪುಸ್ತಕಗಳಿಗೆ ಸಮಾಜವನ್ನು ಬದಲಾವಣೆ ಮಾಡುವ ಶಕ್ತಿಯಿದ್ದು, ಅವುಗಳಿಂದ ಸಮಾಜದಲ್ಲಿ ಉತ್ತಮ ಕೆಲಸವಾಗುತ್ತಿದೆ. ಪುಸ್ತಕ ಓದುಗರ ಸಂಖ್ಯೆ ಹೆಚ್ಚಳವಾಗಬೇಕು. ಬರಹಗಾರರು, ಪ್ರಕಾಶಕರು ಮತ್ತು ಮುದ್ರಕರು ಸಮಾಜಕ್ಕೆ ಬೇಕಾದ ಪುಸ್ತಕಗಳನ್ನು ನೀಡುತ್ತಿದ್ದಾರೆ. ಸರ್ಕಾರ ಅವರ ಸಹಾಯಕ್ಕೆ ನಿಲ್ಲಬೇಕು' ಎಂದು ಹೇಳಿದರು. ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, 'ಮುದ್ರಕರು ಮತ್ತು ಪ್ರಕಾಶಕರು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಪಾಲಿಕೆಯು ಸಾವಿರ ಕೋಟಿ ರೂಪಾಯಿ ಗ್ರಂಥಾಲಯ ಕರ ಸಂಗ್ರಹಿಸಿದರೂ, ಸರ್ಕಾರ ಆ ಹಣದಿಂದ ಪುಸ್ತಕಗಳನ್ನು ಖರೀದಿಸುತ್ತಿಲ್ಲ. ಹಿರಿಯ ಅಧಿಕಾರಿಗಳ ಬೇಜವಾಬ್ದಾರಿಯೇ ಇದಕ್ಕೆ ಕಾರಣವಾಗಿದ್ದು, ಸರ್ಕಾರಕ್ಕೆ ಬದ್ಧತೆ ಇರಬೇಕು' ಎಂದರು.

ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್, 'ಈ ಹಿಂದೆ ವಾರ್ಷಿಕ ₹ 10 ಕೋಟಿ ಅನುದಾನದಲ್ಲಿ ಪುಸ್ತಕಗಳನ್ನು ಖರೀದಿಸಲಾಗಿತ್ತು. ಈಗ ಆ ಖರೀದಿ ನಿಂತಿದ್ದು, ಗ್ರಂಥಾಲಯ ಇಲಾಖೆಗೆ ರಾಹು ಬಡಿದಿದೆ. ಪುಸ್ತಕೋದ್ಯಮದಲ್ಲಿ ಇರುವವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರಾಜ್ಯ ಸರ್ಕಾರ ಕಣ್ಣುತೆರೆದು ನೋಡಬೇಕು' ಎಂದರು.

ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ, 'ಗ್ರಂಥಾಲಯ ಇಲಾಖೆಯು ಪುಸ್ತಕಗಳನ್ನು ಖರೀದಿ ಮಾಡುವ ಮೂಲಕ, ಲೇಖಕ, ಪ್ರಕಾಶಕ ಮತ್ತು ಮುದ್ರಕರಿಗೆ ನೆರವಾಗಬೇಕು' ಎಂದು ಆಗ್ರಹಿಸಿದರು.

ಸಮಾರಂಭದಲ್ಲಿ ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ, ಕೆ.ಪಿ. ರಾವ್, ಎಂ.ಎಸ್. ಆಶಾದೇವಿ, ಸಿ.ಆರ್. ಜನಾರ್ದನ್ ಹಾಗೂ ಅನಂತ ಕುಣಿಗಲ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಲ್ಲೇಪುರಂ ಜಿ. ವೆಂಕಟೇಶ್, ಶಿವರಾಜ್ ಪಾಟೀಲ, ನಿಡಸಾಲೆ ಪುಟ್ಟಸ್ವಾಮಯ್ಯ, ಆರ್. ದೊಡ್ಡೇಗೌಡ, ಬೈರಮಂಗಲ ರಾಮೇಗೌಡ ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಐವರಿಗೆ ಪ್ರಶಸ್ತಿ ಪ್ರದಾನ

ಸಮಾರಂಭದಲ್ಲಿ ಎಂ.ಎಸ್. ಆಶಾದೇವಿ ಅವರಿಗೆ 'ಸಾಹಿತ್ಯ ರತ್ನ' ಪ್ರಶಸ್ತಿ, ಅನಂತ ಕುಣಿಗಲ್ ಅವರಿಗೆ 'ಯುವ ಸಾಹಿತ್ಯ ರತ್ನ' ಪ್ರಶಸ್ತಿ, ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ ಅವರಿಗೆ 'ಪುಸ್ತಕ ರತ್ನ' ಪ್ರಶಸ್ತಿ, ಕೆ.ಪಿ.ರಾವ್ ಹಾಗೂ ಸಿ.ಆರ್. ಜನಾರ್ದನ್ ಅವರಿಗೆ 'ಮುದ್ರಣ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ.

60.36 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೊ ಲಸಿಕೆ ವಿತರಣೆ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ನಿಗದಿಪಡಿಸಲಾಗಿದ್ದ 5 ವರ್ಷದೊಳಗಿನ ಮಕ್ಕಳಲ್ಲಿ 60.36 ಲಕ್ಷ ಮಕ್ಕಳು ಪೋಲಿಯೊ ಹನಿ ಹಾಕಿಸಿಕೊಂಡಿದ್ದಾರೆ.

ಇಲಾಖೆಯು ಈ ಬಾರಿ 64.84 ಲಕ್ಷ ಮಕ್ಕಳಿಗೆ ಲಸಿಕೆ ವಿತರಿಸುವ ಗುರಿ ಹಾಕಿಕೊಂಡಿತ್ತು. ಶೇ 93 ರಷ್ಟು ಗುರಿ ತಲುಪಿದ್ದು, ಬಿಟ್ಟು ಹೋದ ಹಾಗೂ ಅಭಿಯಾನದಿಂದ ಹೊರಗುಳಿದ ಮಕ್ಕಳಿಗೆ ಜುಲೈ 1ರವರೆಗೆ ಮನೆ-ಮನೆಗೆ ತೆರಳಿ ಪೋಲಿಯೊ ಹನಿ ಹಾಕಲಾಗುತ್ತದೆ.

ಆರೋಗ್ಯ ಕೇಂದ್ರಗಳ ಜತೆಗೆ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಮೆಟ್ರೊ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿಯೂ ಲಸಿಕೆ ವಿತರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಈ ಅಭಿಯಾನದಲ್ಲಿ ಲಸಿಕೆ ವಿತರಣೆಗೆ 1.14 ಲಕ್ಷ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗಿತ್ತು. ಜಿಲ್ಲಾವಾರು ನಿಗದಿಪಡಿಸಲಾದ ಗುರಿಯಲ್ಲಿ ಬೆಂಗಳೂರು ನಗರ ಜಿಲ್ಲೆ ಅಗ್ರ ಸ್ಥಾನ ಪಡೆದುಕೊಂಡಿದೆ. ಶಿವಮೊಗ್ಗ, ರಾಯಚೂರು, ಕೋಲಾರ, ಕಲಬುರಗಿ, ಧಾರವಾಡ, ಚಿಕ್ಕಬಳ್ಳಾಪುರ, ಬಿಜಿಎ, ಬಳ್ಳಾರಿ ಮತ್ತು ಹಾವೇರಿ ಜಿಲ್ಲೆ ಶೇ 95 ಹಾಗೂ ಅದಕ್ಕಿಂತ ಹೆಚ್ಚಿನ ಸಾಧನೆ ಮಾಡಿವೆ. ಶೇಕಡ 83ರಷ್ಟು ಗುರಿ ಸಾಧನೆಯೊಂದಿಗೆ ಕೊಡಗು ಜಿಲ್ಲೆ ಕಡೆಯ ಸ್ಥಾನದಲ್ಲಿದೆ.

ಮಕ್ಕಳಿಗೆ ಪೋಲಿಯೊ ಲಸಿಕೆ ಶೇ 96.4ರಷ್ಟು ಗುರಿ ಸಾಧನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನ ಕಾರ್ಯಕ್ರಮದ ಅಂಗವಾಗಿ ಭಾನುವಾರ ಮಕ್ಕಳಿಗೆ ಲಸಿಕೆ ಹಾಕಲಾಯಿತು.

ಐದು ವರ್ಷದ ಒಳಗಿನ 11,47,872 ಮಕ್ಕಳಿದ್ದು, ಅವರಲ್ಲಿ 11,06,535 ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಶೇ 96.4ರಷ್ಟು ಗುರಿ ಸಾಧಿಸಲಾಗಿದೆ. ನಗರ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಕಾರ್ಯಕ್ರಮವನ್ನು ಜುಲೈ 1ರವರೆಗೆ ಆಯೋಜಿಸಲಾಗಿದೆ. ಜೊತೆಗೆ ನಗರ ಪಾಲಿಕೆಯ ಯಾವುದೇ ಮಗು ಪೋಲಿಯೊ ಹನಿಯಿಂದ ವಂಚಿತವಾಗದಂತೆ ಕ್ರಮ ವಹಿಸಲಾಗುವುದು. ಲಸಿಕಾ ಕೇಂದ್ರಕ್ಕೆ ಭೇಟಿ ನೀಡದ ಮಕ್ಕಳನ್ನು ಗುರುತಿಸಲು ಆರೋಗ್ಯ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಲಿಕೆಗಳಲ್ಲಿನ ವಿವರ

ಕೇಂದ್ರ	95.45%
ಪೂರ್ವ	99.48%
ಪಶ್ಚಿಮ	94.34%
ಉತ್ತರ	98.22%
ದಕ್ಷಿಣ	95.13%
ಒಟ್ಟು	96.40%

'ನಾವೇ ಹಣ ಕೊಟ್ಟು ನೋಂದಾಯಿಸುತ್ತೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್‌ಎಸ್‌ಎಸ್ ಬಗ್ಗೆ ಅವಹೇಳನ ಪ್ರಕರಣ ಸಂಬಂಧ ನಾನು ನ್ಯಾಯಾಲಯದ ಆದೇಶ ಪಾಲಿಸುತ್ತೇನೆ. ಆದರೆ, ಆರ್‌ಎಸ್‌ಎಸ್‌ನವರು ಕೊನೆಯ ಪಕ್ಷ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರ ಮಾತಿಗಾದರೂ ಬೆಲೆ ಕೊಟ್ಟು ತಮ್ಮ ಸಂಸ್ಥೆಯನ್ನು ನೋಂದಾಯಿಸಲಿ. ಇಲ್ಲದಿದ್ದರೆ ನಾವೇ ಹಣ ಕೊಟ್ಟು ನೋಂದಾಯಿಸುತ್ತೇವೆ' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಆರ್‌ಎಸ್‌ಎಸ್ ಬಗ್ಗೆ ಅವಹೇಳನ ಪ್ರಕರಣ ಕುರಿತಂತೆ ತಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಆದೇಶಿಸಿ ನ್ಯಾಯಾಲಯ ನೀಡಿರುವ ಸಮನ್ಸ್ ಕುರಿತ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಈ ವಿಚಾರದಲ್ಲಿ ಯಾವುದೇ ಉಡಾಫೆ ಪ್ರತಿಕ್ರಿಯೆ ನೀಡುವುದಿಲ್ಲ. ನಾನು ಕಾನೂನು ಪಾಲನೆ ಮಾಡುತ್ತೇನೆ. ಕಾನೂನು ನಮ್ಮ ಪರ ಇದೆ, ಹೀಗಾಗಿ ಯಾವುದಕ್ಕೂ ಹೆದರುವುದಿಲ್ಲ. ಏನೇ ಇದ್ದರೂ ಕಾನೂನಾತ್ಮಕವಾಗಿಯೇ ಎದುರಿಸುತ್ತೇನೆ' ಎಂದರು.

'ಆರ್‌ಎಸ್‌ಎಸ್‌ನವರು ನಮ್ಮ ಮಾತು, ನಿಮ್ಮ ಮಾತು, ಸಂವಿಧಾನದ ಮಾತು ಯಾವುದನ್ನೂ ಕೇಳಲ್ಲ. ಕೊನೆಯ ಪಕ್ಷ ಧರ್ಮಗುರುಗಳ ಮಾತನ್ನಾದರೂ ಕೇಳಲಿ. ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು ಆರ್‌ಎಸ್‌ಎಸ್ ನೋಂದಣಿ ಆಗಲಿ ಅಂದಿದ್ದಾರೆ. ಅವರ ಮಾತನ್ನಾದರೂ ಸಂಘವು ಕೇಳಲಿ. ವಿಶ್ವದ ಅತೀ ದೊಡ್ಡ ಸಂಸ್ಥೆ ಯಾಕೆ ನೋಂದಣಿ ಆಗಿಲ್ಲ. ಅದರ ಲೆಕ್ಕ ಯಾರಿಡುತ್ತಾರೆ, ಕಚೇರಿ ಎಲ್ಲಿದೆ? ಯಾರು ನಡೆಸುತ್ತಾರೆ? ಇದನ್ನು ಕೇಳೋದೇ ತಪ್ಪೇ' ಎಂದು ಪ್ರಶ್ನಿಸಿದರು.

ಸ್ವಯಂಸೇವಕರ ತಂಡ ಹಾಗೂ ಗ್ರಾಮಸ್ಥರು ಕೆರೆ ಅಂಗಳದಲ್ಲಿ ಸಸಿಗಳನ್ನು ನೆಟ್ಟರು

ಕೆರೆ ಅಂಗಳದಲ್ಲಿ ಸಸಿ ನೆಟ್ಟ ಸ್ವಯಂಸೇವಕರ ತಂಡ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಹಸಿರು ನಲ್ಲೂರಹಳ್ಳಿ ಅಭಿಯಾನದಡಿ ಸ್ವಯಂಸೇವಕರ ತಂಡ ಹಾಗೂ ಗ್ರಾಮಸ್ಥರೊಂದಿಗೆ ನಲ್ಲೂರಹಳ್ಳಿ ಕೆರೆಯಂಗಳದಲ್ಲಿ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಲ್ಲೂರಹಳ್ಳಿ ಟಿ.ನಾಗೇಶ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಹಸಿರು ಮಾಯವಾಗಿರುವ ಬೆಂಗಳೂರನ್ನು ಮತ್ತೊಮ್ಮೆ ಉದ್ಯಾನ ನಗರ ಮಾಡುವ ಕಲ್ಪನೆಯೊಂದಿಗೆ ಸಸಿ ನೆಡುವ ಅಭಿಯಾನ ಹಮ್ಮಿಕೊಂಡಿದ್ದೇವೆ. ಸಸಿಗಳನ್ನು ನೆಡುವುದು ಅಷ್ಟೇ ಅಲ್ಲದೇ ನಾವೆಲ್ಲರೂ ಪೋಷಿಸುವ ಹೊಣೆಯನ್ನು ಹೊತ್ತಿದ್ದೇವೆ' ಎಂದರು.

ಕೆಂಪೇಗೌಡ ಜಯಂತಿ ಅಂಗವಾಗಿ ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಹೊಸ ಚಿಂತನೆಯ ಮೂಲಕ ಎಸ್.ಎಂ.ಕೃಷ್ಣ ವಾರ್ಡ್‌ನ ನಲ್ಲೂರಹಳ್ಳಿಯಲ್ಲಿ ಮೊದಲ ಭಾಗವಾಗಿ ಹಸಿರು ಅಭಿಯಾನ ಹಮ್ಮಿಕೊಂಡಿದ್ದೇವೆ. ಮಹದೇವಪುರ ಕ್ಷೇತ್ರದ ವಿವಿಧ ಭಾಗಗಳಲ್ಲಿ ಅಭಿಯಾನ ನಡೆಯಲಿದೆ ಎಂದು ಹೇಳಿದರು. ಸ್ವಯಂಸೇವಕರ ತಂಡ ಕೆರೆ ಅಂಗಳದಲ್ಲಿ ವಿವಿಧ ತಳಿಯ 250ಕ್ಕೂ ಹೆಚ್ಚು ಸಸಿಗಳನ್ನು ನೆಟ್ಟು ನೀರು ಉಣಿಸಿದರು. ಈ ಸಂಧರ್ಭದಲ್ಲಿ ಕೆ.ಆರ್.ಎಸ್.ರೆಡ್ಡಿ, ಎಸ್.ಕೆ.ಸಿಂಗ್, ಮಹೇಶ್ ಬಾಬು, ಸಂಜಯ್ ಕುಮಾರ್, ದೌಲತ್ ರಾಂ, ಮಲ್ಲಿಕಾರ್ಜುನ, ಮೋತಿಲಾಲ್, ಅರುಣಾರೆಡ್ಡಿ, ದೀಪಿಕಾ ಇದ್ದರು.

12 ಗಂಟೆಯಲ್ಲಿ 14.95 ಲಕ್ಷ ಸಸಿಗಳ ನಾಟಿ

ಬಿಡಿಎ: ಗಿನ್ನಿಸ್ ದಾಖಲೆ ಫಲಕ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಮ್ಮಿಕೊಂಡಿದ್ದ ಹಸಿರು ಅಭಿಯಾನದಲ್ಲಿ 12 ಗಂಟೆಯಲ್ಲಿ 14,95,550 ಸಸಿಗಳನ್ನು ನೆಡುವ ಮೂಲಕ ಗಿನ್ನಿಸ್ ದಾಖಲೆ ನಿರ್ಮಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಅವರು ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್‌ನ ತೀರ್ಪುಗಾರ ರಿಷಿ ನಾಥ್ ಅವರಿಂದ ಗಿನ್ನಿಸ್ ದಾಖಲೆಯ ಫಲಕ ಸ್ವೀಕರಿಸಿದರು.

ಬೆಂಗಳೂರು ನಗರವನ್ನು ಮತ್ತೆ 'ಉದ್ಯಾನ ನಗರಿ'ಯಾಗಿ ಪರಿವರ್ತಿಸಲು ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ಹಸಿರು ಬೆಂಗಳೂರು ಅಭಿಯಾನದಡಿ ಸುಮಾರು 250 ಎಕರೆ ಪ್ರದೇಶದಲ್ಲಿ ಸ್ಥಳೀಯ ಜಾತಿಯ 15 ಲಕ್ಷ ಸಸಿಗಳನ್ನು ನೆಡುವ ಗುರಿಯನ್ನು ಬಿಡಿಎ ಹೊಂದಿತ್ತು

ನಾಡಪ್ರಭು ಕೆಂಪೇಗೌಡ ಬಡಾವಣೆ, ಡಾ.ಶಿವರಾಮ ಕಾರಂತ, ಬನಶಂಕರಿ ಬಡಾವಣೆ ಹಾಗೂ ಇತರೆ ಪ್ರದೇಶಗಳಲ್ಲಿ ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಸಸಿಗಳನ್ನು ನೆಡಲಾಯಿತು.

ಗಿಡಗಳನ್ನು ನೆಟ್ಟಿರುವ ಬಗ್ಗೆ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯ ಸುಮಾರು ಒಂದು ಸಾವಿರ ಮಂದಿ ದಾಖಲೆಗಳನ್ನು ಸಂಗ್ರಹಿಸಿದರು.

ಈ ಕಾರ್ಯಕ್ರಮದಲ್ಲಿ ಬಿಡಿಎ ಅಧಿಕಾರಿಗಳು, ಸಿಬ್ಬಂದಿ, ಅರಣ್ಯ ಇಲಾಖೆ, ಸರ್ಕಾರೇತರ ಸಂಘ, ಸಂಸ್ಥೆಗಳು, ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸ್ವಯಂ ಸೇವಕರು ಸೇರಿ ಸುಮಾರು 60 ಸಾವಿರ ಮಂದಿ ಭಾಗವಹಿಸಿದ್ದರು.

ಮಧ್ಯಪ್ರದೇಶದ ಇಂದೋರ್‌ನಲ್ಲಿ 2024ರ ಜುಲೈ ತಿಂಗಳಲ್ಲಿ 24 ಗಂಟೆಗಳಲ್ಲಿ 11 ಲಕ್ಷ ಗಿಡಗಳನ್ನು ನೆಟ್ಟಿರುವುದು ಈ ವರೆಗಿನ ಗಿನ್ನಿಸ್ ದಾಖಲೆ ಆಗಿತ್ತು.

ಈ ವೇಳೆ ಮಾತನಾಡಿದ ಎನ್. ಎ. ಹ್ಯಾರಿಸ್, 'ಗಿನ್ನಿಸ್ ದಾಖಲೆ ನಗರದ ಪ್ರತಿಯೊಬ್ಬ ನಾಗರಿಕರಿಗೂ ಸೇರಿದ್ದು, ಪರಿಸರ ಸಂರಕ್ಷಣೆ ಸಾಮೂಹಿಕ ಹೊಣೆಗಾರಿಕೆಯಿಂದ ಆರಂಭವಾಗುತ್ತದೆ ಎಂಬುದನ್ನು ಇದು ಸಾಬೀತುಪಡಿಸಿದೆ. ಆರೋಗ್ಯಕರ ಹಾಗೂ ಸುಸ್ಥಿರ ಬೆಂಗಳೂರನ್ನು ನಿರ್ಮಿಸುವಲ್ಲಿ ಪ್ರಾಧಿಕಾರ ಬದ್ಧವಾಗಿದೆ. ನಗರದಲ್ಲಿ ಹಸಿರು ಹೊದಿಕೆ ವಿಸ್ತರಿಸುವುದು, ಜೀವ ವೈವಿಧ್ಯತೆಯನ್ನು ಉತ್ತೇಜಿಸುವುದು, ವಾಯು ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ನಗರವನ್ನಾಗಿ ನಿರ್ಮಿಸುವುದು ನಮ್ಮ ಉದ್ದೇಶವಾಗಿದೆ' ಎಂದು ತಿಳಿಸಿದರು.

ಪ್ರಾಧಿಕಾರದ ಆಯುಕ್ತ ಪಿ. ಮಣಿವಣ್ಣನ್, 'ಈಗ ನೆಟ್ಟಿರುವ ಪ್ರತಿಯೊಂದು ಸಸಿಯ ಸಂರಕ್ಷಣೆ, ನಿರ್ವಹಣೆ ಹಾಗೂ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ವಿಶ್ವ ದಾಖಲೆಯಷ್ಟೇ ಅಲ್ಲ, ಈ ಸಸಿಗಳು ಭವಿಷ್ಯದಲ್ಲಿ ಸಮೃದ್ಧ ನಗರ ಅರಣ್ಯಗಳಾಗಿ ಬೆಳೆಯುವುದೇ ಯಶಸ್ಸಿನ ಮಾನದಂಡವಾಗಲಿದೆ' ಎಂದು ಹೇಳಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಗಿನ್ನಿಸ್ ವರ್ಲ್ಡ್ ರೆಕಾರ್ಡ್ಸ್‌ನ ಸಲಹೆಗಾರರಾದ ಶೈಲಜಾ ಉಪಸ್ಥಿತರಿದ್ದರು.

ಬಡಾವಣೆ	ಗುರಿ	ನೆಟ್ಟ ಸಸಿ	ಸಾಧನೆ (ಶೇಕಡ)
ಕೆಂಪೇಗೌಡ	6,90,000	6,77,500	98.18
ಶಿವರಾಮ ಕಾರಂತ	7,05,000	7,12,250	101.03
ಬನಶಂಕರಿ	1,05,000	1,05,800	100.76
ಒಟ್ಟು	15,00,000	14,95,550	99.70

> ಈ ಅಭಿಯಾನವು ದೇಶದ ಉದ್ಯಾನ ನಗರಿ ಎಂಬ ಬೆಂಗಳೂರಿನ ಹೆಗ್ಗಳಿಕೆಯನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ ಪರಿಸರ ಪುನಶ್ಚೇತನ ಹಾಗೂ ಸುಸ್ಥಿರ ನಗರ ಯೋಜನೆಗೆ ಮಹತ್ವದ ಕೊಡುಗೆ ನೀಡಿದೆ
> **ಪಿ.ಮಣಿವಣ್ಣನ್,** ಆಯುಕ್ತ, ಬಿಡಿಎ

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ

- ಕರೀಗೌಡ-ಸಿಇಒ-77605 04651
- ರಮಾಮಣಿ-ಸಿಒಒ-94481 97256
- ರಾಜೇಶ್-ಸಿಜಿಎಂ-948068 84046
- ರಾಘವೇಂದ್ರ ಪ್ರಸಾದ್-ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ನಿಮ್ಮ ಹೆಸರು ಹಾಗೂ ವಿಳಾಸದೊಂದಿಗೆ 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನೂ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.

ಚಂದ್ರಾ ಲೇಔಟ್‌ನ ಗಂಗೊಂಡನಹಳ್ಳಿ ಮುಖ್ಯರಸ್ತೆಯಲ್ಲಿನ ಕಸದ ರಾಶಿ —ಕಿಕ್ಕೇರಿ ನಾಗೇಶ್

ಆರ್.ಆರ್.ನಗರದ ಪಿವಿಎಸ್ ವೇರ್‌ಹೌಸ್ ಬಳಿ ಹಾಕಿರುವ ಕಸದ ರಾಶಿ —ವೈಭವ್ ರಾವ್

ಟಿ. ದಾಸರಹಳ್ಳಿಯ ವಿದ್ಯಾನಗರದ 1ನೇ ಕ್ರಾಸ್‌ನಲ್ಲಿರುವ ಡಿಎಂಎಂ ಗಾರ್ಡನ್ ಬಳಿ ಬಿದ್ದಿರುವ ತ್ಯಾಜ್ಯ —ಅಂಕುಶಾ ಎಸ್.ಕೆ.

ಚಂದ್ರಾ ಲೇಔಟ್ ಉದ್ಯಾನದ ಬಳಿ ವಿಲೇವಾರಿಯಾಗದ ಕಸದ ರಾಶಿ —ಶ್ರೇಯಸ್

ಹನುಮಂತನಗರದ ಮೌಂಟ್ ಜಾಯ್ ರಸ್ತೆಯ ಮೊದಲನೇ ಕ್ರಾಸ್‌ನಲ್ಲಿ ಎಸೆಯಲಾದ ಕಸ —ಪ್ರದೀಪ್ ಶಾನಭೋಗ್

ಮಲ್ಲೇಶ್ವರದ 9ನೇ ಕ್ರಾಸ್ ಮತ್ತು ಗಾಯತ್ರಿ ನಗರ ಸಂಪರ್ಕಿಸುವ ಪಾದಚಾರಿ ಮೇಲ್ಸೇತುವೆ ಬಳಿ ಕಸ ಎಸೆಯಲಾಗಿದೆ —ಎಸ್. ಶ್ರೀಧರ್

ಕಾರ್ಮಿಕ ಸಾವು: ನಾಲ್ವರ ವಿರುದ್ಧ ಎಫ್‌ಐಆರ್

ಬೆಂಗಳೂರು: ನಮ್ಮ ಮೆಟ್ರೊ ಟ್ರಿನಿಟಿ ನಿಲ್ದಾಣದ ಹೊರಭಾಗದಲ್ಲಿ ಬೆಳಕಿನ ವ್ಯವಸ್ಥೆಯ ಕೆಲಸ ಮಾಡುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶದಿಂದ ಕಾರ್ಮಿಕ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನಾಲ್ವರ ವಿರುದ್ಧ ಹಲಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೆಸರ್ಸ್ ಎಂ.ಆರ್. ಎಲೆಕ್ಟ್ರಿಕಲ್ಸ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿದ್ದ ಗುರಪ್ಪ (70) ಮೃತಪಟ್ಟಿದ್ದರು. ಮೃತರ ಪುತ್ರ ಮೂರ್ತಿ ನೀಡಿದ ದೂರು ಆಧರಿಸಿ, ಎಂ.ಆರ್.ಎಲೆಕ್ಟ್ರಿಕಲ್ಸ್‌ನ ಸೂರಜ್, ರಾಜೇಶ್, ಮಾನಸಾ ಹಾಗೂ ಬಿಎಂಆರ್‌ಸಿಎಲ್ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

'ಮೆಟ್ರೊ ಟ್ರಿನಿಟಿ ನಿಲ್ದಾಣದಿಂದ 100 ಮೀಟರ್ ದೂರದಲ್ಲಿ ಎರಡು ಪಿಲ್ಲರ್‌ಗಳ ನಡುವೆ ಗುರಪ್ಪ ಮಣ್ಣು ಅಗೆಯುವ ಕೆಲಸ ಮಾಡುತ್ತಿದ್ದರು. ಗುತ್ತಿಗೆದಾರರು ಹಾಗೂ ಅಧಿಕಾರಿಗಳು, ಕಾಮಗಾರಿಗೆ ಪೂರಕವಾದ ಸುರಕ್ಷತಾ ಕ್ರಮ ಕೈಗೊಳ್ಳದ ಕಾರಣ ವಿದ್ಯುತ್ ಸ್ಪರ್ಶವಾಗಿದೆ. ತಂದೆಯ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮೆಟ್ರೊ ವಿನಾಶಕ್ಕೆ 'ಡಬಲ್ ಡೆಕರ್'

'ಬೆಂಗಳೂರು ಪರಿಸರ- ಸಂಚಾರದ ಮೇಲೆ ಪರಿಣಾಮ' ಸಂವಾದದಲ್ಲಿ ಆಶಿಶ್ ವರ್ಮಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಬಲ್ ಡೆಕರ್ ಮೇಲ್ಸೇತುವೆ ಯೋಜನೆಯ ಮೂಲಕ ಬಿಎಂಆರ್‌ಸಿಎಲ್ ತನ್ನ ವಿನಾಶವನ್ನು ತಾನೇ ಎಳೆದುಕೊಳ್ಳುತ್ತಿದೆ. ಆತ್ಮಹತ್ಯೆಗೆ ಸಮನಾದ ಯೋಜನೆ ಇದು' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಪ್ರೊ. ಆಶಿಶ್ ವರ್ಮಾ ಅಭಿಪ್ರಾಯಪಟ್ಟರು.

'ಮೆಟ್ರೊ ಡಬಲ್ ಡೆಕರ್ ಮತ್ತು ಮೇಲ್ಸೇತುವೆ ಯೋಜನೆಯಿಂದ ಬೆಂಗಳೂರಿನ ಪರಿಸರ ಮತ್ತು ಸಂಚಾರದ ಮೇಲೆ ಪರಿಣಾಮ' ಕುರಿತು 'ಸಿವಿಕ್ ಬೆಂಗಳೂರು' ಭಾನುವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತಿಳಿದೋ ತಿಳಿಯದೆಯೋ ಬಿಎಂಆರ್‌ಸಿಎಲ್ ಡಬಲ್ ಡೆಕರ್ ಯೋಜನೆಯನ್ನು ಮುಂದಿಟ್ಟುಕೊಂಡು ಬೆಂಗಳೂರಿನ ನಾಗರಿಕರಿಗೆ ದೊಡ್ಡ ಅನ್ಯಾಯ ಮಾಡುತ್ತಿದೆ. ಜೊತೆಗೆ ಸಾರ್ವಜನಿಕರ ಹಣವನ್ನೂ ವ್ಯರ್ಥ ಮಾಡುತ್ತಿದೆ' ಎಂದು ಟೀಕಿಸಿದರು.

'ಎಲ್ಲ ಡೇಟಾ ಮತ್ತು ಸಿಮ್ಯುಲೇಶನ್ ಮಾದರಿಗಳು ಬೆಂಗಳೂರಿನಲ್ಲಿ ಲಭ್ಯವಿರುವಾಗ ಐಐಟಿ ರೂರ್ಕಿಯನ್ನು ಏಕೆ ಸಂಪರ್ಕಿಸಿದೆ ಎಂದು ಅರ್ಥವಾಗುತ್ತಿಲ್ಲ' ಎಂದು ತಿಳಿಸಿದರು.

'ಸಾರ್ವಜನಿಕ ಸಾರಿಗೆ ಬಳಕೆ ಹೆಚ್ಚಾದರಷ್ಟೇ ವಾಹನ ದಟ್ಟಣೆ ಕಡಿಮೆಯಾಗುತ್ತದೆ. ಆದರೆ, ಮೆಟ್ರೊ ಮಾರ್ಗದ ಜೊತೆಯಾಗಿ ರಸ್ತೆಯನ್ನೂ ಮಾಡುವುದಾದರೆ ಈ ಉದ್ದೇಶ ಈಡೇರುವುದಿಲ್ಲ' ಎಂದು ಹೇಳಿದರು.

'ಡಬಲ್ ಡೆಕರ್‌ನಿಂದಾಗಿ ಯೋಜನೆ ವೆಚ್ಚ ಹೆಚ್ಚಾಗುತ್ತದೆ. ಪ್ರತಿ ನಿಲ್ದಾಣಗಳನ್ನು ಹೆಚ್ಚು ಎತ್ತರಿಸಿ ನಿರ್ಮಿಸಬೇಕಿರುವುದರಿಂದ ಮೆಟ್ರೊ ನಿಲ್ದಾಣಗಳ ನಿರ್ಮಾಣ ವೆಚ್ಚವೂ ಹೆಚ್ಚಾಗುತ್ತದೆ' ಎಂದರು.

ಇಂದಿರಾನಗರ ಎತ್ತರಿಸಿದ ಕಾರಿಡಾರ್ ಜನವಸತಿ ಪ್ರದೇಶದ ಮೇಲೆ ಬೀರುವ ಪ್ರಭಾವ, ಜೆ.ಪಿ. ನಗರದಲ್ಲಿ ಡಬಲ್ ಡೆಕರ್ ಯೋಜನೆಯು ಜನವಸತಿ ಪ್ರದೇಶಗಳ ಮೇಲೆ ಬೀರುವ ಪರಿಣಾಮಗಳ ಬಗ್ಗೆಯೂ ಸಂವಾದದಲ್ಲಿ ಚರ್ಚೆ ನಡೆಯಿತು.

ಮುಖ್ಯಾಂಶಗಳು

- ಸಾರ್ವಜನಿಕ ಸಾರಿಗೆ ಬಳಕೆಯಿಂದ ವಾಹನ ದಟ್ಟಣೆ ಕಡಿಮೆ
- 'ಡಬಲ್ ಡೆಕರ್'ನಿಂದ ವಿದ್ಯುತ್, ನೀರಿನ ಬಳಕೆ ಹೆಚ್ಚಳ
- ಅಂತರ್ಜಲ ಮಟ್ಟ ಕುಸಿಯುವ ಆತಂಕ

'ಪ್ರಯೋಜನಕ್ಕಿಂತ ತೊಂದರೆಯೇ ಹೆಚ್ಚು'

ಆಶಿಶ್ ವರ್ಮಾ

'ಡಬಲ್ ಡೆಕರ್ ಯೋಜನೆಯಿಂದಾಗಿ ನೀರಿನ ಬಳಕೆ ಹೆಚ್ಚಾಗುತ್ತದೆ. ಅಂತರ್ಜಲ ಮಟ್ಟ ಹೆಚ್ಚು ಕುಸಿಯಲಿದೆ. ವಿದ್ಯುತ್ ಬಳಕೆ ಹೆಚ್ಚಾಗಲಿದೆ. ನಮ್ಮ ಮೆಟ್ರೊ ಮೂರನೇ ಹಂತದ ಯೋಜನೆಯಲ್ಲಿ ಡಬಲ್ ಡೆಕರ್ ಯೋಜನೆಯು ಪ್ರಯೋಜನಕ್ಕಿಂತ ಹೆಚ್ಚು ತೊಂದರೆಯನ್ನು ಉಂಟು ಮಾಡಲಿದೆ. ಅಲ್ಲದೇ ಈ ಯೋಜನೆ ರೂಪಿಸುವಾಗ ಯಾವುದೇ ನಿಯಮಗಳನ್ನು ಪಾಲಿಸಿಲ್ಲ' ಎಂದು ವರ್ಮಾ ಅಂಕಿ ಅಂಶಗಳೊಂದಿಗೆ ವಿವರಿಸಿದರು.

ಆಕ್ಷೇಪಾರ್ಹ ಬರಹ: ಆರೋಪಿ ಬಂಧನ

ವಿಟ್ಲ (ದಕ್ಷಿಣ ಕನ್ನಡ): ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟುಮಾಡುವಂಥ ಆಕ್ಷೇಪಾರ್ಹ ಸಂದೇಶವನ್ನು ಫೇಸ್ ಬುಕ್‌ನಲ್ಲಿ ಪ್ರಕಟಿಸಿದ ಪ್ರಕರಣದ ಆರೋಪಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ವಿದ್ಯಮಾನ್ಯ ನಗರ ನಿವಾಸಿ ಆನಂದ ಎ. ಬಂಧಿತ ಆರೋಪಿ.

ಫೇಸ್‌ಬುಕ್‌ನ ಪೋಸ್ಟ್ ಒಂದಕ್ಕೆ 'ಸನಾತನಿ ಸಿಂಹ' ಎಂಬ ಫೇಸ್‌ಬುಕ್ ಪೇಜ್ ಮೂಲಕ ಆರೋಪಿ ಪ್ರತಿಕ್ರಿಯಿಸಿದ್ದ. ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆನಂದ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ 7 ಪ್ರಕರಣಗಳು ದಾಖಲಾಗಿವೆ.

ಕಸದ ಲಾರಿಗೆ ತಲೆಕೊಟ್ಟು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸದಂತೆ ಬುದ್ಧಿ ಹೇಳಿದ ತಾಯಿಯ ಮಾತಿನಿಂದ ಬೇಸರಗೊಂಡ ಮಗ, ಕಸದ ಲಾರಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹುಳಿಮಾವು ಬಳಿಯ ಸಿ.ಕೆ.ಪಾಳ್ಯ ರಸ್ತೆಯಲ್ಲಿ ಭಾನುವಾರ ನಡೆದಿದೆ.

ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಸಿದ್ದರಾಜು (29) ಆತ್ಮಹತ್ಯೆ ಮಾಡಿಕೊಂಡವರು. ತಾಯಿ ಮಹಾದೇವಿ ಅವರೊಂದಿಗೆ ಸಿ.ಕೆ.ಪಾಳ್ಯದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ ಇವರು ಮದ್ಯವ್ಯಸನಿಯಾಗಿದ್ದ. ಮಹಾದೇವಿ ಅವರು ಖಾಸಗಿ ಶಾಲೆಯಲ್ಲಿ ಸ್ವಚ್ಛತಾ ಕೆಲಸ ಮಾಡಿ ಅದರಿಂದ ಬಂದ ಹಣದಲ್ಲಿ ಮಗನನ್ನು ಸಾಕುತ್ತಿದ್ದರು.

'ನಿರುದ್ಯೋಗಿಯಾಗಿದ್ದ ಸಿದ್ದರಾಜು, ಪ್ರತಿನಿತ್ಯ ಕುಡಿದು ಮನೆಗೆ ಬರುತ್ತಿದ್ದರು. ಮದ್ಯ ಕುಡಿಯಲು ಹಣ ಕೊಡುವಂತೆ ಪೀಡಿಸುತ್ತಿದ್ದರು. ಅದೇ ರೀತಿ ಶನಿವಾರ ರಾತ್ರಿ ಹಣ ಕೊಡುವಂತೆ ತಾಯಿಯ ಬಳಿ ಕೇಳಿದ್ದರು. ಹಣ ಕೊಡಲು ನಿರಾಕರಿಸಿದ ಅವರು, ಮದ್ಯವ್ಯಸನ ಬಿಡುವಂತೆ ಬುದ್ಧಿ ಹೇಳಿದ್ದರು. ಇದರಿಂದ ಬೇಸರಗೊಂಡು ಮನೆಯಿಂದ ಹೊರ ಹೋಗಿದ್ದ ಸಿದ್ದರಾಜು ಭಾನುವಾರ ಬೆಳಗಿನ ಜಾವ ಸಿ.ಕೆ.ಪಾಳ್ಯ ರಸ್ತೆಯಲ್ಲಿ ಹೋಗುತ್ತಿದ್ದ ಕಸದ ಲಾರಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದ್ದಾರೆ.

'ಘಟನಾ ಸ್ಥಳ ಪರಿಶೀಲಿಸಿದಾಗ ಆರಂಭದಲ್ಲಿ ಸಿದ್ದರಾಜುವಿಗೆ ಕಸದ ಲಾರಿ ಡಿಕ್ಕಿಯಾಗಿ ಮೃತಪಟ್ಟಿರಬಹುದು ಎಂದು ಅಂದಾಜಿಸಿದ್ದೆವು. ಆದರೆ, ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಿದಾಗ ಸಿದ್ದರಾಜು ನಿಧಾನವಾಗಿ ಚಲಿಸುತ್ತಿದ್ದ ಲಾರಿಯ ಹಿಂದಿನ ಚಕ್ರಕ್ಕೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

'ಸಿದ್ದರಾಜು, ಲಾರಿಯ ಹಿಂದಿನ ಚಕ್ರಕ್ಕೆ ಸಿಲುಕಿರುವುದು ಚಾಲಕನ ಗಮನಕ್ಕೆ ಬಂದಿಲ್ಲ. ಹೀಗಾಗಿ, ಚಾಲಕ ಲಾರಿ ಚಾಲನೆ ಮಾಡಿಕೊಂಡು ಮುಂದೆ ಹೋಗಿದ್ದಾರೆ. ನೋಂದಣಿ ಸಂಖ್ಯೆಯ ವಿವರ ಆಧರಿಸಿ ಲಾರಿ ಪತ್ತೆ ಮಾಡಲಾಗುವುದು' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹುಳಿಮಾವು ಠಾಣೆಯಲ್ಲಿ ದೂರು ದಾಖಲಾಗಿದೆ.

ಸುದ್ದಿ 2 ನಿಮಿಷ

ರೌಡಿಶೀಟರ್ ಕೊಲೆ: ಶೋಧ

ಬೆಂಗಳೂರು: ರೌಡಿಶೀಟರ್ ರಾಜು ಬಾಯ್ ಕೊಲೆ ಪ್ರಕರಣ ಸಂಬಂಧ ಜೆ.ಪಿ.ನಗರ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಆರೋಪಿಗಳ ಪತ್ತೆಗೆ ತೀವ್ರ ಶೋಧ ನಡೆಸಿದ್ದಾರೆ.

ಈ ಸಂಬಂಧ ಕೃತ್ಯ ನಡೆದ ಸ್ಥಳದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸುತ್ತಿದ್ದು, ಆರೋಪಿಗಳು ಯಾವ ಕಾರಣಕ್ಕಾಗಿ ಕೊಲೆ ಮಾಡಿದ್ದಾರೆ ಮತ್ತು ಕೃತ್ಯದ ಹಿಂದೆ ಯಾರ ಕೈವಾಡವಿದೆ ಎಂಬುದನ್ನು ಪತ್ತೆಹಚ್ಚುತ್ತಿದ್ದಾರೆ.

'ಕೃತ್ಯದ ಬಳಿಕ ಆರೋಪಿಗಳು ತಮಿಳುನಾಡಿಗೆ ಪರಾರಿಯಾಗಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ದೊರೆತಿದ್ದು, ಒಂದು ತಂಡ ಅಲ್ಲಿಗೆ ತೆರಳಿ ಕಾರ್ಯಾಚರಣೆ ನಡೆಸುತ್ತಿದೆ. ನಗರದಲ್ಲಿಯೂ ಮತ್ತೊಂದು ತಂಡ ಆರೋಪಿಗಳ ಪತ್ತೆ ಕಾರ್ಯದಲ್ಲಿ ತೊಡಗಿದೆ' ಎಂದು ಮೂಲಗಳು ತಿಳಿಸಿವೆ.

ಜೆ.ಪಿ.ನಗರ ಮುಖ್ಯರಸ್ತೆಯ ಹೋಟೆಲ್‌ವೊಂದರಲ್ಲಿ ಶನಿವಾರ ಸಂಜೆ ಟೀ ಕುಡಿದು ಮನೆಯತ್ತ ತೆರಳುತ್ತಿದ್ದ ರಾಜು ಮೇಲೆ ದಾಳಿ ನಡೆಸಿದ್ದ ದುಷ್ಕರ್ಮಿಗಳ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದೆ. ಹಲ್ಲೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದ್ದರೂ ಆರೋಪಿಗಳು ಬಿಡಲಿಲ್ಲ. ಹಳೇ ವೈಷಮ್ಯದ ಕಾರಣಕ್ಕೆ ಕೊಲೆ ಆಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಹೊತ್ತಿ ಉರಿದ ಕಾರ್ಖಾನೆ

ಬೊಮ್ಮಸಂದ್ರ (ಆನೇಕಲ್): ತಾಲ್ಲೂಕಿನ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ದಿವ್ಯ ಇಂಪೋರ್ಟರ್ಸ್ ರಾಸಾಯನಿಕ ಕಾರ್ಖಾನೆಯಲ್ಲಿ ಭಾನುವಾರ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿಯಿತು. ರಜೆ ದಿನವಾದ್ದರಿಂದ ಕಾರ್ಮಿಕರು ಯಾರೂ ಇರಲಿಲ್ಲ.

ಕಾರ್ಖಾನೆಯಲ್ಲಿ ಆ್ಯಸಿಡ್, ಥಿನ್ನರ್ ಕೆಮಿಕಲ್ ತಯಾರಿಸಲಾಗುತ್ತಿತ್ತು. ನೋಡ ನೋಡುತ್ತಿದ್ದಂತೆ ಬೆಂಕಿಯ ಕೆನ್ನಾಲಗೆ ಹಬ್ಬಿದ್ದು, ಕಾರ್ಖಾನೆ ಸುತ್ತಲೂ ದಟ್ಟವಾದ ಹೊಗೆ ಆವರಿಸಿತ್ತು.

ಅಗ್ನಿಶಾಮಕ ದಳದ ಸಿಬ್ಬಂದಿ ಕೆಲ ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

ಚಿತ್ರಾವಳಿ

ಬೆಂಗಳೂರಿನ ರೋಟರಿ ಜಿಲ್ಲೆ 3192ಕ್ಕೆ ಜಿಲ್ಲಾ ಗವರ್ನರ್ ಆಗಿ ಆರ್‌.ಟಿ. ರವಿಶಂಕರ್ ಡಕೋಹು ಅವರು ಭಾನುವಾರ ಪದಗ್ರಹಣ ಮಾಡಿದ ಸಂದರ್ಭದಲ್ಲಿ ಮಾಜಿ ಸಚಿವೆ ಮನೇಕಾ ಗಾಂಧಿ ಮಾತನಾಡಿದರು. ರೋಟರಿ ಅಂತರರಾಷ್ಟ್ರೀಯ ನಿರ್ದೇಶಕ ಲೆಫ್ಟಿನೆಂಟ್ ಕೆ.ಪಿ.ನಾಗೇಶ್ ಪಾಲ್ಗೊಂಡರು

ನಗರದಲ್ಲಿ ಭಾನುವಾರ ಸಿಂಫೋನಿ ಸ್ವರ ಪ್ರತಿಷ್ಠಾನ ಆಯೋಜಿಸಿದ್ದ ಅಂಬಿ ಉತ್ಸವ– ಅಂಬರೀಷ್ ಜನ್ಮದಿನಾಚರಣೆಯಲ್ಲಿ 'ಸಿಂಫೋನಿ ಅಂಬಿ ರತ್ನ' ಪ್ರಶಸ್ತಿಯನ್ನು ಶ್ರೀವಿಜಯ್, ಎನ್‌.ಕೆ.ರಾಮಕೃಷ್ಣ, ಈ.ರವೀಶ, ವಿದುಷಿ ಉಷಾ ಬಸಪ್ಪ, ಅನಿಲ್ ಕುಮಾರ್, ಎಂ.ಎಸ್‌.ಮಂಜುಳಾ, ಡಾ.ಕೆ.ಎಸ್‌. ಸತೀಶ್ ಮತ್ತು ಪಾರ್ವತಿ ಮಂಜುನಾಥ್ ಶರ್ಮ ಅವರಿಗೆ ನೀಡಿ ಗೌರವಿಸಲಾಯಿತು. ಎಸ್‌.ಕೆ.ಅನಂತ, ಎಂ.ಅರುಣ್ ಕುಮಾರ್, ರಾಕ್ ಲೈನ್ ವೆಂಕಟೇಶ್, ಸಿಂಫೋನಿ ಶಿವು, ಸುಮಲತಾ ಅಂಬರೀಷ್, ಶ್ರೀಲತಾ, ಎಂ.ಕೆ.ಸುಂದರ್ ರಾಜ್ ಪಾಲ್ಗೊಂಡಿದ್ದರು

ಬೆಂಗಳೂರಿನಲ್ಲಿ ಜನಸಿರಿ ಫೌಂಡೇಶನ್ ಆಯೋಜಿಸಿದ್ದ ರಾಜ್ಯಮಟ್ಟದ ಭಜನಾ ಸಮ್ಮೇಳನದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಪರಿಗಣಿಸಿ ದಂತ ವೈದ್ಯೆ ಅನುಷಾ ಆರ್‌.ಗುಪ್ತಾ ಅವರಿಗೆ ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶಸ್ತಿ ಪ್ರದಾನ ಮಾಡಿದರು

ಮಹಿಳೆ ಶವ ಪತ್ತೆ: ಪ್ರಿಯಕರನ ಬಂಧನ

ಜಿಗಣಿ (ಆನೇಕಲ್): ತಾಲ್ಲೂಕಿನ ಜಿಗಣಿಯಲ್ಲಿ ಮಹಿಳೆಯೊಬ್ಬರ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಕೊಲೆ ಆರೋಪದ ಮೇಲೆ ಪ್ರಿಯಕರನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆ ಇಳಕಲ್‌ನ ಅಕ್ಷತಾ (30) ಮೃತರು. ಪ್ರಿಯಕರ ನಾನಾಸಾಹೇಬ್ ಕಳ್ಳಿ ಅಲಿಯಾಸ್ ಬುಡ್ಡ (28) ಬಂಧಿತ ಆರೋಪಿ.

'ಅಕ್ಷತಾ ಅವರಿಗೆ ಮದುವೆಯಾಗಿ, ಇಬ್ಬರು ಮಕ್ಕಳಿದ್ದರು. ಅದೇ ಗ್ರಾಮದ ನಾನಾಸಾಹೇಬ್ ಜೊತೆ ಪ್ರೇಮ ಬೆಳೆದು, ಬೆಂಗಳೂರಿಗೆ ಬಂದು 2025ರಿಂದ ಜಿಗಣಿಯಲ್ಲಿ ವಾಸವಿದ್ದರು. ಗಾರ್ಮೆಂಟ್ಸ್‌ವೊಂದರಲ್ಲಿ ಇಬ್ಬರು ಕೆಲಸ ಮಾಡುತ್ತಿದ್ದರು. ಇಬ್ಬರ ನಡುವೆ ಜಗಳ ನಡೆಯುತ್ತಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ಒಳ ಉಡುಪಿನಲ್ಲಿ ಚಿನ್ನ ಕಳ್ಳಸಾಗಣೆ

ಒಂದನೇ ಪುಟದಿಂದ...

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ರೆಡ್ಡಿ ಅವರನ್ನು ವಶಕ್ಕೆ ಪಡೆದು ತಪಾಸಣೆ ನಡೆಸಿದರು. ವಿಶೇಷವಾಗಿ ವಿನ್ಯಾಸಗೊಳಿಸಿದ್ದ ಒಳ ಉಡುಪುಗಳ ಒಳಗೆ ಪೇಸ್ಟ್ ರೂಪದಲ್ಲಿ ಚಿನ್ನ ಅಡಗಿಟ್ಟಿಸಿರುವುದು ಪತ್ತೆಯಾಯಿತು.

ಒಳ ಉಡುಪುಗಳಿಂದ 1 ಕೆ.ಜಿ 811 ಗ್ರಾಂ ಚಿನ್ನವನ್ನು ಹೊರತೆಗೆಯಲಾಗಿದ್ದು, ಇದು ₹2.6 ಕೋಟಿ ಮೌಲ್ಯದ್ದಾಗಿದೆ. ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ, ಎರಡು ದಿನಗಳ ಕಾಲ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಯಿತು.

ಬೆಂಗಳೂರು ಮತ್ತು ಚೆನ್ನೈನಲ್ಲಿರುವ ರೆಡ್ಡಿ ಅವರ ನಿವಾಸದಲ್ಲಿ ಶೋಧ ನಡೆಸಿದಾಗ ₹1.47 ಕೋಟಿ ಮೌಲ್ಯದ 1 ಕೆ.ಜಿ 424 ಗ್ರಾಂ ಚಿನ್ನಾಭರಣ, ₹97 ಲಕ್ಷ ಮೌಲ್ಯದ 45 ಕೆ.ಜಿ. ಬೆಳ್ಳಿ, ₹30.73 ಲಕ್ಷ ನಗದು ಮತ್ತು ₹1 ಲಕ್ಷ ವಿದೇಶಿ ಕರೆನ್ಸಿಯನ್ನು ವಶಪಡಿಸಿಕೊಂಡಿದ್ದಾರೆ.

ಜೂನ್ 27ರಂದು ನ್ಯಾಯಾಲಯವು ರೆಡ್ಡಿಯನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದೆ ಎಂದು ಮೂಲಗಳು ತಿಳಿಸಿವೆ.

ಒಂದೇ ನೋಂದಣಿ ಸಂಖ್ಯೆ ಎರಡು ವಾಹನಕ್ಕೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ನೋಂದಣಿ ಸಂಖ್ಯೆಯನ್ನು ಎರಡು ವಾಹನಗಳಿಗೆ ಬಳಸಿ ಓಡಿಸುತ್ತಿರುವುದನ್ನು ಪತ್ತೆ ಹಚ್ಚಿರುವ ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು, ಇಬ್ಬರನ್ನು ಬಂಧಿಸಿ, 12 ವಾಹನ ಜಪ್ತಿ ಮಾಡಿದ್ದಾರೆ.

ಎಲೆಕ್ಟ್ರಾನಿಕ್ಸ್ ಸಿಟಿಯ ಸುಭಾಷ್‌ನಗರ ನಿವಾಸಿ ಸೈಯದ್ ನಜೀರ್ (40) ಮತ್ತು ಆನೇಕಲ್ ನಿವಾಸಿ ನಾಗರಾಜ್ (52) ಬಂಧಿತರು.

ರಸ್ತೆ ತೆರಿಗೆ ಮತ್ತು ಇತರ ಶುಲ್ಕಗಳನ್ನು ವಂಚಿಸುವ ಉದ್ದೇಶದಿಂದ ಆರೋಪಿಗಳು ನಕಲಿ ನಂಬರ್ ಪ್ಲೇಟ್‌ಗಳನ್ನು ಬಳಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಜೂನ್ 23ರಂದು ಹೆಡ್ ಕಾನ್‌ಸ್ಟೆಬಲ್ ಕೇದಾರಲಿಂಗ ತಾಂಬೆ ಮತ್ತು ಕಾನ್‌ಸ್ಟೆಬಲ್ ಕೇಶವಮೂರ್ತಿ ಅವರು ಮಣಿಪಾಲ್ ಕೌಂಟಿ ರಸ್ತೆಯಲ್ಲಿ ಬೈಕ್‌ನಲ್ಲಿ ಗಸ್ತು ತಿರುಗುತ್ತಿದ್ದ ವೇಳೆ ಒಂದೇ ನೋಂದಣಿ ಸಂಖ್ಯೆ ಹೊಂದಿದ್ದ ಎರಡು ವಾಹನಗಳು ಸಂಚರಿಸಿದ್ದನ್ನು ಗಮನಿಸಿದ್ದರು.

ತಕ್ಷಣವೇ ಹಿಂಬಾಲಿಸಿಕೊಂಡು ಹೋಗಿ ಬೇಗೂರು ಕೆರೆ ರಸ್ತೆಯ ಬಳಿ ತಡೆದರು. ದಾಖಲೆ ಪರಿಶೀಲನೆ ನಡೆಸಿದಾಗ ಎರಡೂ ವಾಹನಗಳು ಸೈಯದ್ ನಜೀರ್‌ಗೆ ಸೇರಿದ್ದು ಎಂಬುದು ತಿಳಿದು ಬಂದಿತ್ತು.

ಒಂದು ವಾಹನಕ್ಕೆ ಮಾತ್ರ ತೆರಿಗೆ ಪಾವತಿಸಿ, ಅದೇ ನೋಂದಣಿ ಸಂಖ್ಯೆಯನ್ನು ಮತ್ತೊಂದು ವಾಹನಕ್ಕೂ ಬಳಸಿ ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ಇನ್‌ಸ್ಪೆಕ್ಟರ್ ಅಜರುದ್ದೀನ್ ನೇತೃತ್ವದ ತಂಡವು ತನಿಖೆ ನಡೆಸಿದಾಗ ಮತ್ತಷ್ಟು ವಾಹನಗಳು ಇದೇ ರೀತಿ ನೋಂದಣಿ ಸಂಖ್ಯೆ ಹಾಕಿಕೊಂಡಿರುವುದು ಗೊತ್ತಾಗಿದೆ.

'ಸೈಯದ್ ನಜೀರ್ ಹಳೆಯ ವಾಹನಗಳನ್ನು ಖರೀದಿಸಿ, ಅವುಗಳನ್ನು ಮಾರ್ಪಾಡು ಮಾಡುತ್ತಿದ್ದ. ಮತ್ತೊಬ್ಬ ಆರೋಪಿ ನಾಗರಾಜ್, ನಂಬರ್‌ಗಳನ್ನು ನಜೀರ್‌ಗೆ ಒದಗಿಸುತ್ತಿದ್ದ. ಈ ನಂಬರ್‌ಗಳನ್ನು ಬಳಸಿ ನಜೀರ್ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಗಾರ್ಮೆಂಟ್ಸ್ ಕಾರ್ಖಾನೆಗಳ ನೌಕರರನ್ನು ಕರೆದೊಯ್ಯಲು ಮಿನಿ ಬಸ್‌ಗಳನ್ನು ಬಳಸುತ್ತಿದ್ದ. ದಾಖಲೆ ಮತ್ತು ನಂಬರ್ ಒದಗಿಸಿದ್ದಕ್ಕೆ ನಾಗರಾಜ್ ಕಮಿಷನ್ ಪಡೆಯುತ್ತಿದ್ದ' ಎಂದು ಪೊಲೀಸರು ಹೇಳಿದ್ದಾರೆ.

'ರಸ್ತೆ ತೆರಿಗೆ, ನೋಂದಣಿ ಶುಲ್ಕ, ಪ್ರಯಾಣಿಕರ ವಾಹನ ತೆರಿಗೆ ಮತ್ತು ಕಾರ್ಯಕ್ಷಮತೆ ಪ್ರಮಾಣ ಪತ್ರ ಶುಲ್ಕಗಳನ್ನು ವಂಚಿಸಲು ಈ ರೀತಿ ಮಾಡುತ್ತಿದ್ದರು. ಸದ್ಯ ವಿವಿಧ ಕಂಪನಿಯ 12 ಮಿನಿ ಬಸ್‌ಗಳನ್ನು ವಶಪಡಿಸಿಕೊಂಡಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದರು.

ಕೊಲೆ ಸಂಚು: ಏಳು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿಶೀಟರ್ ಆಗಿದ್ದ ಸಹೋದರನ ಕೊಲೆಗೆ ಪ್ರತೀಕಾರವಾಗಿ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೋಹಾರ್ ಅಬ್ಬಾಸ್ ಹತ್ಯೆಗೆ ಸಂಚು ರೂಪಿಸಿದ್ದ ಆರೋಪದಡಿ ಇಬ್ಬರು ರೌಡಿಶೀಟರ್ ಸೇರಿ ಏಳು ಆರೋಪಿಗಳನ್ನು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಕಳೆದ ವರ್ಷ ಕೊಲೆಯಾಗಿದ್ದ ಅಶೋಕ ನಗರ ಠಾಣೆ ರೌಡಿಶೀಟರ್ ಹೈದರ್ ಅಲಿ ಸಹೋದರ ಶಕೀಲ್ ಅಲಿಯಾಸ್ ಶಬ್ಬೀರ್, ಅಳಿಯ ಸಾಜಿದ್, ಬೈಯಪ್ಪನಹಳ್ಳಿ ಠಾಣೆ ರೌಡಿಶೀಟರ್ ಸುಮನ್, ಹಲಸೂರು ಗೇಟ್ ಠಾಣೆ ರೌಡಿ ಶೀಟರ್ ಶಿವಪ್ರಸಾದ್ ಹಾಗೂ ಅವರ ಸಹಚರರಾದ ಶರವಣ್, ವಿನೋದ್, ಪ್ರೇಮ್ ಪೂಜಾರ್ ಎಂಬುವರನ್ನು ಬಂಧಿಸಲಾಗಿದೆ.

ಆರೋಪಿಗಳಿಂದ ಲಾಂಗು, ಮಚ್ಚು, ಕಾರು ಮತ್ತು ದ್ವಿಚಕ್ರ ವಾಹನ ಜಪ್ತಿ ಮಾಡಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು ಬೈಕ್ ಹಾಗೂ ಕಾರುಗಳಲ್ಲಿ 30ಕ್ಕೂ ಹೆಚ್ಚು ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಅಬ್ಬಾಸ್ ಹತ್ಯೆಗೆ ಸಂಚು ರೂಪಿಸಿದ್ದರು. ಮಾಹಿತಿ ಆಧರಿಸಿ ಸಿಸಿಬಿ ಸಂಘಟಿತ ಅಪರಾಧ ಪಶ್ಚಿಮ ವಿಭಾಗದ ಎಸಿಪಿ ಸದಾನಂದ ತಿಪ್ಪಣ್ಣವರ್ ಮತ್ತು ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದೆ.

ಕಳೆದ ವರ್ಷ ಫೆಬ್ರುವರಿಯಲ್ಲಿ ಅಶೋಕನಗರದ ನೀಲಸಂದ್ರದಲ್ಲಿ ರೌಡಿಶೀಟರ್ ಹೈದರ್ ಅಲಿ ಕೊಲೆಯಾಗಿತ್ತು. ಪ್ರಕರಣದ ಸಂಬಂಧ ನಯಾಜ್ ಪಾಷಾ ಸೇರಿ ಹಲವು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ವೈಯಕ್ತಿಕ ದ್ವೇಷಕ್ಕಾಗಿ ಹೈದರ್ ಕೊಲೆ ಮಾಡಿರುವುದು ತನಿಖೆ ವೇಳೆ ಗೊತ್ತಾಗಿತ್ತು.

ಆದರೆ, ಹೈದರ್ ಕುಟುಂಬಸ್ಥರು ಅಬ್ಬಾಸ್ ವಿರುದ್ಧ ಆರೋಪ ಮಾಡಿದ್ದರು. ಹಾಗಾಗಿ ಅವರ ಕೊಲೆಗೆ ಹೈದರ್ ಅಲಿ ಸಹೋದರ ಶಬ್ಬೀರ್ ಮತ್ತು ಆತನ ಸಹಚರರು ಸಂಚು ರೂಪಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತ: ಹೊರ ರಾಜ್ಯಗಳ ಇಬ್ಬರ ಸಾವು

ಬೆಂಗಳೂರು: ನಗರದ ನೈಸ್ ರಸ್ತೆ ಹಾಗೂ ದೇವನಹಳ್ಳಿಯ ಲಾಲಗುಂಡನಹಳ್ಳಿ ಗೇಟ್‌ನಲ್ಲಿ ಶನಿವಾರ ರಾತ್ರಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಹೊರ ರಾಜ್ಯಗಳ ಇಬ್ಬರು ಮೃತಪಟ್ಟಿದ್ದಾರೆ.

ನೈಸ್ ರಸ್ತೆಯ ಬನ್ನೇರುಘಟ್ಟ ಕ್ರಾಸ್ ಸಮೀಪ ಲಾರಿ ಮತ್ತು ಕ್ಯಾಂಟರ್ ನಡುವೆ ಸಂಭವಿಸಿದ ಅಪಘಾತದಲ್ಲಿ ರಾಮರಾಜು (50) ಎಂಬುವವರು ಮೃತಪಟ್ಟಿದ್ದಾರೆ.

'ತಮಿಳುನಾಡಿನ ರಾಮರಾಜು ಅವರು ಯಶವಂತಪುರದಿಂದ ಕೊಯಮತ್ತೂರಿಗೆ ಲಾರಿಯಲ್ಲಿ ಸರಕು ತುಂಬಿಕೊಂಡು ಹೋಗುತ್ತಿದ್ದರು. ಅತಿ ವೇಗವಾಗಿ ಲಾರಿ ಚಾಲನೆ ಮಾಡುತ್ತಿದ್ದ ರಾಮರಾಜು, ಮುಂದೆ ಹೋಗುತ್ತಿದ್ದ ಕ್ಯಾಂಟರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ. ಘಟನೆ ನಂತರ ಕ್ಯಾಂಟರ್ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಲೀನರ್ ಸಾವು: ರಾಷ್ಟ್ರೀಯ ಹೆದ್ದಾರಿ 44ರ ಲಾಲಗುಂಡನಹಳ್ಳಿ ಗೇಟ್ ಸಮೀಪ ಕಾರು ಡಿಕ್ಕಿಯಾಗಿ ರಾಜಸ್ಥಾನದ ಕ್ಯಾಂಟರ್ ವಾಹನದ ಕ್ಲೀನರ್ ಬದ್ರಿಲಾಲ್ (38) ಎಂಬುವರು ಮೃತಪಟ್ಟಿದ್ದಾರೆ.

ರಾಜಸ್ಥಾನದಿಂದ ನಗರಕ್ಕೆ ಬೆಳ್ಳುಳ್ಳಿ ಸಾಗಿಸಿಕೊಂಡು ಬಂದಿದ್ದ ಕ್ಯಾಂಟರ್ ಚಾಲಕ ಸರೀಬ್ ಮೊಹಮ್ಮದ್ ಜತೆ ಬದ್ರಿಲಾಲ್ ಸಹ ಬಂದಿದ್ದರು. ಯಶವಂತಪುರದಲ್ಲಿ ಬೆಳ್ಳುಳ್ಳಿ ಇಳಿಸಿದ ನಂತರ ರಾಜಸ್ಥಾನಕ್ಕೆ ವಾಪಸ್ ಹೊರಟಿದ್ದ ಈ ಇಬ್ಬರು, ಲಾಲಗುಂಡನಹಳ್ಳಿ ಗೇಟ್ ಬಳಿ ಕ್ಯಾಂಟರ್ ನಿಲ್ಲಿಸಿ ವಾಹನದೊಳಗೆ ಮಲಗಿದ್ದರು.

ಈ ಮಧ್ಯೆ ನಿದ್ದೆಯಿಂದ ಎಚ್ಚರಗೊಂಡ ಬದ್ರಿಲಾಲ್, ಟೀ ಕುಡಿಯಲು ವಾಹನದಿಂದ ಕೆಳಗಿಳಿದು ರಸ್ತೆ ಪಕ್ಕದ ಹೋಟೆಲ್‌ಗೆ ನಡೆದು ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರು ಚಾಲಕ ವಾಹನ ಸಮೇತ ಪರಾರಿಯಾಗಿದ್ದಾನೆ. ಘಟನಾ ಸ್ಥಳದ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿ ಆಧರಿಸಿ, ಚಾಲಕನ ಪತ್ತೆಗೆ ಕ್ರಮ ಕೈಗೊಂಡಿದ್ದೇವೆ ಎಂದು ಪೊಲೀಸರು ಹೇಳಿದ್ದಾರೆ.

ASTRO YATRA

ಭಾರತದ ಪ್ರಸಿದ್ಧ ಕೇರಳ ಜ್ಯೋತಿಷ್ಯ ಪಂಡಿತರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 40 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಾಸ್ತ್ರದ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭರ್‌ವಾಲ್ ವೈಸ್‌ರಾಯ್, ರೂ. ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು-4.
ಮನೆ: ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಪಕ್ಕ, ಬೆಂಗಳೂರು-84.
Ph: 9844165272 / 9036552207
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Hospital & Medical Jobs

WANTED-FOR HOSPITAL Pharmacy D Pharma Pharmacist, Contact:Chaitanya Hospital No.80/117, P&T Colony, R.T.Nagar Bangalore-32, 9900520357

Marketing & Sales

XIAOMI PROMOTERS Required for Adishwar Outlets, Bangalore. Salary 25,000- 40,000. Call: 9980403036.

Factory

HIRING MALE CANDIDATES BELOW 30 Years, for Pvt Ltd Co. Qualification: 10th or PUC Pass, In Around Rajajinagar Contact: 9902891620/ 9845579620

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



'ಕೆ.ಆರ್. ಮಾರುಕಟ್ಟೆ ಪುನರುಜ್ಜೀವನಗೊಳಿಸಿ'

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು ಹಲವು ಜನ ಮೃತಪಟ್ಟ ಘಟನೆ ಇನ್ನೂ ಮಾಸಿಲ್ಲ. ಇದೀಗ ಕೆ.ಆರ್.ಮಾರುಕಟ್ಟೆಯ ಸರದಿ ಬಂದಿದೆ. ದಕ್ಷಿಣ ದ್ವಾರದ ಚಾವಣಿ ಸಂಪೂರ್ಣ ಶಿಥಿಲಗೊಂಡಿದ್ದು, ಯಾವುದೇ ಕ್ಷಣದಲ್ಲಿ ಕುಸಿಯಬಹುದು. ವರಮಹಾಲಕ್ಷ್ಮಿ, ದೀಪಾವಳಿ, ಗೌರಿ, ಆಯುಧಪೂಜೆ ಹಬ್ಬಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಜನರು ಬರುತ್ತಾರೆ. ಆ ವೇಳೆ ಕುಸಿದರೆ ಗತಿ ಏನು? ಪಾದಚಾರಿ ಮಾರ್ಗಗಳನ್ನು ತೆರವುಗೊಳಿಸುತ್ತಿರುವುದು ಸ್ವಾಗತಾರ್ಹ. ಹಾಗೆಯೇ ಶಿಥಿಲಗೊಂಡ ಕಟ್ಟಡಗಳನ್ನು ದುರಸ್ತಿಗೊಳಿಸಿ ಜನರಿಗೆ ಜೀವ ಭದ್ರತೆಯನ್ನು ಕೊಡಿ.

ಎಸ್.ಶಿವಪ್ರಸಾದ್, ಸ್ಥಳೀಯ ನಿವಾಸಿ

'ಉಕ್ಕುತ್ತಿದೆ ಒಳಚರಂಡಿ'



ರಾಜಣ್ಣ ಬಡಾವಣೆ ಮೂರನೇ ಕ್ರಾಸ್‌ನಲ್ಲಿ ಕಳೆದ ಆರು ತಿಂಗಳಿಂದ ಒಳಚರಂಡಿ ನೀರು ಉಕ್ಕುತ್ತಲೇ ಇದೆ. ಕೆಟ್ಟ ವಾಸನೆ ಇಡೀ ಬಡಾವಣೆಯನ್ನು ಆವರಿಸಿದೆ. ರಸ್ತೆ ಗುಂಡಿಗಳು, ಪಾದಚಾರಿ ಮಾರ್ಗದಲ್ಲಿ ನೀರು ನಿಲ್ಲುತ್ತಿದ್ದು, ನಡೆದಾಡುವುದೇ ಕಷ್ಟವಾಗಿದೆ. ಜಿಬಿಎ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ದುರಸ್ತಿಪಡಿಸಲಿ.

ಡರೇನ್ ಪಿಂಟೊ, ಸ್ಥಳೀಯ ನಿವಾಸಿ

'ಡಾಂಬರು ಹಾಕಿ'

ಯಲಹಂಕ ಉಪನಗರದ 16ನೇ ಮುಖ್ಯರಸ್ತೆಯಲ್ಲಿ ಮೆಟ್ರೊ ಮಾರ್ಗದ ಕಾಮಗಾರಿ ನಡೆಯುತ್ತಿದೆ. ವಿದ್ಯುತ್ ಕೇಬಲ್ ಹಾಕಲು ರಸ್ತೆ ಅಗೆಯಲಾಗಿದ್ದು, ಮತ್ತೆ ಮುಚ್ಚಿ ಡಾಂಬರು ಹಾಕಿಲ್ಲ. ಈ ಬಗ್ಗೆ ಕೆಪಿಟಿಸಿಎಲ್, ಜಿಬಿಎಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಸ್ಪಂದಿಸಬೇಕು

ಆರ್.ಎನ್.ಗೌಡ, ಸ್ಥಳೀಯ ನಿವಾಸಿ

'ನಿಲ್ದಾಣ ಒತ್ತುವರಿ ತೆರವು ಮಾಡಿ'

ಕೆ.ಜಿ.ಹಳ್ಳಿಯ ಶಾಂಪುರ ಬಸ್ ನಿಲ್ದಾಣವನ್ನು ಬೀದಿಬದಿ ವ್ಯಾಪಾರಿಗಳು ಒತ್ತುವರಿ ಮಾಡಿಕೊಂಡಿದ್ದಾರೆ. ಪಾದಚಾರಿ ಮಾರ್ಗವೂ ಇಲ್ಲ. ಬಸ್‌ಗಳಿಗೆ ಕಾಯಲು ಬಿಸಿಲಲ್ಲೇ ನಿಲ್ಲಬೇಕಿದೆ. ವ್ಯಾಪಾರಿಗಳನ್ನು ತೆರವುಗೊಳಿಸಬೇಕಾದ ಜಿಬಿಎ ಅಧಿಕಾರಿಗಳು ಮತ್ತು ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ. ಪಾದಚಾರಿ ಮಾರ್ಗ ಪ್ರತಿ ರಸ್ತೆಯಲ್ಲಿಯೂ ಇರಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆ. ನಡಿಗೆಯ ಹಕ್ಕು ಪ್ರತಿಯೊಬ್ಬ ನಾಗರಿಕನ ಬದುಕುವ ಹಕ್ಕೆಂದು ಹೇಳಿದೆ. ಇದು ಆಡಳಿತ ವ್ಯವಸ್ಥೆಗೆ ಅರ್ಥವಾಗುವುದು ಯಾವಾಗ?

ಅಭಿಷೇಕ್‌ಗೌಡ, ಕೆ.ಜಿ.ಹಳ್ಳಿ

'ವಿದ್ಯುತ್ ದೀಪ ಇಲ್ಲ'

ಚನ್ನೇನಹಳ್ಳಿಯ ಎಎಸ್‌ಬಿ ಲೋಟಸ್ ಸಿಟಿ ಲೇಔಟ್‌ನ ತಾವರೆಕೆರೆ- ಕೆಂಗೇರಿ ಮುಖ್ಯ ರಸ್ತೆಯಲ್ಲಿ ವಿದ್ಯುತ್ ದೀಪಗಳೇ ಇಲ್ಲ. ರಾತ್ರಿ ವೇಳೆ ಪಾದಚಾರಿಗಳು ಓಡಾಡುವುದೇ ಕಷ್ಟವಾಗಿದೆ. ವಾಹನಗಳು ವೇಗವಾಗಿ ಸಂಚರಿಸುವ ಕಾರಣ ಅಪಘಾತಗಳು ಉಂಟಾಗುತ್ತಿವೆ. ಸಮಸ್ಯೆ ಬಗೆಹರಿಸಿ.

ವಿವೇಕ ಶಾಸ್ತ್ರಿ, ತಾವರೆಕೆರೆ ನಿವಾಸಿ

'ಗುಂಡಿಗಳ ಸಾಮ್ರಾಜ್ಯ'

ಕಸ್ತೂರಿ ನಗರದ ಸರ್ವೀಸ್ ರಸ್ತೆಯಿಂದ ರಿಂಗ್ ರಸ್ತೆಗೆ ಹೋಗುವ ಮಾರ್ಗ-ದುದ್ದಕ್ಕೂ ಗುಂಡಿಗಳ ಸಾಮ್ರಾಜ್ಯವೇ ಇದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳಿಗೆ ಈಗಾಗಲೇ ಹಲವು ಬಾರಿ ದೂರು ನೀಡಿದರೂ ದುರಸ್ತಿಪಡಿಸಲು ಮುಂದಾಗಿಲ್ಲ.

ರಾಮನಾಥ ರಾವ್, ಕಸ್ತೂರಿನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ

‘ಮುಂದೆಯೂ ನಾವೇ ಅಧಿಕಾರಕ್ಕೆ’

ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುತ್ತೇನೆ– ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2028ಕ್ಕೆ ಕರ್ನಾಟಕದಲ್ಲಿ ಹಾಗೂ 2029ಕ್ಕೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಭಾನುವಾರ ನಡೆದ ಎಐಟಿಯುಸಿ (ಇಂಟೆಕ್) ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ‘ನನ್ನ ಮೇಲೆ ನಂಬಿಕೆ ಇಟ್ಟು ಸರ್ಕಾರದ ಜವಾಬ್ದಾರಿ ನೀಡಲಾಗಿದೆ. ನಾನು ಎಲ್ಲರನ್ನು ಒಟ್ಟಾಗಿ ಕರೆದುಕೊಂಡು ಹೋಗುತ್ತೇನೆ’ ಎಂದರು.

‘ಯಾವುದೇ ರಾಜಕೀಯ ತೀರ್ಮಾನ ತೆಗೆದುಕೊಂಡರೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಇಂಟೆಕ್ ಸದಸ್ಯರು ಮುಖ್ಯವಾಗುತ್ತಾರೆ. ಇಂದಿರಾಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಇಂಟೆಕ್, ಎನ್ಎಸ್‌ಯುಐ, ಯುವ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಇವು ಕಾಂಗ್ರೆಸ್ ಪಕ್ಷದ ನಾಲ್ಕು ಆಧಾರ ಸ್ತಂಭಗಳು ಎಂದು ಹೇಳಿದ್ದರು. ನಾನು ವಿದ್ಯಾರ್ಥಿ ನಾಯಕನಾಗಿ, ನಂತರ ಮುಖ್ಯವಾಹಿನಿ ರಾಜಕೀಯಕ್ಕೆ ಬಂದವನು’ ಎಂದರು.

‘ಕೃಷಿಕ, ಶಿಕ್ಷಕ, ಸೈನಿಕ, ಕಾರ್ಮಿಕ ಇವರುಗಳು ಇಲ್ಲದೇ ಸಮಾಜ ಮುನ್ನಡೆಯದು. ಈ ದೇಶಕ್ಕೆ ಕಾರ್ಮಿಕರ ಶ್ರಮ, ಶಕ್ತಿ, ಬದ್ಧತೆ ಸಾಕಷ್ಟು ಕೊಡುಗೆ ನೀಡಿದೆ. ಕಾರ್ಮಿಕ ಇಲ್ಲದೇ ಹೋದರೆ ಯಾವುದೇ ದೇಶದ ಆರ್ಥಿಕತೆ ಬೆಳೆಯುವುದಿಲ್ಲ. ಉದ್ದಿಮೆದಾರರು ಪ್ರಬಲರಾದರೆ ಕಾರ್ಮಿಕರೂ ಬಲವಾಗುತ್ತಾರೆ’ ಎಂದರು.

‘ಸಂಜೀವ್ ರೆಡ್ಡಿ ಅವರು ಸಾಕಷ್ಟು ವರ್ಷದಿಂದ ಇಂಟೆಕ್ ಅನ್ನು ಅಚ್ಚುಕಟ್ಟಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಆಸ್ಕರ್ ಫರ್ನಾಂಡೀಸ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಕಾರ್ಮಿಕ ಸಚಿವರಾಗಿದ್ದಾಗ ಕ್ರಾಂತಿಕಾರಿ ಬದಲಾವಣೆ ತಂದರು. ಕಾರ್ಮಿಕ ಚಳವಳಿಗೆ ಮಾನ್ಯತೆ ನೀಡಿದರು. ಕಾರ್ಮಿಕರಿಗಾಗಿ ಇಎಸ್ಐ ಆಸ್ಪತ್ರೆ ತಂದರು. ಕಾರ್ಮಿಕರ ಮಕ್ಕಳಿಗಾಗಿ ಇಎಸ್ಐ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಸೀಟುಗಳನ್ನು ನೀಡಲಾಯಿತು. 10-15 ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಯಿತು. ಇಬ್ಬರ ನೇತೃತ್ವದಲ್ಲಿ ಕಾರ್ಮಿಕರ ಜೀವನದಲ್ಲಿ ಬದಲಾವಣೆ ಆರಂಭವಾಯಿತು’ ಎಂದರು.

‘ನಮ್ಮ ಸರ್ಕಾರ ತಂದಿರುವ ಐದು ಗ್ಯಾರಂಟಿ ಯೋಜನೆಗಳು ಕಾರ್ಮಿಕರ, ಮಹಿಳೆಯರ ಹಾಗೂ ಜನಸಾಮಾನ್ಯರ ಪರವಾಗಿವೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿಯವರಿಂದ ಹಿಡಿದು ಎಲ್ಲರೂ ಟೀಕೆ ಮಾಡಿದರು. ಟೀಕೆ ಮಾಡಿದವರೇ ನಂತರ ಈ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿದ್ದಾರೆ’ ಎಂದರು.

‘ಇಂದು ನಮ್ಮ ದೇಶ ವಿಚಿತ್ರವಾದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ನಾವು ನಮ್ಮ ನೆರೆಹೊರೆಯ ಮಿತ್ರ ರಾಷ್ಟ್ರಗಳನ್ನು ಕಳೆದುಕೊಂಡಿದ್ದೇವೆ. ಆದರೆ, ನಮ್ಮ ಕರ್ನಾಟಕ ಸದೃಢವಾಗಿದೆ. ವಿವಿಧ ತೆರಿಗೆಗಳ ಮೂಲಕ ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಿದೆ. ಭಾರತವನ್ನು ಬೆಂಗಳೂರು ಮೂಲಕ ನೋಡಲಾಗುತ್ತಿದೆ’ ಎಂದರು.

ಇಂಟೆಕ್ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು

‘ಅಮಲು ಪದಾರ್ಥ ಬೆರೆಸಿದರೆ ಗುಟ್ಕಾ ನಿಷೇಧ’

‘ಕಿಂಚಿತ್ ಅಮಲು ಪದಾರ್ಥ ಬೆರಕೆ ಮಾಡಿದರೂ ಕರ್ನಾಟಕದಲ್ಲಿ ಎಲ್ಲ ರೀತಿಯ ಪಾನ್ ಮಸಾಲಾ, ಗುಟ್ಕಾ ಮಾರಾಟವನ್ನು ನಿಷೇಧ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 31ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಪಾನ್ ಮಸಾಲಾ, ಗುಟ್ಕಾದಲ್ಲಿ ಅಲ್ಪ ಪ್ರಮಾಣದಲ್ಲಿ ಅಮಲು ಪದಾರ್ಥ ಸೇರಿಸುತ್ತಿರುವ ಬಗ್ಗೆ ಮಾಹಿತಿಯಿದೆ. ಇದು ನಿಜವೇ ಆಗಿದ್ದರೆ, ಈ ಪ್ರಕ್ರಿಯೆ ತಕ್ಷಣ ನಿಲ್ಲದಿದ್ದರೆ ಎಲ್ಲ ರೀತಿಯ ಪಾನ್ ಮಸಾಲಾ, ಗುಟ್ಕಾ ಪದಾರ್ಥಗಳ ಮಾರಾಟವನ್ನು ಕರ್ನಾಟಕದಲ್ಲಿ ನಿಷೇಧ ಮಾಡಲಾಗುವುದು. ಮಾದಕ ದ್ರವ್ಯ ಮುಕ್ತ ಕರ್ನಾಟಕ ರೂಪಿಸುವುದು ನಮ್ಮ ಗುರಿಯಾಗಿದೆ’ ಎಂದರು.

‘ಮಾದಕ ವ್ಯಸನ ತಡೆಯುವಿಕೆ ದೊಡ್ಡ ಸವಾಲಾಗಿದ್ದು, ಯುವ ಪೀಳಿಗೆ ಈ ವ್ಯಸನದ ಸುಳಿಗೆ ಸಿಲುಕದಂತೆ ನೋಡಿಕೊಳ್ಳಬೇಕು’ ಎಂದು ಹೇಳಿದರು.

‘ಮುಖ್ಯಮಂತ್ರಿಯ ಸಿಂಹಾಸನ ನಶ್ವರ’

ಜನತೆಯ ಹೃದಯ ಸಿಂಹಾಸನ ಶಾಶ್ವತ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಯ ಸಿಂಹಾಸನ ನಶ್ವರ, ಜನತೆಯ ಹೃದಯಸಿಂಹಾಸನ ಶಾಶ್ವತ. ಅಲ್ಲಿಂದ ನನ್ನನ್ನು ಯಾರೂ ಕೆಳಗಿಳಿಸಲಾರರು. ಅದು ನನ್ನ ಮತ್ತು ನಾನು ನಂಬುವ ಜನತಾ ಜನಾರ್ದನರ ನಡುವಿನ ಶಾಶ್ವತ ಒಪ್ಪಂದ’ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನ ತ್ಯಾಗ ಮಾಡಿದ ನಂತರ ಮೊದಲ ಬಾರಿಗೆ ಹುಟ್ಟೂರು ಮೈಸೂರಿಗೆ ಬಂದಾಗ ಸೇರಿದ್ದ ಜನಸಾಗರ ತೋರಿದ ಪ್ರೀತಿ-ಅಭಿಮಾನವನ್ನು ಉಲ್ಲೇಖಿಸಿ ‘ಎಕ್ಸ್’ ಮಾಡಿರುವ ಅವರು, ‘ಪದತ್ಯಾಗ ಮಾಡಿದ ದಿನದಿಂದ ಹೋದಲ್ಲಿ, ಬಂದಲ್ಲಿ ಜನತೆ ವ್ಯಕ್ತಪಡಿಸುತ್ತಿರುವ ಪ್ರೀತಿ, ಅಭಿಮಾನ, ವಿಶ್ವಾಸವನ್ನು ನೋಡಿದರೆ, ಅಧಿಕಾರವನ್ನು ಬಳಸಿಕೊಂಡು ಜಗಮೆಚ್ಚುವ ರೀತಿಯಲ್ಲಿ ಜನಸೇವೆ ಮಾಡಿದ್ದೇನೆ ಎಂಬ ಸಾರ್ಥಕ್ಯದ ಭಾವನೆ ಮೂಡಿದೆ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

‘ರಾಜಕೀಯ ಅಧಿಕಾರ ಎನ್ನುವುದು ಜನರ ಸೇವೆ ಮಾಡಲು ಒದಗಿ ಬಂದ ಅವಕಾಶದ ಭಾಗ್ಯ ಎಂದು ನಾನು ತಿಳಿದುಕೊಂಡವನು. ಜನಸಾಗರ ಕಂಡು ನಾನು ಮೂಕ ವಿಸ್ಮಿತನಾಗಿದ್ದೇನೆ’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

‘ಅಧಿಕಾರ, ಸಂಪತ್ತು ಕಾಲ ಬದಲಾದಂತೆ ಕಳೆದು ಹೋಗಬಹುದು, ಜನರ ಪ್ರೀತಿ ನಿರಂತರ. ನನ್ನ ಸಾರ್ವಜನಿಕ ಬದುಕಿನಲ್ಲಿ ನನ್ನನ್ನು ಪ್ರೀತಿಸುವ ದೊಡ್ಡ ಜನಸಮೂಹವನ್ನೇ ಸಂಪಾದಿಸಿದ್ದೇನೆ ಎನ್ನುವ ಹೆಮ್ಮೆ ನನ್ನದು. ನಾಡಿನ ಉದ್ದಗಲಕ್ಕೂ ಯಾವ ನಿರೀಕ್ಷೆಯೂ ಇಲ್ಲದೆ ಪ್ರೀತಿ - ಅಕ್ಕರೆ ತೋರುತ್ತಿರುವ ಪ್ರೀತಿಯ ಬಂಧುಗಳ ಸೇವೆಗೆ ನಾನು ಸದಾ ಬದ್ಧ’ ಎಂದೂ ಹೇಳಿದ್ದಾರೆ.

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ–04, ಭೂತರಾಮನಹಟ್ಟಿ, ಬೆಳಗಾವಿ–591156
(ನ್ಯಾಕ್ ಮಾನ್ಯತೆ ಬಿ+ ಗ್ರೇಡ್–2021) ಪಿಎಂ–ಉಷಾ (ಮೇರು)

KITTURU RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade – 2021) PM-UShA (MERU)

Website : www.rcub.ac.in
E-mail : academic@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Phone No.: 0831-2565241
0831-2565258

ಕ್ರ.ಸಂ.: ಕಿರಾಚವಿ/ಬೆಳಗಾವಿ/ಕುಸಕಾ/ವಿಮವಿ/ಸ್ನಾತಕೋತ್ತರ/2026–27/1657 ದಿನಾಂಕ: 27–06–2026

2026–27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆ

ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೆಳಗಾವಿಯ ಮುಖ್ಯ ಆವರಣ, ಹಿರೇಬಾಗೇವಾಡಿಯಲ್ಲಿನ ನೂತನ ಆವರಣ, ಸ್ನಾತಕೋತ್ತರ ಕೇಂದ್ರ ವಿಜಯಪುರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಮತ್ತು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿನ ಸಂಯೋಜಿತ ಮಹಾವಿದ್ಯಾಲಯಗಳಲ್ಲಿಯ ಸ್ನಾತಕೋತ್ತರ ಕೋರ್ಸುಗಳಿಗೆ 2026–27ನೇ ಶೈಕ್ಷಣಿಕ ಸಾಲಿಗೆ ಅರ್ಹ ಸ್ನಾತಕ ವಿದ್ಯಾರ್ಥಿಗಳಿಂದ ಯು.ಯು.ಸಿ.ಎಂ.ಎಸ್ ತಂತ್ರಾಂಶದ (UUCMS) https://uucms.karnataka.gov.in Online ಮೂಲಕ ದಿನಾಂಕ: 01–07–2026 ರಿಂದ 20–07–2026 ರವರೆಗೆ ಸ್ನಾತಕೋತ್ತರ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

* **ಕೋರ್ಸುಗಳು ಮತ್ತು ಕೇಂದ್ರಗಳು :**

ಕ್ರ.ಸಂ	ಕೋರ್ಸ್‌ಗಳು	ಕೋರ್ಸ್ ಕೇಂದ್ರಗಳು
1	ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಶಿಕ್ಷಣಶಾಸ್ತ್ರ ಹಾಗೂ ಎಮ್.ಬಿ.ಎ.	ಮುಖ್ಯ ಆವರಣ, ವಿದ್ಯಾಸಂಗಮ, ಭೂತರಾಮನಹಟ್ಟಿ
2	ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಭೂಗೋಳಶಾಸ್ತ್ರ, ಗಣಕವಿಜ್ಞಾನ, ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಹಾಗೂ ಎಮ್.ಸಿ.ಎ.	ನೂತನ ಆವರಣ, ವಿಜ್ಞಾನ ಸಂಗಮ, ಹಿರೇಬಾಗೇವಾಡಿ.
3	ಕನ್ನಡ ಹಾಗೂ ಇಂಗ್ಲೀಷ.	ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ
4	ಮರಾಠಿ (ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ)	ರಾಣಿ ಪಾರ್ವತಿ ದೇವಿ ಮಹಾವಿದ್ಯಾಲಯ, ಬೆಳಗಾವಿ
5	ಕನ್ನಡ, ಇಂಗ್ಲೀಷ, ಮರಾಠಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ಸಮಾಜಕಾರ್ಯ, ವಾಣಿಜ್ಯಶಾಸ್ತ್ರ, ಗಣಿತಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಎಮ್.ಸಿ.ಎ ಹಾಗೂ ಉರ್ದು.	ಸ್ನಾತಕೋತ್ತರ ಕೇಂದ್ರ, ವಚನ ಸಂಗಮ, ತೊರವಿ, ವಿಜಯಪುರ.
6	ಮದ್ಯಸಾರ ತಂತ್ರಜ್ಞಾನ ಮತ್ತು ಸಕ್ಕರೆ ತಂತ್ರಜ್ಞಾನ	ಶ್ರೀ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಮಹಾವಿದ್ಯಾಲಯ, ಬೆಳಗಾವಿ
7	ಎಂ.ಪಿ.ಇಡಿ – (M.P.Ed) ದೈಹಿಕ ಶಿಕ್ಷಣಶಾಸ್ತ್ರ	1. ಎಮ್.ಇ.ಎಸ್ ಎಂ.ಪಿ.ಇಡಿ. ಕಾಲೇಜು, ಮೂಡಲಗಿ 2. ಎಸ್.ಪಿ.ಎಮ್ ಎಂ.ಪಿ.ಇಡಿ ಕಾಲೇಜು, ರಾಯಬಾಗ.
8	ಎಂ.ಇಡಿ – (M.Ed) ಶಿಕ್ಷಣಶಾಸ್ತ್ರ	ಬಿ.ಎಡ್. ಅಂತಿಮ ಸೆಮಿಸ್ಟರನ ಫಲಿತಾಂಶ ಪ್ರಕಟಣೆ ನಂತರ ಪ್ರವೇಶಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.
9	ಎಮ್.ಬಿ.ಎ (MBA) - ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ ಮತ್ತು ಎಮ್.ಸಿ.ಎ (MCA) - ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್	* ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (KEA) ನಡೆಸಿದ PGCET-2026 ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಆಯ್ಕೆ ಮಾಡುವ ಮೂಲಕ ಪ್ರವೇಶ ಪಡೆದುಕೊಳ್ಳಬಹುದು ಅಥವಾ PGCET-2026 ಪರೀಕ್ಷೆ ಬರೆದ ವಿದ್ಯಾರ್ಥಿಗಳು ನೇರವಾಗಿ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ MBA ಮತ್ತು MCA ವಿಭಾಗಗಳಲ್ಲಿ ಪ್ರವೇಶಾತಿಯನ್ನು ಪಡೆಯಬಹುದು. * ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (KEA) ಅರ್ಜಿ ಸಲ್ಲಿಸದೆ ಇರುವ ವಿದ್ಯಾರ್ಥಿಗಳು 2026–27 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಾತಿ ಅಧಿಸೂಚನೆಯಲ್ಲಿ ನೀಡಿದ ವೇಳಾಪಟ್ಟಿಯಂತೆ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಮುಂದುವರೆದು, ಸದರಿ ವಿದ್ಯಾರ್ಥಿಗಳು ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ನಡೆಸುವ KRCU-U-CET-2026 ಪರೀಕ್ಷೆ ಮುಖಾಂತರ ಪ್ರವೇಶಾತಿಯನ್ನು ಪಡೆಯಬಹುದಾಗಿದೆ. * ಹೆಚ್ಚಿನ ಮಾಹಿತಿಗಾಗಿ MBA ಮತ್ತು MCA ವಿಭಾಗಗಳನ್ನು ಸಂಪರ್ಕಿಸಬಹುದು.

ಹೆಚ್ಚುವರಿ ಮಾಹಿತಿ:

* ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿನ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ ವಿವರಗಳನ್ನು ವಿಶ್ವವಿದ್ಯಾಲಯದ ಜಾಲತಾಣ www.rcub.ac.in ದಲ್ಲಿ ಪಡೆಯಬಹುದಾಗಿದೆ.
* **ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿನ ಕೋರ್ಸುಗಳ ಅಧ್ಯಯನಕ್ಕೆ ಆಸಕ್ತವಿರುವ ವಿದ್ಯಾರ್ಥಿಗಳು ಸದರಿ ಕೇಂದ್ರದಲ್ಲಿಯೇ, ಆನಲೈನ್ (UUCMS) ಮೂಲಕ ಅರ್ಜಿ ಸಲ್ಲಿಸಿದ ಪ್ರತಿ, ಅರ್ಜಿ ಶುಲ್ಕದ ಪ್ರತಿ ಹಾಗೂ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು "ಸಂಯೋಜಕರು, ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ" ಕಛೇರಿಯಲ್ಲಿಯೇ ಸಲ್ಲಿಸುವುದು. ಸದರಿ ವಿದ್ಯಾರ್ಥಿಗಳಿಗೆ ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿಯೇ ಪ್ರವೇಶ ಪ್ರಕ್ರಿಯೆಯನ್ನು ಕೈಗೊಂಡು ಪ್ರವೇಶವನ್ನು ನೀಡಲಾಗುವುದು.**
* ಎಂ.ಪಿ.ಇಡಿ – (M.P.Ed) ದೈಹಿಕ ಶಿಕ್ಷಣಶಾಸ್ತ್ರ ಕೋರ್ಸಗೆ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಬಿ.ಪಿ.ಎಡ್ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ **ವಿಶ್ವವಿದ್ಯಾಲಯದ ಕೋಟಾದಡಿಯಲ್ಲಿ (KRCU Quota)** ಲಭ್ಯವಿರುವ ಸೀಟುಗಳನ್ನು ಹಂಚಿಕೆ ಮಾಡಲಾಗುವುದು ಹಾಗೂ "ವಿಶ್ವವಿದ್ಯಾಲಯ ಅನುದಾನ ಆಯೋಗ" (UGC) ದಿಂದ ಮಾನ್ಯತೆ ಪಡೆದ ಕರ್ನಾಟಕ ಮತ್ತು ಕರ್ನಾಟಕೇತರ ವಿಶ್ವವಿದ್ಯಾಲಯಗಳಲ್ಲಿ ಬಿ.ಪಿ.ಎಡ್ ಪದವಿ ಪೂರ್ಣಗೊಳಿಸಿದ ಅರ್ಹ ವಿದ್ಯಾರ್ಥಿಗಳು ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರ ಪಡೆದುಕೊಂಡು, ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸೀಟುಗಳಿಗೆ **ಆಡಳಿತ ಮಂಡಳಿ ಕೋಟಾದಡಿಯಲ್ಲಿ (Management Quota)** ಪ್ರವೇಶಾತಿಯನ್ನು ಪಡೆಯಬಹುದಾಗಿದೆ.

~~~~~~~ **ಸೂಚನೆಗಳು** ~~~~~~~

1. **ಅರ್ಹತಾ ಮಾನದಂಡಗಳು:** ವಿಶ್ವವಿದ್ಯಾಲಯ ಅನುದಾನ ಆಯೋಗ (UGC) ದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಪದವಿ ಪೂರೈಸಿದ ಹಾಗೂ ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಹಾಗೂ ನಿಯಮಗಳಿಗೆ ಬದ್ಧರಾಗಿರುವ ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿಗೆ ಅರ್ಜಿ ಸಲ್ಲಿಸುವುದು. ಆದ್ದರಿಂದ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸುವ ಮುಂಚೆ, ಪ್ರವೇಶಾತಿ ಅರ್ಹತೆ, ಪ್ರವೇಶ ಶುಲ್ಕ ಹಾಗೂ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ವಿಭಾಗವಾರು ಕೋರ್ಸುಗಳ ಮಾಹಿತಿಯನ್ನು ಕಡ್ಡಾಯವಾಗಿ ವಿಶ್ವವಿದ್ಯಾಲಯದ ಜಾಲತಾಣದಿಂದ (www.rcub.ac.in) ಅಥವಾ ಸ್ನಾತಕೋತ್ತರ ವಿಭಾಗಗಳಿಂದ ಪಡೆದ ನಂತರವೇ ಆನಲೈನ್ UUCMS-https://uucms.karnataka.gov.in ಮೂಲಕ ಅರ್ಜಿ ಸಲ್ಲಿಸುವುದು.

2) **ಪ್ರವೇಶಾತಿಯ ಅರ್ಜಿ ಶುಲ್ಕ :**

1	ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ	ರೂ. 250/–
2	ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ	ರೂ. 500/–

ಒಂದಕ್ಕಿಂತ ಹೆಚ್ಚು ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸುವರು ಪ್ರತಿ ಕೋರ್ಸ್‌ಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಪಾವತಿಸಬೇಕು.

3) **UUCMS ಸಂಖ್ಯೆಯ ಗುರುತಿನ ಅಗತ್ಯತೆ** : ವಿದ್ಯಾರ್ಥಿಯು UUCMS ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವಾಗ ಸ್ನಾತಕ ಕೋರ್ಸಿನ 10 ಅಂಕಿಯ UUCMS ID ಯನ್ನು ಉಪಯೋಗಿಸಬೇಕು (ಉದಾ: 2200668411) Password ಮರೆತು ಹೋಗಿದ್ದಲ್ಲಿ Forgot Password; ಮೂಲಕ Password Retrieve/Reset ಮಾಡಿಕೊಳ್ಳಬಹುದು.

4) **ಮುದ್ರಿತ ಅರ್ಜಿ ಸಲ್ಲಿಕೆ** : UUCMS ನಲ್ಲಿ ಭರ್ತಿ ಮಾಡಿದ ಅರ್ಜಿಯ ಮುದ್ರಿತ ಪ್ರತಿ (Hard Copy) ಮತ್ತು ಅರ್ಜಿ ಶುಲ್ಕ ಪಾವತಿಸಿದ ರಶೀದಿ ಹಾಗೂ ದೃಢೀಕರಿಸಿದ ಪೂರಕ ದಾಖಲೆಗಳ ಪ್ರತಿಗಳನ್ನು ಖುದ್ದಾಗಿ ಅಥವಾ ಅಂಚೆ ಮುಖಾಂತರ ದಿನಾಂಕ: 21–07–2026 ರೊಳಗೆ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಸ್ನಾತಕೋತ್ತರ ವಿಭಾಗ, ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಬೆಳಗಾವಿ –591156 ಈ ವಿಳಾಸಕ್ಕೆ ವಿದ್ಯಾರ್ಥಿಗಳು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5) **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ವಿನಾಯಿತಿ:** ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷ ಒಳಗಿರುವ, ಪ್ರಸ್ತುತ ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪ್ರಮಾಣ ಪತ್ರ ಹೊಂದಿರುವ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುತ್ತಿರುವ ಶಿಷ್ಯವೇತನಕ್ಕೆ (FREESHIP CARD ಅರ್ಹರಿರುವವರಿಗೆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಮಾತ್ರ ವಿಶ್ವವಿದ್ಯಾಲಯದ ಕಡ್ಡಾಯ ಪ್ರವೇಶ ಶುಲ್ಕಗಳನ್ನು ಹೊರತುಪಡಿಸಿ ಉಳಿದ ಪ್ರವೇಶಾತಿ ಶುಲ್ಕಗಳಿಗೆ ವಿನಾಯಿತಿ ನೀಡಲಾಗಿದೆ. ಸದರಿ ವಿನಾಯಿತಿ ಪಡೆದ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ಜಮೆಯಾದ ನಂತರ ವಿಶ್ವವಿದ್ಯಾಲಯಕ್ಕೆ ಕಡ್ಡಾಯವಾಗಿ ಭರಿಸತಕ್ಕದ್ದು.

6) **ಒಳಮೀಸಲಾತಿ ಪ್ರಮಾಣ ಪತ್ರ** : ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಒಳಮೀಸಲಾತಿ ಪ್ರಮಾಣ ಪತ್ರವನ್ನು ಪ್ರವೇಶಾತಿ ಸಮಯದಲ್ಲಿ ಸಲ್ಲಿಸುವುದು.

7) **ವಿದ್ಯಾರ್ಥಿಗಳ ಕನಿಷ್ಠ ಪ್ರವೇಶ ಸಂಖ್ಯೆ:** ವಿಶ್ವವಿದ್ಯಾಲಯ ಹಾಗೂ ಮಹಾವಿದ್ಯಾಲಯದ ಯಾವುದೇ ವಿಭಾಗ/ಕೋರ್ಸಿನಲ್ಲಿ ಕನಿಷ್ಠ 15 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶ ಪಡೆದಿದ್ದಲ್ಲಿ ಅಥವಾ ನೀಡಿದಲ್ಲಿ, ಸದರಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಕ್ಕೆ ಅಥವಾ ಬೇರೆ ಸಂಯೋಜಿತ ಮಹಾವಿದ್ಯಾಲಯಕ್ಕೆ ವರ್ಗಾಯಿಸಲಾಗುವುದು.

8. **ವಿಶ್ವವಿದ್ಯಾಲಯದ (Counselling) ಪ್ರವೇಶಾತಿ ಸಮಯದಲ್ಲಿ ಮಹಾವಿದ್ಯಾಲಯದ ಆಯ್ಕೆ:** ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಪ್ರವೇಶಾತಿ ಸಮಯದಲ್ಲಿ ಸ್ನಾತಕೋತ್ತರ ಮಹಾವಿದ್ಯಾಲಯವನ್ನು ಪ್ರವೇಶಾತಿಗಾಗಿ ಆಯ್ಕೆ ಮಾಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಕೇವಲ ವಿಶ್ವವಿದ್ಯಾಲಯದ ಶುಲ್ಕವನ್ನು ಮಾತ್ರ ಭರಿಸುವುದು ಹಾಗೂ ಉಳಿದ ಮಹಾವಿದ್ಯಾಲಯದ ಪ್ರವೇಶ ಶುಲ್ಕವನ್ನು ಮಹಾವಿದ್ಯಾಲಯದಲ್ಲಿ ಭರಿಸಿ ಪ್ರವೇಶಾತಿ ಪಡೆಯುವುದು. ಒಂದು ವೇಳೆ ಮಹಾವಿದ್ಯಾಲಯವನ್ನು ಆಯ್ಕೆ ಮಾಡಿ, ವಿಶ್ವವಿದ್ಯಾಲಯದಲ್ಲಿ ಪ್ರವೇಶ ಶುಲ್ಕವನ್ನು ಭರಿಸಿದಂತಹ ವಿದ್ಯಾರ್ಥಿಗಳು ಆಯ್ಕೆ ಮಾಡಿದ ಮಹಾವಿದ್ಯಾಲಯದಲ್ಲಿ ಪ್ರವೇಶಾತಿ ಪಡೆಯದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಭರಿಸಿದ ಪ್ರವೇಶ ಶುಲ್ಕವನ್ನು ಮರುಭರಣ (No-Refund) ಮಾಡಲಾಗುವುದಿಲ್ಲ.

9) **ಬಿ.ಎಡ್ ವಿದ್ಯಾರ್ಥಿಗಳು:** ಬಿ.ಎಡ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿ ಮುಕ್ತಾಯಗೊಳ್ಳುವರೆಗೆ ಸ್ನಾತಕೋತ್ತರ ಪದವಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

10) **ವಿಳಂಬ ಅಥವಾ ಅಪೂರ್ಣ ಅರ್ಜಿಗಳು:** ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಅಥವಾ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

11) ಸದರಿ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ **(www.rcub.ac.in)** ಅಥವಾ ಸ್ನಾತಕೋತ್ತರ ವಿಭಾಗಗಳನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/–
ಸಂತೋಷ ಕಾಮಗೌಡ, ಕೆ.ಎ.ಎಸ್
ಕುಲಸಚಿವರು

ಬೆಂಗಳೂರಿಗೆ 2ನೇ ಸ್ಥಾನ

ರಸ್ತೆ ಅಪಘಾತ

ರಸ್ತೆ ಅಪಘಾತಗಳು ಅತಿ ಹೆಚ್ಚು ಸಂಭವಿಸುವ ಪಟ್ಟಿಯಲ್ಲಿ ಬೆಂಗಳೂರು ನಗರ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ದೆಹಲಿ ಮೊದಲ ಸ್ಥಾನದಲ್ಲಿದ್ದರೆ, ಮಧ್ಯಪ್ರದೇಶದ ಜಬಲ್‌ಪುರ ಮೂರನೇ ಸ್ಥಾನದಲ್ಲಿದೆ. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು 2024ರ ಮಾಹಿತಿಯನ್ನು ಹಂಚಿಕೊಂಡಿದೆ. 2023ರ ಅಂಕಿ–ಅಂಶಕ್ಕೆ ಹೋಲಿಸಿದರೆ, 2024ರಲ್ಲಿ ಅಪಘಾತಗಳು ಕಡಿಮೆಯಾಗಿವೆ

ದೇಶದಲ್ಲಿ

4.87 ಲಕ್ಷ ಸಂಭವಿಸಿದ ಒಟ್ಟು ರಸ್ತೆ ಅಪಘಾತಗಳು | **1.77** ಲಕ್ಷ ಸಾವು | **4.71** ಲಕ್ಷ ಗಾಯಾಳುಗಳು

ಬೆಂಗಳೂರಿನ ಸ್ಥಿತಿ



ದೆಹಲಿ, ಬೆಂಗಳೂರು, ಜಬಲ್‌ಪುರ, ಹೈದರಾಬಾದ್, ಚೆನ್ನೈ, ಇಂದೋರ್, ಮಲಪ್ಪುರಂ, ಕೊಚ್ಚಿ, ಜೈಪುರ ಮತ್ತು ಭೋಪಾಲ್
ದೇಶದಲ್ಲಾಗುವ ಒಟ್ಟು ರಸ್ತೆ ಅಪಘಾತಗಳ ಪೈಕಿ ಶೇ **46.34**ರಷ್ಟು ಅಪಘಾತ ಸಂಭವಿಸುವ ನಗರಗಳು

ಬೆಂಗಳೂರಿನಲ್ಲಿ...

- ಮಳೆ ಅಥವಾ ಮಂಜು ಬೀಳುವ ವಾತಾವರಣ ಇದ್ದ ಸಂದರ್ಭಕ್ಕಿಂತ ಶುಭ್ರ ಆಕಾಶ ಇರುವಾಗಲೇ ಅಪಘಾತಗಳು ಹೆಚ್ಚಾಗಿವೆ. 4,213 ಅಪಘಾತಗಳು ಆಗಿದ್ದರೆ, 755 ಸಾವು ಸಂಭವಿಸಿವೆ
- ಕುಡಿದು ವಾಹನ ಚಾಲನೆ ಮಾಡಿದ ಸಂದರ್ಭದಲ್ಲಿ ಒಟ್ಟು 129 ಅಪಘಾತಗಳು ಸಂಭವಿಸಿದ್ದು, 45 ಮಂದಿ ಮೃತಪಟ್ಟಿದ್ದಾರೆ
- ದ್ವಿಚಕ್ರ ವಾಹನಗಳ ಅಪಘಾತಗಳ ಸಂಖ್ಯೆಯೂ ಅಧಿಕವಾಗಿಯೇ ಇದೆ. ಇಂಥ ಒಟ್ಟು 2,175 ಅಪಘಾತಗಳು ಆಗಿದ್ದು, 467 ಮಂದಿ ಮೃತಪಟ್ಟಿದ್ದಾರೆ

ಅತಿ ವೇಗದ ಚಾಲನೆಯಲ್ಲೂ ಮುಂದು

4,290 ಒಟ್ಟು ಅಪಘಾತ | **776** ಸಾವು | **3,609** ಗಾಯಾಳುಗಳು

ಹುದ್ದೆಗಳ ಭರ್ತಿ ಕೆಇಎಯತ್ತ ಒಲವು

ಒಂದನೇ ಪುಟದಿಂದ...

‘ಕಳೆದ ಎರಡು ವರ್ಷಗಳಲ್ಲಿ ಸುಮಾರು 9,500 ಹುದ್ದೆಗಳ ಭರ್ತಿಗೆ ಯಶಸ್ವಿಯಾಗಿ ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯಾ ಇಲಾಖೆಗಳಿಗೆ ನೀಡಲಾಗಿದೆ. ಈ ನೇಮಕಾತಿ ಸಂದರ್ಭದಲ್ಲಿ ಅಂದಾಜು 22.50 ಲಕ್ಷ ಮಂದಿ ಅರ್ಜಿ ಸಲ್ಲಿಸಿ, ಪರೀಕ್ಷಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, ಅದರ ನಿರ್ವಹಣೆಯನ್ನು ವ್ಯವಸ್ಥಿತವಾಗಿ, ಯಾವುದೇ ವಿವಾದ ಇಲ್ಲದೆ ಮಾಡಿ ಮುಗಿಸಲಾಗಿದೆ. ಕೆಲವು ಇಲಾಖೆಗಳಲ್ಲಿನ ಖಾಲಿ ಹುದ್ದೆಗಳಿಗೆ ನಡೆಸಿದ ನೇಮಕಾತಿಯ ಫಲಿತಾಂಶವನ್ನು ಕೇವಲ ಹತ್ತು ದಿನಗಳಲ್ಲೇ ನೀಡಲಾಗಿದೆ’ ಎಂದು ತಿಳಿಸಿದರು.

‘ಪರೀಕ್ಷೆ ಮುಗಿದ ತಕ್ಷಣ ಒಎಂಆರ್ ಶೀಟ್‌ಗಳನ್ನು ಸ್ಕ್ಯಾನ್ ಮಾಡಿ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುತ್ತದೆ. ಯಾರ ಒಎಂಆರ್ ಶೀಟ್ ಅನ್ನು ಯಾರು ಬೇಕಾದರೂ ನೋಡಬಹುದು. ಇದರಿಂದ ಒಎಂಆರ್ ಶೀಟ್ ತಿದ್ದುತ್ತಾರೆ ಎನ್ನುವ ಅನುಮಾನಗಳಿಗೆ ತಡೆ ಬಿದ್ದಂತಾಗಿದೆ. ಪರೀಕ್ಷಾ ನಂತರದ ಯಾವುದೇ ಅನುಮಾನಗಳಿಗೆ ಎಡೆ ಮಾಡಿಕೊಡಬಾರದೆಂಬ ಕಾರಣಕ್ಕೆ ಸ್ಕ್ಯಾನ್ ಪ್ರಕ್ರಿಯೆಯನ್ನು ಆದಷ್ಟು ಬೇಗ ಮುಗಿಸಲು ಬೆಂಗಳೂರು, ಕಲಬುರಗಿ, ಧಾರವಾಡ, ದಾವಣಗೆರೆ, ಮೈಸೂರಿನಲ್ಲಿ ಸ್ಕ್ಯಾನಿಂಗ್ ಕೇಂದ್ರಗಳನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲಾಮಟ್ಟದಲ್ಲಿ ಇಂತಹ ಕೇಂದ್ರಗಳನ್ನು ಮಾಡುವ ಬಗ್ಗೆಯೂ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಅಲ್ಲದೆ, ನೇಮಕಾತಿ ಪರೀಕ್ಷೆಗಳಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಉತ್ತರಿಸದೇ ಇರುವ ಪ್ರಶ್ನೆಗಳಿಗೆ ಕಡ್ಡಾಯವಾಗಿ 5ನೇ ವೃತ್ತವನ್ನು ಶೇಡ್ ಮಾಡುವ ವ್ಯವಸ್ಥೆ ಜಾರಿ ಮಾಡಲಾಗಿದೆ. ಆ ಮೂಲಕ, ಪರೀಕ್ಷಾ ನಂತರದ ಅಕ್ರಮಗಳಿಗೆ ಕಡಿವಾಣ ಹಾಕುವುದರ ಜತೆಗೆ ಪಾರದರ್ಶಕತೆಗೆ ಒತ್ತು ಕೊಟ್ಟಂತಾಗಿದೆ’ ಎಂದರು.

‘ನೈಜ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸುವ ಫೇಶಿಯಲ್ ರೆಕಗ್ನಿಷನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ತಂತ್ರಜ್ಞಾನವನ್ನು ನೇಮಕಾತಿ ಪರೀಕ್ಷೆ ಮತ್ತು ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಸಂದರ್ಭದಲ್ಲಿ ಬಳಕೆ ಮಾಡಲಾಗುತ್ತಿದೆ. ಈ ಪ್ರಕ್ರಿಯೆಯಿಂದ ಯಾರದ್ದೋ ಪರೀಕ್ಷೆಯನ್ನು ಬೇರೊಬ್ಬರು ಬರೆಯುವಂತಹ ಸನ್ನಿವೇಶಗಳಿಗೆ ಲಗಾಮು ಬೀಳಲಿದೆ. ಎಲ್ಲ ಹಂತಗಳಲ್ಲಿ ಪಾರದರ್ಶಕತೆ ಕಾಯ್ದುಕೊಂಡು ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರಿಂದ ವಿಶ್ವಾಸಾರ್ಹತೆ ಗಳಿಸಲು ಸಾಧ್ಯವಾಗಿದೆ’ ಎಂದು ಅವರು ವಿವರಿಸಿದರು.

‘ಕೆಪಿಎಸ್‌ಸಿ ಕಾಯಕಲ್ಪ: ಶೀಘ್ರ ವರದಿ’

ಒಂದನೇ ಪುಟದಿಂದ...

ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮುಖ್ಯಸ್ಥರು ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರ ಜೊತೆಗೆ ಚರ್ಚೆ ನಡೆಸಿರುವ ಸಮಿತಿ, ಪರೀಕ್ಷೆ ಹೇಗೆ ನಡೆಸುತ್ತೀರಿ? ಈ ಪ್ರಕ್ರಿಯೆಯಲ್ಲಿ ಗೌಪ್ಯತೆ ಕಾಪಾಡುವುದು ಹೇಗೆ? ನಿಗದಿತ ಸಮಯದಲ್ಲಿ ಫಲಿತಾಂಶ, ಪ್ರಶ್ನೆಪತ್ರಿಕೆ ತಯಾರಿ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಂಡಿದೆ.

ಅಲ್ಲದೆ, ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿಯಲ್ಲಿ ಅನುಸರಿಸುವ ಪದ್ಧತಿ ಹಾಗೂ ಕೆಪಿಎಸ್‌ಸಿಯಲ್ಲಿನ ಸಮಸ್ಯೆಗಳ ಕುರಿತಂತೆ ನಿವೃತ್ತ ಮುಖ್ಯ ಕಾರ್ಯದರ್ಶಿಗಳಾದ ಎಸ್.ವಿ. ರಂಗನಾಥ್, ರವಿಕುಮಾರ್ ಮತ್ತು ವಂದಿತಾ ಶರ್ಮಾ ಅವರಿಂದ ಮಾಹಿತಿ ಪಡೆದಿದೆ. ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಮತ್ತು ಕೆಪಿಎಸ್‌ಸಿಯ ಹಿಂದಿನ ಕಾರ್ಯದರ್ಶಿ ಸತ್ಯವತಿ ಯವರು ತಮ್ಮ ಅನಿಸಿಕೆ ಮತ್ತು ಶಿಫಾರಸುಗಳನ್ನು ಸಮಿತಿಗೆ ಲಿಖಿತವಾಗಿ ನೀಡಿದ್ದಾರೆ. ಕೆಪಿಎಸ್‌ಸಿಯಲ್ಲಿ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದ ದಿನಗಳಲ್ಲಿ ಅದರ ಸುಧಾರಣೆಗೆ ಯತ್ನಿಸಿದ್ದ ಸುಭೋದ್ ಯಾದವ್ ಮತ್ತು ವಿಕಾಸ್ ಕಿಶೋರ್ ಸುರಳ್ಕರ್ ಅವರನ್ನು ಕರೆಸಿಕೊಂಡು ಚರ್ಚೆ ನಡೆಸಿದ ಬಳಿಕ ಈ ಹಿಂದೆ ಕೆಪಿಎಸ್‌ಸಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಮತ್ತು ಹಾಲಿ ಅಧ್ಯಕ್ಷರ ಜೊತೆಗೂ ಮಾತುಕತೆ ನಡೆಸಿ ವರದಿಗೆ ಅಂತಿಮ ರೂಪ ನೀಡಲು ಸಮಿತಿ ನಿರ್ಧರಿಸಿದೆ.

ಅಖಿಲೇಶ್ ವಿರುದ್ಧ ವಿಎಚ್‌ಪಿ ವಾಗ್ದಾಳಿ

ನವದೆಹಲಿ (ಪಿಟಿಐ): ‘ರಾಜ್ಯದ ಜನರು ಅಧಿಕಾರ ನೀಡಿದರೆ, ಅಯೋಧ್ಯೆಯನ್ನು ‘ಸಿಯಾರಾಮ್ ಧಾಮ್’ ಆಗಿ ಪರಿವರ್ತಿಸುವುದಾಗಿ ಹೇಳಿಕೆ ನೀಡಿದ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ವಿರುದ್ಧ ವಿಶ್ವ ಹಿಂದೂ ಪರಿಷತ್ ಕಿಡಿಕಾರಿದೆ.

‘ಅವರ ಹಿಂದಿನ ಸರ್ಕಾರದ ಆಡಳಿತದ ದಾಖಲೆಗಳನ್ನು ಗಮನಿಸಿದರೆ, ಅಖಿಲೇಶ್ ಮಾತುಗಳು ವಿಶ್ವಾಸವನ್ನು ಮೂಡಿಸುವುದಿಲ್ಲ’ ಎಂದಿದೆ.

‘ಅಖಿಲೇಶ್ ಮುಖ್ಯಮಂತ್ರಿಯಾಗಿದ್ದಾಗ ಅಯೋಧ್ಯೆಯು ಮರೆತುಹೋದ ಹಳ್ಳಿಯಂತಿತ್ತು. ಗುಂಡಿಬಿದ್ದ ರಸ್ತೆಗಳು, ಶಿಥಿಲಗೊಂಡ ಮೂಲ ಸೌಕರ್ಯಗಳು ಎದ್ದುಕಾಣುತ್ತಿದ್ದವು. ಅವರ ತಂದೆ ಮುಲಾಯಂ ಸಿಂಗ್ ಯಾದವ್ ಮುಖ್ಯಮಂತ್ರಿಯಾಗಿದ್ದ ವೇಳೆ ಕರಸೇವಕರ ಮೇಲೆ ಗುಂಡಿನ ದಾಳಿ ನಡೆಸಲಾಗಿತ್ತು. ಈಗ ಅವರು ‘ಸಿಯಾರಾಮ್ ಧಾಮ್’ ಮಾಡುವುದಾಗಿ ಹೇಳುತ್ತಿದ್ದು, ಅವರ ಹಿಂದಿನ ದಾಖಲೆಗಳನ್ನು ಗಮನಿಸಿದರೆ, ಏನೂ ಮಾಡಿಲ್ಲ ಎಂಬುದನ್ನು ಅರ್ಥ ಮಾಡಿ ಕೊಳ್ಳಬಹುದು’ ಎಂದಿದ್ದಾರೆ.

ಕುರುಬ ಸಮಾಜ ಎಸ್‌ಟಿ ಪಟ್ಟಿಗೆ ತರಲು ಪ್ರಯತ್ನ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ‘ಕುರುಬ ಸಮಾಜವನ್ನು ಪರಿಶಿಷ್ಟ ಪಂಗಡ (ಎಸ್‌ಟಿ) ಪಟ್ಟಿಗೆ ಸೇರಿಸಬೇಕು ಎನ್ನುವ ಪ್ರಸ್ತಾವ ರಾಜ್ಯದಿಂದ ಕೇಂದ್ರಕ್ಕೆ ಸಲ್ಲಿಕೆಯಾಗಿದೆ. ಆದಷ್ಟು ಬೇಗನೆ ಈ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ನಗರದಲ್ಲಿ ಕುರುಬ ಸಮಾಜ ಅಭಿವೃದ್ಧಿ ವೇದಿಕೆ– ಕರ್ನಾಟಕದಿಂದ ಭಾನುವಾರ ಏರ್ಪಡಿಸಿದ್ದ ರಾಜ್ಯಸಭೆ ನೂತನ ಸದಸ್ಯ ಪ್ರೊ.ಮಾ.ನಾಗರಾಜ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

‘ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಕೆಲವು ಸ್ಪಷ್ಟನೆ ಅಗತ್ಯವಿತ್ತು. ಅದು ಬಂದಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಕ್ರಮಕ್ಕೆ ಸೂಚಿಸಲಾಗಿದೆ. ಆದರೆ, ಸುಪ್ರೀಂ ಕೋರ್ಟ್‌ನ ಕೆಲ ನಿಬಂಧನೆಗಳು ಮತ್ತು ಸಂವಿಧಾನ ತಿದ್ದುಪಡಿಯ ಅಗತ್ಯ ಇದೆ. ಇದೇ ಇಲಾಖೆಯಿಂದ ಸದ್ಯ ದೇಶದಲ್ಲಿ ಜಾತಿಗಣತಿ ಕಾರ್ಯ ನಡೆಯುತ್ತಿದೆ. ಈ ಕಾರಣದಿಂದ ಪ್ರಸ್ತಾವ ಬಾಕಿ ಉಳಿದಿದೆ’ ಎಂದು ಹೇಳಿದರು.

ಸಮಾರಂಭದಲ್ಲಿ ಭಾಗವಹಿಸಿದ್ದ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ, ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ, ಮಾಜಿ ಸಭಾಪತಿ ರಘುನಾಥರಾವ್ ಮಲ್ಕಾಪುರೆ ಹಾಗೂ ಸಮಾಜದ ಮುಖಂಡರು ಮಾತನಾಡಿ, ‘ಕುರುಬ ಸಮಾಜವನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಬೇಡಿಕೆ ಈಡೇರಿಸಬೇಕು. ಬೇಡಿಕೆ ಈಡೇರಿಸಿದರೆ ಕುರುಬರೆಲ್ಲರೂ ಬಿಜೆಪಿಯನ್ನು ಬೆಂಬಲಿಸುತ್ತಾರೆ’ ಎಂದು ಹೇಳಿದರು.

ಬಿಜೆಪಿ ವಿರುದ್ಧ ಅಖಿಲೇಶ್ ಕಿಡಿ

ಪ್ರಯಾಗರಾಜ್ (ಉತ್ತರ ಪ್ರದೇಶ) (ಪಿಟಿಐ): ‘ಬಿಜೆಪಿಯು ಧರ್ಮದ ಮುಖವಾಡ ಹಾಕಿಕೊಂಡು ದೇವರ ಕಾಣಿಕೆಯನ್ನು ದೋಚಿದೆ’ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

‘ಸಮಾಜವಾದಿ ವ್ಯಕ್ತಿಗಳು ಸನಾತನ ಧರ್ಮ ರಕ್ಷಿಸುವ ಉದ್ದೇಶ ಹೊಂದಿದ್ದಾರೆ. ಆದರೆ, ಇದೇ ಧರ್ಮದ ಸೋಗಿನಲ್ಲಿ ದೊಡ್ಡ ಮಟ್ಟದ ಅವ್ಯವಹಾರ ನಡೆಸಲಾಗಿದೆ’ ಎಂದು ದೂರಿದ್ದಾರೆ. ‘ಬಿಜೆಪಿಯು ತನ್ನ ಪಕ್ಷದ ಹೆಸರನ್ನು ಭಾಚ್‌ಪಾ’ ಎಂದು ಬದಲಾಯಿಸಿಕೊಳ್ಳುವುದು ಸೂಕ್ತ. ಭಾಚ್‌ಪಾ ಎಂದರೆ ಚತುರಾಯಿ (ಜಾಣತನ). ಚಂದಾ (ದೇಣಿಗೆ), ಚೋರಿ (ಕಳವು), ಹಾಗೂ ಚಾಲ್‌ಬಾಜಿ (ವಂಚನೆ)’ ಎಂದು ಅಖಿಲೇಶ್ ವ್ಯಂಗ್ಯವಾಡಿದ್ದಾರೆ.

ಕೃಷ್ಣ ಜನ್ಮಭೂಮಿ ವಿಮೋಚನೆ– ಬಹಿರಂಗವಾಗಿ ಬೆಂಬಲಿಸಿ

ಹಾಥರಾಸ್ (ಉತ್ತರ ಪ್ರದೇಶ) (ಪಿಟಿಐ): ‘ಮಥುರಾದ ಶ್ರೀ ಕೃಷ್ಣ ಜನ್ಮಭೂಮಿ ಮುಕ್ತಿ ಹೋರಾಟವನ್ನೂ ಬಹಿರಂಗವಾಗಿ ಬೆಂಬಲಿಸಲು ಸಮಾಜವಾದಿ ಪಕ್ಷವು ಮುಂದಾಗಲಿ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಖಿಲೇಶ್ ಯಾದವ್ ಅವರಿಗೆ ಸವಾಲೆಸಿದಿದ್ದಾರೆ.

‘ಅಯೋಧ್ಯೆಯನ್ನು ಈಗಾಗಲೇ ಶ್ರೀರಾಮನ ಭಕ್ತರ ನಗರವಾಗಿ ಮಾರ್ಪಡಿಸಲಾಗಿದೆ. ಆ ಬಗ್ಗೆ ಚಿಂತಿಸಬೇಡಿ. ಒಮ್ಮೆ ಶ್ರೀರಾಮನ ದೇವಸ್ಥಾನಕ್ಕೆ ಭೇಟಿ ನೀಡಿ, ನಿಮಗೆ ಸ್ವಲ್ಪ ಜ್ಞಾನ ಲಭಿಸಲಿದೆ. ಅದೇ ರೀತಿ, ಕೃಷ್ಣ ಜನ್ಮಭೂಮಿಯ ಮುಕ್ತಿ ಹೋರಾಟವನ್ನೂ ಬೆಂಬಲಿಸಿ’ ಎಂದು ಸಾರ್ವಜನಿಕ ಸಭೆಯಲ್ಲಿ ಕರೆ ನೀಡಿದ್ದಾರೆ.

ಬಂಧಿತರ ಮನೆಗಳಲ್ಲಿ ಶೋಧ

ಒಂದನೇ ಪುಟದಿಂದ...

ಆರೋಪಿಗಳಿಂದ ಇನ್ನಷ್ಟು ಮಾಹಿತಿ ಕಲೆಹಾಕಲು ಆರೋಪಿಗಳ ಕಸ್ಟಡಿ ಅವಧಿಯನ್ನು ವಿಸ್ತರಿಸಲು ಸೋಮವಾರ ನ್ಯಾಯಾಲಯದ ಮುಂದೆ ಮನವಿ ಮಾಡಲು ಪೊಲೀಸರು ನಿರ್ಧರಿಸಿದ್ದಾರೆ.

‘ಅವಿನಾಶ್ ಶುಕ್ಲಾ, ಅನುಕಲ್ಪ್ ಮಿಶ್ರಾ, ಲವಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೆ, ರಾಮಶಂಕರ್ ಮಿಶ್ರಾ, ಶುಭಾಂಶು ಶ್ರೀವಾತ್ಸವ ಹಾಗೂ ರಾಮಶಂಕರ್ ಯಾದವ್ ಬಂಧಿತರು. ಆರೋಪಿಗಳೆಲ್ಲರೂ ದೇವಾಲಯಕ್ಕೆ ಬರುತ್ತಿದ್ದ ದೇಣಿಗೆಯನ್ನು ಲೆಕ್ಕ ಹಾಕುವ ಹಾಗೂ ಆಭರಣಗಳ ಮೇಲ್ವಿಚಾರಣೆಯ ಹೊಣೆ ಹೊತ್ತವರಾಗಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಗಳಿಂದ ಇದುವರೆಗೂ ವಿದೇಶಿ ಕರೆನ್ಸಿ ಸೇರಿದಂತೆ ₹80 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದ್ದು, ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ನ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

‘ಸುಪ್ರೀಂ ನೇತೃತ್ವದಲ್ಲಿ ತನಿಖೆಯಾಗಲಿ’

ಒಂದನೇ ಪುಟದಿಂದ...

‘ರಾಜಕೀಯ ಲಾಭಕ್ಕಾಗಿ ಜನರ ನಂಬಿಕೆ ಹಾಗೂ ಭಾವನೆಗಳನ್ನು ದುರುಪಯೋಗಪಡಿಸಿಕೊಂಡಿರುವ ಕೆಲವರು ಸಂಘಟಿತ ಆರ್ಥಿಕ ವಂಚನೆ ಮಾಡಿದ್ದಾರೆ. ಶ್ರೀ ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಟ್ರಸ್ಟಿಗಳು ಸಂಘ ಪರಿವಾರದ ನಾಯಕರ ಜೊತೆ ನೇರವಾದ ಸಂಪರ್ಕ ಹೊಂದಿದ್ದಾರೆ’ ಎಂದು ಅವರು ಆರೋಪಿಸಿದ್ದಾರೆ.

‘ಜನರ ಭಕ್ತಿಯನ್ನು ದುರುಪಯೋಗಪಡಿಸಿಕೊಂಡು ಸಂಗ್ರಹಿಸಿದ ಹಣವು ಎಲ್ಲಿಗೆ ಹೋಗಿದೆ ಎಂದು ಉತ್ತರಿಸುವ ಹೊಣೆಗಾರಿಕೆಯು ದೇವಾಲಯವನ್ನು ಮುನ್ನಡೆಸುವವರ ಮೇಲಿದೆ’ ಎಂದು ವಿಜಯನ್ ಹೇಳಿದ್ದಾರೆ.

ಸಿಆರ್‌ಪಿಎಫ್: 15 ವರ್ಷಗಳ ಬಳಿಕ ಮೊದಲ ಬಡ್ತಿ

ನವದೆಹಲಿ (ಪಿಟಿಐ): ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) 250ಕ್ಕೂ ಹೆಚ್ಚು ಅಧಿಕಾರಿಗಳು 14ರಿಂದ 15 ವರ್ಷಗಳ ಕಾಯುವಿಕೆ ಬಳಿಕ ತಮ್ಮ ಮೊದಲ ಬಡ್ತಿ ಪಡೆದುಕೊಂಡಿದ್ದಾರೆ.

ಸಹಾಯಕ ಕಮಾಂಡೆಂಟ್ ಶ್ರೇಣಿಯ (ಎಸಿ) 263 ಅಧಿಕಾರಿಗಳನ್ನು ಉಪ ಕಮಾಂಡೆಂಟ್‌ಗಳಾಗಿ (ಡಿಸಿ) ಬಡ್ತಿ ನೀಡುವ ಆದೇಶವನ್ನು ಸಿಆರ್‌ಪಿಎಫ್ ಹೊರಡಿಸಿತು. ‘ಇದು ಮಹತ್ವದ ಬೆಳವಣಿಗೆಯಾಗಿದೆ. 5 ವರ್ಷಗಳಲ್ಲಿ ಸಿಗಬೇಕಿದ್ದ ಬಡ್ತಿಗಾಗಿ 15 ವರ್ಷ ಕಾದಿರುವ ಅಧಿಕಾರಿಗಳಿಗೆ ಇದು ನೈತಿಕ ಸ್ಥೈರ್ಯ ತುಂಬುತ್ತದೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಇದು ಮಹತ್ವದ ಮೈಲಿಗಲ್ಲು ಎಂದು ಸಿಆರ್‌ಪಿಎಫ್ ತನ್ನ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ. ಹಿರಿತನ, ಖಾಲಿ ಹುದ್ದೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ಬಡ್ತಿ ವಿಳಂಬವಾಗಿತ್ತು. ಸುಪ್ರೀಂ ಕೋರ್ಟ್ ಆದೇಶದ ಬಳಿಕ ಬಡ್ತಿ ನೀಡಲಾಗಿದೆ.
~~~~~~~

ಬೇಡದ ಆಲೋಚನೆ ಯಾಕೆ?

ಸಮಾಧಾನ

ಡಾ. ಡಿ.ಎಂ.ಹೆಗಡೆ, ಆಪ್ತಸಮಾಲೋಚಕ

• ನಾನು ಸೆಕೆಂಡ್ ಪಿಯುಸಿ ಸೈನ್ಸ್ ಓದುತ್ತಿದ್ದೇನೆ. ಪಾಲಕರಿಗೆ ನಾನು ಡಾಕ್ಟರ್ ಆಗಬೇಕೆಂಬ ಆಸೆ. ಆದರೆ ನನಗೆ ಅದರಲ್ಲಿ ಅಷ್ಟೇನೂ ಆಸಕ್ತಿ ಇಲ್ಲ. ಹಾಗೆಂದು ಅವರಲ್ಲಿ ಹೇಳಲು ಹಿಂಜರಿಕೆ. ನನಗೆ ಈಗೀಗ ಓದಿದ್ದು ನೆನಪಿರುವುದಿಲ್ಲ. ಕ್ಲಾಸಿನಲ್ಲಿ ಕಲಿಸುವುದು ಅರ್ಥವಾಗುವುದಿಲ್ಲ. ನನಗೆ ಮಾಡ್ ಆಗಿರಲು, ಫ್ಯಾಷನ್ ಮಾಡಿಕೊಳ್ಳಲು ಇಷ್ಟ. ಸರಿಯಾಗಿ ನಿದ್ರೆ ಬರುವುದಿಲ್ಲ. ಕೆಟ್ಟ ಕನಸುಗಳು ಬೀಳುತ್ತವೆ. ಇಡೀ ದಿನ ನಿದ್ರೆಯ ಮಂಪರು ಇರುತ್ತದೆ. ಕೆಲವೊಮ್ಮೆ ನನ್ನ ಹೃದಯ ವೇಗವಾಗಿ ಹೊಡೆದುಕೊಳ್ಳುತ್ತದೆ. ನನಗೆ ಭಯವಾಗುತ್ತದೆ. ಪಾಲಕರು ಯಾವಾಗಲೂ ಟೆನ್ಸ್ ಆಗಿರುತ್ತಾರೆ. ನನ್ನ ವಿಷಯಕ್ಕೆ ಅವರಲ್ಲಿ ಜಗಳವಾಗುತ್ತದೆ. ಅವರದ್ದು ಲವ್ ಮ್ಯಾರೇಜ್ ಅಂತೆ. ಈಗಂತೂ ಅವರಲ್ಲಿ ಲವ್ ಉಳಿದಿಲ್ಲ. ನನಗೆ ಯಾವುದರಲ್ಲಿಯೂ ಆಸಕ್ತಿ ಇಲ್ಲ. ಹೋಟೆಲ್ ಫುಡ್ ತಿಂದರೆ ಮಜವಾಗಿರುತ್ತದೆ. ಎಲ್ಲದರಲ್ಲೂ ಗೊಂದಲವಾಗಿದೆ. ದಾರಿ ತೋರಿಸಿ.

ಪದ್ಮಪ್ರಿಯಾ ಕುಲಶೇಖರ್, ಮಂಗಳೂರು

ನಿನಗೆ ವೈದ್ಯಕೀಯ ಓದಲು ಇಷ್ಟವಿಲ್ಲವಾದರೆ ಹಿಂಜರಿಯದೆ ಅದನ್ನು ಮೊದಲು ಪಾಲಕರಲ್ಲಿ ಹೇಳಬೇಕು. ಮಕ್ಕಳು ಮತ್ತು ಪಾಲಕರ ಮಧ್ಯೆ ಗುಟ್ಟುಗಳು ಇರಬಾರದು. ನಿನ್ನಿಂದ ತಪ್ಪಾದರೆ ಅವರು ಸಹನೆಯಿಂದ ಕೇಳಬೇಕು. ಸರಿಯಾದದ್ದನ್ನು ತಿಳಿಸಿ ಹೇಳಬೇಕು.

ಜಗತ್ತಿನಲ್ಲಿ ಬಹಳಷ್ಟು ಕೆಟ್ಟದ್ದು ಆಗುತ್ತಿರುತ್ತದೆ. ಅದೆಲ್ಲ ನಿನಗೂ ಆಗುತ್ತದೆ ಎಂದೆಲ್ಲ ಅಂದುಕೊಳ್ಳಬಾರದು. ಬೇಡದ ಆಲೋಚನೆಗಳಿಂದ ಮನಸ್ಸು ಜರ್ಝರಿತವಾಗುತ್ತದೆ, ಗೊಂದಲಕ್ಕೊಳಗಾಗುತ್ತದೆ. ಹಾಗಾಗಿ, ಏನೇನೋ ಕೆಟ್ಟ ಕನಸುಗಳು ಬೀಳುತ್ತವೆ. ಸರಿಯಾಗಿ ನಿದ್ರೆ ಬರುವುದಿಲ್ಲ. ನಿನ್ನ ವಯೋಸಹಜವಾದ ಭಾವನೆಗಳನ್ನು ನಿಭಾಯಿಸುವುದು ನಿನಗೆ ಕಷ್ಟವಾಗುತ್ತಿದೆ. ಅದರಿಂದ ಗಾಬರಿಯಾಗುತ್ತದೆ, ಹೃದಯದ ಬಡಿತ ವೇಗವಾದಂತೆ ಅನ್ನಿಸುತ್ತದೆ. ಅಷ್ಟಕ್ಕೆಲ್ಲ ಹೆದರಬಾರದು. ವಿಟಮಿನ್ ಟೆಸ್ಟ್ (ರಕ್ತ ಪರೀಕ್ಷೆ) ಮಾಡಿಸು.

ನಿನ್ನ ಪಾಲಕರ ಮನಸ್ತಾಪದ ಬಗ್ಗೆ ನೀನು ಅತಿಯಾಗಿ ಆಲೋಚನೆ ಮಾಡುತ್ತಿರುವೆ. ಅವರ ಬದುಕಿನ ಏರಿಳಿತಗಳ ಬಗ್ಗೆ ನೀನು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ನಿನಗೆ ಯಾವುದೆಲ್ಲ ವಿಷಯಗಳಲ್ಲಿ ಗೊಂದಲವಿದೆಯೋ ಅವನ್ನೆಲ್ಲ ಅಮ್ಮನ ಹತ್ತಿರ ಹೇಳು. ನೀನು ಅಮ್ಮನಿಂದ ಪ್ರೀತಿಯನ್ನು ನಿರೀಕ್ಷಿಸುತ್ತಿರುವುದನ್ನು ಬಾಯಿಬಿಟ್ಟು ಹೇಳು. ಅವರು ಖಂಡಿತವಾಗಿಯೂ ಸಾಂತ್ವನ ಹೇಳುತ್ತಾರೆ.

ಇನ್ನು ನಿನ್ನ ದಿನಚರಿಯಲ್ಲಿ ಒಂದಿಷ್ಟು ಬದಲಾವಣೆ ಮಾಡಿಕೊಳ್ಳಬೇಕು. ಮೊಬೈಲ್ ನೋಡುವುದನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು. ಸೋಷಿಯಲ್ ಮೀಡಿಯಾಗಳಿಂದ ದೂರವಿದ್ದಷ್ಟೂ ಒಳ್ಳೆಯದು. ಪ್ರತಿದಿನ ಬೆಳಿಗ್ಗೆ ಆರಕ್ಕೆಲ್ಲಾ ಎದ್ದುಬಿಡಬೇಕು. ರಾತ್ರಿ ಎಂಟೂವರೆಯೊಳಗೆ ಊಟ ಮುಗಿಸಿಕೊಂಡು, ಹತ್ತೂವರೆಯಷ್ಟರಲ್ಲಿ ಮಲಗಬೇಕು. ದೇಹ ಹಾಗೂ ಮನಸ್ಸು ನಿರಾಳವಾಗಿಯೂ ಆರೋಗ್ಯಪೂರ್ಣವಾಗಿಯೂ ಇದ್ದಾಗ, ಯಾವುದೇ ಕೆಲಸವನ್ನು ಚೆನ್ನಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅನುಕೂಲವಿದ್ದರೆ ಬೆಳಿಗ್ಗೆ ಹಾಗೂ ಸಾಯಂಕಾಲ ಎರಡು ಸಲ ಸ್ನಾನ ಮಾಡಬೇಕು. ಸಾಕಷ್ಟು ನೀರು ಕುಡಿಯಬೇಕು. ಹಾಲು ಕುಡಿಯಬೇಕು. ಹಣ್ಣು, ಮೊಟ್ಟೆ, ತರಕಾರಿ ತಿನ್ನಬೇಕು. ಜಂಕ್‌ಫುಡ್ ತ್ಯಜಿಸಿದರೆ ತುಂಬಾ ಒಳ್ಳೆಯದು. ವಾಕಿಂಗ್, ಜಂಪಿಂಗ್, ಡಾನ್ಸ್, ವ್ಯಾಯಾಮ, ಸೈಕ್ಲಿಂಗ್ ಮಾಡಬೇಕು. ಒಳ್ಳೆಯ ನಿದ್ರೆ ಬಂದರೆ ದಿನವಿಡೀ ಒಳ್ಳೆಯ ಮೂಡ್ ಇರುತ್ತದೆ.

ಇಷ್ಟಕ್ಕೂ ಮೂರು ತಿಂಗಳಲ್ಲಿ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬರದಿದ್ದರೆ ತಜ್ಞ ಮಾನಸಿಕ ವೈದ್ಯರನ್ನಾಗಲೀ ಆಪ್ತಸಮಾಲೋಚಕರನ್ನಾಗಲೀ ಭೇಟಿ ಮಾಡುವುದು ಒಳ್ಳೆಯದು.

ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯು ಆಯೋಜಿಸುವ ಕೌಶಲ ತರಬೇತಿಯಲ್ಲಿ ಪಾಲ್ಗೊಂಡಿದ್ದ ಯುವಜನ.
ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಜೆನ್‌ನೆಕ್ಸ್ಟ್ ಕೌಶಲ್ಯಾನ್

ಹೊಸ ತಲೆಮಾರಿಗೆ ನವ ತರಬೇತಿ

ವಿದ್ಯಾಭ್ಯಾಸದ ನಂತರ ವೃತ್ತಿಬದುಕಿಗೆ ಅಣಿಯಾಗಲು ನೆರವಾಗುವಂತೆ, ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯು ಯುವಜನರಿಗೆ 'ಜೆನ್‌ನೆಕ್ಸ್ಟ್ ಕೌಶಲ್ಯಾನ್' ಎಂಬ ತರಬೇತಿ ನೀಡುತ್ತದೆ. ಈ ಕುರಿತ ಮಾಹಿತಿ ಇಲ್ಲಿದೆ.

• ಗಾಣಧಾಳು ಶ್ರೀಕಂಠ

'ಸಂವಹನ ಕೌಶಲ, ಸಮಯ ನಿರ್ವಹಣೆ, ಟೀಮ್ ವರ್ಕ್, ವಿಷಯ ಪ್ರಸ್ತುತಿಯ ಕೌಶಲವನ್ನು ತರಬೇತಿಯಲ್ಲಿ ಕಲಿತೆ. ಕ್ಷೇತ್ರ ಭೇಟಿಯು ಹೊಸ ಜ್ಞಾನದ ಲೋಕವನ್ನು ತೆರೆದಿಟ್ಟಿತು. ಭವಿಷ್ಯದ ವೃತ್ತಿಯ ಬಗ್ಗೆ ಒಂದು ಸ್ಪಷ್ಟತೆಯಂತೂ ಸಿಕ್ಕಿದೆ' – ಚಾಮರಾಜನಗರದ ಬಿ.ಕಾಂ ಪದವೀಧರೆ ಸಿಂಧು ಅವರ ಈ ಮಾತುಗಳಲ್ಲಿ ವೃತ್ತಿಬದುಕಿಗೆ ಅಣಿಯಾಗುವ ಆತ್ಮವಿಶ್ವಾಸ ಕಾಣಿಸುತ್ತದೆ.

***

'ಚಟುವಟಿಕೆಗಳ ಮೂಲಕ ಕಲಿತ ಪಾಠವು ಭವಿಷ್ಯದಲ್ಲಿ ಜೀವನಕ್ಕೆ ದಾರಿ ತೋರಿದೆ. ಕೊರತೆಯಾಗಿದ್ದ ಭಾಷಾ ಸಂವಹನ ಸುಧಾರಣೆಯೂ ಸಾಧ್ಯವಾಯಿತು. ಓದಿನ ನಂತರದ ವ್ಯಕ್ತಿತ್ವ ವಿಕಸನಕ್ಕೆ ಇದೊಂದು ಅದ್ಭುತ ವೇದಿಕೆ' – ಇದು, ಎಂ.ಎಸ್ಸಿ ಪದವೀಧರರಾದ ಹುಣಸೂರಿನ ಸಂಜಯ್ ಅವರ ಹೇಳಿಕೆ.

ಮೈಸೂರಿನ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ಸಂಸ್ಥೆ ನಡೆಸುತ್ತಿರುವ 'ಜೆನ್‌ನೆಕ್ಸ್ಟ್ – ಕೌಶಲ್ಯಾನ್' ತರಬೇತಿಯ ಬಗ್ಗೆ ಅಲ್ಲಿ ಕಲಿಯುತ್ತಿರುವ ಅಭ್ಯರ್ಥಿಗಳ ಅನುಭವದ ಮಾತುಗಳಿವು. ಇವರಂತೆ ತರಬೇತಿ ಪಡೆಯುತ್ತಿರುವ 15ಕ್ಕೂ ಹೆಚ್ಚು ಯುವಕ–ಯುವತಿಯರಿಂದಲೂ ಇಂತಹದ್ದೇ ಆತ್ಮವಿಶ್ವಾಸದ ಮಾತುಗಳು ಕೇಳಿಬರುತ್ತವೆ.

ಓದು ಮುಗಿಸಿ ಉದ್ಯೋಗ ಅರಸುತ್ತಿರುವವರಿಗಾಗಿ ಈ ವಿಶೇಷ ಕೌಶಲ ಅಭಿವೃದ್ಧಿ ತರಬೇತಿಯನ್ನು ರೂಪಿಸಲಾಗಿದೆ. ಇನ್‌ಫೋಸಿಸ್ ಸಂಸ್ಥೆಯ ಸಹಯೋಗದಲ್ಲಿ ಒಂದು ತಿಂಗಳ ಅವಧಿಯ ವಸತಿಸಹಿತ ಉಚಿತ ತರಬೇತಿಯನ್ನು ನೀಡಲಾಗುತ್ತಿದೆ.

'ಪಿಯುಸಿ, ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ಮುಗಿಸಿರುವ 18ರಿಂದ 29 ವರ್ಷ ವಯಸ್ಸಿನ ಯುವಜನ ಈ ತರಬೇತಿಗೆ ಅರ್ಹರು.

> **'ಜೆನ್ ನೆಕ್ಸ್ಟ್ ಕೌಶಲ್ಯಾನ್' – ಯುವಜನರಿಗೆ ಮೌಲ್ಯಾಧಾರಿತ ವ್ಯಕ್ತಿತ್ವ, ಆತ್ಮವಿಶ್ವಾಸದ ಜೊತೆಗೆ ಉದ್ಯೋಗಾರ್ಹತೆ ರೂಪಿಸುವ ಜೀವನ ಕೌಶಲ ತರಬೇತಿ. ಈ ಸೌಲಭ್ಯವನ್ನು ಹೆಚ್ಚು ಮಂದಿ ಬಳಸಿಕೊಳ್ಳಬೇಕು.**
> **ಸವಿತಾ ಸುಳುಗೋಡು,** ಸಿಇಒ, ಎಸ್‌ವಿವೈಎಂ

ಇಲ್ಲಿ ವೃತ್ತಿ ಬದುಕಿಗೆ ಬೇಕಾದ ತರಬೇತಿಯ ಜೊತೆಗೆ, ಉದ್ಯೋಗ ದಕ್ಕಿಸಿಕೊಳ್ಳಲು ಅಗತ್ಯವಾದ ವ್ಯಕ್ತಿತ್ವವನ್ನೂ ರೂಪಿಸಲಾಗುತ್ತದೆ' ಎನ್ನುತ್ತಾರೆ ತರಬೇತಿ ವಿಭಾಗದ ಮುಖ್ಯಸ್ಥ ಮನೋಜ್ ಸೆಬಾಸ್ಟಿಯನ್.

ತರಬೇತಿ ಪ್ರಕ್ರಿಯೆ ಹೇಗೆ?

ಅಭ್ಯರ್ಥಿಗಳ ಸಾಮರ್ಥ್ಯ ಮತ್ತು ಅಗತ್ಯವನ್ನು ಮೊದಲ ಹಂತದಲ್ಲೇ ವಿಶ್ಲೇಷಿಸಿ, ಅವರಲ್ಲಿರುವ ಕೌಶಲವನ್ನು ಗುರುತಿಸಲಾಗುತ್ತದೆ. ಉಳಿದಂತೆ ಯಾವ ಕೌಶಲದ ಅಗತ್ಯವಿದೆ ಎಂದು ಗಮನಿಸಿ, ಅದಕ್ಕೆ ತಕ್ಕಂತೆ ತರಬೇತಿ ನೀಡಲಾಗುತ್ತದೆ. ಅಭ್ಯರ್ಥಿಯ ಸಂವಹನ, ಸಾಮರ್ಥ್ಯ ವೃದ್ಧಿಸುವ ಕೌಶಲವನ್ನು ಇಲ್ಲಿ ರೂಢಿಸಲಾಗುತ್ತದೆ.

'ಶಾಲಾ ಕಾಲೇಜುಗಳಲ್ಲಿ ಪಾಠವನ್ನು ಓದಿ ಕಲಿತಿರುತ್ತಾರೆ. ಇಲ್ಲಿ ಪಾಠದ ಆಚೆಗೆ ಮೌಲ್ಯಾಧಾರಿತ ಕೌಶಲಯುಕ್ತ ವ್ಯಕ್ತಿತ್ವವನ್ನು ರೂಪಿಸಲಾಗುತ್ತದೆ. ಇದರಲ್ಲಿ ಶೇ 70ರಷ್ಟು ಭಾಗ ಚಟುವಟಿಕೆ ಆಧಾರಿತ ತರಬೇತಿ ಇರುತ್ತದೆ. ಅಭ್ಯರ್ಥಿಯಲ್ಲಿ ಆತ್ಮವಿಶ್ವಾಸ ರೂಪುಗೊಳ್ಳುವಂತೆ ಚಟುವಟಿಕೆಗಳನ್ನು ರೂಪಿಸಲಾಗಿರುತ್ತದೆ' ಎನ್ನುತ್ತಾರೆ ಕೇಂದ್ರದ ಸಿಬ್ಬಂದಿ.

ಗ್ರಾಮೀಣ ಪ್ರದೇಶದ ಹಲವು ಯುವಜನರಿಗೆ ಇಂಗ್ಲಿಷ್ ಮಾತನಾಡುವುದು ಕಠಿಣ ಸವಾಲು. ಇದರಿಂದ ಎಷ್ಟೋ ಮಂದಿ ತಮ್ಮ ಮೇಲಿರುವ ನಂಬಿಕೆಯನ್ನೇ ಕಳೆದುಕೊಳ್ಳುತ್ತಾರೆ. ಮೊದಲಿಗೆ ಅಂಥ ಅಭ್ಯರ್ಥಿಗಳಿಗೆ, ಅವರಿಗೆ ತಿಳಿದಿರುವ ಅಲ್ಪಸ್ವಲ್ಪ ಇಂಗ್ಲಿಷ್ ಮೂಲಕವೇ ಮಾತನಾಡುವುದನ್ನು ಕಲಿಸಲಾಗುತ್ತದೆ. ಆ ಮೂಲಕ ಅವರಲ್ಲಿ ಕಲಿಕೆಯ ಬಗ್ಗೆ ವಿಶ್ವಾಸ ತುಂಬಲಾಗುತ್ತದೆ. ನಿತ್ಯ ಇಂಗ್ಲಿಷ್ ಪತ್ರಿಕೆಗಳನ್ನು ಓದಿಸುವ ಮೂಲಕ 'ಇಂಗ್ಲಿಷ್ ಜ್ಞಾನ'ವನ್ನು ಹೆಚ್ಚಿಸಲಾಗುತ್ತದೆ.

'ಇಂಗ್ಲಿಷ್‌ನಲ್ಲಿ ಸಂವಹನ ನಡೆಸುವುದನ್ನು ಕಲಿತರೆ ಉದ್ಯೋಗಕ್ಕೆ ಸೇರುವವರು ಸುಲಭವಾಗಿ ಸಂದರ್ಶನಗಳನ್ನು ಎದುರಿಸಬಲ್ಲರು' ಎನ್ನುವುದು ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯ.

ತರಗತಿಯ ಪಾಠದ ಜತೆಗೆ, ವಿವಿಧ ಸಂಸ್ಥೆಗಳ ಮಾನವ ಸಂಪನ್ಮೂಲ ವಿಭಾಗ, ಮಾರುಕಟ್ಟೆ, ಕಂಪ್ಯೂಟರ್ ವಿಭಾಗದಂತಹ ಸ್ಥಳಗಳಲ್ಲಿ ತರಬೇತಿ ಕೊಡಿಸಲಾಗುತ್ತದೆ. ಪ್ರಸ್ತುತ ದಿನಮಾನಕ್ಕೆ ಅಗತ್ಯವಾದ ಕೃತಕ ಬುದ್ಧಿಮತ್ತೆಗೆ (ಎಐ) ಸಂಬಂಧಿಸಿದ ತಾಂತ್ರಿಕ ಕೌಶಲ ಕಲಿಕೆಯೂ ಇರುತ್ತದೆ. ಮಾರ್ಗದರ್ಶಕರು ಅಭ್ಯರ್ಥಿಗಳೊಂದಿಗೆ ಚರ್ಚಿಸುತ್ತಲೇ ಅವರಲ್ಲಿರುವ ಕೊರತೆಗಳನ್ನು ಅರಿಯುತ್ತಾ ಕಲಿಸುತ್ತಾರೆ.

ಅಣಕು ಸಂದರ್ಶನ, ಕ್ಷೇತ್ರ ಭೇಟಿ

ಇಂಗ್ಲಿಷ್ ಸಂವಹನವನ್ನು ಕಲಿತ ನಂತರ, ಅವರಿಗೆ ಅಣಕು ಸಂದರ್ಶನಗಳನ್ನು ಏರ್ಪಡಿಸಲಾಗುತ್ತದೆ. ಸಂದರ್ಶನ ಎದುರಿಸುವುದು ಹೇಗೆ, ಜನರ ಮಾತುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ಈ ಚಟುವಟಿಕೆಯ ಮೂಲಕ ಅಭ್ಯರ್ಥಿಗಳು ಕಲಿಯುತ್ತಾರೆ.

ಇನ್ಫೊಸಿಸ್‌ನಂತಹ ದೊಡ್ಡ ಕಂಪನಿಗಳಿಗೆ ಅಭ್ಯರ್ಥಿಗಳನ್ನು ಕರೆದೊಯ್ಯಲಾಗುತ್ತದೆ. ಇದರ ಜೊತೆಗೆ ಸರಗೂರು, ಹೊಸಹಳ್ಳಿಯಲ್ಲಿ ಎಸ್‌ವಿವೈಎಂ ನಡೆಸುತ್ತಿರುವ ಆಸ್ಪತ್ರೆ, ಶಾಲೆಗಳಿಗೆ ಸಹ ಕರೆದೊಯ್ದು ಪರಿಚಯ ಮಾಡಿಸಲಾಗುತ್ತದೆ.

'ಜೆನ್‌ನೆಕ್ಸ್ಟ್ ಕೌಶಲ್ಯಾನ್ ತರಬೇತಿಯು ಶಿಕ್ಷಣ ಮತ್ತು ಉದ್ಯೋಗದ ನಡುವಿನ ಅಂತರವನ್ನು ಸರಿದೂಗಿಸುವ ಸೇತುವೆ. ಇದು ತರಬೇತಿ ಕಾರ್ಯಕ್ರಮವಷ್ಟೇ ಅಲ್ಲ, ಯುವಜನರಿಗೆ ಜೀವನ ರೂಪಿಸಿಕೊಳ್ಳಲು ಉತ್ತಮ ಅವಕಾಶವಾಗಿದೆ. ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಉದ್ಯೋಗ ಪಡೆಯಲು ಮಾರ್ಗದರ್ಶನ ಮತ್ತು ಬೆಂಬಲವೂ ಸಿಗುತ್ತದೆ' ಎನ್ನುತ್ತಾರೆ ಮನೋಜ್.

ಲಭ್ಯ ವಸತಿ ಸೌಲಭ್ಯ

ಪ್ರತಿ ಬ್ಯಾಚ್‌ನಲ್ಲಿ 35 ಮಂದಿಗೆ ಅವಕಾಶವಿದೆ. ಸೇರ್ಪಡೆಯಾದವರಿಗೆ 'ವಿ ಲೀಡ್ ವಸತಿ ನಿಲಯ'ದಲ್ಲಿ ಪ್ರತ್ಯೇಕ ಊಟ, ವಸತಿ ಸೌಲಭ್ಯವಿದೆ. ಈಗಾಗಲೇ ಐದು ತಂಡಗಳು ಕೋರ್ಸ್ ಪೂರ್ಣಗೊಳಿಸಿವೆ.

ಹೆಚ್ಚಿನ ಮಾಹಿತಿಗೆ

ಸಂಪರ್ಕಿಸಿ: +91 9972528007
ವಿವರಗಳಿಗೆ https://svym.org ಜಾಲತಾಣಕ್ಕೆ ಭೇಟಿ ನೀಡಬಹುದು.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಎಮ್‌ವರ್ಸಿಟಿ: ಇನ್‌ಸೈಡ್ ಸೇಲ್ಸ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಸೇಲ್ಸ್, ಸೇಲ್ಸ್ ಸ್ಟ್ರ್ಯಾಟಜಿ ಮತ್ತು ಸೇಲ್ಸ್ ಸಪೋರ್ಟ್ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
ಜುಲೈ 24 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹17,000–26,000.
ಸಂಪರ್ಕ: internshala.com/i/386902.

ಎಮೂಲಾರ್ ಟೆಕ್ನಾಲಜಿ ಪ್ರೈವೆಟ್ ಲಿಮಿಟೆಡ್: ಸೈಬರ್ ಸೆಕ್ಯೂರಿಟಿ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳು ಸೈಬರ್ ಸೆಕ್ಯೂರಿಟಿ ಬಗ್ಗೆ ಜ್ಞಾನವುಳ್ಳವರಾಗಿರಬೇಕು.
ಅರ್ಜಿ ಸಲ್ಲಿಸಲು ಜುಲೈ 24 ಕಡೇ ದಿನ.
ಸ್ಟೈಪೆಂಡ್– ತಿಂಗಳಿಗೆ ₹2,000–3,000.
ಸಂಪರ್ಕ: internshala.com/i/7efee6.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಕ್ಲಿಯರ್‌ಟ್ಯಾಕ್ಸ್: ಐಟಿಆರ್ ಫೈಲಿಂಗ್ ಸಪೋರ್ಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಕಸ್ಟಮರ್ ಸಪೋರ್ಟ್, ಇನ್‌ಕಂ ಟ್ಯಾಕ್ಸ್ ಮತ್ತು ಸಮಸ್ಯೆ ನಿರ್ವಹಣೆಯ ಅರಿವಿರಬೇಕು. ಜುಲೈ 23ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹25,000. ಸಂಪರ್ಕ: internshala.com/i/372da0.

ಅಪೆಕ್ಸ್ ಐ ಸಾಫ್ಟ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್: ಸಾಫ್ಟ್‌ವೇರ್ ಟೆಸ್ಟಿಂಗ್ ಇಂಟರ್ನಿಗಳ ನೇಮಕಕ್ಕಾಗಿ ಅರ್ಜಿ ಕರೆದಿದೆ. ವಿದ್ಯಾರ್ಥಿಗಳು ಡೇಟಾಬೇಸ್ ಟೆಸ್ಟಿಂಗ್, ಮ್ಯಾನ್ಯುಯಲ್ ಟೆಸ್ಟಿಂಗ್, ಸಾಫ್ಟ್‌ವೇರ್ ಟೆಸ್ಟಿಂಗ್ ಮತ್ತು ಯೂಸಬಿಲಿಟಿ ಟೆಸ್ಟಿಂಗ್ ಬಗ್ಗೆ ಅರಿತವರಾಗಿರಬೇಕು. ಜುಲೈ 24 ಅರ್ಜಿ ಸಲ್ಲಿಸಲು ಕೊನೇ ದಿನವಾಗಿರುತ್ತದೆ. ಸ್ಟೈಪೆಂಡ್– ತಿಂಗಳಿಗೆ ₹15,000–25,000.
ಸಂಪರ್ಕ: internshala.com/i/5140a5.

ವಿದ್ಯಾರ್ಥಿ ವೇತನ ಕೈಪಿಡಿ

ಈಸ್ಟ್‌ಮನ್ ಪವರ್‌ಅಪ್ ಎಜುಸ್ಕಿಲ್

ಇದು, ದಿ ಈಸ್ಟ್‌ಮನ್ ಆಟೊ ಆ್ಯಂಡ್ ಪವರ್ ಲಿಮಿಟೆಡ್‌ನ (ಇಪಿಎಲ್) ಉಪಕ್ರಮ. ಎಂಜಿನಿಯರಿಂಗ್, ಡಿಪ್ಲೊಮಾ ಮತ್ತು ಮ್ಯಾನೇಜ್‌ಮೆಂಟ್ ಕಲಿಯುತ್ತಿರುವ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳು ಉದ್ಯಮ ಸಂಬಂಧಿತ ಪ್ರಮಾಣೀಕರಣ ಕೋರ್ಸ್‌ಗಳನ್ನು ಮಾಡಲು ನೆರವಾಗಲಿದೆ.

ಅರ್ಹತೆ: ಪೂರ್ಣಕಾಲಿಕ ಬಿ.ಟೆಕ್, ಎಂ.ಟೆಕ್, ಎಂಬಿಎ/ಪಿಜಿಡಿಎಂ ಅಥವಾ ಪಾಲಿಟೆಕ್ನಿಕ್ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಬಿ.ಟೆಕ್ ವಿದ್ಯಾರ್ಥಿಗಳು ಲ್ಯಾಟರಲ್ ಎಂಟ್ರಿ, 3 ಅಥವಾ 4ನೇ ವರ್ಷದಲ್ಲಿ ಓದುತ್ತಿರುವ ಅಥವಾ 2026ರಲ್ಲಿ ಪದವಿ ಪೂರ್ಣಗೊಳಿಸುವವರಾಗಿರಬಹುದು. ಎಂ.ಟೆಕ್/ಎಂಬಿಎ/ಪಿಜಿಡಿಎಂ ಅಭ್ಯರ್ಥಿಗಳು 2ನೇ ವರ್ಷದಲ್ಲಿ ಓದುತ್ತಿರಬೇಕು ಅಥವಾ 2026ರಲ್ಲಿ ಕೋರ್ಸ್ ಮುಗಿಸುವವರಾಗಿರಬೇಕು.
ಕನಿಷ್ಠ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು ಅಥವಾ ಸಿಜಿಪಿಎ 6.0 + ಪಡೆದಿರಬೇಕು. ಯಾವುದೇ ಬ್ಯಾಕ್‌ಲಾಗ್ ಇರಬಾರದು. ಅಶಿಸ್ತಿನ ನಡವಳಿಕೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಗುರುತಿಸಿಕೊಂಡಿರಬಾರದು. ಪೋಷಕರ ಆದಾಯ ವಾರ್ಷಿಕವಾಗಿ ₹6 ಲಕ್ಷವನ್ನು ಮೀರಿರಬಾರದು. ಹೆಣ್ಣುಮಕ್ಕಳು, ಅಂಗವಿಕಲರು, ಏಕಪೋಷಕರನ್ನು ಹೊಂದಿರುವವರು, ಅನಾಥರು, ಎರಡು ಮತ್ತು ಮೂರನೇ ಹಂತದ ನಗರಗಳಿಗೆ ಸೇರಿದವರಿಗೆ ಆದ್ಯತೆ.

ಆರ್ಥಿಕ ನೆರವು: ಆಯ್ದ ಯಶಸ್ವಿ ವಿದ್ಯಾರ್ಥಿಗಳಿಗೆ ಗರಿಷ್ಠ ₹20,000ದವರೆಗೆ ಆರ್ಥಿಕ ನೆರವು.
ಅರ್ಜಿ ಸಲ್ಲಿಸಲು ಕೊನೇ ದಿನ: 04-07-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.
ಮಾಹಿತಿಗೆ: Short Url: www.b4s.in/praja/EPSP2

ಸ್ಯಾಮ್‌ಸಂಗ್ ಸಾಲ್ವ್ ಫಾರ್ ಟುಮಾರೊ ಇಂಡಿಯಾ

ಈ ವಿದ್ಯಾರ್ಥಿವೇತನವನ್ನು ಸ್ಯಾಮ್‌ಸಂಗ್ ಇಂಡಿಯಾ, ವಿಶ್ವಸಂಸ್ಥೆ, ಭಾರತ, ಐಐಟಿ ದೆಹಲಿ, ಫೌಂಡೇಷನ್ ಫಾರ್ ಇನೊವೇಷನ್ ಆ್ಯಂಡ್ ಟೆಕ್ನಾಲಜಿ ಟ್ರಾನ್ಸ್‌ಫರ್ (ಎಫ್‌ಐಟಿಟಿ), ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯತಂತ್ರ ಪಾಲುದಾರಿಕೆ ಉಪಕ್ರಮದಡಿ ನೀಡಲಾಗುತ್ತದೆ.

ಅರ್ಹತೆ: 14ರಿಂದ 22 ವರ್ಷದೊಳಗಿನವರಾಗಿರಬೇಕು.
ಆರ್ಥಿಕ ನೆರವು: ₹2 ಕೋಟಿವರೆಗಿನ ಅನುದಾನ ಮತ್ತು ಇತರ ಸವಲತ್ತುಗಳು.
ಅರ್ಜಿ ಸಲ್ಲಿಸಲು ಕೊನೇ ದಿನ: 03-07-2026
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಮಾಹಿತಿಗೆ: Short Url: www.b4s.in/praja/SSTI4

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

5) ಎರಡನೇ ಆಂಗ್ಲೋ–ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು. ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು. 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು. ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು

1803–1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು. ಆದರೆ ಅವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜಿನಾಮೆ ನೀಡಿ ಸ್ವದೇಶಕ್ಕೆ ಮರಳಿದನು. ಇದರಿಂದ ಆ ಪ್ರದೇಶದಲ್ಲಿ ತಾತ್ಕಾಲಿಕ ಶಾಂತಿ ನೆಲೆಸಿತು.

6) ಮೂರನೇ ಆಂಗ್ಲೋ–ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು. ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದನು. 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು. ನಾಗಪುರದ ಅಪ್ಪಾ ಸಾಹೇಬ ಮತ್ತು ಮಲ್ಹಾರ ರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು. ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು. ಬದಲಿಗೆ ಶಿವಾಜಿಯ ವಂಶಸ್ಥ ಪ್ರತಾಪ ಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿ, ಮರಾಠರ ಸಾಂಪ್ರದಾಯಿಕ ಮುಖಂಡನಾಗಿಸುವ ಮೂಲಕ ಮರಾಠರ ಪ್ರತಿರೋಧವನ್ನು ನಿಗ್ರಹಿಸಿದರು.

7) ಆಂಗ್ಲೋ–ಸಿಖ್ ಯುದ್ಧಗಳ ಕುರಿತು

ಉತ್ತರ: 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. 1809ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು. 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು. ವಿದೇಶಿಯರಿಂದ ಇರಬಹುದಾದ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಬ್ರಿಟಿಷರನ್ನು ಮಣಿಸಲು ಒಂದಾದರು. ಅಂತಿಮವಾಗಿ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು. ಅವಮಾನಕರ ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು. ಅಂದಿನಿಂದ ಬ್ರಿಟಿಷ್ ರೆಸಿಡೆಂಟನು ಪಂಜಾಬಿನ ನಿಜವಾದ ಆಡಳಿತಗಾರನಾದನು ಹೀಗೆ ಪಂಜಾಬ್ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು. 1848ರಲ್ಲಿ ಪಂಜಾಬಿನ ಮೇಲೆ ನೇರ ಬ್ರಿಟಿಷ್ ಆಳ್ವಿಕೆಯನ್ನು ಹೇರಲು ಹೊರಟಾಗ ಸಿಖ್ಖರು ಪ್ರತಿಭಟಿಸಿದರು. ಈ ಪ್ರತಿಭಟನೆಗಳ ನೇತೃತ್ವವನ್ನು 'ಚಟ್ಟಾರ್ ಸಿಂಗ್ ಅಟ್ಟಾರಿವಾಲ' ಮತ್ತು 'ಮೂಲರಾಜ್' ಅವರು ಕ್ರಮವಾಗಿ ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ವಹಿಸಿದ್ದರು. ಮತ್ತೆ ಸಿಖ್ಖರಿಗೆ ಸೋಲಾಯಿತು. ಅಂತಿಮವಾಗಿ ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

8) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕುರಿತು ಬರೆಯಿರಿ

ಉತ್ತರ:– 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಅಂತಿಮ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು.

ಈ ನೀತಿಯ ಪ್ರಕಾರ: 'ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ'. ಅಂತಹ ರಾಜ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳಲಾಗುತ್ತಿತ್ತು. ಈ ನೀತಿಗೆ ಒಳಪಟ್ಟ ರಾಜ್ಯಗಳಲ್ಲಿ ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ, ನಾಗಪುರ ಮೊದಲಾದಗಳು ಪ್ರಮುಖವಾದವುಗಳಾಗಿವೆ. ಈ ರಾಜ್ಯಗಳ ರಾಜರಿಗೆ ಮಕ್ಕಳಿಲ್ಲದಿರುವುದನ್ನು ಮೊದಲೇ ಅರಿತಿದ್ದ ಬ್ರಿಟಿಷ್ ಗವರ್ನರ್ ಜನರಲ್‌ನು ಈ ನೀತಿಯನ್ನು ರಾಜಕೀಯ ಅಸ್ತ್ರವಾಗಿ ಜಾರಿಗೊಳಿಸಿದನು. ಡಾಲ್‌ಹೌಸಿಯ ತಡೆಯಿಲ್ಲದ ರಾಜ್ಯಾಕ್ರಮಣದ ನಡೆಯಿಂದ ಭಾರತೀಯ ರಾಜರು ಮಾತ್ರವಲ್ಲ, ಅವರ ಬಗೆಗೆ ಸಹಾನುಭೂತಿಯುಳ್ಳ ಸಾಮಾನ್ಯ ಜನವರ್ಗವು ಕೂಡ ಬ್ರಿಟಿಷ್‌ರ ವಿರುದ್ಧ ಮಲೆತು ನಿಂತಿತು.

ಬಹು ಆಯ್ಕೆ ಪ್ರಶ್ನೆಗಳು

1) 1839ರಲ್ಲಿ ಯಾರು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು?
ಎ) ರಣಜಿತ್ ಸಿಂಗನು ಬಿ) ಮೂಲರಾಜ
ಸಿ) ಅನ್ವರುದ್ದೀನ ಡಿ) ಮೇಲಿನ ಯಾರೂ ಅಲ್ಲ
ಉತ್ತರ:–ಎ

2) ....ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.
ಎ) 1800 ಬಿ) 1809
ಸಿ) 1706 ಡಿ) 1850 ಉತ್ತರ:–ಬಿ

3) ಪೇಶ್ವೆ ....ನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ
ಎ) ಎರಡನೇ ಬಾಜಿರಾಯ ಬಿ) ಮೂರನೇ ಬಾಜಿರಾಯ
ಸಿ) ಶಂಭಾಜಿ ಡಿ) ಯಾರೂ ಅಲ್ಲ
ಉತ್ತರ:– ಎ

4) ಸಹಾಯಕ ಸೈನ್ಯ ಪದ್ಧತಿ ಕುರಿತ ಯಾವ ಹೇಳಿಕೆ ತಪ್ಪಾಗಿದೆ?
1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ

ಉತ್ತರ ಸಂಕೇತ
ಎ) 1, 2. 3 ಮಾತ್ರ ಬಿ) 2, 3, 4 ಮಾತ್ರ
ಸಿ) 1 ಮತ್ತು 2 ಮಾತ್ರ ಡಿ) ಯಾವುದೂ ತಪ್ಪಾಗಿಲ್ಲ
ಉತ್ತರ: ಡಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

Chapter – 1

ELECTRIC CHARGES AND FIELDS

2. Find the Electric field intensity due to an infinitely long straight uniformly charged wire or line applying Gauss' theorem.

Ans:- (.......Contd)

The cylindrical Gaussian surface is divided into three parts I, II and III i.e. top face, bottom face and curved surface respectively as shown in fig above.

∴ eqn. (i) can be written as,

$$\oint \vec{E}.\vec{dS} = \int_{I} \vec{E}.\vec{dS} + \int_{II} \vec{E}.\vec{dS} + \int_{III} \vec{E}.\vec{dS} = \frac{\lambda l}{\epsilon_0} \quad \text{.........(ii)}$$

For surfaces I and II, angle between $\vec{E}$ and $d\vec{S}$ is 90^0, so $\vec{E} \cdot d\vec{S} = E\ dS \cos\theta$

$= E\ dS \cos 90 = 0$

for these surfaces. Electric flux will cross through the curved surface only.

∴ eqn. (ii) becomes

$$\oint_S \vec{E}.d\vec{S} = \int_{III} \vec{E}.d\vec{S} = \frac{\lambda l}{\epsilon_0}$$

$$(or)\ \oint_{III} \vec{E}.d\vec{S} = \frac{\lambda l}{\epsilon_0}$$

$$(or)\ \int_{III} E\,ds\ \cos 0^0 = \frac{\lambda l}{\epsilon_0}$$

$$i.e.,\ \int_{III} E\,ds = \frac{\lambda l}{\epsilon_0}$$

Since E is constant over the Gaussian surface.

$$\therefore \quad E\int_{III} ds = \frac{\lambda l}{\epsilon_0} \quad \text{.............(iii)}$$

But $\int_{III} ds$ = area of curved surface of the cylinder

$= 2\pi r l$

$$\therefore\ E \times 2\pi r l = \frac{\lambda l}{\epsilon_0} \text{ or } E = \frac{\lambda}{2\pi\epsilon_0 r}$$

Thus, $E \propto \frac{1}{r}$

In vector from, $\vec{E} = \frac{\lambda}{2\pi\epsilon_0 r}\, n$,

where, n is a unit vector perpendicular to the curved surface of the wire.

Problem:-

1) An infinite line charge produces a field of 9x10 N C^{-1} at a distance of 4 cm. Calculate the linear charge density.

Soln:- $E = \frac{\lambda}{2\pi\epsilon_0 r} = \frac{2\lambda}{4\pi\epsilon_0 r}$

$$\therefore\ \lambda = \frac{4\pi\epsilon_0 r E}{2}$$

$$= \frac{1}{9\times10^9} \times \frac{4\times10^{-2}\times9\times10^4}{2}$$

$$= 2\times10^{-7}\ Cm^{-1}.$$

Electric Field intensity due to uniformly charged infinite plane sheet (flat sheet of charge)

Consider a thin infinite plane sheet having uniform surface charge density (i.e. charged per unit area) σ.

To calculate the electric field intensity $\vec{E}$ at a point P distant *r* from the sheet, draw a Gaussian surface in the form of a ***closed cylinder (pill box)*** of length *r* on each side of sheet with end caps of area S.



Electric field $\vec{E}$ is perpendicular to the sheet and hence it is normal to the end caps I and II also. Charge enclosed by the Gaussian surface,

$$q = \sigma S$$

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\sigma S}{\epsilon_0} \quad \text{.........(i)}$$

Gaussian surface is divided into *3 parts* I, II & III. i.e., end caps and the curved surface of the cylinder is as shown in the figure above.

∴ eqn.(i) becomes,

$$\oint_I \vec{E}.d\vec{S} + \oint_{II} \vec{E}.d\vec{S} + \oint_{III} \vec{E}.d\vec{S} = \frac{\sigma S}{\epsilon_0} \quad \text{......(ii)}$$

Angle between $\vec{E}$ and $\vec{S}$ is 90^0 for the curved surface III.

In this case $\oint_{III} \vec{E}.d\vec{S} = E\,ds\cos 90^0 = 0.$

Hence eqn.(ii) becomes

$$\oint_I \vec{E}.d\vec{S} + \oint_{II} \vec{E}.d\vec{S} = \frac{\sigma S}{\epsilon_0}$$

Since angle between $\vec{E}$ & $d\vec{S}$ for surfaces I & II is zero, so,

$$\oint_I E\,ds\cos 0^0 + \oint_{II} E\,ds\cos 0^0 = \frac{\sigma S}{\epsilon_0}\ (or)$$

$$\oint_I E\ ds + \oint_{II} E\ ds = \frac{\sigma S}{\epsilon_0}$$

Since electric field intensity E is constant at every point of the Gaussian surface so

$$\therefore\ E_I ds + E\oint_{II} ds = \frac{\sigma S}{\epsilon_0}\ (or)\ ES + ES = \frac{\sigma S}{\epsilon_0}$$

$$(or\ )\ 2ES = \frac{\sigma S}{\epsilon_0}$$

$$(or)\ E = \frac{\sigma}{2\epsilon_0} \quad \text{..........(7)}$$

In vector form, $\vec{E} = \frac{\sigma}{2\epsilon_0} n$, where n is a unit vector prependicular to plane of the sheet pointing away from it.

The electric field is directed away from the sheet if it is positively charged and it is directed towards the sheet if it is negatively charged.

<u>**Special Case:**</u> If the plane sheet has a ***finite thickness,*** then charges on both sides of the sheet are to be considered. (Contd....)

'ಕಲ್ಯಾಣ'ದ 18 ಸಾವಿರ ಕೊಠಡಿ ಶಿಥಿಲ

ಸಿಮೆಂಟ್ ಉದುರಿದ ತಾರಸಿ, ಬಿರುಕು ಬಿಟ್ಟ ಗೋಡೆಗಳ ನಡುವೆಯೇ ಸಾಗಿದೆ ಅಕ್ಷರ ಕಲಿಕೆ

• ಬಷೀರಅಹ್ಮದ್ ನಗಾರಿ

ಕಲಬುರಗಿ: ಅದು ಸರ್ಕಾರಿ ಶಾಲೆ. 1ರಿಂದ 8ನೇ ತರಗತಿ ತನಕ ಕಲಿಕೆ. ಒಟ್ಟು 271 ಮಕ್ಕಳಿದ್ದಾರೆ. ಹೆಸರಿಗೆ ಆರು ಕೊಠಡಿಗಳಿವೆ. ಅದರಲ್ಲಿ ಮೂರು ಶಿಥಿಲಗೊಂಡಿವೆ. ಇನ್ನುಳಿದ ಮೂರು ಕೊಠಡಿಗಳ ಒಳಗೊಂದಿಷ್ಟು ಮಕ್ಕಳು, ಕೊಠಡಿಗಳ ಹಜಾರದಲ್ಲಿ ಇನ್ನೊಂದಿಷ್ಟು ಮಕ್ಕಳ ಕಲಿಕೆ ಸಾಗಿದೆ...

ಇದು ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಮಣ್ಣೂರ ಪಂಚಾಯಿತಿ ವ್ಯಾಪ್ತಿಯ ಶೇಷಗಿರಿವಾಡಿ ಶಾಲೆಯ ದುಸ್ಥಿತಿ. ಬರೀ ಇದೊಂದೇ ಅಲ್ಲ; ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಹಲವು ಸರ್ಕಾರಿ ಶಾಲೆಗಳ ಕೊಠಡಿಗಳ ಸ್ಥಿತಿ ಇದಕ್ಕಿಂತ ಭಿನ್ನವಿಲ್ಲ.

ಸಿಮೆಂಟ್ ಉದುರಿ ಕಬ್ಬಿಣದ ಸರಳು ಕಾಣುವ ತಾರಸಿ, ಕಿತ್ತು ಹೋದ ಕಿಟಕಿಗಳು, ಸೋರುವ ಕೊಠಡಿಗಳು, ಬಿರುಕು ಬಿಟ್ಟು ಗೋಡೆಗಳ ನಡುವೆ ಸಾವಿರಾರು ಬಡ ವಿದ್ಯಾರ್ಥಿಗಳ ಕಲಿಕೆ ಸಾಗಿದೆ.

ಏಳು ಜಿಲ್ಲೆಗಳ ವ್ಯಾಪ್ತಿ ಹೊಂದಿರುವ ಕಲ್ಯಾಣ ಕರ್ನಾಟಕದಲ್ಲಿ ಒಟ್ಟು 8,966 ಸರ್ಕಾರಿ ಶಾಲೆಗಳಿದ್ದು, 63,198 ಕೊಠಡಿಗಳಿವೆ. ಅದರಲ್ಲಿ 45,176 ಸುಸ್ಥಿತಿಯಲ್ಲಿವೆ. 18,022 ಕೊಠಡಿಗಳು ದುರಸ್ತಿಗಾಗಿ ಕಾದಿವೆ. ಇದರಲ್ಲಿ 7,487 ಕೊಠಡಿಗಳು ಸಣ್ಣ ಪ್ರಮಾಣದ ದುರಸ್ತಿ ನಿರೀಕ್ಷಿಸುತ್ತಿವೆ. 10,535 ಕೊಠಡಿಗಳು ದೊಡ್ಡ ಪ್ರಮಾಣದ ದುರಸ್ತಿ ಬೇಡುತ್ತಿದ್ದು, ಈ ಪೈಕಿ 8,006 ಕೊಠಡಿಗಳಂತೂ ಸಂಪೂರ್ಣ ಶಿಥಿಲಗೊಂಡಿವೆ. ಅವುಗಳನ್ನು 'ಕಲಿಕೆಗೆ ಯೋಗ್ಯವೇ ಇಲ್ಲ' ಎಂದು ಗುರುತಿಸಲಾಗಿದೆ. ಇದು ಲೋಕೋಪಯೋಗಿ ಇಲಾಖೆ ಹಾಗೂ ಪಂಚಾಯತ್‌ರಾಜ್ ಎಂಜಿನಿಯರಿಂಗ್ ಇಲಾಖೆಯ ಎಂಜಿನಿಯರ್‌ಗಳು ಪರಿಶೀಲಿಸಿ ನೀಡಿದ ಅಭಿಪ್ರಾಯ.

ಇತ್ತೀಚೆಗೆ ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಸಂಗೋಳಗಿ (ಸಿ) ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಚಾವಣಿಯ ಸಿಮೆಂಟ್ ಪದರ ಕುಸಿದು ಬಿದ್ದಿತ್ತು. ಭಾನುವಾರ ಘಟನೆ ನಡೆದಿದ್ದರಿಂದ ದುರಂತ ತಪ್ಪಿತ್ತು. ಬಳಿಕ ಶಿಕ್ಷಣ ಇಲಾಖೆಯು ಎಂಜಿನಿಯರ್‌ಗಳಿಂದ ಪರಿಶೀಲಿಸಿ ವರದಿ ನೀಡುವಂತೆ ಎಲ್ಲ ಬಿಇಒಗಳಿಗೆ ಸೂಚಿಸಿತ್ತು. ಬಿಇಒಗಳು ನೀಡಿದ ವರದಿಯು ಇದೀಗ ವಿದ್ಯಾರ್ಥಿಗಳ ಸುರಕ್ಷತೆ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಕಲಬುರಗಿಯಲ್ಲೇ ಹೆಚ್ಚು: ಕಲಬುರಗಿಯು ಕಲ್ಯಾಣ ಕರ್ನಾಟಕದ ಕಂದಾಯ ಆಡಳಿತದ ವಿಭಾಗೀಯ ಕೇಂದ್ರ. ಇಲ್ಲೇ ಅತಿಹೆಚ್ಚು ಶಾಲಾ ಕೊಠಡಿಗಳ ಸ್ಥಿತಿ ಅಯೋಮಯವಾಗಿದೆ. ಜಿಲ್ಲೆಯಲ್ಲಿ 2,011 ಸರ್ಕಾರಿ ಶಾಲೆಗಳಲ್ಲಿ, 14,820 ಕೊಠಡಿಗಳಿವೆ. ಇದರಲ್ಲಿ 4,595 ಕೊಠಡಿಗಳು ದುರಸ್ತಿಗೆ ಕಾದಿವೆ. ಆ ಪೈಕಿ 1,993 ಕೊಠಡಿಗಳು ಜೀರ್ಣಾವಸ್ಥೆಯಲ್ಲಿವೆ.

ಇನ್ನುಳಿದಂತೆ ರಾಯಚೂರಿನಲ್ಲಿ 1,489, ಯಾದಗಿರಿಯಲ್ಲಿ 1,437, ಕೊಪ್ಪಳದಲ್ಲಿ 1,043, ಬಳ್ಳಾರಿಯಲ್ಲಿ 1,039, ವಿಜಯನಗರದಲ್ಲಿ 557 ಹಾಗೂ ಬೀದರ್‌ನಲ್ಲಿ 448 ಕೊಠಡಿಗಳು ಸಂಪೂರ್ಣ ಶಿಥಿಲಗೊಂಡಿದ್ದು, ಅಕ್ಷರಶಃ ಬೋಧನೆಗೆ ಯೋಗ್ಯವಾಗಿಲ್ಲ.

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಶೇಷಗಿರಿವಾಡಿ ಸರ್ಕಾರಿ ಶಾಲೆಯ ಶಿಥಿಲಾವಸ್ಥೆಯಲ್ಲಿರುವ ಕೊಠಡಿಗಳ ಎದುರೇ ಮಕ್ಕಳು ಆಟವಾಡಿದರು

ಕಲ್ಯಾಣದ 18 ಸಾವಿರದಷ್ಟು ಶಾಲೆಗಳು ದುಸ್ಥಿತಿಯಲ್ಲಿದ್ದು, ಶೀಘ್ರವೇ ಸರ್ಕಾರಕ್ಕೆ ಪತ್ರ ಬರೆಯಲಾಗುವುದು
ಗಣಪತಿ ಬಾರಾಟಕ್ಕೆ, ಸಹನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆಯ ಹೆಚ್ಚುವರಿ ಆಯುಕ್ತರ ಕಚೇರಿ, ಕಲಬುರಗಿ

'ಕಲ್ಯಾಣ'ದ ಶಾಲೆಗಳ ಸ್ಥಿತಿಗತಿ	
ಕಲ್ಯಾಣ ಭಾಗದ ಜಿಲ್ಲೆಗಳು	7
ಒಟ್ಟು ಸರ್ಕಾರಿ ಶಾಲೆಗಳು	8,966
ಒಟ್ಟು ಕೊಠಡಿಗಳ ಸಂಖ್ಯೆ	63,198
ಸುಸ್ಥಿತಿಯಲ್ಲಿರುವ ಕೊಠಡಿಗಳು	45,176
ಸಣ್ಣ ದುರಸ್ತಿಗೆ ಕಾದ ಕೊಠಡಿಗಳು	7,487
ಬೃಹತ್ ದುರಸ್ತಿ ಅಗತ್ಯವಿರುವ ಕೊಠಡಿಗಳು	10,535
ಸಂಪೂರ್ಣ ಜೀರ್ಣಾವಸ್ಥೆಯಲ್ಲಿರುವ ಕೊಠಡಿಗಳು	8,006

ಕತ್ತಲಲ್ಲೇ ಉಳಿದ 'ಅಲೆಮಾರಿ' ಸಾಹಿತ್ಯ: ಪ್ರೊ.ಬರಗೂರು

ಪ್ರಜಾವಾಣಿ ವಾರ್ತೆ

ಬರಗೂರು ರಾಮಚಂದ್ರಪ್ಪ

ಬೆಂಗಳೂರು: 'ಕನ್ನಡ ಸಾಹಿತ್ಯ ಲೋಕಕ್ಕೆ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದ ಸಾಹಿತಿಗಳ ಪ್ರವೇಶ ಪಡೆಯಲು ಇನ್ನೂ ಸಾಧ್ಯವಾಗಿಲ್ಲ' ಎಂದು ವಿಮರ್ಶಕ ಪ್ರೊ.ಬರಗೂರು ರಾಮಚಂದ್ರಪ್ಪ ವಿಷಾದಿಸಿದರು.

ಇಲ್ಲಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಭಾನುವಾರ ಅಂತರರಾಜ್ಯ ಕಾವ್ಯ ಸಮ್ಮಿಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಈ ಸಮುದಾಯದ ಸಾಹಿತಿಗಳು ಅಪರೂಪಕ್ಕೆ ಅಲ್ಲೊಬ್ಬರು, ಇಲ್ಲೊಬ್ಬರು ಕಾಣಸಿಗುತ್ತಾರಷ್ಟೇ. ದಲಿತ, ಬಂಡಾಯ ಸಾಹಿತ್ಯ ಬಂದ ಬಳಿಕವೂ, ಅಸ್ಪೃಶ್ಯ ಜನಾಂಗದವರನ್ನು ಪ್ರಮಾಣದಲ್ಲಿ ಬಾರದ, ಈ ಸಮುದಾಯದ ಸಾಹಿತ್ಯ ಕತ್ತಲಲ್ಲೇ ಉಳಿದಿದೆ' ಎಂದು ಹೇಳಿದರು.

'ದೇಶದಲ್ಲಿ ಈ ಸಮುದಾಯದ ಶೇ 8.6ರಷ್ಟು ಜನಸಂಖ್ಯೆ ಇದೆ. ಶೇ 2ರಷ್ಟು ಮಂದಿ ಮಾತ್ರ ಉನ್ನತ ಶಿಕ್ಷಣ ಪಡೆದಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆದ ಶೇ 25ರಷ್ಟು ಮಂದಿಯಲ್ಲಿ ಮುಕ್ಕಾಲು ಪಾಲು ಶಾಲೆಯನ್ನು ಅರ್ಧಕ್ಕೆ ಬಿಡುತ್ತಾರೆ. 140 ಕೋಟಿ ಜನಸಂಖ್ಯೆಯುಳ್ಳ ಭಾರತದಲ್ಲಿ 11 ಕೋಟಿಯಷ್ಟು ಈ ಸಮುದಾಯದವರಿದ್ದಾರೆ. ಸೌಲಭ್ಯ ಪಡೆದವರು ಮತ್ತು ಪಡೆಯದ ಇಂಥ ಸಮುದಾಯಗಳ ನಡುವೆ ಏರ್ಪಟ್ಟ ಕಂದಕಗಳನ್ನು ಮುಚ್ಚುವಲ್ಲಿ ಸಾಹಿತ್ಯ ಮತ್ತು ಸಮಾಜವು ಜವಾಬ್ದಾರಿ ಅರಿಯಬೇಕು' ಎಂದು ಪ್ರತಿಪಾದಿಸಿದರು.

'70-80ರ ದಶಕದಲ್ಲಿ ಸಮಾನತೆಯನ್ನು ಪ್ರತಿಪಾದಿಸುತ್ತಿದ್ದವರು ಈಗ ಧರ್ಮದ್ವೇಷವನ್ನು ಬಿಟ್ಟು ಸೌಹಾರ್ದತೆಯಿಂದ ಬದುಕಿ ಎಂದು ಪ್ರತಿಪಾದಿಸುತ್ತಿದ್ದಾರೆ. ಇಂಥ ವೈರುಧ್ಯ-ವ್ಯಂಗ್ಯದ ಸನ್ನಿವೇಶಗಳಿಗೆ ಸಾಹಿತಿಗಳು ಮುಖಾಮುಖಿಯಾಗಬೇಕು ಎಂದು ಸಮಾಜ ನಿರೀಕ್ಷಿಸುತ್ತದೆ. ಇದೇ ವೇಳೆ, ತೃತೀಯಲಿಂಗಿಗಳ ಹಕ್ಕು, ಗೌರವ, ಸೌಲಭ್ಯ, ಪ್ರಶ್ನೆಗಳನ್ನು ಮುನ್ನೆಲೆಗೆ ತರುವ ಕೆಲಸ ಸಾಹಿತಿಗಳಿಂದ ಆಗಬೇಕು' ಎಂದರು.

'ಭೂಗೋಳಗಳ ಮಿತಿಯನ್ನು ಮೀರಿದ ಮಾನವೀಯ ಸಮಾಜದ ಕನಸುಗಳನ್ನು ಕಟ್ಟುವ ಸನ್ನಿವೇಶವನ್ನಾದರೂ ಜೀವಂತಗೊಳಿಸಬೇಕಾಗಿದೆ. ಅದಕ್ಕೆ ಕಾವ್ಯವು ಹಿಂದಿನಿಂದಲೂ ಕೊಡುಗೆಯನ್ನು ಕೊಡುತ್ತಲೇ ಇದೆ. ಮುಂದೆಯೂ ಕೊಡುತ್ತದೆ' ಎಂದರು.

ಚಿಟಿಕೆ ಸುದ್ದಿ

ಕಟ್ಟಡ ಸಜ್ಜಾ ಕುಸಿದು ಮೂವರು ಸಾವು

ದೇವದುರ್ಗ (ರಾಯಚೂರು ಜಿಲ್ಲೆ): ಪಟ್ಟಣದ ಹೊಸ ಬಸ್ ನಿಲ್ದಾಣ ಹತ್ತಿರದಲ್ಲಿರುವ ಕಟ್ಟಡದ ಮೊದಲ ಅಂತಸ್ತಿನ ಸಜ್ಜಾ ಕುಸಿದು ಬಿದ್ದು ಮೂವರು ಯುವಕರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಮೂವರು ಗಾಯಗೊಂಡಿದ್ದಾರೆ.

ಕ್ಯಾದಿಗೇರದೊಡ್ಡಿ ನಿವಾಸಿ ನಾಗರಾಜ ಚಿದಾನಂದಪ್ಪ (20), ಸಮುದ್ರ ಗ್ರಾಮದ ರವಿಕುಮಾರ ಯಲ್ಲಪ್ಪ (19) ಸ್ಥಳದಲ್ಲೇ ಮೃತಪಟ್ಟರೆ ತೀವ್ರವಾಗಿ ಗಾಯಗೊಂಡಿದ್ದ ಕೋತಿಗುಡ್ಡ ಗ್ರಾಮದ ಯುವಕ ಅರ್ಜುನ (20) ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಗಾಯಗೊಂಡ ಯುವಕರು ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಟ್ಟಡವು ಸುಮಾರು 50 ವರ್ಷಗಳಷ್ಟು ಹಳೆಯದಾಗಿದ್ದು, ಮಾಲೀಕರು ಅವೈಜ್ಞಾನಿಕವಾಗಿ ಮೇಲಿನ ಅಂತಸ್ತಿಗೆ ಹತ್ತಲು ಅಳವಡಿಸಿದ್ದ ಮೆಟ್ಟಿಲುಗಳೇ ಕುಸಿತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

'ಆರ್‌ಎಸ್‌ಎಸ್ ಮೊದಲು ನೋಂದಣಿ ಮಾಡಿಸಲಿ'

ಮೈಸೂರು: 'ಪ್ರಶ್ನಿಸಿದವರ ಮೇಲೆ ಕಾನೂನು ಕ್ರಮಕ್ಕೆ ಒತ್ತಾಯಿಸುವ ಆರ್‌ಎಸ್‌ಎಸ್‌ನವರು ಮೊದಲು ಸಂಘವನ್ನು ನೋಂದಣಿ ಮಾಡಿಸಲಿ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸವಾಲು ಹಾಕಿದರು.

ಬಿ.ಕೆ. ಹರಿಪ್ರಸಾದ್

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಎಫ್‌ಐಆರ್ ದಾಖಲಿಸಲು ನ್ಯಾಯಾಲಯವು ಸೂಚಿಸಿರುವ ಕುರಿತು ಇಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ ಅವರು, 'ದೇಶದ ಕಾನೂನಿಗೆ ನಾವು ಯಾವತ್ತೂ ತಲೆ ಬಾಗುತ್ತೇವೆ' ಎಂದರು.

'ಬ್ರಿಟಿಷರ ಪರವಾಗಿದ್ದ ಆರ್‌ಎಸ್‌ಎಸ್, ಮಹಾತ್ಮ ಗಾಂಧಿಯನ್ನೇ ಟಾರ್ಗೆಟ್ ಮಾಡಿತ್ತು. ಕಾನೂನಾತ್ಮಕವಾಗಿ ಪ್ರಶ್ನೆ ಮಾಡುವವರೇ ಅವರ ಗುರಿ. ಇದಕ್ಕೆ ನಾವ್ಯಾರೂ ಹೆದರುವುದಿಲ್ಲ' ಎಂದರು.

'ಬಿಡದಿಯಲ್ಲಿ ಟೌನ್‌ಶಿಪ್ ನಿರ್ಮಾಣದ ಸಂಬಂಧ ಚರ್ಚೆಗೆ ಮುಖ್ಯಮಂತ್ರಿ ವಿಧಾನಸೌಧಕ್ಕೆ ಆಹ್ವಾನಿಸಿದ್ದಾರೆ. ಚರ್ಚೆಗೆ ಅದಕ್ಕಿಂತ ಇನ್ಯಾವ ಜಾಗ ಬೇಕಿತ್ತು? ಎಲ್ಲೆಲ್ಲೋ ಕುಳಿತು ಆ ವಿಚಾರ ಚರ್ಚಿಸಲು ಸಾಧ್ಯವಿಲ್ಲ' ಎಂದರು.

'ಸಂಪುಟ ಪುನರ್‌ರಚನೆ ವಿಚಾರವನ್ನು ಸಿಎಂ ಹಾಗೂ ಕೈಕಮಾಂಡ್ ನಿರ್ಧರಿಸುತ್ತದೆ. ಯಾವಾಗ ಆಗುತ್ತದೆ ಎಂಬುದನ್ನು ಹೇಳಲು ನಾನು ಜ್ಯೋತಿಷಿ ಅಲ್ಲ' ಎಂದರು.

'ಕಲ್ಯಾಣ'ದ ಅಲ್ಲಲ್ಲಿ ತಂಪೆರೆದ ಮಳೆ

ಕಲಬುರಗಿ: ಜಿಲ್ಲೆ ಸೇರಿದಂತೆ ಕಲ್ಯಾಣ ಕರ್ನಾಟಕದ ಬೀದರ್, ಯಾದಗಿರಿಯ ವಿವಿಧೆಡೆ ಭಾನುವಾರ ಮಳೆ ಸುರಿಯಿತು. ಬಿಸಿಲಿನಿಂದ ಕಂಗೆಟ್ಟಿದ್ದ ಜನರ ಮೊಗದಲ್ಲಿ ಮಂದಹಾಸ ಮೂಡಿಸಿತು.

ಬೆಳಿಗ್ಗೆ ತೀಕ್ಷ್ಣ ಬಿಸಿಲಿತ್ತು. ಮಧ್ಯಾಹ್ನದ ಹೊತ್ತಿಗೆ ಆಗಸದಲ್ಲಿ ಮೋಡಗಳು ದಟ್ಟೈಸಿ, ಒಂದು ಗಂಟೆ ಮಳೆ ಸುರಿಸಿದವು. ಕಲಬುರಗಿ ನಗರ, ಅಫಜಲಪುರ, ಜೇವರ್ಗಿ, ಚಿಂಚೋಳಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿದೆ.

ಕಮಲಾಪುರ ತಾಲ್ಲೂಕಿನಾದ್ಯಂತ ಧಾರಾಕಾರ ಮಳೆಯಾಗಿದ್ದು ಹೊಲಗದ್ದೆಗಳಲ್ಲಿ ನೀರು ನಿಂತಿದೆ. ಕುದಮೂಡ ಗ್ರಾಮದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ದವಸ ಧಾನ್ಯಗಳು ನೀರುಪಾಲಾಗಿವೆ.

'ಮುಂಗಾರು ಬಿತ್ತನೆ ನಡೆಸಿದ ಹೊಲಗಳಿಗೂ, ಚಿಗುರೆಲೆ ಮೂಡಿದ ಬೆಳೆಗಳಿಗೂ ಈ ಮಳೆಯಿಂದ ಅನುಕೂಲವಾಗಿದೆ' ಎಂದು ರೈತರು ಹರ್ಷ ವ್ಯಕ್ತಪಡಿಸಿದ್ದಾರೆ.

ಬೀದರ್, ಬಸವಕಲ್ಯಾಣ, ಹುಮನಾಬಾದ್, ಚಿಟಗುಪ್ಪ ಹಾಗೂ ಭಾಲ್ಕಿಯಲ್ಲೂ ಭಾನುವಾರ ಮಳೆಯಾಗಿದೆ. ಯಾದಗಿರಿ ನಗರ ಸೇರಿದಂತೆ ಜಿಲ್ಲೆಯ ಹುಣಸಗಿ, ಗುರುಮಠಕಲ್, ಕಕ್ಕೇರಾ, ಕೆಂಭಾವಿಯಲ್ಲೂ ಮಳೆಯಾಗಿದೆ.

ನಿಧನ ವಾರ್ತೆ

ಬಿ.ಎಫ್. ದಂಡಿನ

ಗದಗ: ಕನಕದಾಸ ಶಿಕ್ಷಣ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಬಿ.ಎಫ್.ದಂಡಿನ (92) ಶನಿವಾರ ರಾತ್ರಿ ಇಲ್ಲಿನ ವಿದ್ಯಾನಗರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪುತ್ರರಾದ ರವೀಂದ್ರನಾಥ ಬಿ.ದಂಡಿನ, ನಾಗರಾಜ ಬಿ.ದಂಡಿನ ಹಾಗೂ ಮೂವರು ಪುತ್ರಿಯರು ಇದ್ದಾರೆ. ಗದುಗಿನ ರಾಜೀವ್ ಗಾಂಧಿ ನಗರದ ಕನಕದಾಸ ಶಿಕ್ಷಣ ಸಂಸ್ಥೆ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿತು.

'ಸಿ.ಎಂ ಬಂದರೆ ಮತ್ತೆ ಸಭೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಯೋಜನೆ ಕುರಿತು ರೈತರ ಸಮ್ಮುಖದಲ್ಲಿ ಚರ್ಚಿಸಲು ನಾನು ಈಗಲೂ ಸಿದ್ಧನಿದ್ದೇನೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬರುವುದಾದರೆ, ನಾನು ಮತ್ತೆ ಬರುತ್ತೇನೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾನು ಬಿಡದಿ ರೈತರ ಕಷ್ಟದ ಬಗ್ಗೆ ಮುಖ್ಯಮಂತ್ರಿಗೆ ಪತ್ರ ಬರೆದೆ. ಅದಕ್ಕೆ ಅವರು ಈವರೆಗೂ ಉತ್ತರ ನೀಡಿಲ್ಲ. ರೈತರ ನಡುವೆ ಕೂತು ಚರ್ಚೆ ಮಾಡೋಣ ಬನ್ನಿ ಎಂದು ಕರೆದೆ, ಅವರು ಬರಲೇ ಇಲ್ಲ' ಎಂದರು.

'ರೈತರ ಸಮಸ್ಯೆಯನ್ನು ರೈತರ ಮಧ್ಯೆಯೇ ಕೂತು ಚರ್ಚಿಸಬೇಕು. ರೈತರನ್ನು ಹೊರಗಿಟ್ಟು, ವಿಧಾನಸೌಧದಲ್ಲಿ ನಾಲ್ಕು ಗೋಡೆಗಳ ಮಧ್ಯೆ ಕೂತು ಚರ್ಚಿಸುವುದರಲ್ಲಿ ಅರ್ಥವಿಲ್ಲ. ಅಂತಹ ಸಭೆಗಳಿಂದ ಯಾವುದೇ ಉಪಯೋಗವೂ ಇಲ್ಲ' ಎಂದರು.

'ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧಿಸಿ ಅಲ್ಲಿನ ರೈತರು 470 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಆ ಗ್ರಾಮಗಳಿಗೆ ಸಂಬಂಧವೇ ಇಲ್ಲದವರನ್ನು ನಗರಗಳಿಂದ ಕರೆತಂದು, ಯೋಜನೆ ಪರ ಘೋಷಣೆ ಕೂಗಿಸುತ್ತಿದ್ದಾರೆ. ಮುಖ್ಯಮಂತ್ರಿ ಅವರಿಗೆ ರೈತರ ಹಿತಕ್ಕಿಂತ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಹೆಚ್ಚು ಆಸಕ್ತಿ ಇದ್ದಂತಿದೆ' ಎಂದು ಹೇಳಿದರು.

'ನಮ್ಮ ಜಾತಿಯ ನಾಯಕರು ಬೆಳೆಯಲಿ. ಬೆಳೆಯಬಾರದು ಎಂದು ಯಾರು ಹೇಳಿದರು? 2028ಕ್ಕೂ ಅವರೇ ಮುಖ್ಯಮಂತ್ರಿ ಆಗಲಿ. ಆದರೆ ತಾವು ಮಾಡುತ್ತಿರುವ ಲೂಟಿಯನ್ನು ಸಮರ್ಥಿಸಿಕೊಳ್ಳಲು ಜಾತಿ ಹೆಸರು ಬಳಸಿಕೊಳ್ಳಬಾರದು' ಎಂದರು.

'ಚಪ್ಪಲಿ ಎಸೆಯುವುದು ನಮ್ಮ ಸಂಸ್ಕೃತಿ ಅಲ್ಲ. ನಮ್ಮ ಕಾರ್ಯಕರ್ತರು ಯಾರ ವಿರುದ್ಧವೂ ಧಿಕ್ಕಾರ ಕೂಗಬೇಡಿ, ಅಶಾಂತಿ ಉಂಟು ಮಾಡಬೇಡಿ, ಶಾಂತವಾಗಿ ನಡೆದುಕೊಳ್ಳಿ
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಚಪ್ಪಲಿ ಎಸೆತ: ಎಂಟು ಜನರ ಬಂಧನ

ಚಿಕ್ಕಬಳ್ಳಾಪುರ: ಶಾಸಕ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ಎಸೆತ ಮತ್ತು ಕೆಂಪೇಗೌಡ ಜಯಂತಿಯಲ್ಲಿ ಗಲಾಟೆ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸರು ಜೆಡಿಎಸ್ ಸಾಮಾಜಿಕ ಜಾಲತಾಣ ವಿಭಾಗದ ಜಿಲ್ಲಾ ಸಂಚಾಲಕ ಅಖಿಲ್ ರೆಡ್ಡಿ ಸೇರಿದಂತೆ ಎಂಟು ಮಂದಿಯನ್ನು ಭಾನುವಾರ ಬಂಧಿಸಿದ್ದಾರೆ.

ನಗರದಲ್ಲಿ ಈ ವಿಚಾರವು ಉದ್ವಿಗ್ನಕ್ಕೆ ಕಾರಣವಾಗಿದೆ. ಪ್ರಮುಖ ವೃತ್ತಗಳಲ್ಲಿ ಭದ್ರತೆಗಾಗಿ ಪೊಲೀಸರನ್ನು ನಿಯೋಜಿಸಲಾ ಗಿದೆ. ಸ್ವಯಂ ಪ್ರೇರಿತ ದೂರು ದಾಖಲಾಗಿದೆ.

'ಒಕ್ಕಲಿಗ ಸಮುದಾಯದ ಮೋಹನ್ ರಾಜ್, ಮಹೇಂದ್ರ, ಪ್ರಕಾಶ್ ಮತ್ತು ಅಖಿಲ್ ರೆಡ್ಡಿ ಮತ್ತು ಇತರ 100ರಿಂದ 150 ಜನರು ಶಾಸಕ ಪ್ರದೀಪ್ ಈಶ್ವರ್ ಅವರನ್ನು ಅವಾಚ್ಯವಾಗಿ ನಿಂದಿಸಿ ಗಲಾಟೆ ಮಾಡಿದರು. ಹೊರಗೆ ಬಾ ನಿನ್ನನ್ನು ಜೀವ ಸಹಿತ ಇರಲು ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು. ಸಮಾಧಾನಪಡಿಸಲು ಮುಂದಾದ ಪೊಲೀಸರ ಕರ್ತವ್ಯಕ್ಕೂ ಅಡ್ಡಿಪಡಿಸಿದರು' ಎಂದು ದೂರಿನಲ್ಲಿ ವಿವರಿಸಲಾಗಿದೆ.

ಶಾಸಕರ ವಿರುದ್ಧ ಪ್ರಕರಣ ದಾಖಲಿಸಲು ಆಗ್ರಹ

ಚಿಕ್ಕಬಳ್ಳಾಪುರ: ನಗರದಲ್ಲಿ ಸಂಸದ ಡಾ.ಕೆ. ಸುಧಾಕರ್ ನೇತೃತ್ವದಲ್ಲಿ ಬಿಜೆಪಿ, ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆ ಭಾನುವಾರ ನಡೆಯಿತು.

ಕೆಂಪೇಗೌಡ ಜಯಂತಿಯಲ್ಲಿ ಜನರನ್ನು ಪ್ರಚೋದಿಸಿದ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಪ್ರಕರಣ ದಾಖಲಿಸಬೇಕು. ಈ ಬಗ್ಗೆ ಎರಡೂ ಪಕ್ಷಗಳ ಮುಖಂಡರು ದೂರು ನೀಡಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು. ಮುಂದಿನ ವಾರದಲ್ಲಿ ಚಿಕ್ಕಬಳ್ಳಾಪುರದಲ್ಲಿ ಬೃಹತ್ ಮಟ್ಟದ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಯಿತು.

'ಅಂಬೇಡ್ಕರ್ ಜಯಂತಿ, ವಾಲ್ಮೀಕಿ ಜಯಂತಿ, ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ ಸೇರಿದಂತೆ ಯಾವುದೇ ಸರ್ಕಾರಿ ಕಾರ್ಯಕ್ರಮಗಳು ಹಾಗೂ ಜಯಂತಿಗಳಲ್ಲಿ ಪಾಲ್ಗೊಳ್ಳದಿದ್ದ ಶಾಸಕ ಪ್ರದೀಪ್ ಈಶ್ವರ್ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇ ದುರುದ್ದೇಶಪೂರ್ವಕವಾಗಿ. ಹೀಗಾಗಿ, ಅವರ ವಿರುದ್ಧ ಪ್ರಕರಣ ದಾಖಲಿಸದಿದ್ದರೆ, ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು' ಎಂದು ಸಂಸದ ಡಾ.ಕೆ.ಸುಧಾಕರ್ ಎಚ್ಚರಿಕೆ ನೀಡಿದರು.

ಬಿಡದಿ ಟೌನ್‌ಶಿಪ್ 'ಅಪ್ಪಿಕೊ ಚಳವಳಿ'

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಹೋಬಳಿಯಲ್ಲಿ ತಲೆ ಎತ್ತಲಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆ ವಿರುದ್ಧದ ಹೋರಾಟ ದಿನದಿಂದ ದಿನಕ್ಕೆ ಬೇರೆ ಬೇರೆ ಸ್ವರೂಪ ಪಡೆಯುತ್ತಿದೆ. ಯೋಜನಾ ಪ್ರದೇಶದ ರೈತರು ಟೌನ್‌ಶಿಪ್ ಹೆಸರಿನಲ್ಲಿ ಲಕ್ಷಾಂತರ ಮರ-ಗಿಡಗಳನ್ನು ಕಡಿಯದಂತೆ ಭಾನುವಾರ ಮರಗಳನ್ನು ತಬ್ಬಿಕೊಂಡು 'ಅಪ್ಪಿಕೊ ಚಳವಳಿ' ನಡೆಸಿದರು.

ಹೋರಾಟದ ಸ್ಥಳ ಬೈರಮಂಗಲದಲ್ಲಿ ಸೇರಿದ ಹೋರಾಟಗಾರರು ಅಲ್ಲಿಂದ ಬನ್ನಿಗಿರಿ ಗ್ರಾಮದವರೆಗೆ 3 ಕಿ.ಮೀ. ಪಾದಯಾತ್ರೆ ನಡೆಸಿದರು. ಮಾರ್ಗದುದ್ದಕ್ಕೂ 'ನಮ್ಮ ಭೂಮಿ ನಮ್ಮ ಹಕ್ಕು', 'ಜೀವ ಬಿಡುತ್ತೇವೆ, ಭೂಮಿ ಕೊಡುವುದಿಲ್ಲ' ಎಂಬ ಘೋಷಣೆ ಮೊಳಗಿದವು. 'ಮರಗಳನ್ನು ರಕ್ಷಿಸಿ, ಪ್ರಕೃತಿ ಉಳಿಸಿ', 'ಅಭಿವೃದ್ಧಿ ಹೆಸರಿನಲ್ಲಿ ಪ್ರಕೃತಿ ನಾಶ ಬೇಡ' ಫಲಕಗಳು ರಾರಾಜಿಸಿದವು.

ಬನ್ನಿಗಿರಿ ತೋಟದಲ್ಲಿ ತೆಂಗಿನಮರಕ್ಕೆ ಮಹಿಳೆಯರು ಸಾಮೂಹಿಕವಾಗಿ ಪೂಜೆ ಸಲ್ಲಿಸಿದರು. ನಂತರ ತೋಟದಲ್ಲಿದ್ದ ಮರಗಳನ್ನು ಅಪ್ಪಿಕೊಂಡು 'ಬೇಡ ಬೇಡ ಟೌನ್‌ಶಿಪ್ ಬೇಡ', 'ಕಾಂಕ್ರೀಟ್ ಕಾಡು ಸಾಕು, ಹಸಿರು ಕಾಡು ಬೇಕು' ಎಂಬ ಘೋಷಣೆ ಕೂಗಿದರು. ಮಹಿಳೆಯರು, ಯುವಜನರು, ಮಕ್ಕಳು ಸೇರಿದಂತೆ ನೂರಕ್ಕೂ ಹೆಚ್ಚು ಮಂದಿ ಚಳವಳಿಯಲ್ಲಿ ಭಾಗವಹಿಸಿದ್ದರು.

15 ಲಕ್ಷ ಮರ ನೆಲಸಮ: 'ಟೌನ್‌ಶಿಪ್‌ಗಾಗಿ ಯೋಜನಾ ಪ್ರದೇಶದಲ್ಲಿರುವ ತೆಂಗಿನಮರ, ಅಡಿಕೆಮರ ಸೇರಿದಂತೆ ಸುಮಾರು 15 ಲಕ್ಷ ಮರಗಳು ನೆಲಸಮವಾಗಲಿವೆ. ಈ ಭಾಗದ ಪರಿಸರಕ್ಕೆ ಮಾರಕವಾಗಿರುವ ಟೌನ್‌ಶಿಪ್ ನಮಗೆ ಬೇಕಿಲ್ಲ' ಎಂದು ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ರೈತರ ಭೂ ಹಿತರಕ್ಷಣಾ ಸಮಿತಿ ಮಂಡಲಹಳ್ಳಿ ನಾಗರಾಜು ಹೇಳಿದರು.

'ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ವಿರೋಧಿಸಿ ಒಂದೂವರೆ ವರ್ಷದಿಂದ ನಿರಂತರವಾಗಿ ಹೋರಾಡುತ್ತಿದ್ದೇವೆ. ಯೋಜನೆ ಯನ್ನು ಪ್ರತಿಷ್ಠೆಯಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಬೂಬು ಹೇಳಿಕೊಂಡು ಬಲವಂತವಾಗಿ ರೈತರಿಂದ ಭೂಮಿ ಕಸಿದುಕೊಳ್ಳಲು ಮುಂದಾಗಿದ್ದಾರೆ. ನಾವು ಜೀವ ಬಿಡುತ್ತೇವೆಯೇ ಹೊರತು ಭೂಮಿ ಕೊಡುವುದಿಲ್ಲ' ಎಂದರು.

'ಎಚ್‌ಡಿಕೆ ಸಿಎಂ ಆದದ್ದು ನನ್ನ ಬೆಂಬಲದಿಂದಲೇ'

ಪ್ರಜಾವಾಣಿ ವಾರ್ತೆ

ಮೈಸೂರು: 'ಎಚ್.ಡಿ. ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿಯಾದದ್ದು ನನ್ನ ಬೆಂಬಲದಿಂದಲೇ. ನಾನು ಸಚಿವನಾಗುವುದಕ್ಕೆ ಅವರೂ ಸಹಾಯ ಮಾಡಿದ್ದಾರೆ. 'ಕುಮಾರಪರ್ವ' ಸಮಾವೇಶ ಮಾಡಿದ್ದು ಚಾಮುಂಡೇಶ್ವರಿ ಜನ ಮಾತ್ರ. ಬೇರಾವ ಕ್ಷೇತ್ರದಲ್ಲೂ ಇಲ್ಲಿಯಂತೆ ದೊಡ್ಡಮಟ್ಟದಲ್ಲಿ ನಡೆದಿಲ್ಲ' ಎಂದು ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

ಇಲ್ಲಿ ಭಾನುವಾರ ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, 'ಕುಮಾರಸ್ವಾಮಿ ಅವರಿಗೆ ರಾಜ್ಯದಲ್ಲಿ ಪಕ್ಷ ಕಟ್ಟಲು ಶಕ್ತಿ ಇದೆ. ಜೆಡಿಎಸ್ ಉಳಿಸುವ ಕೆಲಸವನ್ನು ಅವರು ಮಾಡುತ್ತಾರೆ. ನನ್ನ ಜನ ಗಟ್ಟಿ ಇದ್ದಾರೆ, ನನ್ನ ಜೊತೆ ಸದಾ ನಿಲ್ಲುತ್ತಾರೆ' ಎಂದರು.

'ಜಿಟಿಡಿ ಎರಡೂ ಕಾಲನ್ನೂ ಪಕ್ಷದಿಂದ ಹೊರಗಿಟ್ಟಿದ್ದಾರೆ' ಎಂಬ ಎಚ್‌ಡಿಕೆ ಹೇಳಿಕೆಗೆ ಪ್ರತಿಕ್ರಿಯಿಸಿ, 'ನನ್ನ ಬಗ್ಗೆ ಏನು ಹೇಳಿದ್ದಾರೋ ಗೊತ್ತಿಲ್ಲ. ಕ್ಷೇತ್ರದ ಅಭಿವೃದ್ಧಿಯಷ್ಟೇ ನನ್ನ ಗುರಿ. ಆ ಕಾರಣದಿಂದಲೇ ಜನರು ನನ್ನನ್ನು ಗೆಲ್ಲಿಸಿದ್ದಾರೆ. 2028ರ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರದಿಂದ ನೀವೇ ಸ್ಪರ್ಧಿಸಬೇಕು, ನಿಮ್ಮ ಜೊತೆ ಇರುತ್ತೇವೆ ಎನ್ನುತ್ತಿದ್ದಾರೆ. ಜನರು ಏನು ಹೇಳುತ್ತಾರೆಯೋ ಅದನ್ನೇ ಮಾಡುತ್ತಾರೆ' ಎಂದು ಹೇಳಿದರು.

ಚಪ್ಪಲಿ ತೂರಿದ ಪ್ರಕರಣ: ಸಚಿವರು ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಅವರತ್ತ ಚಪ್ಪಲಿ ತೂರಿದ ಪ್ರಕರಣವನ್ನು ಸಚಿವರಾದ ಪ್ರಿಯಾಂಕ್ ಖರ್ಗೆ, ಯು.ಟಿ. ಖಾದರ್, ಎಂ.ಬಿ. ಪಾಟೀಲ್, ಬೈರತಿ ಸುರೇಶ್ ತೀವ್ರವಾಗಿ ಖಂಡಿಸಿದ್ದು, ಪ್ರದೀಪ್ ಈಶ್ವರ್ ಜೊತೆ ಸರ್ಕಾರ ಮತ್ತು ಪಕ್ಷ ನಿಲ್ಲುತ್ತದೆ ಎಂದಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ, 'ಜೆಡಿಎಸ್‌ನವರಿಗೆ ಅಸ್ತಿತ್ವದ ಪ್ರಶ್ನೆ ಇದೆ. ಅದಕ್ಕೆ ಹೀಗೆಲ್ಲಾ ಮಾಡುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ಅವರಿಗೆ ಸಹಿಸಲಾಗುತ್ತಿಲ್ಲ. ಒಬ್ಬ ಶಾಸಕನತ್ತ ಚಪ್ಪಲಿ ತೂರುವುದು ತಪ್ಪು. ಇಂತಹ ಕೃತ್ಯಗಳಿಗೆ ಪ್ರಚೋದನೆ ನೀಡುವುದೂ ತಪ್ಪು. ಎಲ್ಲರೂ ಕಾನೂನು ಇತಿಮಿತಿಯಲ್ಲಿ ಇರಬೇಕು' ಎಂದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ರಾಜಕೀಯವಾಗಿ ಏನೇ ಬಿನ್ನಾಭಿಪ್ರಾಯಗಳಿದ್ದರೂ ದೇವೇಗೌಡರು ಪ್ರಧಾನಿಯಾದಾಗ ನಾವು ತುಂಬ ಖುಷಿ ಪಟ್ಟಿದ್ದೆವು. ಡಿ.ಕೆ. ಶಿವಕುಮಾರ್ ಕೂಡ ಮುಖ್ಯಮಂತ್ರಿಯಾಗಿ ಪ್ರಮಾಣ ವಚನಕ್ಕೂ ಮೊದಲು ದೇವೇಗೌಡರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು. ಆದರೆ, ಅವರ ಪಕ್ಷದ ಕಾರ್ಯಕರ್ತರು ಚಪ್ಪಲಿ ಹಿಡಿದು ರಾಜಕೀಯ ಮಾಡುತ್ತಿದ್ದಾರೆ. ದ್ವೇಷ ರಾಜಕಾರಣವನ್ನು ರಾಜ್ಯದ ಜನ ಒಪ್ಪಲ್ಲ. ಸೂಕ್ತ ಉತ್ತರ ಕೊಡುತ್ತಾರೆ. ಪ್ರದೀಪ್ ಈಶ್ವರ್ ಮೇಲೆ ಯಾರು ಚಪ್ಪಲಿ ಎಸೆದರೂ ಅವರೇ ಮುಂದಿನ ದಿನಗಳಲ್ಲಿ ಹಾರ ಹಾಕಿ ಅಭಿನಂದಿಸುವ ಕಾಲವೂ ಬರುತ್ತದೆ' ಎಂದರು.

ಸಾರಿಗೆ ಸಚಿವ ಬೈರತಿ ಸುರೇಶ್, 'ಪ್ರಜಾಪ್ರಭುತ್ವದಲ್ಲಿ ಈ ರೀತಿ ದೈಹಿಕ ಹಲ್ಲೆ ಅಪರಾಧ. ಅವರಿಗೆ ಇಂದು, ಇನ್ನೊಬ್ಬರಿಗೆ ನಾಳೆ ಆಗಬಹುದು' ಎಂದರು.

ಉತ್ತರ ಕನ್ನಡದಲ್ಲಿ ಬಿರುಸಿನ ಮಳೆ

ಹುಬ್ಬಳ್ಳಿ: ಉತ್ತರ ಕನ್ನಡ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಕೆಲವೆಡೆ ಭಾನುವಾರ ಉತ್ತಮ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗುತ್ತಿದ್ದು, ಕರಾವಳಿ ಭಾಗದ ತಾಲ್ಲೂಕುಗಳಲ್ಲಿ ತುಸು ಬಿರುಸು ಪಡೆದಿದೆ.

ಹಿಂದಿನ 24 ಗಂಟೆಗಳಲ್ಲಿ ಹೊನ್ನಾವರ ತಾಲ್ಲೂಕಿನ ಸಾಲ್ಕೋಡ ಗ್ರಾಮದಲ್ಲಿ 12.4 ಸೆಂ.ಮೀನಷ್ಟು, ಹೊಸಾಕುಳಿ ಗ್ರಾಮದಲ್ಲಿ 11 ಸೆಂ.ಮೀನಷ್ಟು ಮಳೆ ಸುರಿದಿದೆ. ಭಟ್ಕಳ, ಕಾರವಾರ ಸೇರಿದಂತೆ ಹಲವೆಡೆ ವ್ಯಾಪಕ ಮಳೆಯಾಗಿದೆ.

ಗದಗ ನಗರ ಸೇರಿದಂತೆ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಕೆಲ ಸಮಯ ಧಾರಾಕಾರವಾಗಿ ಮಳೆ ಸುರಿಯಿತು.



ಭೀಮಪ್ಪ

ಸಿಡಿಲು ಬಡಿದು ರೈತ ಸಾವು: ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಕಸಬಾ ಜಂಬಗಿ ಗ್ರಾಮದ ರೈತ ಭೀಮಪ್ಪ ಬದಾಮಿ (49) ಭಾನುವಾರ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ, ಪುತ್ರಿ ಇದ್ದಾರೆ.

'ಎಸ್‌ಐಆರ್: ಎಚ್ಚರ ವಹಿಸದಿದ್ದರೆ ಪ್ರಜಾಪ್ರಭುತ್ವದ ಮಾರಣಹೋಮ'

ಒಂದನೇ ಪುಟದಿಂದ...

ಹೋರಾಡಬೇಕು: 'ಕಾಂಗ್ರೆಸ್ ಕಾರ್ಯಕರ್ತರು ಎಸ್‌ಐಆರ್ ಪ್ರಕ್ರಿಯೆಯನ್ನು 2ನೇ ಸ್ವಾತಂತ್ರ್ಯ ಹೋರಾಟ ಎಂದು ಭಾವಿಸಿ ಯಾವ ಮತದಾರರ ಹೆಸರೂ ಕೈಬಿಡದಂತೆ ನೋಡಿಕೊಳ್ಳಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೂಚಿಸಿದರು.

'ಮತದಾನದ ಹಕ್ಕೇ ನಮಗೆ ಎ.ಕೆ. 47. ಈ ಅಸ್ತ್ರ ಉಳಿಸಿಕೊಳ್ಳಲು ನಾವೆಲ್ಲ ಹೋರಾಡಬೇಕು. ಇಲ್ಲವಾದರೆ ದೇಶ ಮತ್ತೆ ಗುಲಾಮಗಿರಿಗೆ ಹೋಗುತ್ತದೆ' ಎಂದು ಎಚ್ಚರಿಸಿದರು. 'ನಾವೆಲ್ಲರೂ ಜೊತೆಗೂಡಿ ಸಂವಿಧಾನ ಉಳಿಸಬೇಕು' ಎಂದರು.

ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಕೆ. ವೆಂಕಟೇಶ್, ಡಾ.ಎಚ್.ಸಿ. ಮಹದೇವಪ್ಪ, ತನ್ವೀರ್ ಸೇಠ್, ಕೆ. ಹರೀಶ್ ಗೌಡ, ಸಂಸದರಾದ ಸುನಿಲ್ ಬೋಸ್, ಶ್ರೇಯಸ್ ಪಟೇಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಸಿ. ಚಂದ್ರಶೇಖರ್, ಉಪಾಧ್ಯಕ್ಷ ವಿ.ಆರ್. ಸುದರ್ಶನ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ಮೈಸೂರು ಭಾಗದ ಆರು ಜಿಲ್ಲೆಗಳ ಕಾಂಗ್ರೆಸ್ ಕಾರ್ಯಕರ್ತರು ಪಾಲ್ಗೊಂಡರು.

ರಾಜಕೀಯ ಪಕ್ಷಗಳಿಂದ ತರಬೇತಿ

ಒಂದನೇ ಪುಟದಿಂದ...

ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಸಂಸದ ತೇಜಸ್ವಿ ಸೂರ್ಯ ತರಬೇತಿ ನಡೆಸಿಕೊಟ್ಟರು. ಎಸ್‌ಐಆರ್ ಪ್ರಕ್ರಿಯೆಯನ್ನು ವಿರೋಧಿಸುತ್ತಿದ್ದರೂ ಹಲವು ಸಾಮಾಜಿಕ ಸಂಘಟನೆಗಳು ಮತದಾರರಿಗಾಗಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸುತ್ತಿವೆ.

ಮೈಸೂರಿನಲ್ಲಿ ಕಾಂಗ್ರೆಸ್‌ನಿಂದ ಭಾನುವಾರ ಆಯೋಜಿಸಿದ್ದ ವಿಭಾಗೀಯ ಎಸ್‌ಐಆರ್ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಕಾರ್ಯಕರ್ತರು

ಸಂಭ್ರಮ, ಸೂತಕಕ್ಕೆ ಶಾಲೆಗೆ ದೇಣಿಗೆ...

ಒಂದನೇ ಪುಟದಿಂದ...

'1857ರಲ್ಲಿ ಸ್ಥಾಪನೆಯಾದ ಪ್ರಾಥಮಿಕ ಶಾಲೆಯಲ್ಲಿ ಎಲ್‌ಕೆಜಿಯಿಂದ 7ನೇ ತರಗತಿಯವರೆಗೆ 420 ವಿದ್ಯಾರ್ಥಿಗಳು ಓದುತ್ತಿದ್ದಾರೆ. ನಮ್ಮಲ್ಲಿ ಶಿಕ್ಷಕರಾಗಿದ್ದ ಮ.ಸಿ.ಪಟ್ಟೇದ 1986ರಲ್ಲಿ ಠೇವಣಿ ಇರಿಸಿದ್ದರು. ಅವರಿಂದ ಪ್ರೇರಿತರಾದ ಗ್ರಾಮಸ್ಥರು ಈವರೆಗೆ ₹7.40 ಲಕ್ಷ ಠೇವಣಿ ಇರಿಸಿದ್ದಾರೆ. ಬಡ್ಡಿ ಮೊತ್ತದಲ್ಲಿ ಪ್ರತಿ ತರಗತಿಯ ಸಾಧಕ ವಿದ್ಯಾರ್ಥಿಗೆ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ನಗದು ಬಹುಮಾನ ನೀಡುತ್ತೇವೆ' ಎಂದು ಪ್ರಭಾರ ಮುಖ್ಯಶಿಕ್ಷಕ ಶಂಭುಲಿಂಗಪ್ಪ ದೊಡವಾಡ ತಿಳಿಸಿದರು.

'1994ರಲ್ಲಿ ಸ್ಥಾಪನೆಯಾದ ಪ್ರೌಢಶಾಲೆಯಲ್ಲಿ, ವೀರಭದ್ರ ಜಕಾತಿ 1996ರಲ್ಲಿ ₹1 ಸಾವಿರ ಠೇವಣಿ ಇರಿಸಿದರು. ಅಂದಿನಿಂದ ಠೇವಣಿ ಇರಿಸುವ ಪರಂಪರೆ ಮುಂದುವರಿದಿದ್ದು, ಈವರೆಗೆ ₹5.60 ಲಕ್ಷ ಸಂಗ್ರಹವಾಗಿದೆ. 8ರಿಂದ 10ನೇ ತರಗತಿಯಲ್ಲಿ 353 ಮಕ್ಕಳಿದ್ದಾರೆ' ಎಂದು ಮುಖ್ಯಶಿಕ್ಷಕ ವೈ.ಎಂ.ಶಿವಬಸನ್ನವರ ತಿಳಿಸಿದರು.

'ಠೇವಣಿಯ ಬಡ್ಡಿ ಮೊತ್ತವು ನಗದು ಬಹುಮಾನ ನೀಡುವುದಕ್ಕಷ್ಟೇ ಮೀಸಲು. ಶಾಲೆಗಳ ಭೌತಿಕ ಸೌಕರ್ಯಗಳ ಸುಧಾರಣೆಗೆ ಇದನ್ನು ಬಳಸುವಂತಿಲ್ಲ' ಎನ್ನುತ್ತಾರೆ ಪ್ರಾಥಮಿಕ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಬಾಬು ಜಾವೂರ.

'ಠೇವಣಿ ಹೊರತಾಗಿ, ವಿವಿಧ ಕಾರ್ಯಕ್ರಮಗಳ ಆಯೋಜನೆಗಾಗಿ ಶಾಲೆಗಳಿಗೆ ಆರ್ಥಿಕ ನೆರವು ನೀಡುತ್ತೇವೆ' ಎಂದು ಗ್ರಾಮಸ್ಥ ಜವಾಹರ ಉಪ್ಪಾರ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವಿಜ್ಞಾನಿಗಳಿಂದ ಆವಿಷ್ಕಾರ

ಬರ ಸಹಿಷ್ಣು 'ಎಂಎಲ್– 322 ರಾಗಿ ತಳಿ' ಅಭಿವೃದ್ಧಿ

• ಮೋಹನ್ ಕುಮಾರ ಸಿ.

ಬೆಂಗಳೂರು: ಮಳೆ ಅಭಾವದಲ್ಲೂ 110 ದಿನಗಳಷ್ಟು ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ನೀಡುವ ಬರ ಸಹಿಷ್ಣು ರಾಗಿ ತಳಿ 'ಎಂಎಲ್– 322' ಅನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ್ದು, ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

'ಮುಂಗಾರು ಈ ಬಾರಿ ತಡವಾಗಿದ್ದು, ಶೇ 30ರಷ್ಟು ಮಳೆ ಕಡಿಮೆಯಾಗುವ ಸಂಭವ ಇದೆ. ಕಳೆದ ಹಲವು ವರ್ಷಗಳ ಸಂಶೋಧನೆಯಿಂದ ಅಭಿವೃದ್ಧಿಪಡಿಸಿರುವ ಈ ಸುಧಾರಿತ ತಳಿಯು ರೈತರಿಗೆ ಚೇತರಿಕೆ ನೀಡಲಿದೆ' ಎನ್ನುತ್ತಾರೆ ಇಲ್ಲಿನ ಕೃಷಿ ವಿಜ್ಞಾನಿಗಳು.

ರಾಗಿ ಬೆಳೆಯುವ ಜಿಲ್ಲೆಗಳಾದ ತುಮಕೂರು, ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗದ ಮಳೆಯಾಶ್ರಿತ ಬಯಲುಸೀಮೆ ರೈತರಿಗೆ ಹೊಸ ತಳಿಯು ನೆರವಾಗಲಿದೆ.

ಮೂರೂವರೆ ತಿಂಗಳಲ್ಲಿ ಕಟಾವು: 'ಮಧ್ಯಮಾವಧಿಯ ತಳಿಯಾಗಿದ್ದು, ಆಗಸ್ಟ್– ಸೆಪ್ಟೆಂಬರ್‌ನಲ್ಲಿ ಬಿತ್ತನೆ ಮಾಡಿದರೆ 105 ರಿಂದ 110 ದಿನಗಳಲ್ಲಿ ಕಟಾವಿಗೆ ಬರಲಿದೆ. ಬೇರೆ ತಳಿಗಳಿಗೆ 120ಕ್ಕೂ ಹೆಚ್ಚು ದಿನಗಳು ಬೇಕು. ಮಳೆಯಾಶ್ರಿತ ಖುಷ್ಕಿ ಭೂಮಿಯಲ್ಲಿ ಎಕರೆಗೆ 14 ರಿಂದ 16 ಕ್ವಿಂಟಲ್ ಧಾನ್ಯ ಹಾಗೂ 4.5 ಟನ್ ಮೇವು ಸಿಗುತ್ತದೆ' ಎಂದು ತಳಿ ಅಭಿವೃದ್ಧಿಪಡಿಸಿರುವ ವಿಜ್ಞಾನಿ ಮೋಹನ್ ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

ನೀರಾವರಿ ಪ್ರದೇಶದಲ್ಲಿ ಇದೇ ತಳಿಯಿಂದ 18ರಿಂದ 20 ಕ್ವಿಂಟಲ್ ಧಾನ್ಯ ಹಾಗೂ 5.2 ಟನ್ ಮೇವು ಇಳುವರಿ ಪಡೆಯಬಹುದು. ಹುಲ್ಲಿನ ಕಾಂಡವು ಗಟ್ಟಿಯಾಗಿದ್ದು, ಕಟಾವಿಗೂ ಮೊದಲು ತೀವ್ರ ಗಾಳಿಗೆ ನೆಲಕಚ್ಚದು. ಕುತ್ತಿಗೆ ಬೆಂಕಿ, ತೆನೆ ಬೆಂಕಿ, ಇಳುಕು ರೋಗ ನಿರೋಧಕ ಶಕ್ತಿ ಹೊಂದಿರುವ ತಳಿಯು ದೀರ್ಘ ಒಣ ಹವೆ ಮತ್ತು ತೇವಾಂಶ ಕೊರತೆಯನ್ನು ಸಹಿಸುತ್ತದೆ. ಕೀಟನಾಶಕ, ಶಿಲೀಂಧ್ರ ನಾಶಕಗಳ ಬಳಕೆ ಅಗತ್ಯವಿಲ್ಲ.

ರಾಗಿ ಗಿಡದ ಬುಡದಲ್ಲಿ ಹೆಚ್ಚಿನ ತೆಂಡೆಗಳು ಒಡೆಯುವುದರಿಂದ ತೆನೆಗಳ ಸಂಖ್ಯೆಯೂ ಹೆಚ್ಚಲಿದೆ. ಧಾನ್ಯದ ಹೊಟ್ಟು ಗಟ್ಟಿಯಾಗಿದ್ದು, ಒಕ್ಕಣೆ ಮಾಡುವಾಗ ದೂಳಿನ ಪ್ರಮಾಣವೂ ಕಡಿಮೆ.

ಮುಖ್ಯಾಂಶಗಳು

- ಮೂರೂವರೆ ತಿಂಗಳಲ್ಲಿ ಫಸಲು
- ಎಕರೆಗೆ 14–16 ಕ್ವಿಂಟಲ್ ಇಳುವರಿ
- 'ಬೆಂಕಿ ರೋಗ' ನಿರೋಧಕ ಶಕ್ತಿ

ಬದಲಾಗುತ್ತಿರುವ ಹವಾಮಾನ ಸವಾಲುಗಳಿಗೆ ವಿಶ್ವವಿದ್ಯಾಲಯವು ಅಭಿವೃದ್ಧಿ ಪಡಿಸಿರುವ 'ಎಂಎಲ್– 322' ರಾಗಿ ತಳಿಯು ರಾಜ್ಯದ ಬಯಲುಸೀಮೆಯ ರೈತರಿಗೆ ವರದಾನವಾಗಲಿದೆ
ಪ್ರೊ.ಎಸ್.ವಿ.ಸುರೇಶ, ಕುಲಪತಿ

'ಆನ್‌ಲೈನ್‌ನಲ್ಲಿ ಖರೀದಿಗೆ ಅವಕಾಶ'

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆದಿರುವ 'ಎಂಎಲ್ 322' ರಾಗಿ

'950 ಕ್ವಿಂಟಲ್‌ನಷ್ಟು ಎಂಎಲ್-322 ಬಿತ್ತನೆ ಬೀಜದ ದಾಸ್ತಾನು ಸಿದ್ಧಗೊಂಡಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಮಾರಾಟ ಮಳಿಗೆ ಇಲ್ಲವೇ www.uasgkvkseeds.org ವೆಬ್‌ಸೈಟ್‌ನಲ್ಲಿ ಖರೀದಿಸುವ ವ್ಯವಸ್ಥೆ ಮಾಡಲಾಗಿದೆ. ಮಧ್ಯವರ್ತಿಗಳ ಹಾವಳಿ ಇಲ್ಲ. ನೇರವಾಗಿ ದೂರವಾಣಿ ಸಂಖ್ಯೆ 080-23620494ಕ್ಕೆ ಕರೆ ಮಾಡಬಹುದು' ಎನ್ನುತ್ತಾರೆ ವಿಶ್ವವಿದ್ಯಾಲಯದ ಬೀಜ ವಿಭಾಗದ ವಿಶೇಷ ಅಧಿಕಾರಿ ಕೆ.ವಿಶ್ವನಾಥ್.

ಸಿನಿಮಾ ನಿರ್ದೇಶಕ ಎನ್.ಎಸ್. ಶಂಕರ್ ನಿಧನ

ಎನ್.ಎಸ್ ಶಂಕರ್

ಬೆಂಗಳೂರು: ಕನ್ನಡ ಚಿತ್ರರಂಗದ ನಿರ್ದೇಶಕ, ಲೇಖಕ ಹಾಗೂ ಪತ್ರಕರ್ತ ಎನ್.ಎಸ್. ಶಂಕರ್ (67) ಹೃದಯಾಘಾತದಿಂದ ಭಾನುವಾರ ನಿಧನರಾದರು.

ನಾಗರಭಾವಿಯ ಸ್ವಗೃಹದಲ್ಲಿ ಮಧ್ಯಾಹ್ನ ನಾಲ್ಕು ಗಂಟೆಯವರೆಗೆ ಪಾರ್ಥೀವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬಳಿಕ ಸುಮನಹಳ್ಳಿ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಸಲಾಯಿತು ಎಂದು ಮೃತರ ಕುಟುಂಬವರ್ಗದವರು ತಿಳಿಸಿದರು.

ಅವರ ಪತ್ನಿ ಇತ್ತೀಚೆಗಷ್ಟೇ ತೀರಿಕೊಂಡಿದ್ದರು. ಅವರಿಗೆ ಪುತ್ರ ಇದ್ದಾರೆ.

1997ರಲ್ಲಿ ಬಿಡುಗಡೆಯಾದ ರಮೇಶ್ ಅರವಿಂದ್ ನಟನೆಯ 'ಉಲ್ಟಾ-ಪಲ್ಟಾ' ಚಿತ್ರದಿಂದ ಶಂಕರ್ ಜನಪ್ರಿಯರಾಗಿದ್ದರು. ಪತ್ರಕರ್ತರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಇವರು, ಪ್ರಜಾವಾಣಿ, ಮುಂಗಾರು, ಲಂಕೇಶ್ ಪತ್ರಿಕೆ ಸೇರಿದಂತೆ ಕೆಲ ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದರು. ಬಳಿಕ ಮೂರು ಚಿತ್ರಗಳನ್ನು ನಿರ್ದೇಶಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿದ್ದವು. ದಲಿತ, ಸಮಾಜವಾದಿ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಇವರು ಅಂಬೇಡ್ಕರ್ ಕುರಿತಾದ ಸಾಕ್ಷ್ಯಚಿತ್ರವನ್ನು ನಿರ್ಮಿಸಿದ್ದರು.

ಶನಿವಾರ ಶಂಕರ್ ಅವರು 'ಚೀತಾ ಕೇಜ್' (ಕೋಲಾರದ ಬೆಟ್ಟ) ಎಂಬ ಚಿತ್ರಕ್ಕೆ ಕ್ಯಾಮೆರಾ ಚಾಲನೆ ಮಾಡಿದ್ದರು. ಅಲ್ಲಿಂದ ಮನೆಗೆ ಬಂದು ಮಲಗಿದವರು ಬೆಳಿಗ್ಗೆ ಏಳಲಿಲ್ಲ ಎಂದು ಕುಟುಂಬ ವರ್ಗದವರು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಸಂಸ್ಕೃತಿ ಎಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು ಹಾಗೂ ಸ್ವಗುಣ, ಪರಗುಣಗಳ ಸಮ್ಮಿಶ್ರಿತ ಕಾಂತಿ.
–ಡಿ.ವಿ. ಗುಂಡಪ್ಪ

ಸಂಪಾದಕೀಯ

ಪೌರತ್ವ ಪುರಾವೆ: ಪಾಸ್‌ಪೋರ್ಟ್ ನೆಪ ಗೊಂದಲ–ಆತಂಕ ಸೃಷ್ಟಿಸುವ ಪ್ರಯತ್ನ

ಪಾಸ್‌ಪೋರ್ಟ್ ಪ್ರಯಾಣದ ದಾಖಲೆಯೇ ಹೊರತು ಪೌರತ್ವದ ನಿರ್ಣಾಯಕ ಪುರಾವೆಯಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿಯೊಬ್ಬರು ನೀಡಿರುವ ಹೇಳಿಕೆ ಪ್ರಶ್ನೆಗಳನ್ನು ಹುಟ್ಟುಹಾಕುವುದರ ಜೊತೆಗೆ ಗೊಂದಲಕ್ಕೂ ಕಾರಣವಾಗಿದೆ. ಸ್ಪಷ್ಟವಾಗಿ ಹೇಳುವುದಾದರೆ, ಅಧಿಕಾರಿಯ ಹೇಳಿಕೆ ಸುದ್ದಿ ಆಗುವಂತಹದ್ದಲ್ಲ; ಅದು ಯಾವುದೇ ಹೊಸ ನೀತಿಯ ಕುರಿತಾಗಿ ಹೇಳುತ್ತಿಲ್ಲ. ಪಾಸ್‌ಪೋರ್ಟ್‌ಗಳನ್ನು ಪಾಸ್‌ಪೋರ್ಟ್ ಕಾಯ್ದೆಯಡಿ ನೀಡಲಾಗುತ್ತದೆ ಹಾಗೂ ಪೌರತ್ವವನ್ನು 'ಪೌರತ್ವ ಕಾಯ್ದೆ 1955' ನಿರ್ದೇಶಿಸುತ್ತದೆ. ಅರ್ಜಿ ಸಲ್ಲಿಸಿದ ವ್ಯಕ್ತಿ ಈ ದೇಶದ ಪ್ರಜೆ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ ಸಾಮಾನ್ಯವಾಗಿ ಪಾಸ್‌ಪೋರ್ಟ್ ನೀಡಲಾಗುತ್ತದೆ. ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಭಾರತದ ಪ್ರಜೆಗಳಲ್ಲದವರಿಗೂ ಪಾಸ್‌ಪೋರ್ಟ್ ನೀಡಲಾಗುತ್ತದೆ. ಪಾಸ್‌ಪೋರ್ಟ್ ಪ್ರಯಾಣದ ದಾಖಲೆ ಎನ್ನುವುದನ್ನು ನ್ಯಾಯಾಲಯಗಳು ಕೂಡ ದೃಢೀಕರಿಸಿವೆ. ಸಂವಿಧಾನವು ಪೌರತ್ವವನ್ನು ವ್ಯಾಖ್ಯಾನಿಸಿದೆಯಾದರೂ, ಪೌರತ್ವವನ್ನು ನಿರ್ಣಾಯಕವಾಗಿ ಸಾಬೀತುಪಡಿಸುವ ಯಾವುದೇ ದಾಖಲೆಯ ಕುರಿತು ಉಲ್ಲೇಖಿಸಿಲ್ಲ. ಮತದಾರರ ಗುರುತಿನ ಚೀಟಿ ಅಥವಾ ಪ್ಯಾನ್ ಕಾರ್ಡ್‌ನಂಥ ದಾಖಲೆಗಳನ್ನು ಪಡೆಯುವ ಪ್ರಕ್ರಿಯೆಯಲ್ಲೂ ಪೌರತ್ವವನ್ನು ದೃಢೀಕರಿಸುವ ದಾಖಲೆಯನ್ನು ಕೇಳುವುದಿಲ್ಲ. ವಿಷಯ ಇಷ್ಟು ಸ್ಪಷ್ಟವಿರುವಾಗ, ಸಚಿವಾಲಯದ ಅಧಿಕಾರಿ ನೀಡಿರುವ ಹೇಳಿಕೆ ಗೊಂದಲವನ್ನು ಸೃಷ್ಟಿಸುವ ಉದ್ದೇಶ ಹೊಂದಿರುವಂತಿದೆ.



ಪಾಸ್‌ಪೋರ್ಟ್ ಪೌರತ್ವ ಪುರಾವೆಯಲ್ಲ ಎನ್ನುವ ಹೇಳಿಕೆಯು, ಮುಂದಿನ ದಿನಗಳಲ್ಲಿ ಪೌರತ್ವದ ಸಮೀಕ್ಷೆ ನಡೆಯಬಹುದೆನ್ನುವ ಆತಂಕ ಸೃಷ್ಟಿಸುವ ಉದ್ದೇಶ ಹೊಂದಿರುವಂತಿದೆ.

ಅಧಿಕಾರಿಯ ಗೊಂದಲಕಾರಿ ಹೇಳಿಕೆಯು ವಾಸ್ತವವಾಗಿ ಪಾಸ್‌ಪೋರ್ಟ್‌ಗೆ ಸಂಬಂಧಿಸಿದ್ದಾಗಿರದೆ, ಪೌರತ್ವವನ್ನು ಉದ್ದೇಶಿಸಿ ನೀಡಿರುವ ಹೇಳಿಕೆಯಂತಿದೆ. ಪೌರತ್ವವನ್ನು ಕುರಿತು ಅನಿಶ್ಚಿತ ಪರಿಸ್ಥಿತಿ ಸೃಷ್ಟಿಸುವುದು ಹಾಗೂ ಪೌರತ್ವವನ್ನು ಸಾಬೀತುಪಡಿಸಬೇಕಾದ ಅಗತ್ಯವಿದೆ ಎನ್ನುವ ಸಂದೇಶವನ್ನು ನೀಡುವುದು ಈ ಹೇಳಿಕೆಯ ಉದ್ದೇಶ ಆಗಿರಬಹುದು. ಹುಟ್ಟು ಹಾಗೂ ವಂಶಪಾರಂಪರ್ಯದ ಮೂಲಕ ಪೌರತ್ವ ತಾನೇ ತಾನಾಗಿ ದೊರೆಯುತ್ತದೆ ಎಂದು ಕಾನೂನು ಹೇಳುತ್ತದೆ. ನೋಂದಣಿಯ ಮೂಲಕ ಅಥವಾ ಭೂಪ್ರದೇಶವೊಂದರ ವಿಲೀನದ ಸಂದರ್ಭದಲ್ಲಿಯೂ ಪೌರತ್ವವನ್ನು ಪಡೆಯಬಹುದಾಗಿದೆ. ಇವುಗಳಲ್ಲಿ ಯಾವುದಾದರೊಂದು ಮಾನದಂಡವನ್ನು ಅನುಸರಿಸಿಯೇ ಪ್ರಸ್ತುತ ಭಾರತದ ಪ್ರಜೆಗಳಾಗಿರುವವರ ಅಥವಾ ಪ್ರಜೆಗಳೆಂದು ಭಾವಿಸಿರುವ ಎಲ್ಲರ ಪೌರತ್ವ ಸಿಂಧುವಾಗಿರುತ್ತದೆ. ಪೌರತ್ವವನ್ನು ಸಾಬೀತುಪಡಿಸಲು ಪಾಸ್‌ಪೋರ್ಟ್ ಸಾಕಾಗುವುದಿಲ್ಲ ಎನ್ನುವ ಹೇಳಿಕೆಯು, ಸರ್ಕಾರ ಬಯಸುವ ರೀತಿಯಲ್ಲಿಯೇ ಪೌರತ್ವವನ್ನು ಸಾಬೀತುಪಡಿಸಬೇಕಾಗಬಹುದು ಎನ್ನುವ ಸೂಚನೆಯನ್ನು ನೀಡುವಂತಿದೆ.

ಈಗಿನ ಪರಿಸ್ಥಿತಿಯು, ಭಾರತೀಯ ಚುನಾವಣಾ ಆಯೋಗವು (ಇಸಿಐ) 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಹೆಸರಿನಲ್ಲಿ ನಾಗರಿಕರು ಮತದಾರರಾಗಿ ತಮ್ಮ ಸ್ಥಾನಮಾನವನ್ನು ಸಾಬೀತುಪಡಿಸಬೇಕೆಂದು ಒತ್ತಾಯಿಸುತ್ತಿರುವ ಸಂದರ್ಭದೊಂದಿಗೆ ತಳಕು ಹಾಕಿಕೊಂಡಿದೆ. ಕೋಟ್ಯಂತರ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇನ್ನೂ ಲಕ್ಷಾಂತರ ಜನರು ಮತದಾರರಾಗಿ ತಮ್ಮ ಸ್ಥಾನಮಾನದ ಬಗ್ಗೆ ತೀರ್ಮಾನಕ್ಕಾಗಿ ಕಾಯುತ್ತಿದ್ದಾರೆ. ಆ ತೀರ್ಮಾನ ತ್ವರಿತವಾಗಿ ಬಾರದೇ ಇರಬಹುದು. ಒಬ್ಬ ವ್ಯಕ್ತಿ ಮತದಾರನೆಂಬುದನ್ನು ಸಾಬೀತುಪಡಿಸಲು 'ಇಸಿಐ' ಹಲವು ದಾಖಲೆಗಳನ್ನು ಅಪೇಕ್ಷಿಸುತ್ತಿದೆ. ಆದರೆ, ಆ ದಾಖಲೆಗಳನ್ನು ಒದಗಿಸುವುದು ದೊಡ್ಡ ಸಂಖ್ಯೆಯ ಜನರಿಗೆ ಸಾಧ್ಯವಾಗಿಲ್ಲ. ಏಕೆಂದರೆ, ಆ ದಾಖಲೆಗಳನ್ನು ಜನಸಾಮಾನ್ಯರು ಪಡೆಯುವುದು ಕಷ್ಟಸಾಧ್ಯವಾಗಿದೆ. ದಾಖಲೆಗಳನ್ನು ಸಲ್ಲಿಸಿರುವ ಕೆಲವರ ಹೆಸರುಗಳನ್ನೂ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಈ ಪ್ರಕ್ರಿಯೆಯನ್ನು ಪೌರತ್ವದ ವಿಷಯದಲ್ಲಿ ಅನುಸರಿಸಿದರೆ ಪರಿಸ್ಥಿತಿ ಮತ್ತಷ್ಟು ಸಂಕೀರ್ಣವಾಗಬಹುದು. ಪೌರತ್ವವನ್ನು ಸಾಬೀತುಪಡಿಸುವ ಏಕೈಕ ದಾಖಲೆ ಜನನ ಪ್ರಮಾಣಪತ್ರವೇ ಆಗಿರಬಹುದು ಹಾಗೂ ಅದಕ್ಕೆ ಸಂಬಂಧಿಸಿದಂತೆಯೂ ಹುಟ್ಟಿದ ವರ್ಷ ಅಥವಾ ಪೋಷಕರಿಗೆ ಸಂಬಂಧಿಸಿದ ಷರತ್ತುಗಳು ಅನ್ವಯಿಸಬಹುದು. ಅನೇಕರು ಜನನ ಪ್ರಮಾಣಪತ್ರವನ್ನು ಹೊಂದಿಲ್ಲ. ಮೂಲ ದಾಖಲೆಗಳು ಇಲ್ಲದಿರುವುದರಿಂದ ಪ್ರಸ್ತುತ ಜನನ ಪ್ರಮಾಣಪತ್ರ ಪಡೆಯಬೇಕೆಂದರೂ ಸಾಧ್ಯವಾಗುವುದಿಲ್ಲ. ಹಾಗಾಗಿ, ಪೌರತ್ವದ ಸಮಗ್ರ ಪರಿಷ್ಕರಣೆಯೇನಾದರೂ ನಡೆದಲ್ಲಿ ಎಸ್‌ಐಆರ್‌ಗಿಂತಲೂ ಪರಿಸ್ಥಿತಿ ಹೆಚ್ಚು ಹದಗೆಡುವ ಸಾಧ್ಯತೆಯಿದೆ. ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ) ಹಾಗೂ ಪೌರತ್ವ (ತಿದ್ದುಪಡಿ) ಮಸೂದೆ ಕುರಿತು ಈ ಹಿಂದೆ ಸಾಕಷ್ಟು ಚರ್ಚೆ ನಡೆದಿದೆ. ಈ ಹಿನ್ನೆಲೆಯಲ್ಲಿ, ಪಾಸ್‌ಪೋರ್ಟ್ ಕುರಿತ ಹೇಳಿಕೆಯು, ಪೌರತ್ವದ ಸಮೀಕ್ಷೆ ನಡೆಸುವ ಸಾಧ್ಯತೆ ಹಾಗೂ ಅದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಜನರಲ್ಲಿ ಆತಂಕ ಉಂಟುಮಾಡಿದೆ.

ತೆರವು ಅಲ್ಲೂ ಆಗಲಿದೆಯೆ?

ಬೆಂಗಳೂರಿನ ಫುಟ್‌ಪಾತ್‌ಗಳಿಂದ ಬೀದಿಬದಿ ವ್ಯಾಪಾರಿಗಳನ್ನು ಮುಲಾಜಿಲ್ಲದೆ ತೆರವು ಮಾಡಿಸುವುದಾಗಿ ಸಚಿವ ಕೃಷ್ಣ ಭೈರೇಗೌಡರು ಘೋಷಿಸಿದ್ದಾರೆ. ಮಾನ್ಯ ಮಂತ್ರಿಗಳು ಇದೇ ಶೂರತನವನ್ನು ರಾಜಕಾಲುವೆ, ಕೆರೆಗಳನ್ನು ಅತಿಕ್ರಮಿಸಿರುವ ಸಿರಿವಂತರ ಮೇಲೆಯೂ ತೋರುತ್ತಾರೆಯೆ?

ಸವಿರಾಜ್ ಆನಂದೂರು, ಕಥೆಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಎಸ್‌ಐಆರ್ ಪ್ರಕ್ರಿಯೆಯು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಪ್ರೇರಿತವಾಗಿದೆ. ಪರಿಷ್ಕರಣೆಗೆ ನಮ್ಮ ವಿರೋಧ ಇಲ್ಲ. ಸತ್ತವರು, ಎರಡೆರಡು ಕಡೆ ಹೆಸರು ಇರುವವರನ್ನು ಕೈಬಿಡಿ. ಆದರೆ, ಅರ್ಹರನ್ನು ಜಾತಿ ಆಧಾರದಲ್ಲಿ ಕೈಬಿಡಲು ಅವಕಾಶ ನೀಡುವುದಿಲ್ಲ; ಇದು ಪ್ರಜಾಪ್ರಭುತ್ವಕ್ಕೆ ಮಾರಕ.

ಬಿ.ಕೆ. ಹರಿಪ್ರಸಾದ್, ಅಧ್ಯಕ್ಷ, ಕೆಪಿಸಿಸಿ

25 ವರ್ಷಗಳ ಹಿಂದೆ

ಶುಕ್ರವಾರ, 29-6-2001

• **'ಕೃಷ್ಣಾ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮತಿ ಇಲ್ಲ'**

ನವದೆಹಲಿ, ಜೂನ್ 28– ಕೃಷ್ಣಾ ನೀರಿನ ವಿವಾದಕ್ಕೆ ಇದೀಗ ಮತ್ತೊಂದು ಹೊಸ ತಿರುವು ಪ್ರಾಪ್ತವಾಗಿದೆ.

ಕೃಷ್ಣಾ ನದಿಗೆ ಅಡ್ಡವಾಗಿ ಆಂಧ್ರ ಪ್ರದೇಶ ಸರ್ಕಾರವು ನಿರ್ಮಿಸುತ್ತಿರುವ ಮೂರು ಯೋಜನೆಗಳಿಗೆ ಕೇಂದ್ರ ಅನುಮತಿ ನೀಡಿದೆ ಎಂಬುದನ್ನು ಕೇಂದ್ರ ಜಲಸಂಪನ್ಮೂಲ ಕಾರ್ಯದರ್ಶಿ ಎಂ.ಬಿ. ನವಾಲವಾಲ ಅವರು ನಿರಾಕರಿಸುವ ಮೂಲಕ ಈ ತಿರುವು ನೀಡಿದ್ದಾರೆ.

ಕೇಂದ್ರ ಸರ್ಕಾರ ಈ ಮೂರು ಯೋಜನೆಗಳಿಗೆ ನೀಡಿರುವ ಅನುಮತಿ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಮುಖ್ಯಮಂತ್ರಿ ಕೃಷ್ಣ ಅವರು ಪ್ರಧಾನಿಗೆ ಜೂನ್ 24ರಂದು ಬರೆದ ಪತ್ರಕ್ಕೆ ನವಾಲವಾಲ ಪ್ರತಿಕ್ರಿಯೆ ನೀಡಿದ್ದಾರೆ.

• **ಕೃಷಿ ಸಾಲ: ಸುಸ್ತಿ ಬಡ್ಡಿ ರಿಯಾಯಿತಿ ನಿರ್ಧಾರ**

ಬೆಂಗಳೂರು, ಜೂನ್ 28– ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ ಪಡೆದಿರುವ ಸಾಲವನ್ನು ಒಂದೇ ಕಂತಿನಲ್ಲಿ ತೀರಿಸುವ ರೈತರಿಗೆ ಒಟ್ಟು 252 ಕೋಟಿ ರೂಪಾಯಿ ಸುಸ್ತಿ ಬಡ್ಡಿ ಮತ್ತು ಇತರ ರಿಯಾಯಿತಿಗಳನ್ನು ಕೊಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಇದರಿಂದ 3 ಲಕ್ಷಕ್ಕೂ ಹೆಚ್ಚು ರೈತರು ಲಾಭ ಪಡೆಯಲಿದ್ದಾರೆ ಎಂದು ಸಹಕಾರ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

75 ವರ್ಷಗಳ ಹಿಂದೆ

ಶುಕ್ರವಾರ, 29-6-1951

• **ಸಿನಿಮಾ ಪ್ರವೇಶ ದರ ಹೆಚ್ಚಳ**

ಬೆಂಗಳೂರು, ಜೂನ್ 28– ಜುಲೈ 1ನೇ ತಾರೀಕಿನಿಂದ ಮನರಂಜನೆಗಾಗಿ ಚಲನಚಿತ್ರ ಮಂದಿರಗಳಿಗೆ ಹೋಗುವ ಜನರು ಅಪ್ರತ್ಯಕ್ಷವಾಗಿ ಸರ್ಕಾರಕ್ಕೆ ಹೊಸ ಮನರಂಜನೆ ತೆರಿಗೆ ಕೊಡುವರು.

ಚಲನಚಿತ್ರ ಪ್ರದರ್ಶನಗಳ ಮೇಲೆ ಸರ್ಕಾರ ಇತ್ತೀಚೆಗೆ ವಿಧಿಸಿರುವ ಪ್ರದರ್ಶನ ತೆರಿಗೆಯ ಕಾರಣವಾಗಿ ಚಲನಚಿತ್ರ ಮಂದಿರ ಪ್ರವೇಶ ದರವನ್ನು ಹೆಚ್ಚಿಸಲು ಇಂದು ನಡೆದ ಮೈಸೂರು ಫಿಲಂ ಛೇಂಬರ್ ಸಭೆ ತೀರ್ಮಾನಿಸಿತು.

ನಂಬಿ ಕೆಟ್ಟವರೇ ಎಲ್ಲರೂ..!



ಅನುಸಂಧಾನ

ರವೀಂದ್ರ ಭಟ್ಟ

'ನಂಬಿ ಕೆಟ್ಟವರಿಲ್ಲವೋ' ಎಂದರು ವ್ಯಾಸರಾಯರು. 'ಆ ಮಂತ್ರ ಈ ಮಂತ್ರ ಜಪಿಸಿ ಕೆಡಲು ಬೇಡ' ಎಂದರು ಪುರಂದರದಾಸರು. ಆದರೆ, ಕರ್ನಾಟಕದ ಪ್ರಜೆಗಳು ಆ ಪಕ್ಷ ಈ ಪಕ್ಷ ಎಂದು, ಆ ನಾಯಕ ಈ ನಾಯಕ ಎಂದು ನಂಬಿ ಕೆಟ್ಟದ್ದನ್ನು ಬಿಟ್ಟರೆ, ಆ ನಂಬಿಕೆಯಿಂದ ಪ್ರಜೆಗಳಿಗೆ ಉಪಯೋಗವಾಗಲಿಲ್ಲ. ನಾಡಿನ ಹಿತ ಸಾಧನೆಯೂ ಆಗಲಿಲ್ಲ. ನಾಯಕರೂ ನಂಬಿಕೆ ಉಳಿಸಿಕೊಳ್ಳಲಿಲ್ಲ. ನಂಬಿ ಕೆಡುವ ಪರಿಪಾಠಕ್ಕೆ ಹೊಸ ಸೇರ್ಪಡೆ ಬಿಡದಿ ಟೌನ್‌ಶಿಪ್. ಅಧಿಕಾರದಲ್ಲಿದ್ದಾಗ ಒಂದು ನಿಲುವು, ವಿರೋಧ ಪಕ್ಷದಲ್ಲಿ ಇದ್ದಾಗ ಇನ್ನೊಂದು ನಿಲುವು. ಪಕ್ಷಗಳ ನಿಲುವುಗಳು ಹೇಗೆ ಕಾಲಕಾಲಕ್ಕೆ ಬದಲಾಗುತ್ತವೆ ಎನ್ನುವುದಕ್ಕೆ ಇದು ಜ್ವಲಂತ ಉದಾಹರಣೆ.

2006-07ರಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರವಿದ್ದಾಗ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ, ಬಿಡದಿ ಬಳಿ 9 ಸಾವಿರ ಎಕರೆಗೂ ಹೆಚ್ಚಿನ ಪ್ರದೇಶದಲ್ಲಿ ಜ್ಞಾನನಗರಿ ಅಥವಾ ಮೆಗಾ ಟೌನ್‌ಶಿಪ್ ನಿರ್ಮಿಸುವ ಯೋಜನೆಯನ್ನು ಪ್ರಕಟಿಸಿದರು. ಅದಕ್ಕಾಗಿ ಜಾಗತಿಕ ಟೆಂಡರ್ ಕೂಡ ಕರೆಯಲಾಗಿತ್ತು. ಆಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಆ ಯೋಜನೆಯನ್ನು ಬಲವಾಗಿ ವಿರೋಧಿಸಿತು. 'ರೈತರ ಫಲವತ್ತಾದ ಭೂಮಿಯನ್ನು ಕಿತ್ತುಕೊಳ್ಳುವ ಯೋಜನೆ ಇದು, ಇದು ರಿಯಲ್ ಎಸ್ಟೇಟ್ ದಂಧೆ' ಎಂದು ಕಟುವಾಗಿ ಟೀಕಿಸಿತು.

2013ರಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗ ಬಿಡದಿ ಟೌನ್‌ಶಿಪ್‌ಗೆ ಮತ್ತೆ ಜೀವ ಬಂತು. ಸಿದ್ದರಾಮಯ್ಯ ಸರ್ಕಾರ 'ಗ್ರೇಟರ್ ಬೆಂಗಳೂರು ಅಥಾರಿಟಿ' ಅಡಿಯಲ್ಲಿ ಬಿಡದಿ ಸ್ಮಾರ್ಟ್ ಟೌನ್‌ಶಿಪ್ ಜಾರಿಗೆ ತರಲು ಸಚಿವ ಸಂಪುಟದ ಅನುಮೋದನೆ ನೀಡಿತು. ತಮ್ಮದೇ ಕನಸಿನ ಕೂಸಾಗಿದ್ದರೂ ಆಗ ವಿರೋಧ ಪಕ್ಷದಲ್ಲಿದ್ದ ಎಚ್.ಡಿ. ಕುಮಾರಸ್ವಾಮಿ ಅವರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು. 'ಯಾವುದೇ ಕಾರಣಕ್ಕೂ ರೈತರ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳಲು ಬಿಡುವುದಿಲ್ಲ' ಎಂದರು. ಯೋಜನೆಯ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುವುದಾಗಿ ಪ್ರಕಟಿಸಿದರು.

2018ರಲ್ಲಿ ಇದೇ ಕಾಂಗ್ರೆಸ್– ಜೆಡಿಎಸ್ ಮೈತ್ರಿಕೂಟದ ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂತು. ಆಗ ಬಿಡದಿ ಟೌನ್‌ಶಿಪ್ ಕನಸು ಕಂಡವರೂ, ಅದಕ್ಕೆ ವಿರೋಧ ವ್ಯಕ್ತಪಡಿಸಿದವರೂ, ಇಬ್ಬರೂ ಜೊತೆಯಾಗಿ ಸರ್ಕಾರ ರಚಿಸಿದ್ದರು. ಆ ಅವಧಿಯಲ್ಲಿ ಟೌನ್‌ಶಿಪ್ ಯೋಜನೆಗೆ ಮತ್ತೆ ವೇಗ ಕೊಡುವ ಸೂಚನೆ ಕಂಡು ಬಂದಿತ್ತಾದರೂ, ಆ ಸರ್ಕಾರ ಬಹಳ ದಿನ ಬಾಳದೇ ಇದ್ದುದರಿಂದ ಬಿಡದಿ ಟೌನ್‌ಶಿಪ್ ಯೋಜನೆ ಆಗ ತಣ್ಣಗಾಯಿತು. ನಂತರ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರ್ಕಾರ ಅದಕ್ಕೆ ಹೆಚ್ಚಿನ ಮಹತ್ವ ನೀಡಲಿಲ್ಲ.

2006-07ರಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಹಣಕಾಸು ಮಂತ್ರಿಯಾಗಿದ್ದವರು ಯಡಿಯೂರಪ್ಪ. ಟೌನ್‌ಶಿಪ್ ಯೋಜನೆಗೆ ಸಚಿವ ಸಂಪುಟದಲ್ಲಿ ಒಪ್ಪಿಗೆಯನ್ನು ನೀಡಿದ್ದಲ್ಲದೆ, ಜಾಗತಿಕ ಟೆಂಡರ್‌ಗೆ ಸಹಿ ಹಾಕಿದವರೂ ಯಡಿಯೂರಪ್ಪ ಅವರೇ. 2008ರಲ್ಲಿ ಬಿಜೆಪಿ ಸರ್ಕಾರ ಬಂದಾಗ ರೈತರ ಪ್ರತಿಭಟನೆಗೆ ಮಣಿದು ಯಡಿಯೂರಪ್ಪ, ಸದಾನಂದ ಗೌಡ ಮತ್ತು ಜಗದೀಶ್ ಶೆಟ್ಟರ್ ಯಾರೂ ಈ ಯೋಜನೆಗೆ ವೇಗ ನೀಡಲಿಲ್ಲ. ಆದರೆ ಯಾರೂ ಯೋಜನೆಯನ್ನು ರದ್ದುಗೊಳಿಸಲೂ ಇಲ್ಲ.

2023ರಲ್ಲಿ ಮತ್ತೆ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಡಿ.ಕೆ. ಶಿವಕುಮಾರ್ ಅವರು ಉಪಮುಖ್ಯಮಂತ್ರಿ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರಾದ ನಂತರ, ಬಿಡದಿ ಟೌನ್‌ಶಿಪ್‌ಗೆ ಹೆಚ್ಚಿನ ವೇಗ ದೊರೆಯಿತು. ಈಗ ಇದನ್ನು 'ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್" (ಜಿಬಿಐಟಿ) ಅಥವಾ ಭಾರತದ ಮೊದಲ ಎಐ (ಕೃತಕ ಬುದ್ಧಿಮತ್ತೆ) ಚಾಲಿತ ಸ್ಮಾರ್ಟ್ ಸಿಟಿ ಎಂದು ಕರೆಯಲಾಗುತ್ತಿದೆ.

> 'ನಂಬಿ ಕೆಟ್ಟವರಿಲ್ಲ' ಎನ್ನುವ ಮಾತು ಪ್ರಜಾಪ್ರಭುತ್ವ ಸಂದರ್ಭಕ್ಕೆ ಹೊಂದುವುದಿಲ್ಲ. ಈ ವ್ಯವಸ್ಥೆಯಲ್ಲಿ ರಾಜಕೀಯ ನಾಯಕರನ್ನು ನಂಬುವ ಪ್ರಜೆಗಳಿಗೆ ಯಾವ ಉಪಯೋಗವೂ ಇಲ್ಲ. ಅಧಿಕಾರದಲ್ಲಿ ಇದ್ದಾಗೊಂದು, ಇಲ್ಲದಿದ್ದಾಗೊಂದು ಮಾತನಾಡುವ ರಾಜಕಾರಣಿಗಳ ನಡವಳಿಕೆ ಸಮಯಕ್ಕೆ ತಕ್ಕಂತೆ ಇರುತ್ತದೆಯೇ ಹೊರತು, ಜನಹಿತಕ್ಕೆ ಪೂರಕವಾಗಿರುವುದಿಲ್ಲ.

ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದ ಮೇಲೆ ಯೋಜನೆಗೆ ಇನ್ನಷ್ಟು ವೇಗ ಸಿಕ್ಕಿದೆ. 20 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ 7,500 ಎಕರೆ ಪ್ರದೇಶದಲ್ಲಿ ಯೋಜನೆಯನ್ನು ಜಾರಿಗೊಳಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಿದ್ಧರಾಗಿದ್ದಾರೆ. ಕೇಂದ್ರ ಸಚಿವರೂ ಆಗಿರುವ ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಈ ಯೋಜನೆಯ ವಿರುದ್ಧ ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಸದ್ಯದ ಕರ್ನಾಟಕ ರಾಜಕಾರಣದಲ್ಲಿ ಇದು ಭಾರೀ ಚರ್ಚೆಗೆ ಮತ್ತು ಹಗ್ಗಜಗ್ಗಾಟಕ್ಕೆ ಕಾರಣವಾಗಿದೆ.

20 ವರ್ಷಗಳ ಹಿಂದೆ ಕುಮಾರಸ್ವಾಮಿ ಅವರು ಯೋಜನೆಯನ್ನು ಪ್ರಕಟಿಸಿದಾಗ, 'ಇದೊಂದು ರಿಯಲ್ ಎಸ್ಟೇಟ್ ದಂಧೆ' ಎಂದು ಕೂಗಾಡಿದ್ದ ಕಾಂಗ್ರೆಸ್ ಪಕ್ಷ ಈಗ ಯೋಜನೆಗೆ ವೇಗ ನೀಡಿದ್ದೇ ಅಲ್ಲದೆ, ರಾಮನಗರ ಮತ್ತು ಹಾರೋಹಳ್ಳಿ ತಾಲ್ಲೂಕುಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನೂ ಕೈಗೊಂಡಿದೆ. ಈಗ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಇದನ್ನು ರಿಯಲ್ ಎಸ್ಟೇಟ್ ದಂಧೆ ಎಂದು ಟೀಕಿಸುತ್ತಿವೆ. ಪ್ರಜೆಗಳಿಗೆ ಯಾರನ್ನು ನಂಬುವುದೋ ತಿಳಿಯುತ್ತಿಲ್ಲ. ರಾಜಕಾರಣಿಗಳ ಸಮಯಸಾಧಕತನವನ್ನು ನೋಡಿ ಅಳುವುದೋ ನಗುವುದೋ ಗೊತ್ತಾಗುತ್ತಿಲ್ಲ.

ಜನರನ್ನು ನಂಬಿಸಿ ಕೈಬಿಡುವುದರಲ್ಲಿ ಪಕ್ಷಗಳ ನಡುವೆ ವ್ಯತ್ಯಾಸವೇನೂ ಇಲ್ಲ. ಮತದಾರರಿಗೆ ವಿಶ್ವಾಸ ದ್ರೋಹ ಮಾಡುವುದೇ ಸಮಕಾಲೀನ ರಾಜಕಾರಣದ ಮುಖ್ಯ ಲಕ್ಷಣ ಆಗಿರುವಂತಿದೆ.

ಅಧಿಕಾರದಲ್ಲಿ ಇದ್ದಾಗ ಒಂದು ರೀತಿ, ವಿರೋಧ ಪಕ್ಷಕ್ಕೆ ಬಂದಾಗ ಇನ್ನೊಂದು ನೀತಿ ಎನ್ನುವುದು ಬಿಡದಿ ಯೋಜನೆಗೆ ಮಾತ್ರವಾ ಎಂದು ಕೇಳಿದರೆ ಛೇ... ಛೇ... ಹಾಗೇನಿಲ್ಲ. ನಮ್ಮ ರಾಜಕಾರಣಿಗಳು ಎಲ್ಲದರಲ್ಲಿಯೂ ಹಾಗೆಯೇ! ರಾಜ್ಯದಲ್ಲಿ ನೂತನ 'ರಾಷ್ಟ್ರೀಯ ಶಿಕ್ಷಣ ನೀತಿ'ಯನ್ನು ಬಿಜೆಪಿ ಸರ್ಕಾರ ಅತ್ಯಂತ ಉತ್ಸಾಹದಿಂದ ಜಾರಿಗೆ ತಂದಿತು. ಆಗ ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ಆ ನೀತಿಯನ್ನು 'ವಿದ್ಯಾರ್ಥಿಗಳ ವಿರೋಧಿ ನೀತಿ' ಎಂದು ಕಟುವಾಗಿ ಟೀಕಿಸಿತು. ನಂತರ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ 'ರಾಜ್ಯ ಶಿಕ್ಷಣ ನೀತಿ' ಜಾರಿಗೊಳಿಸುವುದಾಗಿ ಪ್ರಕಟಿಸಿತು. ಅದನ್ನು ಬಿಜೆಪಿ 'ವಿದ್ಯಾರ್ಥಿ ವಿರೋಧಿ ನೀತಿ' ಎಂದು ಟೀಕಿಸುತ್ತಿದೆ. ಕಾಂಗ್ರೆಸ್ ಸರ್ಕಾರ ಬಂದು ಮೂರು ವರ್ಷ ಕಳೆದಿದೆ. ಸಿದ್ದರಾಮಯ್ಯ ಅವರಿಂದ ಅಧಿಕಾರ ಹಸ್ತಾಂತರವಾಗಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯೂ ಆಗಿದ್ದಾರೆ. ಇನ್ನೂ ರಾಜ್ಯದಲ್ಲಿ ಯಾವ ಶಿಕ್ಷಣ ನೀತಿ ಅನುಸರಿಸಬೇಕು ಎನ್ನುವುದು ಸ್ಪಷ್ಟವಾಗಿಲ್ಲ. ಕರ್ಮ ಕರ್ಮ.

ಪಠ್ಯಪುಸ್ತಕಗಳನ್ನು ಬಿಜೆಪಿ ಮಾಡಿದರೆ ಕೇಸರೀಕರಣ; ಕಾಂಗ್ರೆಸ್ ಮಾಡಿದರೆ ಕಾಂಗ್ರೆಸ್ಸೀಕರಣ, ಅಷ್ಟೆ. ಕಾರ್ಮಿಕ ಕಾಯ್ದೆಯ ವಿಷಯವನ್ನೇ ತೆಗೆದುಕೊಳ್ಳಿ. ಬಿಜೆಪಿ ಸರ್ಕಾರ ರಾಜ್ಯದಲ್ಲಿ ಕಾರ್ಮಿಕರ ಕೆಲಸದ ಅವಧಿಯನ್ನು 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸುವ ಕಾಯ್ದೆ ಜಾರಿಗೊಳಿಸಿತು. ರಾತ್ರಿಪಾಳಿಯಲ್ಲಿ ಮಹಿಳೆಯರೂ ಕೆಲಸ ಮಾಡುವ ಅವಕಾಶವನ್ನು ಕಾನೂನುಬದ್ಧಗೊಳಿಸಿತು. ಆಗ ಕಾಂಗ್ರೆಸ್ ಪಕ್ಷ 'ಇದೊಂದು ಕಾರ್ಮಿಕ ವಿರೋಧಿ ಕಾನೂನು. ಬಿಜೆಪಿ ಸರ್ಕಾರ ಬಂಡವಾಳಶಾಹಿಗಳ ಪರ' ಎಂದು ಗುಲ್ಲೆಬ್ಬಿಸಿತು. ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ ಈ ಕಾಯ್ದೆಯನ್ನು ಸಂಪೂರ್ಣ ರದ್ದು ಮಾಡಲಿಲ್ಲ. ಜೊತೆಗೆ ಐಟಿ–ಬಿಟಿ ವಲಯದಲ್ಲಿ ಕಾರ್ಮಿಕರ ಕೆಲಸದ ಅವಧಿಯನ್ನು 12ರಿಂದ 14 ಗಂಟೆಗೆ ವಿಸ್ತರಿಸುವ ಪ್ರಸ್ತಾಪವನ್ನೂ ಪರಿಶೀಲಿಸಿತು. ಆಗ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು 'ಇದು ಬಂಡವಾಳಶಾಹಿ ಪರವಾದ ಸರ್ಕಾರ' ಎಂದು ಹುಯಿಲೆಬ್ಬಿಸಿದವು. ಅಲ್ಲಿಗೆ ಯಾವುದೇ ಪಕ್ಷದ ಸರ್ಕಾರ ಬಂದರೂ ಸರ್ಕಾರ ಬಂಡವಾಳಶಾಹಿಗಳ ಪರವಾಗಿಯೇ ಇರುತ್ತದೆ ಎನ್ನುವುದು ಖಾತರಿಯಾಯ್ತು.

ಕೇಂದ್ರದ ಎನ್‌ಡಿಎ ಸರ್ಕಾರ 29 ಕಾರ್ಮಿಕ ಕಾಯ್ದೆಗಳನ್ನು ಒಟ್ಟುಗೂಡಿಸಿ 4 ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿತು. ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಹುಮ್ಮಸ್ಸಿನಲ್ಲಿಯೇ ರಾಜ್ಯ ನಿಯಮಗಳನ್ನು ರೂಪಿಸಿ ಕರಡು ನಿಯಮಗಳನ್ನು ಪ್ರಕಟಿಸಿತು. ಇದು ಕಾರ್ಮಿಕರ ಹಕ್ಕನ್ನು ಕಸಿಯುವ ಸಂಚು ಎಂದು ಕಾಂಗ್ರೆಸ್ ಪಕ್ಷ ಆಗ ಆರೋಪಿಸಿತ್ತು. ನಂತರ ತಾನೇ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ಆ ಸಂಹಿತೆಯನ್ನು ತಿರಸ್ಕರಿಸುವ ಧೈರ್ಯ ಮಾಡಲಿಲ್ಲ. ಸುಮ್ಮನೆ ಕಾಲಹರಣ ಮಾಡುತ್ತಿದೆ ಅಷ್ಟೆ. ಗಿಗ್ ಕಾರ್ಮಿಕರ ರಕ್ಷಣೆಯ ವಿಷಯವೂ ರಾಜಕೀಯ ಮೇಲಾಟಕ್ಕೆ ಕಾರಣವಾಗುತ್ತದೆ ಎಂದರೆ, 'ಬೇಡ ಬೇಡ ಯಾರನ್ನೂ ನಂಬಬೇಡ' ಎಂದು ಹೇಳಬೇಕಾಗುತ್ತದೆ.

ಕೇಂದ್ರ ಸರ್ಕಾರ ಐಪಿಸಿ, ಸಿಆರ್‌ಪಿಸಿ ಮತ್ತು ಸಾಕ್ಷ್ಯ ಕಾನೂನು ಜಾಗದಲ್ಲಿ ಭಾರತೀಯ ನ್ಯಾಯಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಎಂಬ ಮೂರು ಹೊಸ ಕಾಯ್ದೆಗಳನ್ನು ಜಾರಿಗೊಳಿಸಿತು. ಇವುಗಳನ್ನು ಕಾಂಗ್ರೆಸ್ ಪಕ್ಷ ಬಲವಾಗಿ ವಿರೋಧಿಸಿತು. 'ನಾಗರಿಕ ಸ್ವಾತಂತ್ರ್ಯವನ್ನು ಕಸಿಯುವ ಮತ್ತು ಪೊಲೀಸ್ ರಾಜ್‌ಗೆ ದಾರಿ ಮಾಡಿಕೊಡುವ ಕಾಯ್ದೆಗಳು' ಎಂದು ಕೂಗಾಡಿತು. ಕೇಂದ್ರದಲ್ಲಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಇದೊಂದು ಕರಾಳ ಕಾಯ್ದೆ ಎಂದು ಟೀಕಿಸಿದ್ದರೂ ರಾಜ್ಯದಲ್ಲಿ ಆಡಳಿತ ಪಕ್ಷವಾಗಿ ಅದೇ ಕಾಯ್ದೆಗಳ ಅಡಿಯಲ್ಲಿಯೇ ಆಡಳಿತ ನಡೆಸುತ್ತಿದೆ. ಕೆಲವು ತಿದ್ದುಪಡಿಗಾಗಿ ಸಂಪುಟ ಉಪ ಸಮಿತಿ ರಚಿಸಿ ಸುಮ್ಮನಾಗಿದೆ. ಅಲ್ಲಿಗೆ 'ನಂಬಿದರೆ ಕೆಡುತ್ತೇವೆ' ಎನ್ನುವುದು ಗ್ಯಾರಂಟಿಯಾಯ್ತು. ಇವರನ್ನು ನಂಬದೆ ಮುಂದಡಿ ಇಡುವುದೇ ಚಲೊ.

ವಾಚಕರ ವಾಣಿ

ಜನಪ್ರತಿನಿಧಿಗಳ ಮಾತಿಗೆ ಬೇಕು ಲಗಾಮು!

ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಅವರ ಮೇಲೆ ಚಪ್ಪಲಿ ತೂರಿರುವುದು ಹೇಸಿಗೆ ಹುಟ್ಟಿಸುತ್ತದೆ. ಅದೇ ರೀತಿ ಸಂಸದ ಡಾ. ಕೆ. ಸುಧಾಕರ್ ಹಾಗೂ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರ ನಡುವೆ ಕೆಂಪೇಗೌಡರ ಜಯಂತಿ ವಿಚಾರವಾಗಿ ನಡೆದಿರುವ ವಾಗ್ವಾದವೂ ಅನುಚಿತವಾಗಿದೆ. ಮತ್ತೊಂದೆಡೆ, ಬಿಡದಿ ಟೌನ್‌ಶಿಪ್‌ಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ನಡುವಿನ ವಾಕ್ಸಮರ ನಾಗರಿಕ ಸಮಾಜ ತಲೆತಗ್ಗಿಸುವಂತಿದೆ. ಜನ ಪ್ರತಿನಿಧಿಗಳಿಗೆ ಮಾತಿನ ಮೇಲೆ ಹಿಡಿತ ಇಲ್ಲದಂತಾಗಿದೆ. ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ಸಭ್ಯತೆಯಿಂದ ನಡೆದುಕೊಳ್ಳಬೇಕು; ಅಸಭ್ಯವಾಗಿ ವರ್ತಿಸುವುದು ಸಂವಿಧಾನಕ್ಕೆ ತೋರುವ ಅಗೌರವವಾಗಿದೆ. ಸಾರ್ವಜನಿಕ ಸಮಾರಂಭಗಳಲ್ಲಿ ನಗೆಪಾಟಲಿಗೆ ಒಳಗಾಗದಂತೆ ಜನಪ್ರತಿನಿಧಿಗಳು ಘನತೆಯಿಂದ ನಡೆದುಕೊಳ್ಳಬೇಕಾಗಿದೆ.

ವಿ.ಜಿ. ಇನಾಮದಾರ, ಸಾರವಾಡ

ಪೈಶಾಚಿಕ ಕೃತ್ಯ ಸಭ್ಯ ಸಮಾಜಕ್ಕೆ ಸವಾಲು

ದೆಹಲಿಯ ಪಾದಚಾರಿ ಮಾರ್ಗದಲ್ಲಿ ಪೋಷಕರ ಜೊತೆ ಮಲಗಿದ್ದ ಹನ್ನೊಂದು ವರ್ಷದ ಬಾಲಕಿಯನ್ನು ದುಷ್ಕರ್ಮಿಯೊಬ್ಬ ತನ್ನ ಕಾರಿನಲ್ಲಿ ಅಪಹರಿಸಿ, ಅತ್ಯಾಚಾರ ಎಸಗಿ ಹತ್ಯೆಗೈದಿದ್ದಾನೆ. ಕೆಲವು ವರ್ಷಗಳ ಹಿಂದೆ ಮೈಸೂರಿನಲ್ಲೂ ಇಂಥ ಕೃತ್ಯ ನಡೆದಿತ್ತು. ಈ ಪೈಶಾಚಿಕ ಕೃತ್ಯಗಳನ್ನು ನೆನಪಿಸಿಕೊಂಡರೆ ಹೆಣ್ಣು ಹೆತ್ತವರ ಎದೆ ನಡುಗುತ್ತದೆ. ರಾಷ್ಟ್ರ ರಾಜಧಾನಿಯಲ್ಲೇ ಬಡ ಪೋಷಕರಿಗೆ ಒಂದು ರಾತ್ರಿ ಮಲಗಲು ಸೂಕ್ತ ಸ್ಥಳ ಒದಗಿಸದಷ್ಟು ದೇಶ ಬಡವಾಗಿದೆಯೆ? 'ಬೇಟಿ ಬಚಾವೋ ಬೇಟಿ ಪಡಾವೋ' ಘೋಷಣೆ ಅಳವಡಿಸಿಕೊಂಡಿರುವ ನಾವು, ಮಗಳನ್ನು ರಕ್ಷಿಸಿ ಕೊಳ್ಳಲು ಪರಿತಪಿಸುವಂತಹ ಕಾಲಘಟ್ಟಕ್ಕೆ ಸಾಕ್ಷಿಯಾಗುತ್ತಿರುವುದು ದುರದೃಷ್ಟಕರ. ಸರ್ಕಾರಗಳು ಎಚ್ಚೆತ್ತುಕೊಂಡು ಇಂಥ ಕುಕೃತ್ಯಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು.

ಆರ್.ಕೆ. ಉಮೇಶ್, ಹಾವೇರಿ

ಭದ್ರತೆ ಬೇಕು: ನೋಂದಣಿ ಏಕಿಲ್ಲ?

ದೇಶದಲ್ಲಿ ಕಾರ್ಯ ನಿರ್ವಹಿಸುವ ಸಂಘ–ಸಂಸ್ಥೆಗಳು ನೋಂದಾಯಿಸಿ ಕೊಳ್ಳುವ ಮೂಲಕ ಪಾರದರ್ಶಕವಾಗಿ ಇರುವುದು ಅಗತ್ಯ. ಆದರೆ, ಆರ್‌ಎಸ್‌ಎಸ್ ಇದ್ಯಾವುದನ್ನು ಲೆಕ್ಕಿಸದೆ ತನ್ನ ನೂರು ವರ್ಷದ ಪಯಣವನ್ನು ಸಂಭ್ರಮಿಸುತ್ತಿದೆ. ಹಣಕಾಸಿನ ಲೆಕ್ಕಾಚಾರದ ಪ್ರಶ್ನೆ ಬಂದಾಗ, ನಾವು ಸರ್ಕಾರದಿಂದ ಯಾವುದೇ ರೀತಿಯ ಸೌಲಭ್ಯ ಪಡೆಯುತ್ತಿಲ್ಲ ಎಂಬ ಮೊಂಡುವಾದ ಪ್ರದರ್ಶಿಸುತ್ತಿದೆ. ವಾಸ್ತವ ಹೀಗಿದ್ದೂ ಸಂಘಟನೆಯ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಕೇಂದ್ರ ಸರ್ಕಾರದಿಂದ ಝಡ್ ಪ್ಲಸ್ ಭದ್ರತೆ ನೀಡಲಾಗಿದೆ. ಇದು ಜನರ ತೆರಿಗೆ ಹಣವಲ್ಲವೆ? ನೋಂದಣಿಯಾಗದ ಹೊರತು ಅವರಿಗೆ ಸರ್ಕಾರಿ ಸೌಲಭ್ಯವೇಕೆ? ಸರ್ಕಾರಿ ರಕ್ಷಣೆ ಪಡೆದರೆ ಸರ್ಕಾರಿ ಸೌಲಭ್ಯ ಪಡೆದಂತಾಯಿತು ಹಾಗೂ ನಾಗರಿಕರಿಗೆ ಉತ್ತರದಾಯಿ ಆದಂತಾಯಿತು. ಇನ್ನಾದರೂ ಆರ್‌ಎಸ್‌ಎಸ್ ತನ್ನ 'ಹೆಚ್ಚುಗಾರಿಕೆ' ಬಿಟ್ಟು ದೇಶದ ಕಾನೂನಿನ ವ್ಯಾಪ್ತಿಗೆ ಒಳಪಡಲಿ.

ನಾಗಾರ್ಜುನ ಹೊಸಮನಿ, ಕಲಬುರಗಿ

ಮಾದಕ ವಸ್ತುಗಳ ಮಾರಾಟ ಮಟ್ಟಹಾಕಿ

ಶಾಲಾಕಾಲೇಜುಗಳ ಸುತ್ತಮುತ್ತ ಮಾದಕವಸ್ತುಗಳ ಮಾರಾಟ ಹೆಚ್ಚುತ್ತಿರುವುದು ಆತಂಕಕಾರಿ. ವಿದ್ಯಾರ್ಥಿಗಳನ್ನೇ ಗುರಿಯಾಗಿಸಿಕೊಂಡು ಕೆಲ ಸಮಾಜಘಾತುಕ ಶಕ್ತಿಗಳು ಈ ಜಾಲವನ್ನು ವಿಸ್ತರಿಸುತ್ತಿರುವುದು ಭವಿಷ್ಯದ ಯುವಪೀಳಿಗೆಗೆ ದೊಡ್ಡ ಅಪಾಯವಾಗಿದೆ. ಪೊಲೀಸ್, ಶಿಕ್ಷಣ ಇಲಾಖೆ ಹಾಗೂ ಸ್ಥಳೀಯ ಆಡಳಿತಗಳು ಶಾಲಾಕಾಲೇಜುಗಳ ಸುತ್ತಮುತ್ತ ನಿಯಮಿತವಾಗಿ ತಪಾಸಣೆ ನಡೆಸಬೇಕು. ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ಕಟ್ಟುನಿಟ್ಟಿನ ನಿಗಾವಹಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು. ಶಾಲೆಗಳಲ್ಲಿಯೂ ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ನಿರಂತರವಾಗಿ ಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು. ಪೋಷಕರು ಕೂಡ ಮಕ್ಕಳ ಸ್ನೇಹವಲಯ, ದಿನನಿತ್ಯದ ಚಟುವಟಿಕೆಗಳ ಬಗ್ಗೆ ನಿಗಾವಹಿಸಬೇಕು.

ಮಹಮ್ಮದ್ ಜಲಾಲುದ್ದೀನ್, ಮಂಗಳೂರು

ಶಿಕ್ಷಕರ ಸಮಾಜಮುಖಿ ನಡೆ ಮಾದರಿ

ಸಕಲೇಶಪುರ ತಾಲ್ಲೂಕಿನ ಹಳಕೆರೆ ಸರ್ಕಾರಿ ಶಾಲೆಯ ಶಿಕ್ಷಕರಾದ ಲೋಕೇಶ್ ಮತ್ತು ತಮ್ಮಣ್ಣ ಶೆಟ್ಟಿ ಅವರು ವಿದ್ಯಾರ್ಥಿಗಳಿಗಾಗಿ ಕಾರು ಖರೀದಿಸಿರುವುದು ವರದಿ ಆಗಿದೆ. ಶಿಕ್ಷಕರ ಈ ಕಾರ್ಯ ಶ್ಲಾಘನೀಯ. ಶಾಲೆ ಎಂದರೆ ಬರೀ ಕಟ್ಟಡವಲ್ಲ; ಅದು ಮಕ್ಕಳ ಭವಿಷ್ಯ ರೂಪಿಸುವ ದೇಗುಲ. ಪ್ರಸ್ತುತ ಸರ್ಕಾರದ ಅವೈಜ್ಞಾನಿಕ ನೀತಿಗಳ ಪರಿಣಾಮ ರಾಜ್ಯದಾದ್ಯಂತ ಸಾವಿರಾರು ಸರ್ಕಾರಿ ಶಾಲೆಗಳು ಮುಚ್ಚುವ ಹಂತ ತಲಪಿವೆ. ಸ್ವಾರ್ಥಕ್ಕಿಂತ ಮಕ್ಕಳ ಶಿಕ್ಷಣವೇ ಮುಖ್ಯ ಎಂದು ಅರಿತ ಶಿಕ್ಷಕರ ಈ ನಡೆಯು ಇತರರಿಗೂ ಮಾದರಿಯಾಗಬೇಕಿದೆ.

ಜ್ಯೋತಿ ಕಲಾಲ್, ಹೊಸಪೇಟೆ

ಪರಿಶಿಷ್ಟರಿಗೆ ಉಚಿತ ತರಬೇತಿ ಮರೀಚಿಕೆ

ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಐಎಎಸ್, ಕೆಎಎಸ್, ಬ್ಯಾಂಕಿಂಗ್, ರೈಲ್ವೆ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡುವ ಕಾರ್ಯಕ್ರಮ ರೂಪಿಸಿರುವುದು ಸರಿಯಷ್ಟೆ. ಆದರೆ, ಕಳೆದ ಎರಡು–ಮೂರು ವರ್ಷಗಳಿಂದ ಈ ತರಬೇತಿಗೆ ಅರ್ಜಿಯನ್ನೇ ಆಹ್ವಾನಿಸಿಲ್ಲ. ಯುಪಿಎಸ್‌ಸಿ ಪರೀಕ್ಷೆ ತರಬೇತಿಗೂ ಅರ್ಜಿ ಕರೆದಿಲ್ಲ. ಇದಕ್ಕೆ ನೈಜ ಕಾರಣವೂ ತಿಳಿಯುತ್ತಿಲ್ಲ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಣ್ಣ ಹುದ್ದೆಯಿಂದ ಹಿಡಿದು ಉನ್ನತ ಅಧಿಕಾರಿಗಳವರೆಗೆ ಬಹುತೇಕ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಅಧಿಕಾರಿಗಳೇ ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸಾಮಾನ್ಯವಾಗಿ ಪರಿಶಿಷ್ಟ ಜಾತಿಯವರೇ ಇರುತ್ತಾರೆ. ಹೀಗಿದ್ದರೂ ಈ ಪರಿಯ ನಿರ್ಲಕ್ಷ್ಯವೇ?

ಅನಿಲ್ ಕುಮಾರ್, ನಂಜನಗೂಡು

ಚುರುಮುರಿ

ಪ್ರಜಾಸೇವಾ ವೈಖರಿ

• ಸುಮಂಗಲಾ

'ಅಬ್ಬಬ್ಬ... ಡಿಕೇಶಿ ಅಂಕಲ್ಲು ಅತ್ತಾಗೆ ಫಲವತ್ತಾದ ಭೂಮಿ ಮಾಯ ಮಾಡುವ ಬಿಡದಿಯ ಮಾಯೆಯ ಕೈಬಿಡೆನು ಅಂತ ಕೆಟ್ಟ ಹಟಕ್ಕೆ ಬಿದ್ದರೂ ಇತ್ತಾಗೆ ಒಂದು ವಳ್ಳೆ ಕೆಲಸ ಮಾಡ್ಯಾರೆ' ಎಂದು ಬೆಕ್ಕಣ್ಣ ಮುಗುಮ್ಮಾಗಿ ಹೇಳಿತು.

'ಏನಲೇ ಅಂತಾಪರಿ ವಳ್ಳೆ ಕೆಲಸ?' ಎಂದು ಕೇಳಿದೆ ಅಚ್ಚರಿಯಿಂದ.

'ಪ್ರಜೆಗಳ ಕುಂದುಕೊರತೆ ಬಗೆಹರಿಸಕ್ಕೆ ಪ್ರಜಾಸೇವಾ ಇಲಾಖೆ ಶುರು ಮಾಡ್ತಾರಂತೆ. ಅದಕ್ಕೊಬ್ಬರು ಸಚಿವರು, ಮ್ಯಾಲೊಬ್ಬರು ಐಎಎಸ್ ಅಧಿಕಾರಿ, ಸುಮಾರು ಐವತ್ತು ಸಿಬ್ಬಂದಿ ಇರತಾರಂತೆ. ಎಲ್ಲ ಇಲಾಖೆಗಳಲ್ಲಿ ಲಂಚ ಕೊಟ್ಟು ಕೆಲಸವಾಗದಿದ್ದರೆ, ಇಲ್ಲಿ ಎಷ್ಟು ಕೊಟ್ಟು ಕೊರತೆ ನಿವಾರಿಸಿಕೋಬೇಕು ಅಂತ ಒಂದು ಪಟ್ಟಿಯನ್ನೂ ಹಾಕಿಬಿಡಿ ಅನ್ನಬಕು!' ಬೆಕ್ಕಣ್ಣ ಉದ್ದಕ್ಕೆ ಭಾಷಣ ಕುಟ್ಟಿತು.

'ಹಂಗೇ ಕೇಂದ್ರದಾಗೂ ಇಂಥಾದೊಂದು ಮಾಡಿ ಅಂತ ಮೋದಿ ಮಾಮಂಗೆ ಹೇಳಬಕು ನೋಡಲೇ' ಎಂದೆ.

'ಕೇಂದ್ರ ಪ್ರಜಾಸೇವಾ ಇಲಾಖೆ ಶುರುವಾದರೆ ಮೊದ್ಲು ಯಾರ್‍ಯಾರು ಅರ್ಜಿ ಹಾಕಬೌದು?' ಬೆಕ್ಕಣ್ಣ ಕುತೂಹಲದಿಂದ ಕೇಳಿತು.

'ಅಯೋಧ್ಯಾರಾಜ ಶ್ರೀರಾಮನೇ ಮೊದ್ಲು ಅರ್ಜಿ ಹಾಕಬೌದು. ಅಕಟಕಟಾ... ಎನ್ನ ದೇವಸ್ಥಾನದಿ ಎನ್ನ ಹೆಸರಿನೊಳು ಎನ್ನ ಕಣ್ಣೆದುರಿಗೇ ನಡೆಯುತಿಹ ದಾನದೇಣಿಗೆಗಳ ಕಣ್ಮರೆ ಅಕ್ರಮವ ನಿಲ್ಲಿಸೈ ದೊರೆಯೇ ಅಂತ ಮೋದಿ ಮಾಮಂಗೆ ಮೊರೆಯಿಡಬೌದು' ಎಂದು ನಕ್ಕೆ.

'ದಾನದೇಣಿಗೆಗಳ ಎಣಿಸಿ ರಶೀದಿ ಕೊಡಲು ರೊಬಾಟ್‌ಗಳನ್ನು ನೇಮಿಸೈ ಎನ್ನಬಹುದು' ಬೆಕ್ಕಣ್ಣನೂ ನಕ್ಕಿತು.

'ರಾಜಸ್ತಾನದ ಭಗೀರಥ್ ಚೌಧರಿ ಸೌತಿಕಾಯಿ ಬೆಳೆಯಕ್ಕೆ 99,60,000 ರೂಪಾಯಿ ಸಬ್ಸಿಡಿ ತಗಂಡಾರಂತೆ. ಮಜಾ ಅಂದರೆ ರೈತನೂ ಅವರೇ, ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ರಾಜ್ಯ ಸಚಿವರೂ ಅವರೇ, ಸಬ್ಸಿಡಿ ಕೊಡುವ ಯೋಜನೆಯೂ ಅವರದೇ ಸಚಿವಾಲಯದ್ದು. ಇಂಥವನ್ನು ಮದ್ಲು ವಿಚಾರಣೆ ಮಾಡಿ ಅಂತ ಪ್ರಜಾಸೇವಾ ಇಲಾಖೆಗೆ ಅರ್ಜಿ ಹಾಕಬೌದು' ಎಂದೆ ಸಿಟ್ಟಿನಿಂದ.

'ಹಂಗಾರೆ ಈ ಸಬ್ಸಿಡಿ ಯೋಜನೆ ಸಚಿವರಿಂದ, ಸಚಿವರಿಗಾಗಿ, ಸಚಿವರೇ ರೂಪಿಸಿದ್ದು!' ಎಂದು ಬೆಕ್ಕಣ್ಣನೂ ಗುರುಗುಟ್ಟಿತು.

ಸಂಗತ

ದಲಿತಶಕ್ತಿ: ಹತಾಶೆ ಬೇಡ, ಭರವಸೆ ಇರಲಿ

ದಲಿತ ಚಳವಳಿ ಗುಪ್ತಗಾಮಿನಿಯಂತಿದೆ. ಎಲ್ಲರನ್ನೂ ಒಳಗೊಂಡು ಮುನ್ನಡೆವ ಮೂಲಕ ದಲಿತ ಸಂಘಟನೆಗಳು ಮತ್ತೆ ಶಕ್ತಿ ತುಂಬಿಕೊಂಡು ಪ್ರವಹಿಸಬಹುದು.

• ಬಿ. ರಾಜಶೇಖರಮೂರ್ತಿ

'**ದಲಿತ** ಚಳವಳಿಗಳಲ್ಲಿ ಕಾರ್ಯಕರ್ತರಿಗಿಂತ ನಾಯಕರೇ ಹೆಚ್ಚಾಗಿದ್ದಾರೆ. ಈ ನಾಯಕರೆಲ್ಲರೂ ರಾಜಕೀಯ ಪಕ್ಷಗಳ ಗುಲಾಮರಾಗಿದ್ದಾರೆ. ಹೀಗಾಗಿ ದಲಿತ ಶಕ್ತಿಯೇ ಇಲ್ಲವಾಗಿದೆ' ಎಂದು ದಲಿತ ಚಳವಳಿಯ ಹಿರಿಯರು ಹಾಗೂ ಸಾಹಿತಿಗಳಾದ ಕೋಟಿಗಾನಹಳ್ಳಿ ರಾಮಯ್ಯ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ಅವರ ಅಭಿಪ್ರಾಯ ಚರ್ಚಾರ್ಹ.

ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಇತ್ತೀಚೆಗೆ ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ದಲಿತ ಚಳವಳಿ ಕಳೆಗುಂದಿರುವ ಬಗ್ಗೆ ಮಾತನಾಡಿರುವ ರಾಮಯ್ಯನವರು, 'ದಲಿತರ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂದು ಇನ್ನು ಮುಂದೆ ಹಾಡಬೇಡಿ. ಹೋರಾಟದ ಸಾಗರ ಕರಗಿಹೋಗಿದೆ, ನದಿಗಳೂ ಇಲ್ಲವಾಗಿವೆ' ಎಂದೂ ಹೇಳಿದ್ದಾರೆ. ಸ್ಥಿತಿವಂತ ದಲಿತರ ಹೊಣೆಗಾರಿಕೆಯ ಬಗ್ಗೆ ಅವರು ಪ್ರಶ್ನೆಗಳನ್ನು ಎತ್ತಿದ್ದಾರೆ.

ದಲಿತ ಚಳವಳಿಗಳಲ್ಲಿ ಕಾರ್ಯಕರ್ತರಿಗಿಂತ ನಾಯಕರೇ ಹೆಚ್ಚು ಮತ್ತು ಅವರೆಲ್ಲ ರಾಜಕೀಯ ಪಕ್ಷಗಳ ಗುಲಾಮರಾಗಿದ್ದಾರೆ ಎನ್ನುವ ರಾಮಯ್ಯನವರ ಅಭಿಪ್ರಾಯದ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗಿದೆ. ಅವರು ಹೇಳಿರುವಂತಹ ಪರಿಸ್ಥಿತಿ ಸೃಷ್ಟಿಯಾಗಿದ್ದರೆ ಅದರ ಹೊಣೆಗಾರಿಕೆ ಯಾರದ್ದು? ಅಂತಹ ಪರಿಸ್ಥಿತಿಗೆ ಯಾರೆಲ್ಲ ಕಾರಣರಾಗಿದ್ದಾರೆ? ದಲಿತ ನಾಯಕರೆಲ್ಲ ರಾಜಕೀಯ ಪಕ್ಷಗಳ ಗುಲಾಮರಾಗಿದ್ದಾರೆ ಎನ್ನುವಂತಹ ಬೀಸುಹೇಳಿಕೆಗಳು ಹತಾಶ ಮನಃಸ್ಥಿತಿಯ ಸಂಕೇತ ಅಲ್ಲವೆ? ಆಶಯ ಸದಾಶಯದ್ದು ಎಂದಿಟ್ಟುಕೊಂಡರೂ, ಈ ಹಿಂದೆ ರಾಮಯ್ಯನವರು ಕೂಡ ರಾಜಕೀಯ ಪಕ್ಷಗಳ ಜೊತೆ ಹೆಜ್ಜೆ ಹಾಕಿರಲಿಲ್ಲವೆ?

ದಲಿತ ಚಳವಳಿಯಾಗಲೀ ಅಥವಾ ಯಾವುದೇ ಚಳವಳಿಯಾಗಲೀ ಏಕಮುಖವಾಗಿ ಇರುವುದು ಸಾಧ್ಯವಿಲ್ಲ. ಜನ ಚಳವಳಿಗಳ ಏಳುಬೀಳುಗಳು ಇತಿಹಾಸದುದ್ದಕ್ಕೂ ದಾಖಲಾಗಿರುವುದನ್ನು ಕಾಣುತ್ತೇವೆ. ಆ ಏರಿಳಿತಗಳಿಗೆ ಸಂಘಟನೆಗಳ ನಾಯಕರನ್ನು ಮಾತ್ರ ಹೊಣೆ ಮಾಡುವುದು ಸಾಧ್ಯವಿಲ್ಲ. ಅಥವಾ ದಲಿತ ವಿರೋಧಿ, ಜನ ಚಳವಳಿ ವಿರೋಧಿ ಶಕ್ತಿಗಳನ್ನಷ್ಟೇ ಹೊಣೆ ಮಾಡಲು ಸಾಧ್ಯ ಇಲ್ಲ. ವೈಫಲ್ಯದ ಹಿಂದಿನ ಕಾರಣಗಳು ಸಂಕೀರ್ಣವಾಗಿರುತ್ತವೆ ಹಾಗೂ ಅದರ ಹೊಣೆಗಾರಿಕೆ ಸಾಮೂಹಿಕವಾಗಿರುತ್ತದೆ. ವೈಯಕ್ತಿಕ ಹತಾಶೆಯಲ್ಲಿ, ದಲಿತ ಕವಿ ಸಿದ್ಧಲಿಂಗಯ್ಯ ಅವರ 'ದಲಿತರ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಗೀತೆಯನ್ನು ಇನ್ನು ಮುಂದೆ ಹಾಡಬೇಡಿ' ಎಂದರೆ ಹೇಗೆ? ಹಾಗೆ ಹೇಳುವ ಮೂಲಕ ಸಂಘಟನೆಯ ಸ್ಫೂರ್ತಿಯನ್ನು ಕುಗ್ಗಿಸಿದಂತಾಗುತ್ತದೆ.

ಇವತ್ತಿನ ದಲಿತರ ಸಮಸ್ಯೆ–ಸವಾಲುಗಳಿಗೆ ಪೂರಕ ಹಾಡುಗಳನ್ನು ಹೊಸತಾಗಿ ಕಟ್ಟಬೇಕಾಗಿದೆ ಎನ್ನುವುದು ಸರಿ. ಆದರೆ, ದಲಿತ ಚಳವಳಿಯ ಹಿಂದಿನ ಹಾಡುಗಳನ್ನೇ ಹಾಡಬೇಡಿ ಎಂದು ಹೇಳಲಾಗದು. ಹಾಗೆಯೇ, ರಾಮಯ್ಯನವರು ಅಭಿಪ್ರಾಯಪಟ್ಟಿರುವಂತೆ ಹೋರಾಟದ ಸಾಗರ ಕರಗಿಹೋಗಿಲ್ಲ, ನದಿಗಳೂ ಅಸ್ತಿತ್ವ ಕಳೆದುಕೊಂಡಿಲ್ಲ. ಅಸ್ತಿತ್ವ ಕಣ್ಣಿಗೆ ಕಾಣದಿರುವ ಸಂದರ್ಭಗಳಲ್ಲಿ, ಅವು ಗುಪ್ತಗಾಮಿನಿಯಾಗಿಯಾದರೂ ಹರಿಯುತ್ತಿರುತ್ತವೆ. ಹಾಗಾಗಿ, ಸಿದ್ಧಲಿಂಗಯ್ಯನವರ ಸಾವಿರಾರು ನದಿಗಳು ಗೀತೆ ಅಂದಿಗೂ ಪ್ರಸ್ತುತ, ಈಗಲೂ ಪ್ರಸ್ತುತ. ಹೋರಾಟದ ಆ ಹಾಡುಗಳು 'ದುಡಿಯುವ ಜನರ ಐಕ್ಯತೆ'ಗೆ ಪೂರಕವಾದ ರೂಪಕಗಳು.

ಯಾವುದೇ ಒಂದು ಚಳವಳಿಗೆ ಹಳೆಯ ಬೇರುಗಳೊಂದಿಗೆ ಹೊಸ ಚಿಗುರು ಕೂಡ ಅಗತ್ಯ. ಮುಖ್ಯವಾಗಿ 1991ರ ನಂತರ ಭಾರತದಲ್ಲಾದ ಆರ್ಥಿಕ, ಸಾಮಾಜಿಕ, ರಾಜಕೀಯ ಪಲ್ಲಟಗಳ ಪರಿಣಾಮವನ್ನು ಗಮನಿಸಬೇಕು. ಅದರಲ್ಲೂ ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಅಧಿಕಾರದಲ್ಲಿರುವ ಬಲಪಂಥೀಯ ಶಕ್ತಿಗಳು ಹಾಗೂ ಈ ಹೊತ್ತಿನ ಜಾಗತಿಕ ಬೆಳವಣಿಗೆಗಳ ಪರಿಣಾಮದಿಂದಾಗಿ ನಮ್ಮ ರಾಷ್ಟ್ರ–ರಾಜ್ಯದಲ್ಲಿ, ರಾಜಕೀಯ ಪಕ್ಷಗಳಲ್ಲಿ, ಕಾರ್ಮಿಕ–ರೈತ, ಭಾಷಾ ಸಂಘಟನೆಗಳಲ್ಲಿ ವಿಭಜನೆಗಳು ನಡೆದಿವೆ. ಅದೇ ರೀತಿಯಲ್ಲಿ ದಲಿತ ಸಂಘಟನೆಗಳಲ್ಲೂ ವಿಭಜನೆಗಳು ಆಗಿರುವುದು ಸಹಜವೇ ಆಗಿದೆ. ಹಾಗೆಂದು ದಲಿತಶಕ್ತಿಯೇ ಕ್ಷೀಣಿಸಿದೆ ಎಂದು ಹೇಳಲಾಗದು, ಹೇಳಬಾರದು.

'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಹಾಡು ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಸ್ತುತ. ರಾಮಯ್ಯ ಅವರೇ ಹೇಳಿದಂತೆ ಇನ್ನೂ ಮುಂದೆಯಾದರೂ ದಲಿತ ಚಳವಳಿಗೆ 'ತಾತ್ತ್ವಿಕ ನೆಲೆ'ಯನ್ನು ಕಟ್ಟಿಕೊಳ್ಳಬೇಕಿದೆ. ತಾತ್ತ್ವಿಕ ನೆಲೆಗಟ್ಟಿನಲ್ಲಿ ದಲಿತ ಚಳವಳಿಯನ್ನು ಕೊಂಡೊಯ್ಯುವ ನಾಯಕತ್ವವನ್ನು ನಾವೇ ರೂಪಿಸಿಕೊಳ್ಳಬೇಕಿದೆ. ಅದರ ಬದಲಾಗಿ, ಯಾರನ್ನೋ ದೂರಿದರೆ ಅಥವಾ ನಮ್ಮ ಮಿತಿಯನ್ನು ಪರಸ್ಪರ ವಿಮರ್ಶೆಗಳಿಂದ ಅರಿತುಕೊಂಡು, ದಲಿತ ದುಡಿಯುವ ಜನರ ಐಕ್ಯತೆಗೆ ಪೂರಕ ವಾತಾವರಣ ಸೃಷ್ಟಿಸದೆ ಇದ್ದರೆ, ಪ್ರಭುತ್ವ ದೌರ್ಜನ್ಯ ಎಸಗಲು ಇನ್ನಷ್ಟು ಅವಕಾಶಗಳು ಹೆಚ್ಚುತ್ತವೆ. ದಲಿತರ ಮುಖ್ಯ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಡುವಂತ ಸ್ಪಷ್ಟ ತಾತ್ತ್ವಿಕ ಚಿಂತನೆಯುಳ್ಳ ಎಲ್ಲ ಧಾರೆಗಳನ್ನು ಒಂದುಗೂಡಿಸುವುದು ವರ್ತಮಾನದ ತುರ್ತು. ಈ ಹಿನ್ನೆಲೆಯಲ್ಲಿ 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಹೋರಾಟದ ಹಾಡು ಅತ್ಯಗತ್ಯ.

ಇಂದಿನ ಕಾರ್ಪೊರೇಟ್–ಫ್ಯಾಸಿಸ್ಟ್ ಸಖ್ಯದ ರಾಜಕೀಯ ಶಕ್ತಿಯನ್ನು ಎದುರಿಸಿ, ಸಂವಿಧಾನಬದ್ಧವಾದ ಜಾತ್ಯತೀತ, ನ್ಯಾಯಬದ್ಧ ರಾಜಕೀಯ ವ್ಯವಸ್ಥೆಗೆ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವುದು ಪ್ರಸ್ತುತ ದಲಿತ ನಾಯಕತ್ವದ ಮುಂದಿರುವ ಸವಾಲು. ಹೀಗಾಗಿ ದಲಿತ ಸಂಘಟನೆಗಳು ತಮ್ಮ ಅಸ್ಮಿತೆ ಉಳಿಸಿಕೊಂಡೇ ಪ್ರಜಾಸತ್ತಾತ್ಮಕ ಜನ ಚಳವಳಿಗಳ ಜೊತೆ ಕೈಜೋಡಿಸದೆ ಅನ್ಯಮಾರ್ಗವಿಲ್ಲ. ಆ ನಿಟ್ಟಿನಲ್ಲಿ ರಾಮಯ್ಯನವರಂಥ ಹಿರಿಯರ ಮಾರ್ಗದರ್ಶನ ಅಗತ್ಯ. ಸಂಘಟನೆಯಲ್ಲಿನ ಸಣ್ಣಪುಟ್ಟ ಸಮಸ್ಯೆಗಳನ್ನು ಸರಿದೂಗಿಸಿಕೊಂಡು ಮುನ್ನಡೆಯುವುದು ಸದ್ಯದ ತುರ್ತು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎನ್‌ಸಿಇಆರ್‌ಟಿ ಪದೇ ಪದೇ ವಿವಾದಗಳಿಗೆ ಗುರಿಯಾಗುತ್ತಿದೆ. ಆರನೇ ತರಗತಿಯ ಕನ್ನಡ ಪಠ್ಯಪುಸ್ತಕಕ್ಕೆ 'ಕೃಷ್ಣ' ಎಂದು ಹೆಸರು ಇಟ್ಟಿದ್ದು, ಅದೇ ಪಠ್ಯಪುಸ್ತಕದಲ್ಲಿ ಸಸ್ಯಾಹಾರವೇ ಸಮತೋಲನದ ಆಹಾರ ಎಂದು ಬಿಂಬಿಸಿದ್ದು, ಒಂಬತ್ತನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಮನುಸ್ಮೃತಿಯ ಭಾಗ ಸೇರಿಸಿದ್ದು, ತುರ್ತುಪರಿಸ್ಥಿತಿ, ಎಸ್‌ಐಆರ್ ಅನ್ನು ಪಠ್ಯದಲ್ಲಿ ಅಳವಡಿಸಿದ್ದು... ಹೀಗೆ ಸರಣಿ ವಿವಾದಗಳು ಉಂಟಾಗಿದ್ದು, ಇವು ಅದರ ಕಾರ್ಯವೈಖರಿ ಬದಲಾಗಿರುವುದನ್ನು ತೋರಿಸುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ. ರಾಷ್ಟ್ರದ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಬೇಕಾದ, ವೈಚಾರಿಕತೆ ಬೆಳೆಸಬೇಕಾದ ಎನ್‌ಸಿಇಆರ್‌ಟಿಯು ಹಿಂದುತ್ವಕ್ಕೆ ಸಂಬಂಧಿಸಿದ ವಿಚಾರಗಳನ್ನು ಪಠ್ಯದಲ್ಲಿ ಸೇರಿಸುತ್ತಿದ್ದು, ದೇಶವನ್ನು ಹಿಂದಕ್ಕೆ ತಳ್ಳಲು ಪ್ರಯತ್ನಿಸುತ್ತಿದೆ ಎನ್ನುವ ಆರೋಪಗಳು ವ್ಯಕ್ತವಾಗಿವೆ

ಎನ್‌ಸಿಇಆರ್‌ಟಿ: ಬೆಂಬಿಡದ ವಿವಾದ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ), ಭಾರತದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಸ್ಥಾಪಿಸಲಾಗಿರುವ ಒಂದು ಸ್ವಾಯತ್ತ ಸಂಸ್ಥೆ. ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಈ ಸಂಸ್ಥೆಯು ಶೈಕ್ಷಣಿಕ ಸಂಶೋಧನೆ, ಪಠ್ಯಕ್ರಮವನ್ನು ರೂಪಿಸುವುದು, ಪಠ್ಯಪುಸ್ತಕಗಳ ಪ್ರಕಟಣೆ, ಶಿಕ್ಷಕರ ತರಬೇತಿಯಂಥ ಜವಾಬ್ದಾರಿಗಳನ್ನು ಹೊಂದಿದೆ. ದೇಶದ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳು ಏನು ಕಲಿಯಬೇಕು ಎನ್ನುವುದನ್ನು ನಿರ್ಧರಿಸುವ ಗುರುತರ ಹೊಣೆಗಾರಿಕೆಯೂ ಸಂಸ್ಥೆಯದ್ದಾಗಿದೆ. ಪಠ್ಯಕ್ರಮ ರೂಪಿಸುವ ವಿಚಾರದಲ್ಲಿ ರಾಜ್ಯಗಳ ಶಿಕ್ಷಣ ಇಲಾಖೆಗಳು, ವಿಶ್ವವಿದ್ಯಾಲಯಗಳಿಗೆ ಸಹಕಾರವನ್ನೂ ನೀಡುತ್ತದೆ. ಆದರೆ, ಎನ್‌ಸಿಇಆರ್‌ಟಿ ತನ್ನ ಕಾರ್ಯನಿರ್ವಹಣೆಯಲ್ಲಿ ಪದೇ ಪದೇ ಎಡವುತ್ತಿದ್ದು, ವಿವಾದಗಳಿಗೆ ಕಾರಣವಾಗುತ್ತಿದೆ. ಸ್ವಾಯತ್ತ ಸಂಸ್ಥೆಯು ಕೇಂದ್ರ ಸರ್ಕಾರದ ಪ್ರಭಾವಕ್ಕೆ ಒಳಗಾಗಿ, ಅದರ ಗುಪ್ತ ಕಾರ್ಯಸೂಚಿಗೆ ತಕ್ಕಂತೆ ಪಠ್ಯಪುಸ್ತಕಗಳನ್ನು ರೂಪಿಸಲು ಪ್ರಯತ್ನಿಸುತ್ತಿದೆ ಎನ್ನುವ ಆರೋಪಗಳು ಕೇಳಿಬಂದಿವೆ.

ಹಿಂದೆಯೂ ಹಲವು ಬಾರಿ ಎನ್‌ಸಿಇಆರ್‌ಟಿಯ ಪಠ್ಯಪುಸ್ತಕಗಳು ವಿವಾದಕ್ಕೊಳಗಾಗಿವೆ. ಅದರ ನಂತರವೂ ವಿವಾದ ಪರ್ವ ಮುಂದುವರಿದಿದೆ. ಸಿಬಿಎಸ್‌ಇಯ 6ನೇ ತರಗತಿಯ ಕನ್ನಡದ ಭಾಷೆಯ (ಪ್ರಾದೇಶಿಕ ಭಾಷೆ 3) ಪಠ್ಯಪುಸ್ತಕಕ್ಕೆ 'ಕೃಷ್ಣ' ಎಂದು ಹೆಸರಿಡಲಾಗಿದೆ. ಮೂರನೇ ತರಗತಿಯ ಪುಸ್ತಕಕ್ಕೆ 'ಮೃದುಲಾ' ಎಂದು ಹೆಸರಿಸಲಾಗಿದೆ. ಆರನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ 'ಆರೋಗ್ಯವೇ ಭಾಗ್ಯ' ಎನ್ನುವ ಅಧ್ಯಾಯದಲ್ಲಿ ಉದಾಹರಣೆ, ವಿವರಣೆ, ಚಿತ್ರಗಳಿದ್ದು, ಇವುಗಳಲ್ಲಿ ಸಸ್ಯಾಹಾರ ಮಾತ್ರ ಇದೆ. ಆದರೆ, ಹೆಚ್ಚು ಜನ ಸೇವಿಸುವ ಮಾಂಸಾಹಾರದ ಉಲ್ಲೇಖವಾಗಲಿ, ಚಿತ್ರವಾಗಲಿ ಇಲ್ಲ. ಸಮತೋಲಿತ ಆಹಾರ ಎಂದರೆ ಸಸ್ಯಾಹಾರ ಮಾತ್ರ ಎನ್ನುವುದನ್ನು ಪ್ರತಿಪಾದಿಸುವುದು ಪಠ್ಯಪುಸ್ತಕ ರೂಪಿಸಿದವರ ಹಿಂದಿನ ಉದ್ದೇಶ ಎಂದು ಶಿಕ್ಷಣ ತಜ್ಞರು ಆರೋಪಿಸಿದ್ದಾರೆ.

'ಕೃಷ್ಣ' ಎನ್ನುವ ಹೆಸರಿನ ಬದಲಿಗೆ ಪಂಪ, ಬಸವಣ್ಣ, ಕುವೆಂಪು, ಕಾರಂತ ಮುಂತಾದ ರಾಜ್ಯದ ಮಹನೀಯರ ಹೆಸರನ್ನು ಇಡಬಹುದಾಗಿತ್ತು; ಎನ್‌ಸಿಇಆರ್‌ಟಿಯ ಪಠ್ಯಪುಸ್ತಕಗಳನ್ನು ರೂಪಿಸುವಾಗ ಪ್ರಾದೇಶಿಕ ಸಂಸ್ಕೃತಿ, ಸಾಹಿತ್ಯ ಮತ್ತು ಬೌದ್ಧಿಕ ವಿಚಾರಗಳನ್ನು, ಸಾಧನೆಗಳನ್ನು ಕಡೆಗಣಿಸುತ್ತಿದೆ ಎನ್ನುವುದು ಅವರ ಅಭಿಪ್ರಾಯ.

ಇದಕ್ಕಿಂತಲೂ ಮುಖ್ಯವಾಗಿ, 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಮನುಸ್ಮೃತಿಯ ಭಾಗವನ್ನು ಸೇರಿಸಲಾಗಿದೆ. 'ಕ್ರಿಸ್ತ ಶಕ 1000 ದವರೆಗಿನ ರಾಜ್ಯ ಮತ್ತು ಸಮಾಜ' ಎನ್ನುವ ಅಧ್ಯಾಯದಲ್ಲಿ 'ವೇದಕಾಲದಲ್ಲಿ ಮಹಿಳೆಯರಿಗೆ ಉನ್ನತ ಸ್ಥಾನ ನೀಡಲಾಗಿತ್ತು. ಆದರೆ, ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗಳಿಗನುಗುಣವಾಗಿ ಮಹಿಳೆಯರ ಸಾಮಾಜಿಕ ಸ್ಥಿತಿಯಲ್ಲಿ ಕುಸಿತ ಉಂಟಾಯಿತು' ಎಂದು ಉಲ್ಲೇಖಿಸಲಾಗಿದೆ. ಈ ಅಂಶದ ಬಗ್ಗೆ ದೇಶವ್ಯಾಪಿ ತೀವ್ರ ವಿರೋಧ ಎದುರಾಗಿದೆ. ಚಾತುರ್ವರ್ಣ ವ್ಯವಸ್ಥೆಯನ್ನು ಪ್ರತಿಪಾದಿಸುವ ಮೂಲಕ ಶೂದ್ರರು, ಮಹಿಳೆಯರಿಗೆ ಸಮಾನ ಅವಕಾಶ, ಹಕ್ಕುಗಳನ್ನು ನಿರಾಕರಿಸುವ, ಅವರನ್ನು ಸಮಾನ ಮನುಷ್ಯರನ್ನಾಗಿ ಕಾಣದ ಮನುಸ್ಮೃತಿಯು ಒಂದು ಪ್ರತಿಗಾಮಿ ಧಾರ್ಮಿಕ ಕೃತಿಯಾಗಿದ್ದು, ಅದರ ಭಾಗವನ್ನು ಪಠ್ಯದಲ್ಲಿ ಸೇರಿಸುವ ಮೂಲಕ ಎನ್‌ಸಿಇಆರ್‌ಟಿ ಧಾರ್ಮಿಕ ಪಕ್ಷಪಾತ ಮತ್ತು ಹಿಂದುತ್ವದ ಪ್ರತಿಪಾದನೆಯಲ್ಲಿ ತೊಡಗಿದೆ ಎಂಬ ವಿರೋಧ ವ್ಯಕ್ತವಾಗಿದೆ.

ಬಿಜೆಪಿ ಕಾರ್ಯಸೂಚಿ: ಕೋವಿಡ್ ನಂತರದ ದಿನಗಳಲ್ಲಿ ಪಠ್ಯಪುಸ್ತಕಗಳ ಹೊರೆಯನ್ನು ಕಡಿಮೆ ಮಾಡಬೇಕು ಮತ್ತು ತರ್ಕಬದ್ಧಗೊಳಿಸಬೇಕು ಎನ್ನುವ ಉದ್ದೇಶದಿಂದ 12ನೇ ತರಗತಿಯ ಪಠ್ಯಪುಸ್ತಕಗಳಲ್ಲಿ ಹಲವು ಭಾಗಗಳನ್ನು ತೆಗೆದುಹಾಕಿತ್ತು. ಆಗ ಮೊಘಲ್ ರಾಜರು, 2002ರ ಗುಜರಾತ್ ಹತ್ಯಾಕಾಂಡ ಇತ್ಯಾದಿ ಭಾಗಗಳನ್ನು ಕೈಬಿಟ್ಟಿದ್ದರ ಬಗ್ಗೆ ಟೀಕೆ ವ್ಯಕ್ತವಾಗಿತ್ತು.

ದೇಶವು ಸ್ವಾತಂತ್ರ್ಯ ಪಡೆದ ನಂತರ ಇದೇ ಮೊದಲ ಬಾರಿಗೆ ಬೃಹತ್ ಪ್ರಮಾಣದಲ್ಲಿ ಪಠ್ಯಪುಸ್ತಕಗಳನ್ನು ಪುನರ್‌ರಚಿಸಲಾಗುತ್ತಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)–2020 ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿಗೆ ತಕ್ಕಂತೆ ಪಠ್ಯಪುಸ್ತಕಗಳನ್ನು ರಚಿಸಲು ತಜ್ಞರ ತಂಡಗಳನ್ನು ರಚಿಸಲಾಗಿದೆ. ಕೆಲವು ಅಧ್ಯಾಯಗಳನ್ನು ತೆಗೆದುಹಾಕಿ, ಹೊಸ ಅಧ್ಯಾಯಗಳನ್ನು ಸೇರಿಸಲಾಗಿದೆ. ಕೆಲವು ಪಠ್ಯಗಳನ್ನು ಕಡಿತ ಮಾಡಿ, ಕೆಲವನ್ನು ವಿಸ್ತರಿಸಲಾಗಿದೆ. ಆದರೆ, ಹೀಗೆ ಮಾಡುವಾಗ ಕೇಂದ್ರ ಸರ್ಕಾರದ ಪ್ರಭಾವದಿಂದ ಪಠ್ಯಪುಸ್ತಕಗಳ ಕೇಸರೀಕರಣದಲ್ಲಿ ತೊಡಗಿದೆ; ತುರ್ತುಪರಿಸ್ಥಿತಿಯ ಬಗ್ಗೆ ಏಕಮುಖದ ವಿವರಗಳನ್ನು ಸೇರಿಸುವುದು, ಸಂವಿಧಾನದ ಪ್ರಸ್ತಾವನೆಯನ್ನು ಪಠ್ಯದಿಂದ ಬದಲಿಸುವುದು.. ಹೀಗೆ ಬಿಜೆಪಿಯ ಹಿಂದುತ್ವದ ಕಾರ್ಯಸೂಚಿಯನ್ನು ಜಾರಿಮಾಡಲಾಗುತ್ತಿದೆ ಎನ್ನುವುದು ಮುಖ್ಯ ಆರೋಪ.

ಸ್ವಾಯತ್ತ ಸಂಸ್ಥೆಯಾಗಿರುವ, ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಪಾತ್ರ ಹೊಂದಿರುವ ಎನ್‌ಸಿಇಆರ್‌ಟಿ ಯಾವುದೇ ಒಂದು ನಿರ್ದಿಷ್ಟ ತತ್ವ, ಸಿದ್ಧಾಂತ, ಧರ್ಮ, ಪಕ್ಷದ ಪರ ವಕಾಲತ್ತು ವಹಿಸಬಾರದು. ವಸ್ತುನಿಷ್ಠತೆ ಮತ್ತು ವೈಜ್ಞಾನಿಕತೆ ಕಾಪಾಡಿಕೊಳ್ಳಬೇಕು, ಸಂವಿಧಾನದ ತತ್ವಗಳಿಗೆ ತಕ್ಕಂತೆ ಕಾರ್ಯನಿರ್ವಹಣೆ ಮಾಡಬೇಕು ಎನ್ನುವುದು ತಜ್ಞರ ಸಲಹೆ.

ಭಾರತದ ಜ್ಞಾನ ಪರಂಪರೆಯನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು ರಾಷ್ಟ್ರೀಯ ಶಿಕ್ಷಣ ನೀತಿ–2020ರ ಉದ್ದೇಶವಾಗಿದೆ. ಇದರ ಹೆಸರಿನಲ್ಲಿ ಎನ್‌ಸಿಇಆರ್‌ಟಿಯು ಪುರಾಣ, ಧಾರ್ಮಿಕ ಕೃತಿಗಳು, ದೈವಸಂಬಂಧಿ ವಿಷಯಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುತ್ತಿದೆ; ಜಗತ್ತಿನ ಮುಂದುವರಿದ ದೇಶಗಳು ವಿಜ್ಞಾನ, ತಂತ್ರಜ್ಞಾನ, ವೈಚಾರಿಕತೆ, ಸಂಶೋಧನೆಯ ಕ್ಷೇತ್ರಗಳಲ್ಲಿ ಭಾರಿ ಪ್ರಗತಿ ಸಾಧಿಸುತ್ತಾ ಮುನ್ನುಗ್ಗುತ್ತಿದ್ದರೆ, ಭಾರತದ ಶಾಲಾ ಮಕ್ಕಳು ಪುರಾಣ ಪುಣ್ಯಕಥೆಗಳನ್ನು ಓದುವಂತೆ ಮಾಡಿ, ದೇಶ ಮತ್ತಷ್ಟು ಹಿಂದುಳಿಯುವಂತೆ ಮಾಡಲಾಗುತ್ತಿದೆ ಎಂದು ಶಿಕ್ಷಣ ತಜ್ಞರು ಆಕ್ಷೇಪವೆತ್ತಿದ್ದಾರೆ.

ಆಧಾರ: ಪಿಟಿಐ, ಎನ್‌ಸಿಇಆರ್‌ಟಿ ವೆಬ್‌ಸೈಟ್, ಮಾಧ್ಯಮ ವರದಿಗಳು

ಆರೋಪ ನಿರಾಕರಣೆ

ಶಿಕ್ಷಣ ತಜ್ಞರ ಆರೋಪಗಳನ್ನು ಎನ್‌ಸಿಇಆರ್‌ಟಿ ನಿರಾಕರಿಸಿದೆ. ಸಂಸ್ಥೆಯು ಯಾವುದೇ ಪಕ್ಷಪಾತ ಮಾಡುತ್ತಿಲ್ಲ, ಯಾವುದೇ ಧಾರ್ಮಿಕ ಅಥವಾ ಸಾಂಸ್ಕೃತಿಕ ಸಿದ್ಧಾಂತ ಉತ್ತೇಜಿಸುತ್ತಿಲ್ಲ ಎಂದಿದೆ. ಪಠ್ಯಪುಸ್ತಕಕ್ಕೆ 'ಕೃಷ್ಣ' ಎಂಬ ಹೆಸರು ಇಟ್ಟಿರುವುದು ಸೇರಿದಂತೆ ಇತರೆ ಅಂಶಗಳ ಬಗ್ಗೆ ಸ್ಪಷ್ಟನೆ ನೀಡಿದೆ. ಹಲವು ಪಠ್ಯಪುಸ್ತಕಗಳಿಗೆ ನದಿಗಳ ಹೆಸರನ್ನು ಇಡಲಾಗಿದೆ. ಗಂಗಾ, ಯಮುನಾ ಎಂದು ಹೆಸರಿಟ್ಟಂತೆ ಕೃಷ್ಣ ಎನ್ನುವ ಹೆಸರು ಇಡಲಾಗಿದೆ; ಸಮತೋಲಿತ ಆಹಾರದ ಬಗ್ಗೆ ಹೇಳುವಾಗ ಎಲ್ಲಿಯೂ ಮಾಂಸಾಹಾರವನ್ನು ವಿರೋಧಿಸಿಲ್ಲ ಎಂದು ವಿವರಿಸಿದೆ. ಎನ್‌ಇಪಿ–2020 ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2023ರ ಆಧಾರದಲ್ಲಿ ಅತ್ಯುತ್ತಮ ಗುಣಮಟ್ಟದ ಪಠ್ಯಪುಸ್ತಕ ಮತ್ತು ಇತರ ಬೋಧನೆ-ಕಲಿಕಾ ಸಾಮಗ್ರಿ ಒದಗಿಸಲು ಎನ್‌ಸಿಇಆರ್‌ಟಿ ಬದ್ಧವಾಗಿದೆ ಎಂದು ಪ್ರಕಟಣೆ ನೀಡಿದೆ.

ಪುಸ್ತಕ ಸಿದ್ಧಪಡಿಸುವುದು ಹೇಗೆ?

ಎನ್‌ಸಿಇಆರ್‌ಟಿಯು ಪುಸ್ತಕ ಸಿದ್ಧಪಡಿಸಲು ಬಹುಹಂತಗಳ ಪ್ರಕ್ರಿಯೆಯನ್ನು ಅನುಸರಿಸುತ್ತದೆ. ಪಠ್ಯಪುಸ್ತಕಗಳ ರಚನೆಗೆ ಅದು ಕೇವಲ ಒಬ್ಬ ಲೇಖಕ ಅಥವಾ ಶಿಕ್ಷಣ ತಜ್ಞನನ್ನು ಅವಲಂಬಿಸಿಲ್ಲ. ವಿಷಯ ಪರಿಣತರು, ಶಿಕ್ಷಣ ತಜ್ಞರು, ವಿವಿಧ ಕ್ಷೇತ್ರಗಳ ಪ್ರತಿನಿಧಿಗಳನ್ನು ಸಂಪರ್ಕಿಸಿ ಅವರ ಸಲಹೆಗಳನ್ನು ಪಡೆದು ಪಠ್ಯಪುಸ್ತಕಗಳನ್ನು ಸಿದ್ಧಪಡಿಸುತ್ತದೆ.

ಪ್ರತಿ ವಿಷಯದ ಪಠ್ಯಪುಸ್ತಕ ಸಿದ್ಧಪಡಿಸುವಾಗಲೂ ಆರಂಭದಲ್ಲಿ ಕರಡು ಪಠ್ಯ ರಚನೆಗಾಗಿ ತಜ್ಞರ ತಂಡವನ್ನು ರಚಿಸುತ್ತದೆ (ಕರಿಕ್ಯುಲರ್ ಏರಿಯಾ ಗ್ರೂಪ್–ಸಿಎಜಿ). ಅದರಲ್ಲಿ ವಿಷಯವಾರು ತಜ್ಞರು ಇರುತ್ತಾರೆ. ಬಳಿಕ ಪ್ರತಿ ವಿಷಯಕ್ಕೂ ಪಠ್ಯಪುಸ್ತಕ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗುತ್ತದೆ. ಈ ಸಮಿತಿಯಲ್ಲೂ ಶಿಕ್ಷಣ ತಜ್ಞರು, ಅಧ್ಯಾಪಕರು, ವಿಷಯ ಪರಿಣತರು ಇರುತ್ತಾರೆ. ಈ ಸಮಿತಿಯು ಕರಡು ಪಠ್ಯಪುಸ್ತಕಗಳನ್ನು ಪರಿಶೀಲನೆಗೆ ಒಳಪಡಿಸುತ್ತದೆ.

ಸಮಿತಿ ನೋಡಿದ ಪಠ್ಯಪುಸ್ತಕಗಳು ಹಲವು ಸುತ್ತುಗಳಲ್ಲಿ ಮರುಪರಿಶೀಲನೆಗೆ ಒಳಪಡುತ್ತವೆ. ಮಾಹಿತಿಗಳಲ್ಲಿ ದೋಷ ಇವೆಯೇ, ಶೈಕ್ಷಣಿಕ ಗುಣಮಟ್ಟಕ್ಕೆ ತಕ್ಕಂತೆ ಅಧ್ಯಾಯಗಳು ಇವೆಯೇ ಎಂದೂ ಇಲ್ಲಿ ವಿಶ್ಲೇಷಿಸಲಾಗುತ್ತದೆ.

ಅಲ್ಲಿಂದ ಪಠ್ಯಪುಸ್ತಕವು ಅಂತಿಮ ಅನುಮತಿಗಾಗಿ ಹೋಗುತ್ತದೆ. ಸಿಎಜಿ ಮತ್ತು ರಾಷ್ಟ್ರೀಯ ಪಠ್ಯಕ್ರಮ ಮತ್ತು ಬೋಧನೆ–ಕಲಿಕೆ ವಸ್ತುಗಳ ಸಮಿತಿ (ಎನ್‌ಎಸ್‌ಟಿಸಿ) ಪರಿಶೀಲನೆ ನಡೆಸುತ್ತದೆ. ಎಲ್ಲವನ್ನೂ ಕೂಲಂಕಷ ಪರಿಶೀಲನೆಗೆ ಒಳಪಡಿಸಿದ ನಂತರ ಅನುಮತಿ ನೀಡಲಾಗುತ್ತದೆ.

ಆ ಬಳಿಕವೂ ವಿವಿಧ ಕ್ಷೇತ್ರಗಳ ಪರಿಣತರ ಸಲಹೆಗಳನ್ನು ಪಡೆಯಲಾಗುತ್ತದೆ. ಅಲ್ಲದೇ ಪ್ರಮುಖ ಸಲಹೆಗಳು ಬಂದರೆ ಕೊನೆ ಕ್ಷಣದಲ್ಲಿಯೂ ತಿದ್ದುಪಡಿಯನ್ನೂ ಮಾಡಲಾಗುತ್ತದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001



ಆಕ್ಷೇಪಕ್ಕೆ ಕಾರಣವಾಗಿರುವ 6ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿನ 'ಆರೋಗ್ಯವೇ ಭಾಗ್ಯ' ಅಧ್ಯಾಯ (ಒಳಚಿತ್ರ: ಪಠ್ಯಪುಸ್ತಕದ ಮುಖಪುಟ)

ಪ್ರಮುಖ ವಿವಾದಗಳು

- 2025ರ ಜುಲೈನಲ್ಲಿ 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಮರಾಠಾ ಸಾಮ್ರಾಜ್ಯದ ನಕ್ಷೆಯಲ್ಲಿ ಜೈಸಲ್ಮೇರ್ ಸಂಸ್ಥಾನ, ರಾಜಸ್ಥಾನದ ಕೆಲವು ಭಾಗವೂ ಮರಾಠಾ ಸಾಮ್ರಾಜ್ಯದ ವ್ಯಾಪ್ತಿಗೆ ಸೇರಿಸಿದ್ದಕ್ಕೆ ಜೈಸಲ್ಮೇರ್ ರಾಜವಂಶಸ್ಥರೇ ಆಕ್ಷೇಪ ಎತ್ತಿದ್ದರು. ನಂತರ ಎನ್‌ಸಿಇಆರ್‌ಟಿಯು ಪಠ್ಯಪುಸ್ತಕ ವಾಪಸ್ ಪಡೆದಿತ್ತು
- ಈ ವರ್ಷದ 9ನೇ ತರಗತಿಯ ಕಲಾ ಶಿಕ್ಷಣ ಪಠ್ಯಪುಸ್ತಕದಲ್ಲಿ ಮೊಹೆಂಜೊ–ದಾರೊದ 'ನರ್ತಿಸುವ ಹುಡುಗಿ'ಯ ಚಿತ್ರವನ್ನು ತಿದ್ದುಪಡಿ ಮಾಡಿ ಪ್ರಕಟಿಸಲಾಗಿತ್ತು. ಇದಕ್ಕೂ ಆಕ್ಷೇಪ ವ್ಯಕ್ತವಾಗಿತ್ತು. ನಂತರ, 'ಪಠ್ಯದ ಡಿಜಿಟಲ್ ಆವೃತ್ತಿಯಲ್ಲಿ ಮೂಲ ಚಿತ್ರವನ್ನೇ ಪ್ರಕಟಿಸಲಾಗುವುದು ಮತ್ತು ಮುಂದೆ ಮುದ್ರಿಸಲಾಗುವ ಪಠ್ಯಪುಸ್ತಕದಲ್ಲಿ ಮೂಲ ಚಿತ್ರವೇ ಇರಲಿದೆ' ಎಂದು ಎನ್‌ಸಿಇಆರ್‌ಟಿ ಹೇಳಿತ್ತು
- 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಪ್ರಜಾಪ್ರಭುತ್ವಕ್ಕೆ ಸಂಬಂಧಿಸಿದ ಅಧ್ಯಾಯದಲ್ಲಿ ಎನ್‌ಸಿಇಆರ್‌ಟಿಯು ಈ ವರ್ಷ ತುರ್ತುಪರಿಸ್ಥಿತಿಯ ಬಗ್ಗೆ ವಿವರ ನೀಡಿದೆ. ಇದೇ ವೇಳೆ, ಸಂವಿಧಾನ ಪ್ರಸ್ತಾವನೆ ಮತ್ತು 'ಸಮಾಜವಾದ', 'ಜಾತ್ಯತೀತ' ಪದಗಳ ಉಲ್ಲೇಖವನ್ನು ಕೈಬಿಟ್ಟಿದೆ. ಈ ವಿಚಾರವಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ವಾಗ್ವಾದವೂ ನಡೆದಿದೆ. ಇದಕ್ಕೆ ಸ್ಪಷ್ಟನೆ ನೀಡಿರುವ ಪರಿಷತ್ತು, 'ವರದಿಗಳು ಆಧಾರರಹಿತ, ಎಲ್ಲ ಪಠ್ಯಪುಸ್ತಕಗಳ ಆರಂಭಿಕ ಪುಟಗಳಲ್ಲಿ ಸಂವಿಧಾನದ ಪ್ರಸ್ತಾವನೆ ಇದೆ. ಜಾತ್ಯತೀತತೆ ಸೇರಿದಂತೆ ಸಾಂವಿಧಾನಿಕ ಮೌಲ್ಯಗಳನ್ನು 6ರಿಂದ 8ನೇ ತರಗತಿವರೆಗಿನ ಪಠ್ಯಗಳಲ್ಲಿ ಪರಿಚಯಿಸಲಾಗಿದೆ. 10ನೇ ತರಗತಿಯ ಪಠ್ಯದಲ್ಲಿ ವಿವರವಾಗಿ ತಿಳಿಸಲಾಗಿದೆ' ಎಂದು ಹೇಳಿದೆ
- 2021-22ರಲ್ಲಿ ಕೋವಿಡ್ ಸಾಂಕ್ರಾಮಿಕದ ಸಮಯದಲ್ಲಿ ಸಮರ್ಪಕವಾಗಿ ತರಗತಿಗಳು ನಡೆಯದೇ ಇದ್ದ ಕಾರಣಕ್ಕೆ ಮಕ್ಕಳ ಮೇಲಿನ ಹೊರೆಯನ್ನು ತಗ್ಗಿಸಲು ಎನ್‌ಸಿಇಆರ್‌ಟಿಯು ಪಠ್ಯಗಳನ್ನು ಕಡಿತ ಮಾಡಿದಾಗಲೂ ಆಕ್ಷೇಪ ವ್ಯಕ್ತವಾಗಿತ್ತು. ಇತಿಹಾಸ, ರಾಜ್ಯಶಾಸ್ತ್ರ ವಿಷಯಗಳಲ್ಲಿ ಮೊಘಲರ ಸಾಮ್ರಾಜ್ಯ, ದೆಹಲಿಯ ಸುಲ್ತಾನರು, ಅಲಿಪ್ತ ಚಳವಳಿ ಸೇರಿದಂತೆ ಇನ್ನೂ ಕೆಲವು ಪಾಠಗಳಿಗೆ ಕತ್ತರಿ ಹಾಕಲಾಗಿತ್ತು
- 2023ರಲ್ಲೂ ಮೊಘಲರ ಆಡಳಿತಕ್ಕೆ ಸಂಬಂಧಿಸಿದ ಪಠ್ಯ ಕಡಿತ ವಿಚಾರ ಮತ್ತೆ ವಿವಾದಕ್ಕೆ ಗುರಿಯಾಗಿತ್ತು
- 2024ರಲ್ಲಿ ಸಿಬಿಎಸ್‌ಇ 12ನೇ ತರಗತಿಯ ರಾಜ್ಯಶಾಸ್ತ್ರ ವಿಷಯದ ಪಠ್ಯದಲ್ಲಿ 'ಇತ್ತೀಚಿನ ರಾಜಕೀಯ ಬೆಳವಣಿಗೆಗಳು' ಎಂಬ ಪಾಠದಲ್ಲಿ ಅಯೋಧ್ಯೆ ರಾಮಜನ್ಮಭೂಮಿ ಮತ್ತು ಸುಪ್ರೀಂ ಕೋರ್ಟ್ ತೀರ್ಪನ್ನು ಇಟ್ಟುಕೊಂಡು ತಿದ್ದುಪಡಿ ಮಾಡಿದ್ದು ಆಕ್ಷೇಪಕ್ಕೆ ಕಾರಣವಾಗಿತ್ತು
- ಎನ್‌ಇಪಿ 2020ಕ್ಕೆ ಪೂರಕವಾಗಿ ಎನ್‌ಸಿಇಆರ್‌ಟಿ ಸಿದ್ಧಪಡಿಸಿದ ಪಠ್ಯಕ್ರಮ ಚೌಕಟ್ಟು–2023ರಲ್ಲಿ ಸಮಾಜ ವಿಜ್ಞಾನ, ರಾಜ್ಯಶಾಸ್ತ್ರ ಪಠ್ಯದಲ್ಲಿ ಮಾಡಿರುವ ಬದಲಾವಣೆಗಳ ಬಗ್ಗೆ (ಪದಗಳ ಬಳಕೆ, ಐತಿಹಾಸಿಕ ವ್ಯಕ್ತಿಗಳ ಪರಿಚಯ, ವಾಸ್ತವ ಸಂಗತಿಗಳು ಮತ್ತು ಪಠ್ಯದಲ್ಲಿ ನಿರೂಪಿಸಲಾದ ಸಂಗತಿಗಳಲ್ಲಿನ ವ್ಯತ್ಯಾಸ) 2025ರಲ್ಲಿ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದರು

'ಸುಪ್ರೀಂ' ಕೆಂಗಣ್ಣಿಗೆ ಗುರಿ

ಎಂಟನೇ ತರಗತಿಯ ಸಮಾಜ ವಿಜ್ಞಾನ ಪಠ್ಯದ 'ನಮ್ಮ ಸಮಾಜದಲ್ಲಿ ನ್ಯಾಯಾಂಗದ ಪಾತ್ರ' ಎಂಬ ಅಧ್ಯಾಯದಲ್ಲಿ ನ್ಯಾಯಾಂಗದ ವಿವಿಧ ಹಂತಗಳಲ್ಲಿ ಭ್ರಷ್ಟಾಚಾರ ಇರುವ ಬಗ್ಗೆ ಮತ್ತು ನ್ಯಾಯಾಲಯಗಳಲ್ಲಿ ಭಾರಿ ಪ್ರಮಾಣದಲ್ಲಿ ಪ್ರಕರಣಗಳು ವಿಲೇವಾರಿಗೆ ಬಾಕಿ ಉಳಿದಿವೆ ಎಂಬ ಬಗ್ಗೆ ವಿವರಗಳು ಇದ್ದವು. ಇದು ವಿವಾದ ಸೃಷ್ಟಿಸಿತ್ತು.

ಇದಕ್ಕಾಗಿ ಎನ್‌ಸಿಇಆರ್‌ಟಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದ ಸುಪ್ರೀಂ ಕೋರ್ಟ್, ಅಧ್ಯಾಯದಲ್ಲಿ ಉಲ್ಲೇಖಿಸಲಾದ ಸಂಗತಿಗಳ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. 'ನ್ಯಾಯಾಂಗದ ಗೌರವವನ್ನು ಕುಗ್ಗಿಸಲು ಅತ್ಯಂತ ವ್ಯವಸ್ಥಿತವಾಗಿ ಮಾಡಿದ ಯೋಜನೆ' ಎಂದು ಹೇಳಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ನ್ಯಾಯಪೀಠವು ಎನ್‌ಸಿಇಆರ್‌ಟಿ ನಿರ್ದೇಶಕ ಮತ್ತು ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿತ್ತು. ಜೊತೆಗೆ, ಪಾಠ ತೆಗೆದುಹಾಕುವಂತೆ ಮತ್ತು ಪಠ್ಯಪುಸ್ತಕವನ್ನು ಮುದ್ರಿಸದಂತೆ ತಾಕೀತು ಮಾಡಿತ್ತು. ಸುಪ್ರೀಂ ಕೋರ್ಟ್‌ನ ಸೂಚನೆಯ ಬಳಿಕ ಪಠ್ಯಪುಸ್ತಕವನ್ನು ವಾಪಸ್ ಪಡೆದಿದ್ದ ಎನ್‌ಸಿಇಆರ್‌ಟಿ, ಬೇಷರತ್ ಕ್ಷಮೆ ಕೋರಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದಲ್ಲಿ ಜೂನ್ 5ರಂದು ಅಧಿಕೃತವಾಗಿ ಶೇ 85ರಷ್ಟು ಎಥೆನಾಲ್ ಬೆರೆಸಿರುವ ಇಂಧನ ಬಿಡುಗಡೆಯಾದ ಬಳಿಕ ಇ85ಗೆ ಸಂಬಂಧಿಸಿದ ಹಲವು ಚಿತ್ರ, ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಪೆಟ್ರೋಲ್ ಬಂಕ್ ಒಂದರಲ್ಲಿ ಬೈಕ್ ಒಂದಕ್ಕೆ ಇಂಧನ ತುಂಬಿಸುತ್ತಿದ್ದಾಗ, ಅದರ ಟ್ಯಾಂಕ್ ಸುತ್ತಲೂ ಜೇನ್ನೊಣಗಳು ಕುಳಿತಿರುವ ವಿಡಿಯೊವನ್ನು ಹಲವರು 'ಎಕ್ಸ್' ಮತ್ತು 'ಇನ್‌ಸ್ಟಾಗ್ರಾಂ'ನಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

ಟ್ಯಾಂಕ್ ಸುತ್ತ ಜೇನ್ನೊಣಗಳು ಇರುವ ಭಾಗದ ಕೀಫ್ರೇಮ್ ಅನ್ನು ರಿವರ್ಸ್ ಸರ್ಚ್ ವಿಧಾನದ ಮೂಲಕ ಹುಡುಕಿದಾಗ, 'ಎಕ್ಸ್'ನಲ್ಲಿ ಇದಕ್ಕೆ ಸಂಬಂಧಿಸಿದ ದೊಡ್ಡ ವಿಡಿಯೊ ತುಣುಕು ಸಿಕ್ಕಿತು. ಆ ವಿಡಿಯೊದಲ್ಲಿ ಗೂಗಲ್ ಜೆಮಿನಿ ಎಐ ವಾಟರ್ ಮಾರ್ಕ್ ಇತ್ತು. ಇದರ ಆಧಾರದಲ್ಲಿ ಗೂಗಲ್ ಎಐ ಪತ್ತೆ ಟೂಲ್ ಸಿಂತ್‌ಐಡಿ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ಎಐ ವಿಡಿಯೊ ಎಂಬುದು ಖಚಿತವಾಯಿತು. ಮತ್ತೊಂದು ಟೂಲ್ ಹೈವ್ ಮಾಡರೇಷನ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗಲೂ ಅದು ಡೀಪ್ ಫೇಕ್ ವಿಡಿಯೊ ಎಂಬುದು ಇನ್ನಷ್ಟು ಸ್ಪಷ್ಟವಾಯಿತು.

ರಾಜಕುಮಾರ ನಮ್ಮಲ್ಲಿಯೇ ಹುಟ್ಟಬೇಕು

ಒಂದಾನೊಂದು ಕಾಲದಲ್ಲಿ ಒಂದು ದೊಡ್ಡ ದೇಶವಿತ್ತು. ಅಲ್ಲಿ ನೂರಾರು ಪ್ರಾಂತ್ಯಗಳು, ಸಾವಿರಾರು ಹಳ್ಳಿಗಳು. ನಾನಾ ಬಗೆಯ ಭಾಷೆ, ಸಂಸ್ಕೃತಿಯ ಜನ. ಅವರೆಲ್ಲ ತಂತಮ್ಮ ಕುಲಕಸುಬುಗಳನ್ನು ನಂಬಿ ಹೊಟ್ಟೆಹೊರೆದು ನೆಮ್ಮದಿಯಿಂದಲೇ ಬಾಳುವೆ ನಡೆಸುತ್ತಿದ್ದರು. ಸರ್ವ ಋತುಗಳಲ್ಲೂ ತುಂಬಿ ಹರಿಯುತ್ತಿದ್ದ ನದಿಯ ಪಕ್ಕದ ಹಳ್ಳಿಯೊಂದು ಕುಶಲ ಕಲೆಗಳಿಗೆ ಹೆಸರಾಗಿತ್ತು. ವಿವಿಧ ಬಗೆಯ ಕುಲಕಸುಬಿನ ಕುಶಲರು ತುಂಬಿದ್ದ ಊರಿನಲ್ಲಿ ಜನರು ತಮ್ಮ ಉತ್ಪನ್ನಗಳನ್ನು ಪಕ್ಕದ ಪುಟ್ಟ ಪಟ್ಟಣಕ್ಕೆ ಒಯ್ದು ಉತ್ತಮ ಬೆಲೆಗೆ ಮಾರುತ್ತಿದ್ದರು.

ಬರುಬರುತ್ತಾ ಪಟ್ಟಣ ಬೆಳೆಯಿತು. ಪಟ್ಟಣದ ಬೆಳವಣಿಗೆಯಲ್ಲಿ ಬೆರಳೆಣಿಕೆಯಷ್ಟು ಮಂದಿ ಸಿರಿವಂತರು ಮಾರುಕಟ್ಟೆಯನ್ನು ತಮ್ಮ ನಿಯಂತ್ರಣಕ್ಕೆ ತಂದುಕೊಂಡರು. ಹಳ್ಳಿಯ ಜನ ತಯಾರಿಸಿದ ಕುಸುರಿ ಕಲೆಯ ಉತ್ಪನ್ನಗಳಿಗೆ ಬೇಡಿಕೆ ಇದ್ದರೂ ತಕ್ಕ ಬೆಲೆ ಸಿಗದೆ ಹತಾಶೆಗೊಂಡರು. ಹತಾಶೆ ಆಕ್ರೋಶವಾಗುವುದಕ್ಕೆ ತಡವಾಗಲಿಲ್ಲ. ಅವರ ನಡುವೆ ಸಣ್ಣಮಟ್ಟದ ಅಸಮಾಧಾನ ಹುಟ್ಟಿ ಅದೂ ಬೆಳೆದು ಸಂಘರ್ಷದ ರೂಪ ಪಡೆಯಿತು. ಸಿರಿವಂತರು ಸಾಕಿ ಬೆಳೆಸಿದ ದುಷ್ಟರು ಕುಶಲಕರ್ಮಿಗಳನ್ನು ಎಲ್ಲೆಂದರಲ್ಲಿ ಥಳಿಸತೊಡಗಿದರು. ದುಷ್ಕರ್ಮಿಗಳ ದರ್ಪ, ಕೇಕೆ, ಕುಣಿತ, ಮೆರವಣಿಗೆ ಮಿತಿ ಮೀರಿದವು.

ದಮನಿತರಿಗೆ ಈ ದೌರ್ಜನ್ಯದಿಂದ ರಕ್ಷಣೆ ಇಲ್ಲದಂತಾದ ಸಂದರ್ಭದಲ್ಲಿ ಆ ಊರಿಗೆ ಮಾಂತ್ರಿಕನ ರೂಪದ ವ್ಯಕ್ತಿಯೊಬ್ಬ ಬಂದ. ಅವನಿಗೆ ಇಲ್ಲಿನ ವಾಸ್ತವ ಅರ್ಥವಾದಂತಾಗಿ ಯಾರು ಕೇಳಿಸಿಕೊಳ್ಳಲಿ ಬಿಡಲಿ ಗಟ್ಟಿಯಾಗಿ ಹಾಡು ಹೇಳುತ್ತ ಸಾಗುತ್ತಿದ್ದ. ಆ ಹಾಡಿನ ಅರ್ಥ ಹೀಗಿತ್ತು: ಒಂದು ಊರಿನಲ್ಲಿ ರಾಕ್ಷಸರ ಹಾವಳಿ ಹೆಚ್ಚಾಗಿದ್ದು ಜನರೆಲ್ಲ ಒಂದಾಗಿ ರಾಕ್ಷಸರನ್ನು ಕೊಲ್ಲತೊಡಗಿದರು. ವಿಚಿತ್ರವೆಂದರೆ ಒಬ್ಬ ರಾಕ್ಷಸ ಸತ್ತರೆ ಆ ತಕ್ಷಣ ನಾಲ್ಕು ರಾಕ್ಷಸರು ಹೊಸದಾಗಿ ಹುಟ್ಟಿಕೊಳ್ಳುತ್ತಿದ್ದರು. ಏನು ಮಾಡಿ ಇವರ ಉಪಟಳವನ್ನು ತಡೆಯಬೇಕೆನ್ನುವುದು ಅರ್ಥವಾಗದೆ ಇದ್ದಾಗ ಸ್ಫುರದ್ರೂಪಿ ತರುಣನೊಬ್ಬ ರಾಜಕುಮಾರನಂತೆ ಬಿಳಿ ಕುದುರೆಯನ್ನೇರಿ ಬಂದು ಹೇಳಿದ. ನಿಮಗೆ ಕಾಟ ಕೊಡುತ್ತಿರುವ ರಾಕ್ಷಸರ ಜೀವ ಅವರ ದೇಹದಲ್ಲಿಲ್ಲ. ಇಲ್ಲಿಂದ ಏಳು ಸಮುದ್ರಗಳ ಆಚೆ ಒಂದು ದೊಡ್ಡ ಮರವಿದೆ. ಅದರ ಪೊಟರೆಯಲ್ಲಿ ಗಿಳಿಯೊಂದಿದೆ. ಆ ಗಿಳಿಯ ಕುತ್ತಿಗೆಯಲ್ಲಿ ಈ ಎಲ್ಲ ರಾಕ್ಷಸರ ಜೀವಗಳಿವೆ. ಆ ಗಿಳಿಯ ಕುತ್ತಿಗೆ ಹಿಚುಕಿದರೆ ಇವು ಎಲ್ಲೆಲ್ಲಿವೆಯೋ ಅಲ್ಲಲ್ಲಿ ಸಾಯುತ್ತವೆ, ನಾನಲ್ಲಿಗೆ ಹೋಗಿ ಈ ಕೆಲಸ ಮುಗಿಸಿ ಬರುತ್ತೇನೆಂದು ಬಂದಷ್ಟೇ ವೇಗದಲ್ಲಿ ಹೊರಡುತ್ತಾನೆ. ಆ ರಾಜಕುಮಾರ ಇವತ್ತು ಬರುತ್ತಾನೆ, ನಾಳೆ ಬರುತ್ತಾನೆ ಎಂದು ಊರಿನ ಜನ ಕಾಯುತ್ತಿದ್ದಾರೆ.

ದುಡಿದು ತಿನ್ನುವವರಲ್ಲಿ ಸಾಮುದಾಯಿಕ ಚೈತನ್ಯದ ಕೊರತೆ. ಅದು ಎಲ್ಲದಕ್ಕಿಂತ ದೊಡ್ಡ ಸವಾಲು. ನೂರು ಜನರಲ್ಲಿ ಒಬ್ಬನು ಮಾತ್ರ ಬಲಿಷ್ಠನೂ ದುಷ್ಟನೂ ಆಗಿ ಉಳಿದವರನ್ನು ನಿಯಂತ್ರಿಸುತ್ತಿದ್ದಾನೆ. ನಾಲ್ಕು ಜನರು ಅವನ ಸುತ್ತಲೂ ತಿರುಗುವ ಗ್ರಹಗಳು. ತೊಂಬತ್ತು ಜನ ನಾವಿರುವುದೇ ಹೀಗೆ ಅಂತ ಕುರುಡಾಗಿ ನಂಬಿ ಕಣ್ಣು ಕಿವಿ ನಾಲಿಗೆ ಹೃದಯಗಳನ್ನು ಕಳೆದುಕೊಂಡು ತಮ್ಮೆಲ್ಲ ಸಮಸ್ಯೆಗಳಿಗೆ ಪರಿಹಾರ ಹೊತ್ತು ತರಲಿರುವ, ಎಂದೋ ಏನೋ ಬರಲಿರುವ ರಾಜಕುಮಾರನಿಗಾಗಿ ಕಾಯುತ್ತ ಕುಳಿತಿದ್ದಾರೆ. ಉಳಿದ ಐದು ಜನರು ಎಲ್ಲಿ ಏನಾಗುತ್ತಿದೆ ಎಂದೆಲ್ಲ ಗ್ರಹಿಸಿ ತೊಂಬತ್ತು ಜನರ ಜೀವ ತುಂಬಲು ಪ್ರಯತ್ನಿಸುತ್ತಿದ್ದಾರೆ. ಇವರಿಗೆಲ್ಲ ಕಣ್ಣು ಕಿವಿ ಬರುವುದು ಆ ಒಬ್ಬನಿಗೆ ಇಷ್ಟವಿಲ್ಲ.

ಜನಹಿತಕ್ಕೆ ಎಲ್ಲರೂ ಒಂದಾಗಬೇಕು. ಕೆಟ್ಟದ್ದರ ವಿರುದ್ಧ ಸದಾಶಯಗಳು ಗೆಲ್ಲಬೇಕಾದರೆ ದುಷ್ಟತನದ ಚಿಂತನಾಮೂಲವನ್ನು ಎಲ್ಲೋ ಕುಳಿತ ಗಿಳಿಗೋಣಿನ ಕ್ರಿಯಾಕುಲುಮೆಯನ್ನು ಆರಿಸಬೇಕು. ಇದನ್ನೆಲ್ಲಾ ಮನವರಿಕೆ ಮಾಡಲು ಮಾಂತ್ರಿಕನೇ ಬರಬೇಕು, ಹೋರಾಡಿ ನೆಮ್ಮದಿ ತರಲು ಬಿಳಿಕುದುರೆಯ ರಾಜಕುಮಾರನೇ ಬರಬೇಕು ಅಂತ ಕಾದು ಕುಳಿತವರಿಗೆ ಬದುಕೂ ಇಲ್ಲ, ಭವಿಷ್ಯವೂ ಇಲ್ಲ. ನಮ್ಮೊಳಗೇ ಮಾಂತ್ರಿಕನನ್ನೂ ರಾಜಕುಮಾರರನ್ನೂ ರೂಪಿಸಿಕೊಂಡು ನಮ್ಮೆದೆಯ ದನಿಗೆ ಕಿವಿಯಾಗುವವರ ಬೆಂಬಲಕ್ಕೆ ದೃಢವಾಗಿ ನಿಲ್ಲಬೇಕು.

ಗುಂಡಣ್ಣ



ಪದಬಂಧ 6448

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪದದಲ್ಲಿರುವ ಪುಸ್ತಕದ ಸರ್ಗ (4)
3.ಪರರ ಆಕ್ರಮಣದ ವೇಳೆಯಲ್ಲಿ ತೋರಿದ ಶೌರ್ಯ (4)
5.ಮಣ ಭಾರ ಹೊತ್ತಿರುವ ನಲ್ಲ (3)
6.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8.ಕಣದಲ್ಲಿರುವ ಕಪ್ಪು ಲೋಹ (3)
9.ಕುಡಿಯಲು ಯೋಗ್ಯವಾದುದು (3)
10.ಎರಡಾಗಿ ಸೀಳಿದುದು (3)
11.ನೀರು ಜಿನುಗುವ ತಗ್ಗು (3)
12.ಕೆಲವರು ಮಾಡುವ ಕಾರ್ಯ (3)
14.ಲಾಲಸೆಯಿಂದ ಮುದ್ದು ಮಾಡುವಿಕೆ (3)
16.ಇಂಪಾದ ಮಾತು (4)
17.ಭಾರವನ್ನು ಬೇರೆಯವರಿಗೆ ವಹಿಸಿಕೊಂಡುವುದು! (4)

ಮೇಲಿಂದ ಕೆಳಕ್ಕೆ

1.ಉತ್ತರದವರ ವೇತನ (3)
2.ಆದರ ತೋರಿ ಹೇಳಿರುವ ಬೆಲೆ (2)
3.ಪಯಣ ಮಾಡುವಾಗ ಮಾಡಿದ ಪ್ರತಿಜ್ಞೆ (2)
4.ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
7.ಕತೆಯೊಳಗೆ ಮನೋಹರತೆ! (5)
8.ನಿದ್ದೆಯಲ್ಲಿ ಅಸ್ಪಷ್ಟವಾಗಿ ಗೊಣಗುವಿಕೆ (5)
11.ಜುಲುಮೆಯಿಂದ ಪ್ರೀತಿ ಮೂಡಿತೇ? (3)
13.ಅಕ್ಕರೆಯಿಂದ ತಿನ್ನಿಸಿರುವ ಸಿಹಿ (3)
14.ಬಟ್ಟೆಯ ನೀಳ ಪಟ್ಟಿ (2)
15.ನೆನಪಲ್ಲೇ ಉಳಿದಿರುವ ಕಾರಣ ಗೊತ್ತಾಯಿತೇ? (2)



6447ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಾರಂಗತ 3.ಮೋಸಗಾರ 5.ತಿಗುರಿ 7.ಮಿಣಿ 8.ರಸ 10.ಯಮ 12.ಪಾಶ 14.ಗಡಸು 16.ಸರಪಣಿ 17.ಖಡ್ಗಮೃಗ

ಮೇಲಿಂದ ಕೆಳಕ್ಕೆ: 1.ಪಾಲುಗಾರ 2.ತತ 3.ಮೋರಿ 4.ರಮಣಿ 6.ಗುಗ್ಗು 7.ಮಿತವ್ಯಯ 9.ಸಮಾವೇಶ 11.ಮದುಮಗ 12.ಪಾಯಸ 13.ಹಾಡು 14.ಗಣಿ 15.ಸುಖ

ಸುಡೊಕು 6831

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

							2	
8		6				5		3
	5		4		6		7	
5			1		2		4	
	2	9						
6			8		9	2		5
	8				1		9	
7		2		8		3		1
	6		2		3		5	

6830 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಜೂನ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಪೂರ್ಣಿಮ ಅಹೋರಾತ್ರ ನಕ್ಷತ್ರ: ಮೂಲ ಗಂ. 28-04 ಯೋಗ: ಶುಕ್ಲ (ಶುಕ್ರ) ಗಂ. 14-26 ಕರಣ: ವಿಷ್ಟಿ ಗಂ. 16-18, ಮಿಥುನ ಮಾಸದ 14 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 06-11 ಸೂರ್ಯಾಸ್ತ : 06-57, ಮುಸ್ಲಿಂ ದಿನಾಂಕ : 13 ಮೊಹರಂ. ಅದೃಷ್ಟ ಸಂಖ್ಯೆ : 6, 1

ಮೇಷ: ವ್ಯವಹಾರಿಕ ಜೀವನ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಸೂಕ್ತವಾದ ದಿನ. ಮಾನಸಿಕ ನೆಮ್ಮದಿಗಾಗಿ ದೇವತಾ ಕಾರ್ಯಗಳನ್ನು ಮಾಡಿ ಅಥವಾ ಪುಣ್ಯಕ್ಷೇತ್ರಗಳ ದರ್ಶನ ಪಡೆಯಿರಿ.

ವೃಷಭ: ಹಣಕಾಸಿನ ವಿಚಾರದಲ್ಲಿ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿಯ ಪ್ರಸಂಗ ಇದ್ದೀತು. ಮಾನಸಿಕ ಅಸ್ಥಿರತೆ ಹಾಗೂ ನಕಾರಾತ್ಮಕ ಚಿಂತೆ ಕಾಡಲಿದೆ. ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ದೊರೆಯಲಿದೆ.

ಮಿಥುನ: ಧನಾಗಮನಕ್ಕೆ ಅವಕಾಶಗಳಿದ್ದರೂ ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಅಷ್ಟೇ ಅಗತ್ಯ. ಮಾತಿನಿಂದ ಕಾರ್ಯ ಸಾಧಿಸುವ ಗುಣದಿಂದ ಅನುಕೂಲಕರ ವಾತಾವರಣ ಕಾಣುವಿರಿ.

ಕರ್ಕಾಟಕ: ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚಿ ಗ್ರಂಥ ಸಂಪಾದನೆ, ಪ್ರಕಟಣೆ ಕಾರ್ಯಗಳಲ್ಲಿ ತೊಡಗುವಿರಿ. ಋಣಬಾಧೆಯಿಂದ ಮುಕ್ತರಾಗಲು ಇರುವ ಮಾರ್ಗದ ಬಗ್ಗೆ ಗಮನನೀಡಿ. ಆಡಿದ ಮಾತುಗಳು ಮುಳ್ಳಾಗುವ ದಿನ.

ಸಿಂಹ: ಸರ್ಕಾರಿ ನೌಕರಿಯಲ್ಲಿರುವವರಿಗೆ ಅಪೇಕ್ಷಿತ ಸ್ಥಳಕ್ಕೆ ವರ್ಗಾವಣೆ ದೊರೆಯುವ ಸಂಭವವಿದೆ. ಕೆಲಸಕ್ಕೆ ಹತ್ತಿರದವರಿಂದ ಅಡೆತಡೆ ಉಂಟಾಗಲಿದೆ. ಅನಗತ್ಯ ಖರ್ಚುವೆಚ್ಚಗಳಿಗೆ ಕಡಿವಾಣ ಹಾಕಿ.

ಕನ್ಯಾ: ಲಾಭದಾಯಕ ಎನಿಸುವ ಕೆಲಸ ಅಥವಾ ವ್ಯಕ್ತಿಗಳೊಂದಿಗೆ ವ್ಯವಹರಿಸಿದ ಪರಿಣಾಮ ಪಶ್ಚಾತ್ತಾಪ ಪಡುವಂತಾಗುವುದು. ಕಾಫಿ ಹಾಗೂ ಏಲಕ್ಕಿ ಬೆಳೆಗಾರರು ಫಸಲನ್ನು ಎದುರು ನೋಡಬಹುದು.

ತುಲಾ: ಹೊಸ ಕಾರ್ಯದಿಂದ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾಗಲಿವೆ. ಮೂಳೆಗೆ ಸಂಬಂಧಿಸಿದ ಸಮಸ್ಯೆ ನಿರ್ಲಕ್ಷಿಸಬೇಡಿ. ನೂತನ ವಸ್ತುಗಳ ಖರೀದಿಗೆ ಸುಸಮಯವಲ್ಲ.

ವೃಶ್ಚಿಕ: ವಿದ್ಯಾರ್ಥಿಗಳಿಗೆ ಹಿನ್ನಡೆ ಉಂಟಾಗಿ ಸ್ವಾಭಿಮಾನಕ್ಕೆ ಧಕ್ಕೆ ಬರಲಿದೆ. ಹೊಸ ನಿರ್ಧಾರ ತೆಗೆದುಕೊಳ್ಳಬೇಡಿ. ಕಟ್ಟಡದ ಕೆಲಸಗಳು ಪೂರ್ತಿಗೊಂಡು ಮನಸ್ಸಿಗೆ ಸಮಾಧಾನ ಆಗಲಿದೆ.

ಧನು: ಕಾರ್ಯದೊತ್ತಡದಲ್ಲಿಯೂ ಸಹೋದ್ಯೋಗಿಗಳನ್ನು ಹುರಿದುಂಬಿಸುವ ಕೆಲಸವನ್ನು ಮಾಡಿ. ಸಂಬಂಧಿಕರ ವಲಯದಲ್ಲಿ ಮೇಲಿದ್ದ ತಪ್ಪು ಅಭಿಪ್ರಾಯಗಳು ದೂರಾಗಲಿವೆ. ಶುಭ ಸುದ್ದಿಯೊಂದು ಬರಲಿದೆ.

ಮಕರ: ಅಧಿಕಾರಿಗಳ ಮನಸ್ಥಿತಿ ಅರಿತುಕೊಂಡು ಬೇಡಿಕೆಯನ್ನು ನೆರವೇರಿಸಿ ಕೊಳ್ಳುವ ಪ್ರಯತ್ನ ಮಾಡಿ. ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದ ಕೆಲಸ ಆರಂಭಿಸುವಿರಿ.

ಕುಂಭ: ಕೆಲಸಗಳಿಗೂ ಅಳುಕುವ ಪ್ರಮೇಯ ಇರುವುದಿಲ್ಲ. ಹಂತ ಹಂತವಾಗಿ ನಿಧಾನಗತಿಯಲ್ಲಿ ಆಸೆಗಳು ಈಡೇರಲಿವೆ. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕಾಗಿ ಹೆಚ್ಚು ಓಡಾಡುವ ಸಂದರ್ಭ ಬರಲಿದೆ.

ಮೀನ: ಸ್ಥಾನಮಾನದ ಬಗ್ಗೆ ಅರಿವಿರಲಿ. ಅಧಿಕಾರದ ಮದದಲ್ಲಿ ಹಿರಿಯರಿಗೆ ಅಗೌರವವನ್ನು ಉಂಟುಮಾಡುವ ಮಾತುಗಳನ್ನು ಆಡದಿರಿ. ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳಬೇಕಾಗುವುದು.

‘ಮೇಡ್ ಇನ್ ಇಂಡಿಯಾ’ ದೇಶದ ಗೌರವದ ಸಂಕೇತ

ದೇಶದ ಕಂಪನಿಯ ಯಶಸ್ಸನ್ನು ಹಂಚಿಕೊಂಡ ಗೋಯಲ್

ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ಉತ್ಪನ್ನಗಳ ಮೇಲೆ ಬರೆದಿರುವ ‘ಮೇಡ್ ಇನ್ ಇಂಡಿಯಾ’ ಎಂಬ ಪದವು ದೇಶದ ಗೌರವ ಮತ್ತು ಗುಣಮಟ್ಟದ ಬದ್ಧತೆಯನ್ನು ಪ್ರತಿನಿಧಿಸುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಉತ್ಪನ್ನದ ಗುಣಮಟ್ಟವು ಕಾರ್ಪೊರೇಟ್ ಮಾನದಂಡ ಮಾತ್ರವೇ ಅಲ್ಲ; ಬದಲಾಗಿ ಅದು ಇಡೀ ದೇಶದ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ.

ಜಾಗತಿಕ ಮಟ್ಟದ ತಯಾರಿಕಾ ವಲಯದಲ್ಲಿ ಭಾರತದ ಬ್ರ್ಯಾಂಡ್ ಅನ್ನು ದೇಶದ ಉದ್ಯಮಿಗಳು ಹೇಗೆ ಸದೃಢಗೊಳಿಸುತ್ತಿದ್ದಾರೆ ಎಂಬುದರ ಕುರಿತು ತಮಿಳುನಾಡು ಮೂಲದ ಫ್ಲಾರೆನ್ಸ್ ಶೂ ಕಂಪನಿಯ ಯಶಸ್ಸನ್ನು ಉದಾಹರಣೆಯಾಗಿ ‘ಎಕ್ಸ್’ನಲ್ಲಿ ವಿವರಿಸಿದ್ದಾರೆ.

ಜೂನ್ 27ರಂದು ಲಂಡನ್‌ನಲ್ಲಿ ನಡೆದ ವ್ಯಾಪಾರ ಮಹಾಸಭೆಯಲ್ಲಿ ಫ್ಲಾರೆನ್ಸ್ ಶೂ ಕಂಪನಿಯ ಸಂಸ್ಥಾಪಕ ಅಕೀಲ್ ಅಹಮದ್ ಪನರುಣ ಅವರ ಕಥೆಯನ್ನು ಹಂಚಿಕೊಂಡಿರುವ ಗೋಯಲ್, ‘ಕೈರೋ ವಿಮಾನ ನಿಲ್ದಾಣದಲ್ಲಿ ವಿದೇಶಿ ಗ್ರಾಹಕರೊಬ್ಬರು ಐಷಾರಾಮಿ ಹ್ಯೂಗೋ ಬಾಸ್ ಶೂ ಖರೀದಿಸಿದರು. ಅದರ ಲೇಬಲ್ ಪರಿಶೀಲಿಸಿದಾಗ ಅದರ ಮೇಲೆ ಮೇಡ್ ಇನ್ ಇಂಡಿಯಾ ವಾಕ್ಯ ಕಂಡುಬಂತು’ ಎಂದು ಹೇಳಿದ್ದಾರೆ.

‘ಆ ಶೂ ಅನ್ನು ತಮಿಳುನಾಡಿನ ಅಂಬೂರಿನ ಅಕೀಲ್ ಅಹಮದ್ ಪನರುಣ ಅವರ ಕಂಪನಿ ತಯಾರಿಸಿತ್ತು. ನೀವು ಒಂದು ಉತ್ಪನ್ನದ ಮೇಲೆ ಮೇಡ್ ಇನ್ ಇಂಡಿಯಾ ಎಂದು ನಮೂದಿಸಿದಾಗ, ನೀವು ಒಂದು ದೇಶವನ್ನು ಪ್ರತಿನಿಧಿಸುತ್ತೀರಿ’ ಎಂದು ಗೋಯಲ್ ಹೇಳಿದ್ದಾರೆ.

ಕಂಪನಿಯು, ದೇಶದ ಕರಕುಶಲತೆಯನ್ನು ಜಾಗತಿಕ ಮಟ್ಟದಲ್ಲಿ ತೋರಿಸುವುದರ ಜೊತೆಗೆ ಗ್ರಾಮೀಣ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಮಾಡಿದೆ. ತಯಾರಿಕಾ ವಲಯದಲ್ಲಿ ಮಹಿಳೆಯರನ್ನು ಉತ್ತೇಜಿಸಿದೆ. ‘ಮೇಡ್ ಇನ್ ಇಂಡಿಯಾ’ ಪದವನ್ನು ಜಾಗತಿಕ ಮಟ್ಟದಲ್ಲಿ ನಂಬಿಕೆ, ಶ್ರೇಷ್ಠತೆ ಮತ್ತು ಹೆಮ್ಮೆಯ ಸಂಕೇತವನ್ನಾಗಿ ಮಾಡುತ್ತಿರುವ ಅಕೀಲ್ ಸೇರಿದಂತೆ ದೇಶದ ಅಸಂಖ್ಯಾತ ಉದ್ಯಮಿಗಳಿಗೆ ಧನ್ಯವಾದ ಎಂದು ಸಚಿವರು ಹೇಳಿದ್ದಾರೆ.

ಭಾರತ-ಬ್ರಿಟನ್ ನಡುವಿನ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದದ ಅನುಷ್ಠಾನಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಲು ಗೋಯಲ್ ಜೂನ್ 25ರಿಂದ 27ರವರೆಗೆ ಲಂಡನ್‌ನಲ್ಲಿದ್ದರು. ಈ ಒಪ್ಪಂದವು ಜುಲೈ 15ರಿಂದ ಜಾರಿಗೆ ಬರಲಿದೆ.

ಬತ್ತಿದ ಸಿನಾ ನದಿ

ಪಿಟಿಐ ಚಿತ್ರ



ಮಹಾರಾಷ್ಟ್ರದ ಸೋಲಾಪುರದ ಸಿನಾ ನದಿ ಮಳೆಯ ಕೊರತೆಯಿಂದಾಗಿ ಬತ್ತಿದೆ

ಹೂಡಿಕೆ: ಇಂದಲ್ಲ, ನಾಳೆ ಅಂದರೆ ನಷ್ಟ

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

‘ಆಮೇಲೆ ನೋಡಿದರೆ ಆಯಿತು ಬಿಡು...’ ನಮ್ಮಲ್ಲಿ ಹೆಚ್ಚಿನವರು ಹೂಡಿಕೆ ವಿಷಯ ಬಂದಾಗ ಹೇಳುವ ಮೊದಲ ಮಾತು ಇದು. ‘ಈಗಷ್ಟೇ ಸಂಪಾದನೆ ಶುರುವಾಗಿದೆ, ಇನ್ನೊಂದೆರಡು ವರ್ಷ ಹೋಗಲಿ, ಆಮೇಲೆ ದೊಡ್ಡ ಮೊತ್ತವನ್ನೇ ಒಟ್ಟಿಗೆ ತೊಡಗಿಸೋಣ’ ಎಂದುಕೊಳ್ಳುತ್ತೇವೆ. ಆದರೆ ಆರ್ಥಿಕ ಲೆಕ್ಕಾಚಾರಗಳು ಬೇರೆಯದೇ ಕಥೆ ಹೇಳುತ್ತವೆ. ಕೇವಲ 24 ತಿಂಗಳು, ಅಂದರೆ ಎರಡೇ ವರ್ಷ ಹೂಡಿಕೆಯನ್ನು ಮುಂದೂಡುವುದರಿಂದ ಭವಿಷ್ಯದಲ್ಲಿ ನೀವು ಬರೋಬ್ಬರಿ ₹7 ಲಕ್ಷಕ್ಕೂ ಹೆಚ್ಚು ಹಣವನ್ನು ಕಳೆದುಕೊಳ್ಳಬೇಕಾಗಬಹುದು! ಕೇಳಲು ಆಶ್ಚರ್ಯ ಎನಿಸಿದರೂ ಇದು ನೂರಕ್ಕೆ ನೂರು ಸತ್ಯ.

ಹೂಡಿಕೆಯ ಜಗತ್ತಿನಲ್ಲಿ ಸಮಯವೇ ಸಂಪತ್ತು. ತಡವಾಗಿ ಓಡಲು ಆರಂಭಿಸುವ ಮೊಲಕ್ಕಿಂತ, ಬೇಗನೆ ಹೂಡಿಕೆ ಪಯಣ ಆರಂಭಿಸಿ ನಿರಂತರವಾಗಿ ಸಾಗುವ ಆಮೆಯೇ ಇಲ್ಲಿ ಗೆಲ್ಲುತ್ತದೆ.

ಏನಿದು ಕಾಂಪೌಂಡಿಂಗ್ ಮ್ಯಾಜಿಕ್?: ದೀರ್ಘಾವಧಿಯ ಹೂಡಿಕೆಯಲ್ಲಿ ಅತ್ಯಂತ ಮುಖ್ಯವಾದದ್ದು ಕಾಂಪೌಂಡಿಂಗ್ ಅಂದರೆ ಚಕ್ರಬಡ್ಡಿಯ ಶಕ್ತಿ. ಸರಳವಾಗಿ ಹೇಳಬೇಕೆಂದರೆ, ಇಲ್ಲಿ ನಿಮ್ಮ ಹಣಕ್ಕೆ ಬಡ್ಡಿ ಸಿಗುವುದು ಮಾತ್ರವಲ್ಲದೆ, ಆ ಬಡ್ಡಿಯ ಮೇಲೂ ಬಡ್ಡಿ ಸಿಗುತ್ತಾ ಹೋಗುತ್ತದೆ. ಇದು ನಿಮ್ಮ ಸಣ್ಣ ಉಳಿತಾಯವನ್ನು ದೈತ್ಯ ಮೊತ್ತವನ್ನಾಗಿ ಬೆಳೆಸುತ್ತದೆ. ನೀವು ಹೂಡಿಕೆಯನ್ನು 2ರಿಂದ 3 ವರ್ಷ ತಡ ಮಾಡಿದರೂ, ನಿಮ್ಮ ಕೈಸೇರಬೇಕಾಗಿದ್ದ ಒಟ್ಟು ಮೊತ್ತದಲ್ಲಿ ಭಾರಿ ವ್ಯತ್ಯಾಸವಾಗುತ್ತದೆ. ತಡವಾಗಿ ಹೂಡಿಕೆ ಮಾಡುವವರು ಕೊಂಚ ದೊಡ್ಡ ಮೊತ್ತ ಹೂಡಿಕೆ ಮಾಡಿದರೂ, ತಮಗಿಂತ 5 ವರ್ಷ ಮುಂಚಿತವಾಗಿ ಅರ್ಧದಷ್ಟು ಕಡಿಮೆ ಹಣದೊಂದಿಗೆ ಹೂಡಿಕೆ ಆರಂಭಿಸಿದವರನ್ನು ಹಿಂದಿಕ್ಕಲು ಕಷ್ಟವಾಗುತ್ತದೆ.

ವಿಳಂಬಕ್ಕೆ ಎಷ್ಟು ದಂಡ?: ಇದನ್ನು ಅರ್ಥಮಾಡಿಕೊಳ್ಳಲು ಒಂದು ಉದಾಹರಣೆ ನೋಡೋಣ. 25 ವರ್ಷ ವಯಸ್ಸಿನ ರಮೇಶ್ ಮತ್ತು 27 ವರ್ಷ ವಯಸ್ಸಿನ ಸುರೇಶ್ ತಿಂಗಳಿಗೆ ತಲಾ ₹1 ಸಾವಿರದಂತೆ ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆ ಮಾಡಲು ಯೋಚಿಸುತ್ತಾರೆ. ರಮೇಶ್ ತಕ್ಷಣ ಹೂಡಿಕೆ ಆರಂಭಿಸಿದರೆ, ಸುರೇಶ್ ಎರಡು ವರ್ಷ ತಡ ಮಾಡುತ್ತಾರೆ. 30 ವರ್ಷಗಳ ನಂತರ ಇವರಿಬ್ಬರ ಖಾತೆಯಲ್ಲಿ ಎಷ್ಟು ಹಣವಿರಬಹುದು? ಪಟ್ಟಿಯಲ್ಲಿ ನೋಡಿ.

ಇಂದೇ ಆರಂಭಿಸಿ: ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್ ಅಂದ ತಕ್ಷಣ ‘ಇದು ತುಂಬಾ ಕಷ್ಟ, ನಮಗೆ ತಿಳಿಯುವುದಿಲ್ಲ’ ಎಂದು ದೂರ ಉಳಿಯಬೇಡಿ. ಎಸ್‌ಐಪಿ ವಿಧಾನವು ಹೂಡಿಕೆಯನ್ನು ಅತ್ಯಂತ ಸರಳಗೊಳಿಸಿದೆ. ನಿಮ್ಮ ಬ್ಯಾಂಕ್ ಖಾತೆಯಿಂದ ಪ್ರತಿ ತಿಂಗಳು ಒಂದು ನಿರ್ದಿಷ್ಟ ದಿನಾಂಕದಂದು ₹1 ಸಾವಿರ ಸ್ವಯಂಚಾಲಿತವಾಗಿ ಕಡಿತ ಆಗುವಂತೆ ಮಾಡಬಹುದು. ನಿಮ್ಮ ಭವಿಷ್ಯದ ಕನಸುಗಳನ್ನು ನನಸಾಗಿಸಲು ಕೋಟಿಗಟ್ಟಲೆ ಹಣದ ಅಗತ್ಯವಿಲ್ಲ, ನಿಮ್ಮ ಇಂದಿನ ಸಣ್ಣ ಉಳಿತಾಯವೇ ನಾಳಿನ ದೊಡ್ಡ ಆಸ್ತಿ.

ಹೂಡಿಕೆ ಮಾಡುವಾಗ ಗೊಂದಲಗಳಿದ್ದರೆ ಮ್ಯೂಚುವಲ್ ಫಂಡ್ ತಜ್ಞರ ಸಲಹೆ ಪಡೆಯಿರಿ. ಆದರೆ ಯಾವುದೇ ಕಾರಣಕ್ಕೂ ಹೂಡಿಕೆಯನ್ನು ಮುಂದೂಡಬೇಡಿ. ಇಂದೇ ಸಣ್ಣ ಮೊತ್ತದೊಂದಿಗೆ ಆರಂಭಿಸಿ, ನಿಮ್ಮ ಆರ್ಥಿಕ ಭವಿಷ್ಯವನ್ನು ಭದ್ರಪಡಿಸಿಕೊಳ್ಳಿ.

ಸನ್ನಿವೇಶ 1: ಈಕ್ವಿಟಿ ಫಂಡ್- ಹೂಡಿಕೆ ತಡ ಮಾಡಿದರೆ ಏನಾಗುತ್ತದೆ?

ಹೂಡಿಕೆಯ ವಿವರಗಳು	ರಮೇಶ್ (25ನೇ ವಯಸ್ಸಿಗೆ ಆರಂಭ)	ಸುರೇಶ್ (27ನೇ ವಯಸ್ಸಿಗೆ ಆರಂಭ)
ಹೂಡಿಕೆಯ ಅವಧಿ	30 ವರ್ಷ	28 ವರ್ಷ
ತಿಂಗಳ ಹೂಡಿಕೆ ಮೊತ್ತ	₹1,000	₹1,000
ಒಟ್ಟು ಹೂಡಿದ ಹಣ	₹3.60 ಲಕ್ಷ	₹3.36 ಲಕ್ಷ
ಕೊನೆಗೆ ಸಿಗುವ ಒಟ್ಟು ಮೊತ್ತ	₹35,29,914	₹27,58,585
ವಿಳಂಬದಿಂದ ಆದ ನಷ್ಟ	—	₹7,71,329

ಸೂಚನೆ: ಈಕ್ವಿಟಿ ಎಸ್‌ಐಪಿಯ ವಾರ್ಷಿಕ ಗಳಿಕೆ ಶೇ 12ರಷ್ಟು ಎಂದು ಅಂದಾಜು ಮಾಡಲಾಗಿದೆ. ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಗಳಿಕೆಯ ಖಾತರಿ ಇರುವುದಿಲ್ಲ. ಗಳಿಕೆಯು ಮಾರುಕಟ್ಟೆ ಏರಿಳಿತ ಆಧರಿಸಿರುತ್ತದೆ.

ವಿವರಣೆ: ಎರಡು ವರ್ಷ ತಡ ಮಾಡಿದ್ದರಿಂದ ಸುರೇಶ್ ಉಳಿಸಿದ್ದು ಬರೀ ₹24 ಸಾವಿರ. ಆದರೆ ಕಳೆದುಕೊಂಡಿದ್ದು ಬರೋಬ್ಬರಿ ₹7.71 ಲಕ್ಷ. ಒಂದು ವೇಳೆ ಹೆಚ್ಚು ರಿಸ್ಕ್ ಇಲ್ಲದ ಹೈಬ್ರಿಡ್ ಫಂಡ್ ಆಯ್ಕೆ ಮಾಡಿಕೊಂಡು, ಅದರಲ್ಲಿ ಶೇ 10ರಷ್ಟು ಆದಾಯ ಬಂದರೂ, ತಡವಾಗಿ ಹೂಡಿಕೆ ಶುರುಮಾಡುವುದರಿಂದ ಆಗುವ ನಷ್ಟ ಲಕ್ಷಗಳಲ್ಲೇ ಇರುತ್ತದೆ.

ಸನ್ನಿವೇಶ 2- ಹೈಬ್ರಿಡ್ ಫಂಡ್- ಹೂಡಿಕೆ ತಡ ಮಾಡಿದರೆ ಏನಾಗುತ್ತದೆ?

ಹೂಡಿಕೆಯ ವಿವರಗಳು	ರಮೇಶ್ (25ನೇ ವಯಸ್ಸಿಗೆ ಆರಂಭ)	ಸುರೇಶ್ (27ನೇ ವಯಸ್ಸಿಗೆ ಆರಂಭ)
ಹೂಡಿಕೆಯ ಅವಧಿ	30 ವರ್ಷ	28 ವರ್ಷ
ತಿಂಗಳ ಹೂಡಿಕೆ ಮೊತ್ತ	₹1,000	₹1,000
ಒಟ್ಟು ಹೂಡಿದ ಹಣ	₹3.60 ಲಕ್ಷ	₹3.36 ಲಕ್ಷ
ಕೊನೆಗೆ ಸಿಗುವ ಒಟ್ಟು ಮೊತ್ತ	₹22,79,325	₹18,45,849
ವಿಳಂಬದಿಂದ ಆದ ನಷ್ಟ	—	₹4,33,476

ಸೂಚನೆ: ಹೈಬ್ರಿಡ್ ಫಂಡ್ ಎಸ್‌ಐಪಿಯ ವಾರ್ಷಿಕ ಗಳಿಕೆ ಶೇ 10ರಷ್ಟು ಎಂದು ಅಂದಾಜು ಮಾಡಲಾಗಿದೆ. ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಗಳಿಕೆಯ ಖಾತರಿ ಇರುವುದಿಲ್ಲ. ಗಳಿಕೆ ಮಾರುಕಟ್ಟೆ ಏರಿಳಿತ ಆಧರಿಸಿರುತ್ತದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು: 100 ಕ್ಕೆ ₹710; 12 ಕ್ಕೆ ₹94
ಮೈಸೂರು: 100 ಕ್ಕೆ ₹725

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ) ₹439-700
ದ್ವಿತಳಿ (ಬಿ.ವಿ) ₹522-817

ಅಯೋಧ್ಯೆ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯೆ ನೀಡಬೇಕೇ?

ಬೇಕು ಬೇಡ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಅಮೆರಿಕ ದಾಳಿಗೆ ಟೆಹರಾನ್ ಪ್ರತಿಕ್ರಿಯೆ • ಮಾತುಕತೆಗೆ ಹಿನ್ನಡೆ ಆತಂಕ

ಕೊಲ್ಲಿ ದೇಶಗಳ ಮೇಲೆ ಇರಾನ್ ದಾಳಿ

ದುಬೈ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೂಚನೆಯ ಮೇರೆಗೆ ಶನಿವಾರ ಮತ್ತು ಭಾನುವಾರ ಇರಾನ್ ಮೇಲೆ ಅಮೆರಿಕ ಸೇನೆ ದಾಳಿ ನಡೆಸಿದೆ. ಅದಕ್ಕೆ ಪ್ರತಿಕ್ರಿಯಾಗಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕೂಡ ಬಹರೇನ್ ಹಾಗೂ ಕುವೈತ್ ಅನ್ನು ಗುರಿಯಾಗಿಸಿ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ.

‘ವಾಷಿಂಗ್ಟನ್ ತನ್ನ ದಾಳಿಯನ್ನು ಹೀಗೆ ಮುಂದುವರಿಸಿ ಪ್ರಚೋದನೆ ನೀಡುತ್ತಲೇ ಇದ್ದರೆ ಶಾಂತಿ ಮಾತುಕತೆಗೆ ಪೂರ್ಣವಿರಾಮ ಹಾಕಬೇಕಾಗುತ್ತದೆ’ ಎಂದು ರೆವಲ್ಯೂಷನರಿ ಗಾರ್ಡ್ ಎಚ್ಚರಿಕೆ ನೀಡಿದೆ.

ಇರಾನ್‌ನ ಹಸ್ತಕ್ಷೇಪವಿಲ್ಲದ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ ಪ್ರಯತ್ನಗಳು ಈ ಘರ್ಷಣೆಗೆ ಕಾರಣವಾಗಿವಾಗಿದೆ. ಮತ್ತೊಂದೆಡೆ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಒಮಾನ್ ಕರಾವಳಿ ಮೂಲಕ ಪರ್ಯಾಯ ಮಾರ್ಗ ಕಲ್ಪಿಸಿರುವುದು ಇರಾನ್ ಅನ್ನು ಕುಪಿತಗೊಳಿಸಿದೆ. ಹೊಸ ಮಾರ್ಗದಲ್ಲಿ ಸಾಗುವ ಹಡಗುಗಳ ಮೇಲೆ ಟೆಹರಾನ್ ಈಗಾಗಲೇ ಎರಡು ಬಾರಿ ದಾಳಿ ಮಾಡಿ ಪ್ರತಿರೋಧವನ್ನೂ ಒಡ್ಡಿದೆ.

ಇರಾನ್ ಮೇಲೆ ಅಮೆರಿಕ ದಾಳಿ: ‘ಒಮಾನ್ ಮಾರ್ಗದಲ್ಲಿ ಸಾಗುತ್ತಿದ್ದ ಪನಾಮ ಧ್ವಜ ಹೊಂದಿದ್ದ ಹಡಗಿನ ಮೇಲೆ ಇರಾನ್ ಡ್ರೋನ್ ಮೂಲಕ ದಾಳಿ ನಡೆಸಿದೆ. ಅದಕ್ಕೆ ಪ್ರತಿಯಾಗಿ, ಇರಾನ್‌ನ ಸೇನಾ ಕಣ್ಗಾವಲು ಮೂಲಸೌಕರ್ಯ, ಸಂವಹನ ವ್ಯವಸ್ಥೆಗಳು, ವಾಯು ರಕ್ಷಣಾ ನೆಲೆಗಳು, ಡ್ರೋನ್ ಮತ್ತು ಶಸ್ತ್ರಾಸ್ತ್ರ ಸಂಗ್ರಹಾಗಾರಗಳ ಮೇಲೆ ದಾಳಿ ನಡೆಸಿರುವುದಾಗಿ’ ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಭಾನುವಾರ ತಿಳಿಸಿದೆ. ಈ ಕಿರು ಹಡಗು ಕುವೈತ್‌ಗೆ ಕೈಚ್ಚಾ ತೈಲವನ್ನು ಸಾಗಿಸುತ್ತಿತ್ತು ಎಂದು ಗೊತ್ತಾಗಿದೆ.

ಕೊಲ್ಲಿ ರಾಷ್ಟ್ರಗಳ ಮೇಲೆ ಟೆಹರಾನ್ ದಾಳಿ: ಅಮೆರಿಕದ ದಾಳಿಯ ಬೆನ್ನಲ್ಲೇ, ಅಮೆರಿಕ ಸೇನಾ ನೆಲೆಗಳಿರುವ ಕೊಲ್ಲಿ ದೇಶಗಳನ್ನು ಗುರಿಯಾಗಿಸಿ ಇರಾನ್ ಭಾನುವಾರ ದಾಳಿ ನಡೆಸಿದೆ. ‘ಇರಾನ್ ಇಂದು ಬೆಳಿಗ್ಗೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ತನ್ನ ವಾಯುಪಡೆಗಳು ಅವುಗಳನ್ನು ತಡೆದಿವೆ’ ಎಂದು ಕುವೈತ್ ಸೇನೆ ತಿಳಿಸಿದೆ. ಕುವೈತ್‌ನಲ್ಲಿ ಅಮೆರಿಕದ ಪ್ರಮುಖ ಸೇನಾ ನೆಲೆಯಿದೆ.

‘ಇರಾನ್ ಕಡೆಯಿಂದ ಬಂದ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಗುರುತಿಸಿ, ತಡೆದಿದ್ದೇವೆ. ಯಾವುದೇ ಹಾನಿ ಆದ ವರದಿಗಳಿಲ್ಲ’ ಎಂದು ಕುವೈತ್ ಸೇನೆ ಹೇಳಿದೆ.

‘ಬಹರೇನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿಯ ವಸತಿ ಕಟ್ಟಡದ ಮೇಲೆ ಇರಾನ್ ದಾಳಿ ನಡೆಸಿದೆ. ಆದರೆ ಯಾವುದೇ ಸಾವು ಸಂಭವಿಸಿಲ್ಲ. ಎಂಟು ಅಂತಸ್ತಿನ ಕಟ್ಟಡದ ಮೇಲೆ ಮಹಡಿ ಪೂರ್ಣವಾಗಿ ನಾಶವಾಗಿದೆ’ ಎಂದು ಬಹರೇನ್ ಆಂತರಿಕ ಸಚಿವಾಲಯ ತಿಳಿಸಿದೆ. ಟೆಹರಾನ್ ದಾಳಿಯನ್ನು ಬಹರೇನ್ ವಿದೇಶಾಂಗ ಸಚಿವಾಲಯ ತೀವ್ರವಾಗಿ ಖಂಡಿಸಿದೆ.

ಇರಾನ್ ವಿರುದ್ಧ ಟ್ರಂಪ್ ಕಿಡಿ

ಇರಾನ್ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ಕಿಡಿಕಾರಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಕದನ ವಿರಾಮ ಉಲ್ಲಂಘಿಸಿದ ಇರಾನ್ ವಿರುದ್ಧ ಅಮೆರಿಕ ದಾಳಿ ನಡೆಸಿದೆ. ಇರಾನ್‌ನ ಕ್ಷಿಪಣಿ, ಡ್ರೋನ್ ಸಂಗ್ರಹಣಾ ನೆಲೆಗಳು ಮತ್ತು ರಾಡಾರ್ ನೆಲೆಗಳ ಮೇಲೆ ಪುನಃ ದಾಳಿ ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಇರಾನ್ ದಾಳಿಗಳು ಹೀಗೇ ಮುಂದುವರಿದರೆ ಅಮೆರಿಕ ಸಂಯಮದಿಂದ ಇರಲು ಸಾಧ್ಯವಿಲ್ಲ. ಕೆಲಸವನ್ನು ಪೂರ್ಣಗೊಳಿಸಲು ಸೇನೆಗೆ ನಿರ್ದೇಶಿಸಬೇಕಾಗುತ್ತದೆ. ಹಾಗೇನಾದರೂ ಆದರೆ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಮುಂದೆ ಅಸ್ತಿತ್ವದಲ್ಲಿರುವುದಿಲ್ಲ’ ಎಂದು ಅವರು ಎಚ್ಚರಿಸಿದ್ದಾರೆ.

‘ಕದನ ವಿರಾಮ ಒಪ್ಪಂದವನ್ನು ಗೌರವಿಸುವ ಬದಲಿಗೆ ಇರಾನ್ ಹಡಗಿನ ಮೇಲೆ ದಾಳಿ ನಡೆಸಿ, ಕದನ ವಿರಾಮ ಉಲ್ಲಂಘಿಸಿದೆ’ ಎಂದು ಅಮೆರಿಕ ಸೇನೆ ದೂರಿದೆ.

ಐದು ವರ್ಷದಲ್ಲಿ ನಾಲ್ಕು ಹೊಸ ಮಾದರಿ ಇ.ವಿ: ಟಿಎಂಪಿವಿ

ನವದೆಹಲಿ (ಪಿಟಿಐ): ಮುಂದಿನ ಐದು ವರ್ಷದೊಳಗೆ ನಾಲ್ಕು ಹೊಸ ಮಾದರಿಯ ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ) ಬಿಡುಗಡೆ ಮಾಡಲಾಗುವುದು ಎಂದು ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ (ಟಿಎಂಪಿವಿ) ಭಾನುವಾರ ತಿಳಿಸಿದೆ.

ಸಿಯಾರಾ.ಇವಿ, ಅವಿನ್ಯಾ ಮಾದರಿಯ ಒಂದು ಮತ್ತು ಇತರ ಎರಡು ಮಾದರಿಗಳನ್ನು ಬಿಡುಗಡೆ ಮಾಡಲಾಗುವುದು. ಪ್ರಸ್ತುತ ಎಕ್ಸ್‌ಪ್ರೆಸ್-ಟಿ, ಕರ್ವ್.ಇವಿ, ಹ್ಯಾರಿಯರ್.ಇವಿ, ನೆಕ್ಸಾನ್.ಇವಿ, ಪಂಚ್.ಇವಿ ಮತ್ತು ಟಿಯಾಗೊ.ಇವಿ ಎನ್ನುವ 6 ಮಾದರಿಗಳನ್ನು ಕಂಪನಿಯು ಗ್ರಾಹಕರಿಗೆ ಮಾರಾಟ ಮಾಡುತ್ತಿದೆ. ಇ.ವಿ ಮಾದರಿಗಳ ಸಂಖ್ಯೆಯು 2030-31ರ ಆರ್ಥಿಕ ವರ್ಷದ ವೇಳೆಗೆ 10ಕ್ಕೆ ತಲುಪಲಿದೆ ಎಂದು ಕಂಪನಿ ತಿಳಿಸಿದೆ.

ವಿದ್ಯುತ್ ಚಾಲಿತ ವಾಹನಗಳು ಹೆಚ್ಚು ದೂರು ಕ್ರಮಿಸುವಂತೆ ಮಾಡುವುದು, ವಾಹನದ ಜಾರ್ಜಿಂಗ್ ವೇಗವನ್ನು ಮೂರುಪಟ್ಟು ಹೆಚ್ಚಳ ಮಾಡಲು ಕೆಲಸ ಮಾಡಲಾಗುತ್ತಿದೆ. ಬ್ಯಾಟರಿಗಳ ಸಾಮರ್ಥ್ಯವನ್ನು ಶೇ 20ರಿಂದ ಶೇ 23ರಷ್ಟಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

19ನೇ ವರ್ಷದ ಚಿರಸ್ಮರಣೆ

ಎಚ್.ಪಿ. ರತನ್ (ಯಮಲೂರು)

ನೀನು ನಮ್ಮನ್ನಗಲಿ ಇಂದಿಗೆ ಹತ್ತೊಂಬತ್ತು ವರ್ಷಗಳಾದವು ಅನುದಿನವು, ಅನುಕ್ಷಣವು, ನಾವು ನಿನ್ನ ಸ್ಮರಣೆ ಮಾಡುತ್ತಲಿರುವೆವು, ನಿನ್ನ ಸ್ಮರಣೆಯೆ ನಮಗೆ ದಿವ್ಯಚೇತನ ನೀವು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿರುವ.

ಸದಾ ನಿನ್ನ ನೆನಪಿನಲ್ಲಿರುವ: ತಂದೆ ತಾಯಿ, ಎಚ್.ಪಿ. ರತನ್ ಚಾರಿಟೆಬಲ್ ಟ್ರಸ್ಟ್ (ರಿ)

‘ದಾರಿ ತಪ್ಪಿಸುವ ಹುನ್ನಾರ’

> ಯಾರು ಬೇಕಾದರೂ ದೂರು ದಾಖಲಿಸಬಹುದು. ದೇಶದಲ್ಲಿ ಕಾನೂನು ಮತ್ತು ಚುನಾವಣಾ ಆಯೋಗಗಳಿವೆ. ಅವುಗಳ ಮೇಲೆ ನಂಬಿಕೆ ಇರಲಿ
>
> **ರಿತಬ್ರತಾ ಬ್ಯಾನರ್ಜಿ,** ಟಿಎಂಸಿ ಭಿನ್ನಮತೀಯ ಗುಂಪಿನ ನಾಯಕ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮೇಲಿನ ನಿಯಂತ್ರಣಕ್ಕಾಗಿ ಆರಂಭವಾದ ಘರ್ಷಣೆಯು ಭಾನುವಾರ ಕಾನೂನಿನ ಅಂಗಳ ತಲುಪಿದೆ.

‘ಪಕ್ಷದ ಭಿನ್ನಮತೀಯ ಗುಂಪಿನ ನಾಯಕ ರಿತಬ್ರತಾ ಬ್ಯಾನರ್ಜಿ ಮತ್ತು ಅವರ ಸಹವರ್ತಿಗಳು ಪಕ್ಷದ ಹೆಸರು, ಚಿಹ್ನೆ ಮತ್ತು ಸಾಂಸ್ಥಿಕ ಹುದ್ದೆಗಳನ್ನು ಕಾನೂನುಬಾಹಿರವಾಗಿ ಬಳಸಿಕೊಂಡು ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ದಾರಿ ತಪ್ಪಿಸುತ್ತಿದ್ದಾರೆ ಮತ್ತು ಪಕ್ಷದ ವರ್ಚಸ್ಸಿಗೆ ಧಕ್ಕೆ ತರುತ್ತಿದ್ದಾರೆ’ ಎಂದು ಪಕ್ಷದ ಜಂಟಿ ರಾಷ್ಟ್ರೀಯ ಕಾರ್ಯದರ್ಶಿ (ಮಮತಾ ಬ್ಯಾನರ್ಜಿ ನೇತೃತ್ವದ ಬಣ) ಡೋಲಾ ಸೇನ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಇದರಿಂದ ಬಣ ತಿಕ್ಕಾಟವು, ಆರೋಪ ಪ್ರತ್ಯಾರೋಪವನ್ನು ಮೀರಿ ಮತ್ತೊಂದು ಹಂತವನ್ನು ತಲುಪಿದಂತಾಗಿದೆ. ಎರಡೂ ಬಣಗಳು ಪಕ್ಷದ ಪರಂಪರೆ ಮತ್ತು ರಚನೆಯ ಮೇಲಿನ ಹಿಡಿತಕ್ಕಾಗಿ ಕಾನೂನು ಮತ್ತು ಸಾಂಸ್ಥಿಕ ಕ್ರಮಗಳ ಮೇಲಿನ ಅವಲಂಬನೆಯನ್ನು ಹೆಚ್ಚಿಸಿವೆ.

‘ಆರೋಪಿಗಳು ಸಮಾನಾಂತರ ಸಂಘಟನೆಯೊಂದನ್ನು ನಡೆಸಲು ಮುಂದಾಗಿದ್ದು, ಪಕ್ಷದ ನಾಯಕರ ಅನುಮತಿ ಪಡೆಯದೇ ತಾವೇ ಅಖಿಲ ಭಾರತೀಯ ಟಿಎಂಸಿ ಪದಾಧಿಕಾರಿಗಳು ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಕೋಲ್ಕತ್ತ ಪೊಲೀಸ್ ಠಾಣೆಯ ಸೈಬರ್ ಕ್ರೈಂ ವಿಭಾಗದಲ್ಲಿ ದಾಖಲಿಸಲಾದ ದೂರಿನಲ್ಲಿ ಸೇನ್ ಆರೋಪಿಸಿದ್ದಾರೆ.

‘ಭಿನ್ನಮತೀಯರ ಹಿಂದಿನ ಶಕ್ತಿಗಳ ಕುರಿತು ತನಿಖೆ ನಡೆಸಿ, ಅವರಿಗೆ ಆರ್ಥಿಕ ನೆರವು ನೀಡುತ್ತಿರುವವರನ್ನು ಪತ್ತೆಹಚ್ಚಬೇಕು’ ಎಂದೂ ದೂರಿನಲ್ಲಿ ಒತ್ತಾಯಿಸಲಾಗಿದೆ.

ರಿತಬ್ರತಾ ಬ್ಯಾನರ್ಜಿ ಅವರ ಬಣವು ಉನ್ನತ ಮಟ್ಟದ ವಿಶೇಷ ಅಧಿವೇಶನ ನಡೆಸಿ, ಮಮತಾ ಬ್ಯಾನರ್ಜಿ ಹಾಗೂ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರನ್ನು ಹೊರತಾದ ಹೊಸದಾದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಘೋಷಿಸಿದ ವಾರದ ಬಳಿಕ ಈ ಬೆಳವಣಿಗೆ ನಡೆದಿದೆ. ಪಕ್ಷದ ಕಾಳಿಘಾಟ್ ಘಟಕವು ಕೂಡ ಶನಿವಾರ ಇಂಥದ್ದೇ ಪ್ರಕರಣವೊಂದನ್ನು ದಾಖಲಿಸಿತ್ತು.

ನಿಲುಗಡೆ ದೀಪ ಹಾಕದೆ ನಿಂತ ಟ್ರಕ್‌ಗೆ ಗುದ್ದಿದವರದು ತಪ್ಪಲ್ಲ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ರಾತ್ರಿ ವೇಳೆ ಜನನಿಬಿಡ ರಸ್ತೆಯಲ್ಲಿ ನಿಲುಗಡೆ ದೀಪ, ಪ್ರತಿಫಲಕ ಅಥವಾ ಸೂಚನಾ ಫಲಕಗಳಿಲ್ಲದೆ ನಿಲುಗಡೆ ಮಾಡಲಾದ ಟ್ರಕ್‌ಗೆ ಕಾರು ಚಾಲಕನೊಬ್ಬ ಹಿಂದಿನಿಂದ ಡಿಕ್ಕಿ ಹೊಡೆದರೆ, ಆ ಅಪಘಾತಕ್ಕೆ ಟ್ರಕ್ ಚಾಲಕ ಮತ್ತು ಅದರ ಮಾಲೀಕರೇ ಪ್ರಾಥಮಿಕ ಹೊಣೆಗಾರರಾಗುತ್ತಾರೆ. ಇದರಲ್ಲಿ ಕಾರು ಚಾಲಕನ ತಪ್ಪೇನೂ ಇಲ್ಲ’ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ದೆಹಲಿಯಲ್ಲಿ 2013ರಲ್ಲಿ 20 ವರ್ಷದ ಚಾರ್ಟರ್ಡ್ ಅಕೌಂಟೆನ್ಸಿ ವಿದ್ಯಾರ್ಥಿಯೊಬ್ಬನ ಸಾವಿಗೆ ಕಾರಣವಾಗಿದ್ದ ರಸ್ತೆ ಅಪಘಾತ ಪ್ರಕರಣಕ್ಕೆ ಸಂಬಂಧಿಸಿ, ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎನ್.ವಿ ಅಂಜಾರಿಯಾ ಅವರ ಪೀಠವು ವಜಾಗೊಳಿಸಿತು.

ವಿಮಾ ಪರಿಹಾರ ಮೊತ್ತಕ್ಕೆ ಸಂಬಂಧಿಸಿ ಸಲ್ಲಿಸಲಾಗಿದ್ದ ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು, ‘ರಾತ್ರಿ ವೇಳೆ ಸಾರ್ವಜನಿಕ ರಸ್ತೆಯಲ್ಲಿ ಪಾರ್ಕಿಂಗ್ ದೀಪ, ಸೂಚನಾ ಫಲಕ ಇಲ್ಲದೆ ನಿಲ್ಲಿಸಲಾಗಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದ ಮಾತ್ರಕ್ಕೆ, ಕಾರು ಚಾಲಕನ ನಿರ್ಲಕ್ಷ್ಯವೇ ಕಾರಣ, ಆತನೇ ತಪ್ಪಿತಸ್ಥ ಎಂಬ ವಾದವನ್ನು ಒಪ್ಪಲಾಗದು. ಚಾಲಕನ ‘ನಿರ್ಲಕ್ಷ್ಯ’ವನ್ನು ಸಂದರ್ಭದ ಹಿನ್ನೆಲೆಯಲ್ಲೂ ಪರಿಶೀಲಿಸಬೇಕು’ ಎಂದು ಹೇಳಿದೆ.

‘ರಾತ್ರಿ ವೇಳೆ ಮತ್ತು ಕಡಿಮೆ ಗೋಚರತೆ ಇದ್ದಾಗ ಪಾರ್ಕಿಂಗ್ ದೀಪ, ಪ್ರತಿಫಲಕ ಸೇರಿ ಅಗತ್ಯ ಮುನ್ನೆಚ್ಚರಿಕೆ ಪಾಲಿಸದೆ ಭಾರಿ ವಾಹನವನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸುವುದು ಗಂಭೀರ, ಅನಿರೀಕ್ಷಿತ ಅಪಾಯವನ್ನು ಉಂಟುಮಾಡುತ್ತದೆ’ ಎಂದೂ ಸುಪ್ರೀಂ ಕೋರ್ಟ್ ಒತ್ತಿ ಹೇಳಿದೆ.

ಘಟನೆ ಹಿನ್ನೆಲೆ: 2013ರ ಜೂನ್ 11ರಂದು ನಸುಕಿನಲ್ಲಿ ದೆಹಲಿಯ ಬಿಆರ್‌ಟಿ ಕಾರಿಡಾರ್‌ನಲ್ಲಿರುವ ಆಂಡ್ರ್ಯೂಸ್ ಗಂಜ್ ಬಸ್ ನಿಲ್ದಾಣದ ಬಳಿ ಅಪಘಾತ ಸಂಭವಿಸಿತ್ತು. ಸಿ.ಎ ಅಂತಿಮ ವರ್ಷದ ವಿದ್ಯಾರ್ಥಿ ಆಕಾಶ್ ಕುಮಾರ್, ತನ್ನ ಸ್ನೇಹಿತ ನಿಖಿಲ್ ಕುಮಾರ್ ಜೈನ್ ಚಲಾಯಿಸುತ್ತಿದ್ದ ಕಾರಿನಲ್ಲಿ ಬರುವಾಗ, ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದ ಟ್ರಕ್‌ಗೆ ಕಾರು ಡಿಕ್ಕಿ ಹೊಡೆದಿತ್ತು. ಟ್ರಕ್ ಚಾಲಕ ಪಾರ್ಕಿಂಗ್ ದೀಪ ಹಾಕಿರಲಿಲ್ಲ, ಸೂಚನಾ ಫಲಕವೂ ಇರಲಿಲ್ಲ. ರಾತ್ರಿ ಮತ್ತು ಕಡಿಮೆ ಗೋಚರತೆ ಇದ್ದಿದ್ದರಿಂದ ಅಪಘಾತ ಸಂಭವಿಸಿತ್ತು. ಅಪಘಾತದಲ್ಲಿ ಆಕಾಶ್ ಕುಮಾರ್ ಮೃತಪಟ್ಟಿದ್ದರು.



ಮೋಟಾರು ಅಪಘಾತ ಹಕ್ಕುಗಳ ನ್ಯಾಯಮಂಡಳಿ (ಎಂಎಸಿಟಿ) ಟ್ರಕ್ ಚಾಲಕನ ನಿರ್ಲಕ್ಷ್ಯವು ಅಪಘಾತಕ್ಕೆ ಕಾರಣ ಎಂದು ಹೇಳಿ, ಶೇ 9ರಷ್ಟು ಬಡ್ಡಿಯೊಂದಿಗೆ ₹81.21 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿತು. ಕಾರು ಚಾಲಕನ ನಿರ್ಲಕ್ಷ್ಯವೂ ಅಪಘಾತಕ್ಕೆ ಕಾರಣ ಎಂಬ ವಿಮಾ ಕಂಪನಿಯ ಮನವಿಯನ್ನು ತಿರಸ್ಕರಿಸಿತು. ದೆಹಲಿ ಹೈಕೋರ್ಟ್ ಕೂಡ ಈ ನಿರ್ಧಾರವನ್ನು ಎತ್ತಿಹಿಡಿಯಿತು. ಇದರ ವಿರುದ್ಧ ವಿಮಾ ಕಂಪನಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

₹80 ಸಾವಿರ ಹೆಚ್ಚುವರಿ ಪರಿಹಾರ ಸೇರಿಸಿ, ನಾಲ್ಕು ವಾರಗಳಲ್ಲಿ ₹82.01 ಲಕ್ಷ ಪರಿಹಾರ ಮೊತ್ತವನ್ನು ಪಾವತಿಸುವಂತೆ ಸುಪ್ರೀಂ ಕೋರ್ಟ್ ವಿಮಾ ಕಂಪನಿಗೆ ನಿರ್ದೇಶನ ನೀಡಿದೆ.

‘ಸುಪ್ರೀಂ’ ಕೋರ್ಟ್ ಕೊಲಿಜಿಯಂ ಭಾಗವಾದ ನ್ಯಾ.ನರಸಿಂಹ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಜೆ.ಕೆ.ಮಾಹೇಶ್ವರಿ ಅವರು ಭಾನುವಾರ ನಿವೃತ್ತಿ ಹೊಂದಿದ್ದು, ನ್ಯಾ.ಪಿ.ಎಸ್.ನರಸಿಂಹ ಅವರು ಸುಪ್ರೀಂ ಕೋರ್ಟ್ ಕೊಲಿಜಿಯಂನ ಭಾಗವಾಗಲಿದ್ದಾರೆ.

ನ್ಯಾ.ನರಸಿಂಹ ಅವರು 2028ರ ಮೇ 2ರಂದು ನಿವೃತ್ತಿಯಾಗಲಿದ್ದು, ಅಲ್ಲಿಯವರೆಗೆ ಸುಪ್ರೀಂ ಕೋರ್ಟ್ ಕೊಲಿಜಿಯಂನ ಭಾಗವಾಗಿರಲಿದ್ದಾರೆ.

ಇದರೊಂದಿಗೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಬಿ.ವಿ.ನಾಗರತ್ನ, ಎಂ.ಎಂ. ಸುಂದರೇಶ್ ಮತ್ತು ಪಿ.ಎಸ್. ನರಸಿಂಹ ಅವರನ್ನು ಕೊಲಿಜಿಯಂ ಒಳಗೊಂಡಂತಾಗಿದೆ.

ಕೊಲಿಜಿಯಂ ವ್ಯವಸ್ಥೆ ಅಡಿಯಲ್ಲಿ ಸುಪ್ರೀಂ ಕೋರ್ಟ್‌ನ ಐವರು ಹಿರಿಯ ನ್ಯಾಯಮೂರ್ತಿಗಳು, ಸುಪ್ರೀಂ ಕೋರ್ಟ್ ಹಾಗೂ 25 ಹೈಕೋರ್ಟ್‌ಗಳ ನ್ಯಾಯಮೂರ್ತಿಗಳ ನೇಮಕ, ವರ್ಗಾವಣೆ ಕುರಿತು ಸಲಹೆ ನೀಡುತ್ತಾರೆ.

1963ರ ಮೇ 3ರಂದು ಹೈದರಾಬಾದ್‌ನಲ್ಲಿ ಜನಿಸಿದ ನರಸಿಂಹ ಅವರು, ನಿಜಾಮ್ ಕಾಲೇಜಿನಲ್ಲಿ ಪದವಿ ಪಡೆದಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ‘ಕ್ಯಾಂಪಸ್ ಲಾ ಸೆಂಟರ್’ನಲ್ಲಿ 1988ರಲ್ಲಿ ಕಾನೂನು ಪದವಿ ಪಡೆದಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ವಕೀಲಿಕೆ ಆರಂಭಿಸುವ ಮೊದಲು ಅವರು ಹೈಕೋರ್ಟ್, ಸಿವಿಲ್ ನ್ಯಾಯಾಲಯಗಳು ಹಾಗೂ ನ್ಯಾಯಮಂಡಳಿಗಳಲ್ಲಿ ವಕೀಲಿಕೆ ಮಾಡಿದ್ದರು.

2014ರಲ್ಲಿ ಇವರನ್ನು ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ನೇಮಕ ಮಾಡಲಾಗಿತ್ತು. ಆ ಸಂದರ್ಭದಲ್ಲಿ ನರಸಿಂಹ ಅವರು ಹಲವು ಮಹತ್ವದ ಪ್ರಕರಣಗಳಲ್ಲಿ ಕಾನೂನು ಅಧಿಕಾರಿಯಾಗಿ ನ್ಯಾಯಾಲಯಕ್ಕೆ ಸಲಹೆ ನೀಡಿದ್ದಾರೆ.

2021ರ ಆಗಸ್ಟ್ 3ರಂದು ನರಸಿಂಹ ಅವರನ್ನು ‘ಬಾರ್’ನಿಂದ (ವಕೀಲರ ವೃಂದ) ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿತ್ತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ವೈಯಕ್ತಿಕ

Change of Name

I, FORMERLY known as Rajesh Yalavaguli Seetharamarao, also known as Rajesh Y S, have changed my name to Rajesh Rion Rao. The name change has been published in the Gazette of India, Part IV, Issue No. 14, dated 4-10 April 2026. All the above names refer to the same person.

ಶಶಿಕಲಾ.ಬಿ. ಆದ ನಾನು ನನ್ನ ಹೆಸರನ್ನು ಶಶಿ.ಬಿ. ಎಂದು ದಿನಾಂಕ 06/11/2008ರಂದು ನೋಟರಿ ಬಿ.ಹನುಮಂತರಾಯ, ಬೆಂಗಳೂರು_22 ಇವರ ಸಮ್ಮುಖದಲ್ಲಿ ಬದಲಾಯಿಸಿಕೊಂಡಿರುತ್ತೇನೆ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕೋಟಾ: ಜೆಇಇ ಆಕಾಂಕ್ಷಿ ಆತ್ಮಹತ್ಯೆ

ಕೋಟಾ (ರಾಜ್) (ಪಿಟಿಐ): ಬಿಹಾರದ ಜೆಇಇ ಆಕಾಂಕ್ಷಿ, 18 ವರ್ಷದ ಜೈಶ್ರೀ ಕೋಟಾ– ಝಾಲಾವಾಢ ಮೇಲ್ಸೇತುವೆಗೆ ಹಾರಿ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

12ನೇ ತರಗತಿ ವಿದ್ಯಾರ್ಥಿಯಾದ ಜೈಶ್ರೀ, ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ತಯಾರಿಗಾಗಿ ಕೋಟಾದ ಕೋಚಿಂಗ್ ಸೆಂಟರ್‌ವೊಂದರಲ್ಲಿ ಕಳೆದ ಜನವರಿಯಿಂದ ತಯಾರಿ ನಡೆಸುತ್ತಿದ್ದರು ಮತ್ತು ವಿಜ್ಞಾನ್ ನಗರದ ಪಿ.ಜಿಯೊಂದರಲ್ಲಿ ವಾಸವಾಗಿದ್ದರು ಎಂದು ಅವರು ಹೇಳಿದ್ದಾರೆ.

‘ಶನಿವಾರ ರಾತ್ರಿ 11 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಇದು ಆತ್ಮಹತ್ಯೆ ಪ್ರಕರಣದಂತೆ ಕಂಡುಬರುತ್ತಿದ್ದು, ಆಕೆಯ ಪೋಷಕರೊಂದಿಗೆ ಮಾತನಾಡಿದ ಬಳಿಕ ಸಾವಿಗೆ ಕಾರಣ ಸ್ಪಷ್ಟವಾಗುತ್ತದೆ. ಪೋಷಕರು ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಟಾದಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ 7ನೇ ಪ್ರಕರಣ ಇದಾಗಿದೆ.

ವೈಮಾಂತರಿಕ್ಷ ಕ್ಷೇತ್ರದ ಸಾಮರ್ಥ್ಯ ಹೆಚ್ಚಿಸಿದ ಸಿ-295 ವಿಮಾನ

ಸ್ವಾವಲಂಬನೆಯತ್ತ ಭಾರತ: ಪ್ರಧಾನಿ ಶ್ಲಾಘನೆ

ನವದೆಹಲಿ (ಪಿಟಿಐ): ಭಾರತದಲ್ಲಿ ನಿರ್ಮಿಸಲಾದ ಸಿ-295 ವಿಮಾನವು ವೈಮಾಂತರಿಕ್ಷ ಕ್ಷೇತ್ರದ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿದೆ ಮತ್ತು ಈ ವಲಯಕ್ಕೆ ಹೊಸ ಬಲವನ್ನು ತುಂಬುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಶ್ಲಾಘಿಸಿದರು.

ಭಾರತವು ಸ್ವಾವಲಂಬಿಯಾಗುವತ್ತ ಸಾಧಿಸುತ್ತಿರುವ ಗುರಿಗಳ ಕುರಿತು ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದು, ‘ಜೂನ್ ತಿಂಗಳಿನಲ್ಲಿಯೇ ದೇಶವು ವಾಯುಯಾನ ಕ್ಷೇತ್ರದಲ್ಲಿ ಪ್ರಮುಖ ಯಶಸ್ಸು ಸಾಧಿಸಿದೆ. ದೇಶದಲ್ಲಿ ಸುಮಾರು 40 ಇಂತಹ ವಿಮಾನಗಳನ್ನು ತಯಾರಿಸಲಾಗುತ್ತಿದೆ. ಇದು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (ಎಂಎಸ್‌ಎಂಇ) ಶಕ್ತಿ ತುಂಬಲಿದೆ. ಈ ಮೂಲಕ ಉದ್ಯೋಗಾವಕಾಶ ಸೃಷ್ಟಿಸಲಿದೆ’ ಎಂದು ತಿಳಿಸಿದರು.

ಮನದ ಮಾತು

ಭಾರತದಲ್ಲಿ ನಿರ್ಮಿತವಾದ ಸಿ- 295 ಸೇನಾ ಸಾರಿಗೆ ವಿಮಾನವು ಜೂನ್ 10ರಂದು ಮೊದಲ ಹಾರಾಟವನ್ನು ಯಶಸ್ವಿಯಾಗಿ ಪೂರೈಸಿದೆ. ಜೂನ್‌ನಲ್ಲಿ ದೇಶ ಹಲವು ಮೈಲುಗಲ್ಲುಗಳನ್ನು ಸಾಧಿಸಿದ್ದು, ಪ್ರತಿಯೊಬ್ಬ ನಾಗರಿಕರಲ್ಲೂ ಹೆಮ್ಮೆ ಮೂಡಿಸಿದೆ ಎಂದು ಅವರು ಹೇಳಿದರು.

ರೈತರಿಗೆ ಸಲಹೆ

- ರೈತರು ರಾಸಾಯನಿಕ ಮುಕ್ತ ಕೃಷಿಯನ್ನು ಅಳವಡಿಸಿಕೊಳ್ಳಿ
- ಮಣ್ಣಿನಿಂದ ತಯಾರಾದ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನೇ ಬಳಸಿ
- ಒಂದು ಹನಿಯೂ ವ್ಯರ್ಥ ಆಗದಂತೆ ಮಳೆ ನೀರು ಸಂರಕ್ಷಿಸಿ

ಮೋದಿ ಹೇಳಿದ್ದು...

- ಇತ್ತೀಚೆಗೆ ಐಎನ್‌ಎಸ್ ದುನಗಿರಿ, ಐಎನ್‌ಎಸ್ ಸಂಶೋಧಕ್ ಹಾಗೂ ಐಎನ್‌ಎಸ್ ಅಗ್ರಯ ಹಡಗುಗಳು ಭಾರತೀಯ ನೌಕಾಪಡೆಗೆ ಸೇರ್ಪಡೆಗೊಂಡವು. ಇವುಗಳ ವಿನ್ಯಾಸದಿಂದ ತಯಾರಿಕೆಯವರೆಗೆ ಎಲ್ಲವೂ ಸ್ಥಳೀಯವಾಗಿವೆ
- ಜೂನ್ 21ರಂದು ಅಂತರರಾಷ್ಟ್ರೀಯ ಯೋಗ ದಿನದಂದು ಪ್ರಪಂಚದಾದ್ಯಂತ 2,500ಕ್ಕೂ ಹೆಚ್ಚು ಸ್ಥಳಗಳಲ್ಲಿ ವೈವಿಧ್ಯಮಯ ಯೋಗ ಕಾರ್ಯಕ್ರಮಗಳನ್ನು ನಡೆಸಲಾಯಿತು ಮತ್ತು ಅಲ್ಲಿ ಕೋಟ್ಯಂತರ ಜನರು ಭಾಗಿಯಾಗಿದ್ದರು
- ಅಹಮದಾಬಾದ್‌ನಲ್ಲಿ ಆಯೋಜಿಸಲಾದ ‘ವಿಶ್ವ ಯೋಗಾಸನ ಚಾಂಪಿಯನ್‌ಶಿಪ್’ನಲ್ಲಿ ಭಾರತ 102 ಚಿನ್ನದ ಪದಕಗಳು ಸೇರಿದಂತೆ ಒಟ್ಟು 114 ಪದಕ ಗೆಲ್ಲುವ ಮೂಲಕ ಈ ಚಾಂಪಿಯನ್‌ಶಿಪ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ
- ಪ್ರಾಚೀನ ಸಂಪ್ರದಾಯವಾದ ‘ಶಾಸ್ತ್ರಾರ್ಥ’ವು ನಳಂದ ವಿಶ್ವವಿದ್ಯಾಲಯದಲ್ಲಿ ಮರುಬಳಕೆಯಾಗಿದ್ದು, ಇದು ಕೇವಲ ಒಬ್ಬರ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಾಧನವಲ್ಲ. ಅದು ಚರ್ಚೆ, ಸಂವಾದ ಮತ್ತು ವಿಚಾರ ವಿನಿಮಯದ ಶಿಸ್ತುಬದ್ಧ ಪ್ರಕ್ರಿಯೆಯಾಗಿದೆ
- ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯು(ಡಿಆರ್‌ಡಿಒ) ದೇಶಿ ನಿರ್ಮಿತ ದೂರಗಾಮಿ ಭೂ ದಾಳಿ ಕ್ಷಿಪಣಿಯ (ಎಲ್‌ಆರ್‌ಎಲ್‌ಎಸಿಎಂ) ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ
- ಕರೆಗೆ ಓಗೊಟ್ಟು ಬಂಗಾರ ಖರೀದಿ, ವಿದೇಶ ಪ್ರಯಾಣ ತಗ್ಗಿಸಿದ್ದಕ್ಕೆ ಧನ್ಯವಾದ
- ದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯವು ಎ.ಐ ಮತ್ತು ದತ್ತಾಂಶ ವಿಜ್ಞಾನದಲ್ಲಿ ಬಿ-ಟೆಕ್ ಆರಂಭಿಸಿದೆ

ಚಾರ್ಜ್ ಶೀಟ್‌ನಲ್ಲಿ ಸುಂದರ್ ರಾಜ್

ಪೋಷಕ ನಟ ಸುಂದರ್ ರಾಜ್ ನಟನೆಯ 250ನೇ ಚಿತ್ರ 'ಚಾರ್ಜ್ ಶೀಟ್'ನ ಟೀಸರ್ ಅನ್ನು ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಈಚೆಗೆ ಬಿಡುಗಡೆ ಮಾಡಿದರು.

ವಿಶೇಷ ಅತಿಥಿಯಾಗಿದ್ದ ನಟ ಧ್ರುವ ಸರ್ಜಾ, 'ಹಾಡು ನೋಡಿದರೆ ಸಿನಿಮಾ ನೋಡಬೇಕು ಅನಿಸುತ್ತದೆ. ಸುಂದರ್ ರಾಜ್ ಅವರು ಏನನ್ನೂ ಗ್ರಾಂಟೆಡ್ ಆಗಿ ಪರಿಗಣಿಸುವುದಿಲ್ಲ. ಉದ್ಯಮದಲ್ಲಿ ಉಳಿಯಲು ಪ್ರತಿಭೆ ಒಂದೇ ದಾರಿ. ಆ ಕಾರಣದಿಂದಲೇ ಅವರು ನಟಿಸಿರುವ ಚಿತ್ರಗಳ ಸಂಖ್ಯೆ 250ಕ್ಕೆ ತಲುಪಿದೆ. ಅವರು ನಟಿಸಿದ್ದ 'ಉದ್ಭವ' ನನ್ನ ನೆಚ್ಚಿನ ಸಿನಿಮಾ. ಅನಂತ್ ನಾಗ್ ಅವರ ಜೊತೆ ಇವರ ನಟನೆ ಅದ್ಭುತ' ಎಂದರು.

ಸುಂದರ್ ರಾಜ್ ಮಾತನಾಡಿ, 'ಇದು ಜೆ.ಪಿ ನಗರದಲ್ಲಿ ನಡೆದ ಘಟನೆ ಆಧರಿಸಿದ ಸಿನಿಮಾ. ರಾಜ್‌ಕುಮಾರ್ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಅವರ ಸಹಕಾರದಿಂದಲೇ ನಾನು ಇವತ್ತು ಇಲ್ಲಿರುವೆ. ಯಾವತ್ತೂ ಅವರು ಕೋಟಿ ರೂಪಾಯಿ ತೆಗೆದುಕೊಂಡವರಲ್ಲ. ಆದರೆ ಕೋಟಿ ಕೋಟಿ ಜನರ ಪ್ರೀತಿ ಗಳಿಸಿದರು' ಎಂದರು.

ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಟಿ ಹಾಗೂ ಸುಂದರ್ ರಾಜ್ ಪುತ್ರಿ ಮೇಘನಾ ರಾಜ್ ಕೂಡಾ ಟೀಸರ್ ಬಿಡುಗಡೆ ವೇಳೆ ಹಾಜರಿದ್ದರು.

ಚಿತ್ರ ಹಿರಿಯ ಪೊಲೀಸ್ ಅಧಿಕಾರಿ ಎಸ್.ಕೆ.ಉಮೇಶ್ ಅವರ ಮೂಲ ಕಥೆ ಆಧರಿಸಿದ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ದೊರಕಿದೆ. ವೆಂಕಟ್ ಭಾರದ್ವಾಜ್ ನಿರ್ದೇಶಿಸಿದ್ದು, ಅರ್ಜುನ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರವನ್ನು ದಿನೇಶ್ ಮತ್ತು ಲಕ್ಷ್ಮಣ್ ನಿರ್ಮಿಸಿದ್ದಾರೆ.

ವೆಂಕಟ್ ಅವರೇ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಹರ್ಷ ಅರ್ಜುನ್, ಸತ್ಯಶ್ರೀ, ಅಮರ್, ರೂಪೇಶ್, ಪ್ರಮೋದ್, ಸುಧಾಕರ್ ಶೆಟ್ಟಿ ತಾರಾಬಳಗದಲ್ಲಿದ್ದಾರೆ. ಸಮೀರ್ ಕುಲಕರ್ಣಿ ಸಂಗೀತ, ಹಿನ್ನೆಲೆ ಸಂಗೀತ ನೀಡಿದ್ದರೆ, ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣವಿದೆ.

ಲವ್ ಸೀಸನ್ ಟ್ರೇಲರ್ ಬಿಡುಗಡೆ

ವಿಭಿನ್ನ ಪ್ರೇಮಕಥೆಯನ್ನು ಹೊಂದಿರುವ 'ಲವ್ ಸೀಸನ್ಸ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮಂಡ್ಯ ರಮೇಶ್, ಜಯತೀರ್ಥ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಚಿತ್ರಕ್ಕೆ ಕೃತ್ವಿಕ್ ನಿರ್ದೇಶನವಿದೆ.

'ಈ ಚಿತ್ರದಲ್ಲಿ ರಂಗಭೂಮಿಯಿಂದ ಬಂದವರೇ ಹೆಚ್ಚಿದ್ದಾರೆ. ರಂಗಭೂಮಿಯಿಂದ ಬಂದವರಲ್ಲಿ ಪ್ರತಿಭೆ ಮಾತ್ರವಲ್ಲದೆ ಶಿಸ್ತು, ಬದ್ಧತೆಯೂ ಇರುತ್ತದೆ. ನಿರ್ದೇಶಕ ಕೃತ್ವಿಕ್ ಮೊದಲ ಪ್ರಯತ್ನದಲ್ಲಿಯೇ ಉತ್ತಮ ಚಿತ್ರ ಮಾಡಿದ್ದಾರೆ. ಈ ಹೊಸಬರ ಪ್ರಯತ್ನಕ್ಕೆ ಪ್ರೇಕ್ಷಕರೆಲ್ಲ ಪ್ರೋತ್ಸಾಹಿಸಬೇಕು' ಎಂದು ಜಯತೀರ್ಥ ಹೇಳಿದರು.

'ಚಿತ್ರದ ಟೀಸರ್, ಹಾಡುಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅದೇ ರೀತಿ ಚಿತ್ರಕ್ಕೂ ಜನರ ಆಶೀರ್ವಾದ ದೊರೆಯಲಿದೆ ಎಂಬ ನಂಬಿಕೆಯಿದೆ. ಜು.3ರಂದು ಚಿತ್ರ ತೆರೆ ಕಾಣುತ್ತಿದೆ. ಯಾರು ಯಾರನ್ನೂ ನಂಬಲು ಕಷ್ಟವಾಗುವಂಥ ಕಾಲಮಾನವಿದು. ಇಂಥ ಹೊತ್ತಿನಲ್ಲಿ ನಂಬಿಕೆಯೆಂಬ ಚುಂಬಕ ಶಕ್ತಿಯ ಸುತ್ತ ಹೆಣೆದ ಕಥೆಯಿದು. ಯುವ ಪ್ರೇಮಿಗಳಿಗೆ ಆಪ್ತವಾಗುವ ಚಿತ್ರ' ಎಂದರು ನಿರ್ದೇಶಕ.

ಎನ್.ಆರ್ ಸ್ಟುಡಿಯೋಸ್ ಬ್ಯಾನರಿನಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ. ಮುಕುಂದ ರಾಮಸ್ವಾಮಿ ನಾಯಕ. ಸಂಗೀತಾ ಅನಿಲ್, ದಿಯಾ ಕೀರ್ತಿ, ಶ್ವೇತಾ ಕೊಗ್ಲೂರು, ಚಂದನಾ ಗೌಡ, ಚೇತನ್ ದುರ್ಗ, ಮಂಡ್ಯ ರಮೇಶ್, ರಾಜೇಶ್ ನಟರಂಗ, ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರ ತಾರಾಗಣವಿದೆ.

ವೀರ್ ಸಮರ್ಥ್ ಸಂಗೀತ ನಿರ್ದೇಶನದ ಹಾಡುಗಳಿಗೆ ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಮುಂತಾದವರ ಸಾಹಿತ್ಯವಿದೆ. ಅವಿನಾಶ ಶಾಸ್ತ್ರಿ ಛಾಯಾಚಿತ್ರಗ್ರಹಣ, ಮಧು ತುಂಬಾಕೆರೆ ಸಂಕಲನವಿದೆ.

'ಲವ್ 2 ಲಸ್ಸಿ' ಎಂದ ಹೊಸಬರು

ಜೀವಿತಾ

ಬಹುತೇಕ ಹೊಸಬರಿಂದಲೇ ಕೂಡಿರುವ 'ಲವ್ 2 ಲಸ್ಸಿ' ಚಿತ್ರದ ಹಾಡು ಹಾಗೂ ಮೋಷನ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಹರಿಪ್ರಾಣ ನಿರ್ದೇಶನ ಚಿತ್ರ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

'ನಾನು ಸಾಕಷ್ಟು ಚಿತ್ರಗಳಲ್ಲಿ ಸಹ, ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವೆ. ಇದು ನಿರ್ದೇಶಕನಾಗಿ ಮೊದಲ ಸಿನಿಮಾ. ಈ ಸಿನಿಮಾ 2006–07ರಲ್ಲಿ ನಡೆದ ನೈಜ ಪ್ರೇಮ ಕಥೆ ಆಧಾರಿತ. ಪುತ್ತೂರು ಹುಡುಗಿ, ಬೆಂಗಳೂರು ಹುಡುಗನ ಕಥೆ. ಹುಡುಗಿ ಕಡೆಯಿಂದ ಅನುಮತಿ ಪಡೆದು ಸಿನಿಮಾ ಮಾಡಿದ್ದೇವೆ. ಪುತ್ತೂರು, ಸುಳ್ಯ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ' ಎಂದರು ನಿರ್ದೇಶಕ.

ಭಾರತಿ ಶ್ರೀನಿವಾಸ್ ರಾಜ್ ಬಂಡವಾಳ ಹೂಡಿದ್ದಾರೆ. ಆರ್ಯನ್‌ಗೆ ಜೀವಿತಾ ಜೋಡಿಯಾಗಿದ್ದಾರೆ. ಜಗನ್, ತಾರಾ, ವೈಷ್ಣವಿ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

ನಾಲ್ಕು ಹಾಡುಗಳಿದ್ದು, ವಿನು ಮನಸ್ಸು ಸಂಗೀತವಿದೆ. ಎಂ.ಎ.ಅರ್ಜುನ್ ಧೋನಿ ಸಂಕಲನ ನಿಭಾಯಿಸಿದ್ದಾರೆ.

ಕ್ರಯಪತ್ರ ಉಪೇಕ್ಷೆ ಸಲ್ಲ: 'ಸುಪ್ರೀಂ'

ಒಂದನೇ ಪುಟದಿಂದ...

'ಉತ್ತರ ಪ್ರದೇಶ ಭೂ ಜಮೀನ್ದಾರಿ ರದ್ಧತಿ ಹಾಗೂ ಸುಧಾರಣಾ ಕಾಯ್ದೆ'ಯನ್ನು ಮುಂದಿಟ್ಟುಕೊಂಡು ಶರಾಫತ್ ಖರೀದಿಸಿದ್ದ ಭೂಮಿಯ ಮ್ಯುಟೇಶನ್ ಪ್ರಕ್ರಿಯೆಯು ದಶಕಗಳ ಕಾಲ ವಿಳಂಬವಾಗಿತ್ತು. ಸಣ್ಣ ಪುಟ್ಟ ದೋಷಗಳನ್ನು ಮುಂದಿಟ್ಟುಕೊಂಡು ಮೇಲ್ಮನವಿದಾರರ ಅರ್ಜಿಯನ್ನು ಅಧಿಕಾರಿಗಳು ತಿರಸ್ಕರಿಸಿದ್ದರು.

ಹಿಡುವಳಿ ಮಿತಿ ಹಾಗೂ ಸಣ್ಣ ಪುಟ್ಟ ವ್ಯತ್ಯಾಸಗಳನ್ನೇ ಮುಂದಿಟ್ಟುಕೊಂಡು ಮೇಲ್ಮನವಿದಾರರ ಅರ್ಜಿಯನ್ನು ಹೈಕೋರ್ಟ್ ಕೂಡ ತಿರಸ್ಕರಿಸಿತ್ತು.

ಹೈಕೋರ್ಟ್ ಆದೇಶವನ್ನು ಬದಿಗಿರಿಸಿದ ಸುಪ್ರೀಂ ಕೋರ್ಟ್, 'ವಾಸಸ್ಥಳ ಹಾಗೂ ಗ್ರಾಮದ ವಿವರಣೆಯ ಸಣ್ಣ ಪುಟ್ಟ ದೋಷಗಳನ್ನೇ ಮುಂದಿಟ್ಟುಕೊಂಡು, ವಹಿವಾಟನ್ನು ರದ್ದುಗೊಳಿಸಲು ಸಾಧ್ಯವಿಲ್ಲ' ಎಂದು ಸ್ಪಷ್ಟಪಡಿಸಿದೆ.

ಮೇಲ್ಮನವಿ ಸಲ್ಲಿಸಿದವರ ಹೆಸರನ್ನು ಕಂದಾಯ ದಾಖಲೆಗಳಲ್ಲಿ 'ಜಮೀನು ಮಾಲೀಕರು' ಎಂದು ಉಲ್ಲೇಖಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು. ಈ ಮೂಲಕ ಏಳು ದಶಕಗಳ ಸುದೀರ್ಘ ಕಾನೂನು ಹೋರಾಟವು ಅಂತ್ಯಕಂಡಿದೆ.

ಕಡಲ ಭದ್ರತೆ: ಸಹಕಾರ ವೃದ್ಧಿಗೆ ಪಣ

ಪ್ರಧಾನಿ ನರೇಂದ್ರ ಮೋದಿ– ಸೆಷೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಮಾತುಕತೆ

ಮುಖ್ಯಾಂಶಗಳು

- ಪರಸ್ಪರ ಸಹಕಾರವನ್ನು 19 ಕ್ಷೇತ್ರಗಳಿಗೆ ವಿಸ್ತರಿಸಲು ನಿರ್ಧಾರ
- ಸೆಷೆಲ್ಸ್‌ನಲ್ಲಿ ಯುಪಿಐ ಪಾವತಿ ವ್ಯವಸ್ಥೆ ಲಭ್ಯವಾಗಿಸಲು ಒಪ್ಪಂದ

ವಿಕ್ಟೋರಿಯ (ಸೆಷೆಲ್ಸ್) (ಪಿಟಿಐ): ರಕ್ಷಣೆ ಮತ್ತು ಕಡಲ ಭದ್ರತೆ, ಡಿಜಿಟಲ್ ಪಾವತಿ, ಬಾಹ್ಯಾಕಾಶ, ಆರೋಗ್ಯ, ಕೃಷಿ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸುವುದಾಗಿ ಭಾರತ ಹಾಗೂ ಸೆಷೆಲ್ಸ್ ಘೋಷಿಸಿವೆ.

ಮೂರು ದಿನಗಳ ಸೆಷೆಲ್ಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸೆಷೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಜತೆ ಭಾನುವಾರ ಮಾತುಕತೆ ನಡೆಸಿದರು. ಈ ವೇಳೆ ಉಭಯ ರಾಷ್ಟ್ರಗಳು ಒಟ್ಟು 19 ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರವನ್ನು ವಿಸ್ತರಿಸುವ ಮಹತ್ವದ ನಿರ್ಧಾರ ತೆಗೆದುಕೊಂಡವು.

ಮೋದಿ ಅವರು ಮಾತುಕತೆಯಲ್ಲಿ ಉಭಯ ದೇಶಗಳ ದ್ವಿಪಕ್ಷೀಯ ಸಹಕಾರ ಮತ್ತು ಸಮಾನ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಅಂತರರಾಷ್ಟ್ರೀಯ ವಿಚಾರಗಳ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಂಡರು.

ಹಿಂದೂ ಮಹಾಸಾಗರದಲ್ಲಿರುವ ಈ ದ್ವೀಪಸಮೂಹ ರಾಷ್ಟ್ರದ ನೌಕಾಪಡೆಗೆ ಗಸ್ತು ನೌಕೆಯನ್ನು ಉಡುಗೊರೆಯಾಗಿ ನೀಡುವುದಾಗಿ ಭಾರತ ಘೋಷಿಸಿತು. ಸೆಷೆಲ್ಸ್ ರಕ್ಷಣಾ ಪಡೆಗೆ 10 ಯುಟಿಲಿಟಿ ವಾಹನಗಳು ಮತ್ತು ಲೇಸರ್ ರೇಡಿಯಲ್ ವರ್ಗದ ಐದು ಬೋಟ್‌ಗಳನ್ನು ಹಸ್ತಾಂತರಿಸಲು ಭಾರತ ನಿರ್ಧರಿಸಿದೆ.

ಯುಪಿಐ ಪಾವತಿ ವ್ಯವಸ್ಥೆಯನ್ನು ಸೆಷೆಲ್ಸ್‌ಗೆ ವಿಸ್ತರಿಸುವ ಮತ್ತು ಆರ್ಥಿಕ ಹಾಗೂ ತಾಂತ್ರಿಕ ಸಹಕಾರವನ್ನು ಬಲಪಡಿಸುವ ಸಂಬಂಧ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಸೆಷೆಲ್ಸ್ ನಡುವೆ ಒಪ್ಪಂದ ಮಾಡಿಕೊಳ್ಳಲಾಯಿತು.

ಅವಕಾಶಗಳ ಸಾಗರ: 'ಹಿಂದೂ ಮಹಾಸಾಗರವನ್ನು ಅವಕಾಶಗಳ ಸಾಗರವನ್ನಾಗಿ ಮಾಡುವ ದೃಷ್ಟಿಕೋನ'ವನ್ನು ಭಾರತ ಹೊಂದಿದೆ ಎಂದು ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗಿನ ಮಾತುಕತೆ ಬಳಿಕ ಎಂದು ಮೋದಿ ಅವರು ಹೇಳಿದರು.

'ಹಿಂದೂ ಮಹಾಸಾಗರವು ಕಡಲ ತೀರದ ಭದ್ರತೆಯ ಜೊತೆಗೆ ಆರ್ಥಿಕ ಸಮೃದ್ಧಿಯನ್ನು ಖಚಿತಪಡಿಸುತ್ತದೆ. ಪಾಲುದಾರಿಕೆಯು ದೇಶದ ಗಾತ್ರವನ್ನು ಆಧರಿಸಿಲ್ಲ; ಪರಸ್ಪರ ಗೌರವ ಮತ್ತು ನಂಬಿಕೆಯ ಮೇಲೆ ನಿಂತಿದೆ. ಭಾರತ ಮತ್ತು ಸೆಷೆಲ್ಸ್ ರಕ್ಷಣೆ–ಭದ್ರತೆ ವಿಚಾರದಲ್ಲಿ ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ' ಎಂದು ಪ್ರತಿಪಾದಿಸಿದರು.

'ಹಿಂದೂ ಮಹಾಸಾಗರವು ಉಭಯ ದೇಶಗಳಿಗೂ ಮನೆ ಎಂದು ಭಾವಿಸುತ್ತೇವೆ. ಅದರ ರಕ್ಷಣೆ, ಸುಸ್ಥಿರತೆ ಮತ್ತು ಸಮೃದ್ಧಿಯು ನಮ್ಮ ಜವಾಬ್ದಾರಿ. ಇದು ಭಾರತದ ಮಹಾಸಾಗರ' ಎಂದು ಮೋದಿ ಹೇಳಿದರು.

'ಉಭಯ ದೇಶಗಳ ಕೈಗಾರಿಕೆಗಳ ಪ್ರಗತಿಗೆ ಹೊಸ ಮಾರ್ಗ ಹುಡುಕುವುದನ್ನು ಮುಂದುವರಿಸುತ್ತೇವೆ. ಭಾರತ ಮತ್ತು ಸೆಷೆಲ್ಸ್ ನಡುವಿನ ಸಂಪರ್ಕ ಹೆಚ್ಚಿಸುವ ಕೆಲಸವನ್ನೂ ಮಾಡಲಾಗುವುದು. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದಲ್ಲಿನ ತನ್ನ ಯಶಸ್ವಿ ಅನುಭವವನ್ನು ಭಾರತವು ಸೆಷಲ್ಸ್‌ನೊಂದಿಗೆ ಹಂಚಿಕೊಳ್ಳಲಿದೆ' ಎಂದು ಅವರು ತಿಳಿಸಿದರು.

'ಹಿಂದೂ ಮಹಾಸಾಗರ ಪ್ರದೇಶದಲ್ಲಿನ ಕಡಲ ಭದ್ರತೆಯು ದ್ವಿಪಕ್ಷೀಯ ಸಂಬಂಧಗಳ ಕೇಂದ್ರಬಿಂದುವಾಗಿದೆ' ಎಂದು ಹರ್ಮಿನಿ ಅವರು ತಿಳಿಸಿದರು. ಕಡಲ್ಗಳ್ಳತನ, ಮಾದಕವಸ್ತು ಕಳ್ಳಸಾಗಣೆ, ಅಕ್ರಮ ಮೀನುಗಾರಿಕೆ ಮತ್ತು ಗಡಿಯಾಚೆಗಿನ ಸವಾಲುಗಳನ್ನು ಎದುರಿಸಲು ಎರಡೂ ದೇಶಗಳು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿವೆ.

ಸೆಷೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರು ಮೋದಿ ಅವರಿಗೆ 'ಗಾರ್ಡಿಯನ್ ಆಫ್ ದ ಬ್ಲೂ ಹೊರೈಜನ್' ಪ್ರಶಸ್ತಿ ಪ್ರದಾನ ಮಾಡಿದರು —ಪಿಟಿಐ ಚಿತ್ರ

ಮೋದಿಗೆ ಪ್ರಶಸ್ತಿ

ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಗಾರ್ಡಿಯನ್ ಆಫ್ ದ ಬ್ಲೂ ಹೊರೈಜನ್' ಪ್ರಶಸ್ತಿಯನ್ನು ಸೆಷೆಲ್ಸ್ ಭಾನುವಾರ ಪ್ರದಾನ ಮಾಡಿದೆ.

ಪರಿಸರ ಸಂರಕ್ಷಣೆ ಮತ್ತು ಸಣ್ಣ ದ್ವೀಪಗಳ–ಅಭಿವೃದ್ಧಿಶೀಲ ರಾಷ್ಟ್ರಗಳ ಒತ್ತಾಸೆಗಳನ್ನು ಮುನ್ನಡೆಸುವಲ್ಲಿನ ಬದ್ಧತೆಗಾಗಿ ಮೋದಿ ಅವರಿಗೆ ಈ ಪ್ರಶಸ್ತಿ ಸಂದಿದೆ. ಸೆಷೆಲ್ಸ್ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರು ಮೋದಿ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಿದರು. 'ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುತ್ತಿರುವ ರಾಷ್ಟ್ರಗಳಿಗೆ ಈ ಪ್ರಶಸ್ತಿಯನ್ನು ಅರ್ಪಿಸುತ್ತೇನೆ. ಮುಂದಿನ ಪೀಳಿಗೆಗಾಗಿ ಪರಿಸರವನ್ನು ಸಂರಕ್ಷಿಸುವುದು ನಮ್ಮ ಜವಾಬ್ದಾರಿಯಾಗಿದೆ. ನಾವೆಲ್ಲರೂ ಒಟ್ಟಾಗಿ ಈ ಸವಾಲನ್ನು ಎದುರಿಸಬೇಕಾಗಿದೆ' ಎಂದು ಪ್ರಧಾನಿ ಮೋದಿ ಗೌರವ ಸ್ವೀಕರಿಸಿದ ಬಳಿಕ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದರು.

'ನಮ್ಮ ಗ್ರಹವನ್ನು ಹಸಿರು ಮತ್ತು ಸುಸ್ಥಿರವಾಗಿಡಲು ಅಗತ್ಯವಿರುವ ಎಲ್ಲವನ್ನೂ ಮಾಡಲು ಭಾರತ ಸಿದ್ಧವಿದೆ' ಎಂದು ಅವರು ಹೇಳಿದರು.

ಜಂತರ್ ಮಂತರ್‌ನಲ್ಲಿ ಭಾನುವಾರ ಉಪವಾಸ ಸತ್ಯಾಗ್ರಹ ಆರಂಭಿಸಿದ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರನ್ನು ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಸೇರಿಕೊಂಡರು —ಪಿಟಿಐ ಚಿತ್ರ

ಸತ್ಯಾಗ್ರಹ ಆರಂಭಿಸಿದ ವಾಂಗ್ಚುಕ್

ನವದೆಹಲಿ (ಪಿಟಿಐ): ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಜಂತರ್ ಮಂತರ್‌ನಲ್ಲಿ ಭಾನುವಾರ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಪರೀಕ್ಷೆಗಳಲ್ಲಿ ನಡೆದ ಅಕ್ರಮಗಳಿಗೆ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಜೂನ್ 20ರಿಂದ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಇಲ್ಲಿ ಪ್ರತಿಭಟನೆ ನಡೆಸುತ್ತಿದೆ.

ವಾಂಗ್ಚುಕ್ ಅವರು ಉಪವಾಸ ಆರಂಭಿಸುತ್ತಿದ್ದಂತೆ ಯುವಜನರು, ವಿದ್ಯಾರ್ಥಿಗಳು ಸೇರಿದಂತೆ ನೂರಾರು ಪ್ರತಿಭಟನಾಕಾರರು ಜಂತರ್ ಮಂತರ್‌ನಲ್ಲಿ ಜಮಾಯಿಸಿದರು. ಹಲವು ರೈತ ನಾಯಕರು ಪ್ರತಿಭಟನಾ ಸ್ಥಳದಲ್ಲಿ ಉಪಸ್ಥಿತರಿದ್ದರು. ಎರಡು ನಿಮಿಷಗಳ ಮೌನಾಚರಣೆಯ ನಂತರ ಪ್ರತಿಭಟನೆ ಆರಂಭವಾಯಿತು.

ಉಪವಾಸ ಸತ್ಯಾಗ್ರಹಕ್ಕೂ ಮುಂಚೆ ವಾಂಗ್ಚುಕ್ ಮತ್ತು ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ರಾಜ್‌ಘಾಟ್‌ಗೆ ಭೇಟಿ ನೀಡಿ ಮಹಾತ್ಮಾ ಗಾಂಧಿಗೆ ಗೌರವ ಸಲ್ಲಿಸಿದರು.

ರೈತರ ನಾಯಕರ ಗೃಹ ಬಂಧನ: ದೀಪ್ಕೆ

ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್‌ನ ರೈತ ನಾಯಕರನ್ನು ಗೃಹ ಬಂಧನದಲ್ಲಿಟ್ಟು, ಅವರು ಜಂತರ್ ಮಂತರ್‌ಗೆ ಬರುವುದನ್ನು ತಡೆಯಲಾಗುತ್ತಿದೆ ಎಂದು ಭಾನುವಾರ ಬೆಳಿಗ್ಗೆ ಅಭಿಜೀತ್ ದೀಪ್ಕೆ ಆರೋಪಿಸಿದ್ದಾರೆ.

ನೀಟ್ ಸೇರಿದಂತೆ ಪರೀಕ್ಷೆಗಳಲ್ಲಿ ನಡೆದ ಅಕ್ರಮಗಳ ಉತ್ತರದಾಯಿತ್ವಕ್ಕಾಗಿ ನಡೆಯುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸುವಂತೆ ರೈತರು, ವಿದ್ಯಾರ್ಥಿಗಳು ಮತ್ತು ಸಂಘಟನೆಗಳಿಗೆ ದೀಪ್ಕೆ ಈ ಹಿಂದೆ ಮನವಿ ಮಾಡಿದ್ದರು.

'ವಿಬಿ–ಜಿ ರಾಮ್ ಜಿ: ರಾಜ್ಯಗಳಿಗೆ ಹೊರೆ'

ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ನರೇಗಾ ಯೋಜನೆಯ ಬದಲಾದ ಸ್ವರೂಪವಾದ 'ವಿಬಿ–ಜಿ ರಾಮ್ ಜಿ' ಬಗ್ಗೆ ಹಲವು ರಾಜ್ಯಗಳು ಕಳವಳ ವ್ಯಕ್ತಪಡಿಸಿವೆ. ಮನರೇಗಾ ಸಂವಿಧಾನದ ಉದ್ಯೋಗದ ಹಕ್ಕನ್ನು ಖಾತರಿಪಡಿಸುತ್ತಿತ್ತು. ಆದರೆ, ನೂತನ ಕಾನೂನು 'ಕೇಂದ್ರೀಕರಣ'ವನ್ನು ಖಾತರಿಪಡಿಸುತ್ತದೆ ಮತ್ತು ರಾಜ್ಯಗಳ ಮೇಲಿನ ಆರ್ಥಿಕ ಹೊರೆಯನ್ನು ಹೆಚ್ಚಿಸಲಿದೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, 'ಮೋದಿ ನೇತೃತ್ವದ ಸರ್ಕಾರವು ಹಗೆತನ ಮತ್ತು ಸಂಕುಚಿತ ಮನೋಭಾವವನ್ನು ಹೊಂದಿದೆ. ಗ್ರಾಮೀಣಾಭಿವೃದ್ಧಿ ಕುರಿತ ಸಂಸದೀಯ ಸ್ಥಾಯಿ ಸಮಿತಿ, ರಾಜ್ಯ ಸರ್ಕಾರಗಳು ಅಥವಾ ಸಂಬಂಧಿತ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸದೆ ಮನರೇಗಾ ಯೋಜನೆಯನ್ನು ರದ್ದು ಮಾಡಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ವಿಬಿ–ಜಿ ರಾಮ್ ಜಿ ಯೋಜನೆಯು ಜುಲೈ 1ರಿಂದ ಜಾರಿಯಾಗುತ್ತಿದ್ದು, ಈ ಬಗ್ಗೆ ಹಲವು ರಾಜ್ಯಗಳು ಕಳವಳ ವ್ಯಕ್ತಪಡಿಸುತ್ತಿವೆ. ಬಿಜೆಪಿ ಅಧಿಕಾರದಲ್ಲಿ ಇರುವ ಮಧ್ಯಪ್ರದೇಶ, ಬಿಹಾರ, ಉತ್ತರಾಖಂಡ ರಾಜ್ಯಗಳಲ್ಲಿ ಭಾರಿ ವಿರೋಧ ವ್ಯಕ್ತವಾಗಿದೆ' ಎಂದು ತಿಳಿಸಿದ್ದಾರೆ.

'ಇತರೆ ನಾಲ್ಕು ರಾಜ್ಯ ಸರ್ಕಾರಗಳು, ಕೃಷಿ ಚಟುವಟಿಕೆಗಳು ಗರಿಗೆದರಿರುವ ಸಂದರ್ಭದಲ್ಲಿ ಯೋಜನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಕ್ಕೆ ವಿರೋಧ ವ್ಯಕ್ತಪಡಿಸಿವೆ. ಕನಿಷ್ಠ ಐದು ರಾಜ್ಯಗಳು ಗ್ರಾಮೀಣ ಕೃಷಿ ಕಾರ್ಮಿಕರ ಕೂಲಿ ಹೆಚ್ಚಳಕ್ಕೆ ಒತ್ತಾಯಿಸಿವೆ' ಎಂದಿದ್ದಾರೆ.

'ಗ್ರಾಮೀಣ ಅಭಿವೃದ್ಧಿ ಸಚಿವರ (ಶಿವರಾಜ್ ಸಿಂಗ್ ಚೌಹಾಣ್) ರಾಜ್ಯ ಮಧ್ಯಪ್ರದೇಶವೂ ಮೋದಿ ಸರ್ಕಾರದ ನೂತನ ಯೋಜನೆ ಬಗ್ಗೆ ಕಳವಳ ವ್ಯಕ್ತಪಡಿಸಿದೆ' ಎಂದು ಹೇಳಿದ್ದಾರೆ.

ಶೀಘ್ರವೇ ಮುಂಗಾರು ಚುರುಕು: ಐಎಂಡಿ

ನವದೆಹಲಿ (ಪಿಟಿಐ): ಸ್ಥಗಿತಗೊಂಡಿರುವ ನೈರುತ್ಯ ಮುಂಗಾರು ಮುಂದಿನ ಐದಾರು ದಿನಗಳಲ್ಲಿ ಮತ್ತೆ ಚುರುಕು ಪಡೆಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ನೈರುತ್ಯ ಮುಂಗಾರು ದಕ್ಷಿಣ ಮಹಾರಾಷ್ಟ್ರದಲ್ಲಿ ಸ್ಥಗಿತಗೊಂಡ ಪರಿಣಾಮ ಜೂನ್ ತಿಂಗಳಲ್ಲಿ ದೇಶದಾದ್ಯಂತ ವಾಡಿಕೆಗಿಂತಲೂ ಕಡಿಮೆ ಮಳೆ ಆಗಿದೆ.

ಉತ್ತರ ಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ, ಉತ್ತರಾಖಂಡ, ಈಶಾನ್ಯ ರಾಜ್ಯಗಳಲ್ಲಿ ಮುಂದಿನ ನಾಲ್ಕೈದು ದಿನಗಳಲ್ಲಿ ಉತ್ತಮ ಮಳೆ ಮುನ್ನೋಟವನ್ನು ಐಎಂಡಿ ನೀಡಿದೆ. ಆದಾಗ್ಯೂ, ಉತ್ತರ ಪ್ರದೇಶದ ಕೆಲವೆಡೆ 29ರಂದು ತಾಪಮಾನ ಗಣನೀಯವಾಗಿ ಹೆಚ್ಚಲಿದ್ದು, ಬಿಸಿಗಾಳಿ ತೀವ್ರತೆ ಹೆಚ್ಚುವ ಸಾಧ್ಯತೆ ಇದೆ ಎಂಬ ಎಚ್ಚರಿಕೆಯನ್ನೂ ನೀಡಿದೆ.

ಬಂಗಾಳ: ಯುಸಿಸಿ ಮಸೂದೆಗೆ ಸಿದ್ಧತೆ



ಸುವೇಂದು ಅಧಿಕಾರಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳ ತೃಣಮೂಲ ಕಾಂಗ್ರೆಸ್ ಸರ್ಕಾರವನ್ನು ಮಣಿಸಿದ್ದ ಬಿಜೆಪಿಯು, ವಿಧಾನಸಭೆಯಲ್ಲಿ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಮಸೂದೆ ಮಂಡಿಸಲು ಸಿದ್ಧತೆ ನಡೆಸಿದೆ. ರಾಜಕೀಯವಾಗಿ ವಿವಾದಾತ್ಮಕವಾದ ನಿರ್ಧಾರವು ಚುನಾವಣೆಯ ಬಳಿಕ ನಡೆಯುವ ಮೊದಲ ಸೈದ್ಧಾಂತಿಕ ಚರ್ಚೆಗೂ ವೇದಿಕೆಯಾಗುವ ನಿರೀಕ್ಷೆಯಿದೆ.

ಚುನಾವಣೆಗೂ ಮುನ್ನ ಜನರಿಗೆ ನೀಡಿದ ಭರವಸೆ ಈಡೇರಿಸುವ ನಿಟ್ಟಿನಲ್ಲಿ ಈ ಮಸೂದೆ ಮಂಡಿಸಲಾಗುತ್ತಿದೆ ಎಂದು ಬಿಜೆಪಿ ಸಮರ್ಥಿಸಿಕೊಂಡಿದೆ. ಸಾಮಾಜಿಕ ಒಮ್ಮತ, ಸಾಂವಿಧಾನಿಕ ರಕ್ಷಣೆ, ವಿವಿಧ ಸಮುದಾಯಗಳ ಮೇಲೆ ಪರಿಣಾಮ ಬೀರುವ ಕಾನೂನನ್ನು ಸಾರ್ವಜನಿಕ ಚರ್ಚೆಯಿಲ್ಲದೇ ಜಾರಿ ಮಾಡುತ್ತಿರುವ ಕುರಿತು ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

'ಪ್ರಸ್ತುತ ನಡೆಯುತ್ತಿರುವ ಬಜೆಟ್ ಅಧಿವೇಶನದಲ್ಲಿಯೇ ಪ್ರಸ್ತಾವಿತ ಮಸೂದೆಯನ್ನು ಮಂಡಿಸಲಾಗುವುದು' ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಶುಕ್ರವಾರ ತಿಳಿಸಿದ್ದರು.

'ಗುಜರಾತ್, ಉತ್ತರಾಖಂಡ, ಅಸ್ಸಾಂನಲ್ಲಿ ಜಾರಿಗೆ ತಂದ ಯುಸಿಸಿ ಮಾದರಿಯಲ್ಲಿಯೇ ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರಲಾಗುವುದು. ಈ ಕುರಿತು ಸೋಮವಾರವೇ ಅಧಿವೇಶನದಲ್ಲಿ ಮಾಹಿತಿ ನೀಡಲಿದ್ದೇನೆ' ಎಂದು ಹೇಳಿದ್ದಾರೆ.

ರಾಜಗೋಪಾಲ್ ಪೋಸ್ಟ್: ಕೇಂದ್ರದ ವಿರುದ್ಧ ವಿಪಕ್ಷಗಳ ವಾಗ್ದಾಳಿ

ನವದೆಹಲಿ (ಪಿಟಿಐ): 'ದಿ ಟೆಲಿಗ್ರಾಫ್'ನ ಮಾಜಿ ಸಂಪಾದಕ ಆರ್. ರಾಜಗೋಪಾಲ್ ಅವರ ಪಾಸ್‌ಪೋರ್ಟ್ ನವೀಕರಣವನ್ನು ತಡೆಹಿಡಿದ ವಿಚಾರವಾಗಿ ಕಾಂಗ್ರೆಸ್, ಸಿಪಿಎಂ ಮತ್ತು ಟಿಎಂಸಿ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿವೆ.

ರಾಜಗೋಪಾಲ್ ಅವರ ಪರಿಸ್ಥಿತಿಯು, ದೇಶದ ನಾಗರಿಕರ ಹಕ್ಕುಗಳನ್ನು ಕಸಿದ ವ್ಯವಸ್ಥೆಗೆ ಹಿಡಿದ ಕನ್ನಡಿ ಎಂದು ವಿರೋಧ ಪಕ್ಷಗಳ ನಾಯಕರು ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆ ಬಳಿಕ ತಮ್ಮ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿಹಾಕಲಾಗಿದೆ. ಹೀಗಾಗಿ ಪಾಸ್‌ಪೋರ್ಟ್ ನವೀಕರಣವನ್ನೂ ತಡೆಹಿಡಿಯಲಾಗಿದೆ ಎಂದು ರಾಜಗೋಪಾಲ್ ಹೇಳಿದ್ದಾರೆ.

'ಪಶ್ಚಿಮ ಬಂಗಾಳದ 27 ಲಕ್ಷ ಜನರಂತೆ ನನ್ನ ಹೆಸರನ್ನೂ ಮತದಾರರ ಪಟ್ಟಿಯಿಂದ ಹೊರಗಿಡಲಾಗಿದೆ. ದಶಕಗಳ ಹಿಂದಿನ ಕುಟುಂಬದ ದಾಖಲೆಗಾಗಿ ಹೆಚ್ಚಿನ ಸಮಯ ಕಳೆಯುತ್ತಿದ್ದೇನೆ. ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಸಲ್ಲಿಸಿದ್ದರೂ ಹೆಸರು ಸೇರ್ಪಡೆ ಮಾಡಲು ಸಾಧ್ಯವಾಗುತ್ತಿಲ್ಲ. ಸದ್ಯ ಸುಪ್ರೀಂ ಕೋರ್ಟ್ ನಿರ್ದೇಶನದ ನ್ಯಾಯಮಂಡಳಿಯಲ್ಲಿ ಆಕ್ಷೇಪ ಸಲ್ಲಿಸಿದ್ದು, ವಿಚಾರಣೆ ಬಾಕಿ ಇದೆ' ಎಂದು ರಾಜಗೋಪಾಲ್ ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

'ನನ್ನನ್ನು ಸಂತ್ರಸ್ತ ಎಂದು ಬಿಂಬಿಸಿಕೊಳ್ಳುವ ಉದ್ದೇಶವಿಲ್ಲ. ಆದರೆ ಸಾಮಾನ್ಯ ಪ್ರಜೆಗಳು ಎದುರಿಸುತ್ತಿರುವ ದುಃಸ್ಥಿತಿಯನ್ನು ಬಹಿರಂಗಪಡಿಸುತ್ತಿದ್ದೇನೆ' ಎಂದು ಹೇಳಿದ್ದಾರೆ. ಈ ಪೋಸ್ಟ್ ಬೆನ್ನಲ್ಲೇ, ವಿರೋಧ ಪಕ್ಷಗಳು ಕೇಂದ್ರದ ವಿರುದ್ಧ ಹರಿಹಾಯ್ದಿವೆ.

ಕಾಂಗ್ರೆಸ್ ರಾಜ್ಯಸಭಾ ಸದಸ್ಯ ವಿವೇಕ್ ತಂಖಾ ಅವರು, 'ದೇಶದ ಅವ್ಯವಸ್ಥೆಯ ಪ್ರತಿಬಿಂಬ ಇದು' ಎಂದು ಹೇಳಿದ್ದಾರೆ.

ಟಿಎಂಸಿ ರಾಜ್ಯಸಭಾ ಸದಸ್ಯೆ ಸಾಗರಿಕಾ ಘೋಷ್ ಅವರು, 'ರಾಜಗೋಪಾಲ್ ಅವರಿಗೇ ಇಂಥ ಸ್ಥಿತಿ ಎದುರಾಗಿದೆ ಎಂದರೆ, ದೇಶದ ಸಾಮಾನ್ಯ ಪ್ರಜೆಗಳ ಬಗ್ಗೆ ಯೋಚಿಸಿ' ಎಂದು ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ, 'ಜನರ ಹಕ್ಕುಗಳನ್ನು ಕಸಿದುಕೊಳ್ಳಲು, ಬಿಜೆಪಿಯ ವಿಭಜಕ ಹಿಂದುತ್ವ ಕಾರ್ಯಸೂಚಿ ಆಧಾರದಲ್ಲಿ ನಾಗರಿಕರ ಪೌರತ್ವ ನಿರ್ಧರಿಸಲು ಎಸ್‌ಐಆರ್ ಬಳಸಲಾಗುತ್ತಿದೆ' ಎಂದು ಆರೋಪಿಸಿದ್ದಾರೆ.

ಅರುಣಾಚಲ: ಭಾರಿ ಮಳೆ, ಹಠಾತ್ ಪ್ರವಾಹ – ಮೃತರ ಸಂಖ್ಯೆ 3ಕ್ಕೆ ಏರಿಕೆ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದಲ್ಲಿ ಭಾನುವಾರ ಭಾರಿ ಮಳೆ ಸುರಿದು, ಹಠಾತ್ ಪ್ರವಾಹ ಉಂಟಾಗಿದ್ದು, ಇದುವರೆಗೆ ಮೂರು ಮಂದಿ ಮೃತಪಟ್ಟಿದ್ದಾರೆ. 10 ಜಿಲ್ಲೆಗಳು ಪ್ರವಾಹದಿಂದ ಬಾಧಿತವಾಗಿವೆ.

ನಿರಂತರವಾಗಿ ಸುರಿದ ಮಳೆಯಿಂದ ಪ್ರವಾಹ ಹಾಗೂ ಭೂಕುಸಿತಗಳೂ ಸಂಭವಿಸಿದ್ದು, ಹಲವು ಮನೆಗಳು ಜಲಾವೃತಗೊಂಡಿವೆ. ಮೂಲಸೌಕರ್ಯಗಳಿಗೂ ಹಾನಿ ಉಂಟಾಗಿದ್ದು, ಜನರ ಸ್ಥಳಾಂತರ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರಿದೆ.

ಕೆಯಿ ಪನ್ಯೋರ್ ಜಿಲ್ಲೆಯಲ್ಲಿ ಸಂಭವಿಸಿದ ಪ್ರತ್ಯೇಕ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದಾರೆ. ಭಾನುವಾರ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದೆ.

'ಪಕ್ಷಾಂತರಿಗಳನ್ನು ಅನರ್ಹ ಮಾಡಿ'



ಉದ್ಧವ್ ಠಾಕ್ರೆ

ಪರ್ಭಾಣಿ (ಪಿಟಿಐ): ಏಕನಾಥ ಶಿಂದೆ ನೇತೃತ್ವದ ಶಿವಸೇನಾಗೆ ಇತ್ತೀಚೆಗೆ ಪಕ್ಷಾಂತರಗೊಂಡ ಪಕ್ಷದ ಆರು ಸಂಸದರನ್ನು ತಕ್ಷಣವೇ ಅನರ್ಹಗೊಳಿಸಬೇಕು ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಭಾನುವಾರ ಆಗ್ರಹಿಸಿದರು. ಈ ಸಂಸದರ ಪಕ್ಷಾಂತರವು ದೊಡ್ಡ ರಾಜಕೀಯ ಪಿತೂರಿಯ ಭಾಗವಾಗಿದೆ ಎಂದು ಅವರು ಭಾನುವಾರ ಆರೋಪಿಸಿದರು.

ಪರ್ಭಾಣಿಯಲ್ಲಿ ನಡೆದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಕ್ಷಾಂತರ ಕಾನೂನಿನ ನಿಯಮಗಳನ್ನು ಲೋಕಸಭಾ ಸ್ಪೀಕರ್ ಎತ್ತಿಹಿಡಿಯಬೇಕು ಎಂದು ಒತ್ತಾಯಿಸಿದರು.

ಬಾಬರ್ ಜನತಾ ಪಕ್ಷ: ರಾಮಮಂದಿರ ದೇವಾಲಯವನ್ನು ರಾಜಕೀಯ ಲಾಭಕ್ಕಾಗಿ ಬಿಜೆಪಿ ಬಳಸಿಕೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಬಿಜೆಪಿಗೆ 'ಬಾಬರ್ ಜನತಾ ಪಕ್ಷ' ಎಂಬ ಹಣೆಪಟ್ಟಿ ಕಟ್ಟಿದರು.

'ಬಾಬರ್ ರಾಮಮಂದಿರವನ್ನು ಕೆಡವಿದರು. ಆದರೆ, ಹೊಸದಾಗಿ ನಿರ್ಮಿಸಲಾದ ರಾಮ ದೇಗುಲವನ್ನು ಬಾಬರ್ ಜನತಾ ಪಕ್ಷ ಲೂಟಿ ಮಾಡುತ್ತಿದೆ. ಹಾಗಾದರೆ ಅವುಗಳ ನಡುವೆ ವ್ಯತ್ಯಾಸವೇನು' ಎಂದು ಅವರು ಪ್ರಶ್ನಿಸಿದರು.

'ದೇಶದಲ್ಲಿ ಕಾನೂನಿನ ನಿಯಮ ಇದ್ದರೆ ಈ ಆರೂ ಸಂಸದರನ್ನು ತಡ ಮಾಡದೆ ಅನರ್ಹಗೊಳಿಸಬೇಕು. ನಾನು ಲೋಕಸಭಾ ಸ್ಪೀಕರ್ ಅನ್ನು ಇನ್ನೂ ನಂಬುತ್ತೇನೆ. ಒಂದು ವೇಳೆ ಅವರೇ ಕಾನೂನು ಪಾಲಿಸದಿದ್ದರೆ, ಇತರರನ್ನು ಪಾಲಿಸುವಂತೆ ಕೇಳಲು ಸಾಧ್ಯವಿಲ್ಲ' ಎಂದು ಅವರು ಹೇಳಿದರು.

'ಆಪರೇಷನ್ ದೇವೇಂದ್ರ': ಸಂಸದರ ಪಕ್ಷಾಂತರವನ್ನು 'ಆಪರೇಷನ್ ದೇವೇಂದ್ರ' ಎಂದು ಕರೆದ ಅವರು, ದೊಡ್ಡ ರಾಜಕೀಯ ಆಟದ ಭಾಗವಾಗಿ ಇದು ನಡೆದಿದೆ. ಕ್ರಮೇಣ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಬದಿಗೆ ಸರಿಸುವ ಉದ್ದೇಶ ಗೋಚರಿಸುತ್ತಿದೆ ಎಂದರು.

ಬಿಜೆಪಿಯ ಕೇಂದ್ರ ನಾಯಕತ್ವವು ಸಂಭಾವ್ಯ ಪ್ರಧಾನಿ ಅಭ್ಯರ್ಥಿಗಳನ್ನು ಬದಿಗೆ ಸರಿಸುವ ಕಾರ್ಯವನ್ನು ಮಾಡಿಕೊಂಡು ಬಂದಿದೆ. ಕೇಂದ್ರ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್, ನಿತಿನ್ ಗಡ್ಕರಿ ಅವರಂತೆ ಈಗ ಫಡಣವೀಸ್ ಅವರ ಸರದಿಯಾಗಿದೆ ಎಂದು ಅವರು ದೂರಿದರು.

ಪಕ್ಷದ ಹಿರಿಯರೇ ತಮ್ಮ ರೆಕ್ಕೆಗಳನ್ನು ಕತ್ತರಿಸಿದ್ದರಿಂದ ಫಡಣವೀಸ್ ಅಸಹಾಯಕರಾಗಿದ್ದಾರೆ ಎಂದ ಅವರು, ಏಕನಾಥ ಶಿಂದೆ ಅವರನ್ನೂ ಬಿಜೆಪಿ ಬಳಸಿಕೊಂಡು ಬಿಸಾಡುತ್ತದೆ ಎಂದು ಆರೋಪಿಸಿದರು.

'ಬಿಜೆಪಿಯು 1987ರ ವಿಲೇ ಪಾರ್ಲೆ ಉಪಚುನಾವಣೆ ಬಳಿಕ ಹಿಂದುತ್ವವನ್ನು ಅಳವಡಿಸಿಕೊಂಡಿದೆ. ಅದಕ್ಕೂ ಮೊದಲು ಅದು 'ಗಾಂಧಿ ಸಮಾಜವಾದ'ವನ್ನು ಅನುಸರಿಸುತ್ತಿತ್ತು ಮತ್ತು ಬಾಬರಿ ಮಸೀದಿ ಧ್ವಂಸದಿಂದ ಅಂತರ ಕಾಯ್ದುಕೊಂಡಿತ್ತು' ಎಂದು ಠಾಕ್ರೆ ಹೇಳಿದರು.

'ಆರ್‌ಎಸ್‌ಎಸ್ ನಂಟು ವ್ಯಕ್ತಪಡಿಸಲು ಅಧಿಕಾರಿಗಳ ಒಲವು'



ವಿಜಯ ವರ್ಗೀಯ

ಭೋಪಾಲ್ (ಪಿಟಿಐ): ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಸರ್ಕಾರಿ ಅಧಿಕಾರಿಗಳು, ಆರ್‌ಎಸ್‌ಎಸ್ ಜೊತೆಗಿನ ತಮ್ಮ ನಂಟನ್ನು ಹೇಳಿಕೊಳ್ಳಲು ಒಲವು ತೋರುತ್ತಿದ್ದಾರೆ ಎಂದು ಮಧ್ಯಪ್ರದೇಶದ ಸಚಿವ ಕೈಲಾಶ್ ವಿಜಯವರ್ಗೀಯ ಅವರು ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ. ಹೇಳಿಕೆಯು ಅಧಿಕಾರಶಾಹಿಯ ತಟಸ್ಥತೆಗೆ ಹಾಕಿರುವ ಬೆದರಿಕೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಆರ್‌ಎಸ್‌ಎಸ್‌ನ ಮಾಜಿ ಪ್ರಚಾರಕರ ಸ್ಮರಣಾರ್ಥ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ್ದ ವಿಜಯವರ್ಗೀಯ ಅವರು, 'ಆರ್‌ಎಸ್‌ಎಸ್‌ನೊಂದಿಗೆ ಇರುವ ನಂಟನ್ನು ವ್ಯಕ್ತಪಡಿಸಲು ಅಧಿಕಾರಿಗಳಲ್ಲಿ ಸ್ಪರ್ಧೆ ಏರ್ಪಟ್ಟಿದೆ' ಎಂದು ಹೇಳಿದ್ದರು.

'ಬಿಜೆಪಿ ಅಧಿಕಾರಕ್ಕೆ ಬಂದ ನಂತರದಲ್ಲಿ ತಾವೆಲ್ಲರೂ ಆರ್‌ಎಸ್‌ಎಸ್‌ನ ಭಾಗ ಎಂದು ಪ್ರತಿಯೊಬ್ಬ ಅಧಿಕಾರಿ ಮತ್ತು ಉದ್ಯೋಗಿ ಭಾವಿಸುತ್ತಿದ್ದಾರೆ' ಎಂದೂ ಹೇಳಿದ್ದರು.

ಸಚಿವರ ಈ ಹೇಳಿಕೆಯ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದು, ವಿರೋಧ ಪಕ್ಷಗಳು ಟೀಕಿಸಿವೆ.

ಸಚಿವರ ಹೇಳಿಕೆಯ ವಿಡಿಯೊವನ್ನು ಹಂಚಿಕೊಂಡಿರುವ ರಾಜ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜೀತು ಪಟ್ವಾರಿ, 'ವಿಜಯವರ್ಗೀಯ ಅವರ ಹೇಳಿಕೆಯು ಗಂಭೀರ ಸಾಂವಿಧಾನಿಕ ಪ್ರಶ್ನೆಗಳನ್ನು ಎತ್ತುತ್ತಿದೆ. ಒಂದು ವೇಳೆ, ಆಡಳಿತ ವ್ಯವಸ್ಥೆಯಲ್ಲಿ ಇಂಥ ಪರಿಸ್ಥಿತಿ ತಲೆದೋರಿದ್ದರೆ, ಅದು ಕೇವಲ ರಾಜಕೀಯ ಹೇಳಿಕೆ ಅಲ್ಲ. ಬದಲಾಗಿ, ಭಾರತೀಯ ಆಡಳಿತ ವ್ಯವಸ್ಥೆಯ ಪಾರದರ್ಶಕತೆ, ತಟಸ್ಥತೆ ಮತ್ತು ಸಾಂವಿಧಾನಿಕ ಅಸ್ಮಿತೆಯ ಕುರಿತ ಗಂಭೀರ ಸಮಸ್ಯೆ ಎಂದರ್ಥ' ಎಂದು ಹೇಳಿದ್ದಾರೆ.

ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯು ರಾಜ್ಯಕ್ಕೆ ವಿಧೇಯರಾಗಿ ಇರಬೇಕೇ ಹೊರತು, ರಾಜಕೀಯ ಅಥವಾ ಸೈದ್ಧಾಂತಿಕ ಸಂಸ್ಥೆಗಲ್ಲ ಎಂದು ಸಂವಿಧಾನ ಹೇಳುತ್ತದೆ ಎಂದಿದ್ದಾರೆ.

ಲೊ ಸೆಲ್ಸೊ, ಮೆಸ್ಸಿ ಗೋಲು

ನಾಕೌಟ್‌ನಲ್ಲಿ ಅರ್ಜೆಂಟೀನಾ–ಕೇಪ್ ವರ್ಡ್ ಮುಖಾಮುಖಿ

ಅರ್ಜೆಂಟೀನಾ	ಜೋರ್ಡನ್
3	1

ಅರ್ಲಿಂಗ್ಟನ್ (ಎಪಿ): ಜಿಯೊವಾನಿ ಲೊ ಸೆಲ್ಸೊ ಅವರು ಈ ಬಾರಿ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೋಲು ಗಳಿಸಿದ ಅರ್ಜೆಂಟೀನಾದ ಮತ್ತೊಬ್ಬ ಆಟಗಾರನಾದರು. ಕಳೆದೆರಡೂ ಪಂದ್ಯಗಳಲ್ಲಿ ಲಯೊನೆಲ್ ಮೆಸ್ಸಿ ಅವರೇ ಎಲ್ಲ ಐದು ಗೋಲು ಗಳಿಸಿದ್ದರು.

ಭಾನುವಾರ ಬೆಳಿಗ್ಗೆ ನಡೆದ ಜೆ ಗುಂಪಿನ ಹಂತದ ಪಂದ್ಯದಲ್ಲಿ ಅರ್ಜೆಂಟೀನಾ 3–1ರಿಂದ ಜೋರ್ಡನ್ ವಿರುದ್ಧ ಜಯಿಸಿತು. ಇದರೊಂದಿಗೆ ನಾಕೌಟ್ ಹಂತದಲ್ಲಿ ಪುಟ್ಟ ದೇಶ ಮತ್ತು ಇದೇ ಮೊದಲ ಬಾರಿ ವಿಶ್ವಕಪ್ ಆಡುತ್ತಿರುವ ಕೇಪ್ ವರ್ಡ್ ತಂಡವನ್ನು ಎದುರಿಸಲು ಸಿದ್ಧವಾಯಿತು.

ಪಂದ್ಯದ 19ನೇ ನಿಮಿಷದಲ್ಲಿ ನೇರ ಫ್ರೀ ಕಿಕ್‌ನಲ್ಲಿ ಲೊ ಸೆಲ್ಸೊ ಗೋಲು ದಾಖಲಿಸಿದರು.

ಪಂದ್ಯದ ಎರಡನೇ ಅವಧಿಯಲ್ಲಿ ಸಬ್‌ಸ್ಟಿಟ್ಯೂಟ್ ಆಗಿ ಕಣಕ್ಕಿಳಿದ ‘ಅಭಿಮಾನಿಗಳ ಕಣ್ಮಣಿ’ ಮೆಸ್ಸಿ ಒಂದು ಗೋಲು ಹೊಡೆದರು. ಇದರೊಂದಿಗೆ ವಿಶ್ವಕಪ್ ಇತಿಹಾಸದಲ್ಲಿ ತಾವು ಗಳಿಸಿದ ಗೋಲುಗಳ ಸಂಖ್ಯೆಯನ್ನು 19ಕ್ಕೇರಿಸಿದರು. ಪ್ರಸಕ್ತ ಟೂರ್ನಿಯಲ್ಲಿ ಅವರು ಒಟ್ಟು ಆರು ಗೋಲು ಹೊಡೆದರು.

60ನೇ ನಿಮಿಷದಲ್ಲಿ ಅವರು ಮೈದಾನ ಪ್ರವೇಶಿಸಿದರು. 80ನೇ ನಿಮಿಷದಲ್ಲಿ ಗೋಲು ದಾಖಲಿಸಿದರು.

ಮೆಸ್ಸಿ ಕಣ ಪ್ರವೇಶ ಮಾಡುವ ಮುನ್ನ ಲಾಟಾರೊ ಮಾರ್ಟಿನೇಜ್ (31ನೇ ನಿ) ಅವರೂ ಒಂದು ಗೋಲು ಹೊಡೆದರು. ತಮಗೆ ಸಿಕ್ಕ ಪೆನಾಲ್ಟಿ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡರು. ಅದರಿಂದಾಗಿ ತಂಡವು 2–0 ಮುನ್ನಡೆ ಸಾಧಿಸಿತ್ತು.

ಅರ್ಜೆಂಟೀನಾ ತಂಡವು ಕಳೆದ ಒಂಬತ್ತು ವಿಶ್ವಕಪ್ ಪಂದ್ಯಗಳಲ್ಲಿ ಏಳರಲ್ಲಿ ಗೆದ್ದಿದೆ. ಎರಡರಲ್ಲಿ ಡ್ರಾ ಮಾಡಿಕೊಂಡಿದೆ. ಶುಕ್ರವಾರ ನಡೆಯುವ 32ರ ಸುತ್ತಿನಲ್ಲಿ ಪುಟ್ಟ ದೇಶ ಕೇಪ್ ವರ್ಡ್ ವಿರುದ್ಧ ಆಡಲಿದೆ. ಆ ಪಂದ್ಯವು ಮೆಸ್ಸಿಯ ಮೇಜರ್ ಲೀಗ್ ಸಾಕರ್ ತಂಡದ ತವರಾದ ಮಯಾಮಿಯಲ್ಲಿ ನಡೆಯಲಿದೆ.

ಗುಂಪು ಹಂತದ ಎಲ್ಲಾ ಪಂದ್ಯಗಳನ್ನೂ ಅರ್ಜೆಂಟಿನಾ ಗೆದ್ದಿರುವುದು ಇದು ಐದನೇ ಬಾರಿ. 2010 ಮತ್ತು 2014ರ ಸತತ ಟೂರ್ನಿಗಳ ನಂತರ ಇದು ಮೊದಲ ಬಾರಿ. ಕಳೆದ 19 ಗುಂಪು ಹಂತದ ಪಂದ್ಯಗಳಲ್ಲಿ ಅರ್ಜೆಂಟಿನಾ 14 ಗೆಲುವು, ಎರಡು ಸೋಲು ಮತ್ತು ಮೂರು ಡ್ರಾಗಳನ್ನು ದಾಖಲಿಸಿದೆ. 48 ತಂಡಗಳ ಈ ವಿಶ್ವಕಪ್‌ನಲ್ಲಿ ಗುಂಪು ಹಂತದಲ್ಲಿ ಗರಿಷ್ಠ ಒಂಬತ್ತು ಅಂಕಗಳನ್ನು ಗಳಿಸಿದ ಇತರ ತಂಡಗಳು ಫ್ರಾನ್ಸ್ ಮತ್ತು ಮೆಕ್ಸಿಕೋ ಮಾತ್ರ.

ವಿಶ್ವ ಶ್ರೇಯಾಂಕದಲ್ಲಿ 72ನೇ ಸ್ಥಾನದಲ್ಲಿರುವ ಜೋರ್ಡನ್, ತನ್ನ ಮೊದಲ ಅಂತಾರಾಷ್ಟ್ರೀಯ ವಿಶ್ವಕಪ್ ಭಾಗವಹಿಸುವಿಕೆಯಲ್ಲಿ ಎಲ್ಲಾ ಪಂದ್ಯಗಳನ್ನೂ ಸೋತು ಒಟ್ಟು 8-3 ಗೋಲು ಅಂತರದಿಂದ ನಿರ್ಗಮಿಸಿತು.

55ನೇ ನಿಮಿಷದಲ್ಲಿ ಜೋರ್ಡನ್ ತಂಡದ ಮೂಸಾ ಅಲ್ ತಮಾರಿ ಗೋಲು ಗಳಿಸಿದರು. ತಮ್ಮ ತಂಡದ ಸೋಲಿನ ಅಂತರವನ್ನು ಕಡಿಮೆ ಮಾಡಿದರು.



ಜೋರ್ಡನ್ ವಿರುದ್ಧದ ಪಂದ್ಯದಲ್ಲಿ ಮೊದಲ ಗೋಲು ದಾಖಲಿಸಿದ ಅರ್ಜೆಂಟೀನಾ ತಂಡದ ಜಿಯೊವಾನಿ ಲೊ ಸೆಲ್ಸೊ ಸಂಭ್ರಮ —ಎಎಫ್‌ಪಿ ಚಿತ್ರ

ಆಸ್ಟ್ರಿಯಾ, ಅಲ್ಜೀರಿಯಾ ನಾಕೌಟ್‌ಗೆ

ಆಸ್ಟ್ರಿಯಾ	ಅಲ್ಜೀರಿಯಾ
3	3

ಕನ್ಸಾಸ್ ಸಿಟಿ (ಎಪಿ): ರೋಚಕ ಡ್ರಾ ಸಾಧಿಸಿದ ಆಸ್ಟ್ರಿಯಾ ಮತ್ತು ಅಲ್ಜೀರಿಯಾ ತಂಡಗಳು ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ನಾಕೌಟ್ ಹಂತಕ್ಕೆ ಲಗ್ಗೆ ಇಟ್ಟವು. ಇದರಿಂದಾಗಿ ಇರಾನ್ ತಂಡವು ಹೊರಬಿತ್ತು.

ಭಾನುವಾರ ಬೆಳಗಿನ ಜಾವ ನಡೆದ ಪಂದ್ಯದ ನಿಗದಿಯ ಅವಧಿಯಲ್ಲಿ 2–2ರಿಂದ ಸಮಬಲವಾಗಿತ್ತು. ಸ್ಟಾಪೇಜ್ ವೇಳೆಯಲ್ಲಿ ತುರುಸಿನ ಪೈಪೋಟಿ ನಡೆಸಿದ ತಂಡಗಳು ತಲಾ ಒಂದು ಗೋಲು ದಾಖಲಿಸಿ 3–3ರ ಸಮಬಲ ಸಾಧಿಸಿದವು.

ಅಲ್ಜೀರಿಯಾ ತಂಡದ ರಫಿಕ್ ಬೆಲ್ಗಾಲಿ (45ನೇ ನಿ) ಒಂದು ಮತ್ತು ರಿಯಾದ್ ಮಹರೇಜ್ (60ನೇ, 90 + 3ನೇ ನಿ) ಗೋಲು ಹೊಡೆದರು. ಆಸ್ಟ್ರಿಯಾದ ಮಾರ್ಕೊ ಅಮಾತೊವಿಚ್ (28ನಿ), ಮಾರ್ಸೆಲ್ ಸಾಬಿಜರ್ (55ನಿ) ಮತ್ತು ಸಾಸಾ ಕಲಾಜಾದಿಚ್ (90 + 6ನಿ) ಗೋಲು ದಾಖಲಿಸಿದರು.

ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ‘ಸಾಂಬಾ ನಾಡಿನ ತಂಡ’

ಬ್ರೆಜಿಲ್ ಸವಾಲಿಗೆ ಜಪಾನ್ ಸಿದ್ಧ

ಹ್ಯೂಸ್ಟನ್ (ಎಎಫ್‌ಪಿ): ಐದು ಸಲದ ವಿಶ್ವ ಚಾಂಪಿಯನ್, ಕಾರ್ಲೊ ಆನ್ಸೆಲೊಟಿ ನೇತೃತ್ವದ ಬ್ರೆಜಿಲ್ ತಂಡವು ಸೋಮವಾರ ಫಿಫಾ ವಿಶ್ವಕಪ್ ಟೂರ್ನಿಯ 32ರ ಘಟ್ಟದಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಹೋದ ವರ್ಷ ಟೋಕಿಯೊದಲ್ಲಿ ನಡೆದಿದ್ದ ಸ್ನೇಹಪರ ಪಂದ್ಯದಲ್ಲಿ ಜಪಾನ್ 3–2ರಿಂದ ಬ್ರೆಜಿಲ್ ತಂಡಕ್ಕೆ ಸೋಲಿನ ರುಚಿ ತೋರಿಸಿತ್ತು. ಇದೀಗ ಆ ಸೋಲಿನ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಬ್ರೆಜಿಲ್ ಇದೆ. ಉಭಯ ತಂಡಗಳು 14 ಬಾರಿ ಮುಖಾಮುಖಿಯಾಗಿವೆ. ಒಂದು ಬಾರಿ ಮಾತ್ರ ಜಪಾನ್ ಜಯಿಸಿದೆ.

ಇಟಲಿಯ ಮಾಜಿ ಆಟಗಾರ ಕಾರ್ಲೊ ಅವರು ಮುಖ್ಯ ಕೋಚ್ ಆಗಿ ಬರುವ ಮುನ್ನ ಬ್ರೆಜಿಲ್ ತಂಡವು ತೀರಾ ಕೆಳಮಟ್ಟದಲ್ಲಿತ್ತು. ದಕ್ಷಿಣ ಅಮೆರಿಕ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿತ್ತು. ಐದನೇ ಸ್ಥಾನ ಪಡೆದಿತ್ತು.

26 ಆಟಗಾರರ ತಂಡವನ್ನು ರಚಿಸಲು ಕಾರ್ಲೊ ಅವರಿಗೆ ಕೇವಲ ಐದು ಅಂತರ ರಾಷ್ಟ್ರೀಯ ಟೂರ್ನಿಗಳಲ್ಲಿ ಬ್ರೆಜಿಲ್ ಆಟವನ್ನು ಅಳೆಯುವ ಅವಕಾಶ ಮಾತ್ರವಿದ್ದವು. ಆದರೆ ಅವರು ಏಷ್ಯಾ, ಯುರೋಪ್ ಮತ್ತು ಆಫ್ರಿಕಾ ಎದುರಿನ ಹಣಾಹಣಿಗಳನ್ನು ಬಳಸಿಕೊಂಡು ತಂಡದ ರಚನೆ ಮಾಡಿದರು. ಅದರಲ್ಲಿ ಏಷ್ಯಾ ಪ್ರವಾಸದಲ್ಲಿ ಜಪಾನ್ ಎದುರು ಬ್ರೆಜಿಲ್ ಆಘಾತ ಅನುಭವಿಸಿತ್ತು.

ಆದರೆ ವಿಶ್ವಕಪ್ ಪಂದ್ಯವೇ ಬೇರೆ. ಗುಂಪು ಹಂತದಲ್ಲಿ ಬ್ರೆಜಿಲ್ ತಂಡದ ವಿನಿಸಿಯಸ್ ಜೂನಿಯರ್ ಅವರು ಅಮೋಘವಾಗಿ ಆಡಿದ್ದಾರೆ. ಒಟ್ಟು ನಾಲ್ಕು ಗೋಲ್ ದಾಖಲಿಸಿದ್ದಾರೆ. ಮೂರು ವರ್ಷಗಳ ನಂತರ ತಾರಾ ಆಟಗಾರ ನೇಮರ್ ತಂಡಕ್ಕೆ ಮರಳಿದ್ದಾರೆ. ಗಾಯಗಳಿಂದ ಚೇತರಿಸಿಕೊಂಡಿರುವ ಅವರು ತಂಡಕ್ಕೆ ಬಲ ತುಂಬುವ ನಿರೀಕ್ಷೆ ಇದೆ.

‘ನಾವು ಪರಿಪೂರ್ಣರಲ್ಲ. ಆದರೆ ಸುಧಾರಣೆಗೊಳ್ಳುವುದಕ್ಕೆ ಅವಕಾಶಗಳು ಇವೆ. ಟೂರ್ನಿಯ ಮೊದಲ ಪಂದ್ಯದಿಂದಲೂ ನೋಡಿದರೆ ಹಂತಹಂತವಾಗಿ ಉತ್ತಮಗೊಂಡಿದ್ದೇವೆ’ ಎಂದು ಕಾರ್ಲೊ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಪಾನ್ ತಂಡವು ಅಪಾರ ಆತ್ಮವಿಶ್ವಾಸ ದಲ್ಲಿದೆ. ಆದರೆ ಗಾಯದ ಕಾರಣದಿಂದ ನಾಯಕ ವಟಾರು ಎಂಡೋ, ವಿಂಗರ್‌ಗಳಾದ ಕೌರು ಮಿತೊಮಾ ಮತ್ತು ತಕೆಫುಸಾ ಕುಬೊ, ಫಾರ್ವರ್ಡ್ ತಕುಮಿ ಮಿನಾಮಿನೊ ತಂಡದಿಂದ ಹೊರಗುಳಿದಿದ್ದಾರೆ. ಅದರಿಂದಾಗಿ ಬದಲೀ ಆಟಗಾರರ ಮೇಲೆ ನಿರೀಕ್ಷೆಯ ಭಾರವಿದೆ.

ಈ ಪಂದ್ಯಕ್ಕೆ ಇನ್ನೊಂದು ಐತಿಹಾಸಿಕ ಹಿನ್ನೆಲೆಯೂ ಇದೆ. ಜಪಾನ್ ಫುಟ್‌ಬಾಲ್‌ಗೆ ಬ್ರೆಜಿಲ್ ಬಹುಕಾಲದಿಂದ ಒಂದು ಮಾದರಿಯಾಗಿದೆ. ಆ ಸಂಬಂಧದ ಪ್ರತೀಕವೇ ಝಿಕೊ. ಬ್ರೆಜಿಲ್ ತಂಡದ ಮಾಜಿ ಆಟಗಾರ ಝಿಕೊ 1991–94ರಲ್ಲಿ ಜಪಾನ್‌ನಲ್ಲಿ ಫುಟ್‌ಬಾಲ್ ವೃತ್ತಿಪರವಾಗಿ ರೂಪುಗೊಳ್ಳಲು ನೆರವಾಗಿದ್ದರು.

ನಂತರ ಕಾಶಿಮಾ ತಂಡದ ತರಬೇತುದಾರರಾಗಿಯೂ ಕಾರ್ಯನಿರ್ವಹಿಸಿ, ಈಗ ಕ್ಲಬ್‌ನ ತಾಂತ್ರಿಕ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.



ಬ್ರೆಜಿಲ್ ತಂಡದ ವಿನಿಸಿಯಸ್ ಜೂನಿಯರ್ ಎಎಫ್‌ಪಿ ಚಿತ್ರ

ಪಂದ್ಯಗಳು

ಬ್ರೆಜಿಲ್	V/s	ಜಪಾನ್
ಸೋಮವಾರ ರಾತ್ರಿ 10.30		
ಜರ್ಮನಿ	V/s	ಪರಗ್ವೆ
ಮಂಗಳವಾರ ಬೆಳಗಿನ ಜಾವ 2		
ನೆದರ್ಲೆಂಡ್ಸ್	V/s	ಮೊರಾಕ್ಕೊ
ಮಂಗಳವಾರ ಬೆಳಿಗ್ಗೆ 6.30		
ಲೈವ್	ಯುನೈಟ್‌8 ನೆಟ್‌ವರ್ಕ್, ಜೀ5 ಆ್ಯಪ್	

ಹಾಕಿ: ಭಾರತಕ್ಕೆ ಮಣಿದ ಇಂಗ್ಲೆಂಡ್

ಲಂಡನ್ (ಪಿಟಿಐ): ಪ್ರೊ ಲೀಗ್ ಹಾಕಿ ಟೂರ್ನಿಯ ಲಂಡನ್ ಚರಣದಲ್ಲಿ ಅಮೋಘ ಆಟ ಮುಂದುವರಿಸಿರುವ ಭಾರತ ಹಾಕಿ ತಂಡವು ಭಾನುವಾರ ಆತಿಥೇಯ ಇಂಗ್ಲೆಂಡ್ ವಿರುದ್ಧ ಪೆನಾಲ್ಟಿ ಶೂಟೌಟ್‌ನಲ್ಲಿ 3–2ರಿಂದ ರೋಚಕ ಗೆಲುವು ಸಾಧಿಸಿತು. ನಿಗದಿತ ಅವಧಿಯ ಆಟ ಗೋಲುರಹಿತ ಡ್ರಾ ಆಗಿತ್ತು.

ಅಭಿಷೇಕ್, ಶಿಲಾನಂದ್ ಲಾಕ್ರಾ ಹಾಗೂ ನಾಯಕ ಹಾರ್ದಿಕ್ ಶೂಟೌಟ್‌ನಲ್ಲಿ ಚೆಂಡನ್ನು ಯಶಸ್ವಿಯಾಗಿ ಗೋಲುಪೆಟ್ಟಿಗೆಗೆ ಸೇರಿಸಿದರು. ಆತಿಥೇಯ ತಂಡದ ಪರ ಝಕಾರಿ ವಲಾಸ್ ಹಾಗೂ ಡೇವಿಡ್ ಗುಡ್‌ಫೀಲ್ಡ್ ಯಶಸ್ವಿಯಾದರು. ಭಾರತ ತಂಡದ ಡಿಫೆಂಡರ್ ಸಂಜಯ್ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರರಾದರು. ಇದು ಭಾರತಕ್ಕೆ ಲೀಗ್‌ನ ಕೊನೆಯ ಪಂದ್ಯವಾಗಿತ್ತು.

ಚರಣದ ಮೊದಲ ಮುಖಾಮುಖಿಯಲ್ಲಿ ಹಾರ್ದಿಕ್ ಸಿಂಗ್ ನಾಯಕತ್ವದ ಭಾರತ ತಂಡ ಪೆನಾಲ್ಟಿ ಶೂಟೌಟ್‌ನಲ್ಲಿ 2–4ರಿಂದ ಸೋಲನುಭವಿಸಿತ್ತು.

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಸ್ಟೋಕ್ಸ್ ನಿವೃತ್ತಿ

ನಾಟಿಂಗ್‌ಹ್ಯಾಮ್ (ಬ್ರಿಟನ್) (ಎಎಫ್‌ಪಿ): ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಭಾನುವಾರ ನಿವೃತ್ತಿ ಪ್ರಕಟಿಸಿದರು. ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ಅಂತಿಮ ಹಾಗೂ ಮೂರನೇ ಪಂದ್ಯ ಮುಗಿಯುವ ಮೊದಲೇ ಅವರು ಹಠಾತ್ತನೆ ತಮ್ಮ ನಿರ್ಧಾರವನ್ನು ಘೋಷಿಸಿದರು.

35 ವರ್ಷ ವಯಸ್ಸಿನ ತಾರಾ ಆಲ್‌ರೌಂಡ್ ಆಟಗಾರ ಸಾಮಾನ್ಯವಾಗಿ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿಯುತ್ತಿದ್ದರು. ಆದರೆ, ಈ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಆರಂಭಿಕರಾಗಿ ಕಣಕ್ಕಿಳಿದರು. 20 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಸಹಿತ 30 ರನ್ ಗಳಿಸಿದರು.

2011ರಲ್ಲಿ ಪದಾರ್ಪಣೆ ಮಾಡಿದ್ದ ಸ್ಟೋಕ್ಸ್ ಅವರು 121 ಟೆಸ್ಟ್ ಪಂದ್ಯಗಳಿಂದ 14 ಶತಕ ಸೇರಿ 7,228 ರನ್ ಸೇರಿಸಿದ್ದಾರೆ. 114 ಏಕದಿನ ಪಂದ್ಯಗಳಿಂದ 3,463 ರನ್ ಹೊಡೆದಿದ್ದಾರೆ.

ಅವರು 2019ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಅಜೇಯ 84 ರನ್ ಸಿಡಿಸಿ, ತಮ್ಮ ತಂಡಕ್ಕೆ ಚೊಚ್ಚಲ ಕಿರೀಟ ಗೆದ್ದುಕೊಟ್ಟಿದ್ದಾರೆ.

ಪ್ರಶಸ್ತಿ ಸುತ್ತಿಗೆ ಶ್ರೀಕಾಂತ್ ಲಗ್ಗೆ

ಫುಲರ್‌ಟನ್ (ಪಿಟಿಐ): ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಫೈನಲ್‌ಗೆ ಲಗ್ಗೆ ಇಟ್ಟರು.ಆದರೆ, ಭರವಸೆಯ ಆಟಗಾರ್ತಿ ದೇವಿಕಾ ಸಿಹಾಗ್ ಹಾಗೂ ಉದಯೋನ್ಮುಖ ಆಟಗಾರ ರೌನಕ್ ಚೌಹಾನ್ ಅವರ ಯಶಸ್ಸಿನ ಓಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು.

ಶ್ರೀಕಾಂತ್ ಅವರು ಶನಿವಾರ ತಡರಾತ್ರಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ 22–20, 15–21, 21–19ರಿಂದ ಜಪಾನಿನ ಯೊದೈ ಒಕಿಮೊಟೊ ಅವರನ್ನು ಸೋಲಿಸಿದರು. 33 ವರ್ಷ ವಯಸ್ಸಿನ ಆಟಗಾರ ಫೈನಲ್ ಕಣದಲ್ಲಿ 46ನೇ ರ್‍ಯಾಂಕ್‌ನಲ್ಲಿರುವ ಸು ಲಿ ಯಾಂಗ್ ಅವರನ್ನು ಎದುರಿಸಲಿದ್ದಾರೆ.

ಚೀನಾ ತೈಪೆಯ ಯಾಂಗ್ ಅವರು ಪುರುಷರ ಸಿಂಗಲ್ಸ್‌ನ ಇನ್ನೊಂದು ಸೆಮಿಫೈನಲ್‌ನಲ್ಲಿ ಭಾರತದ ರೌನಕ್ ಅವರನ್ನು ಹಿಮ್ಮೆಟ್ಟಿಸಿದರು. ಬಿಡಬ್ಲ್ಯುಎಫ್ ಸೂಪರ್ 300 ಮಟ್ಟದ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಸೆಮಿಫೈನಲ್ ತಲುಪಿದ್ದ 18 ವರ್ಷದ ಆಟಗಾರ ರೌನಕ್ 17–21, 19–21ರಿಂದ ಪರಾಭವಗೊಂಡರು.

ದೇವಿಕಾ ಅವರು ಮಹಿಳೆಯರ ಸಿಂಗಲ್ಸ್‌ನ ಸೆಮಿಫೈನಲ್‌ನಲ್ಲಿ 21–15, 11–21, 15–21ರಿಂದ ಡೆನ್ಮಾರ್ಕ್‌ನ ಲೀನ್ ಕ್ರಿಸ್ಟೊಫರ್‌ಸೆನ್ ಎದುರು ಸೋತರು.

ಮಹಿಳಾ ಟಿ20 ವಿಶ್ವಕಪ್: ಆಸ್ಟ್ರೇಲಿಯಾಗೆ 6 ವಿಕೆಟ್‌ಗಳ ಸುಲಭ ಗೆಲುವು

ಕೌರ್ ಬಳಗಕ್ಕೆ ಕೈಗೂಡದ ಸೆಮಿ ಕನಸು

ಲಂಡನ್ (ಪಿಟಿಐ): ಎಲಿಸ್ ಪೆರಿ ಹಾಗೂ ಆ್ಯಷ್ಲೆ ಗಾರ್ಡನರ್ ಅವರ ಶತಕದ ಜೊತೆಯಾಟದ ಬಲದಿಂದ ಆಸ್ಟ್ರೇಲಿಯಾ ತಂಡವು 6 ವಿಕೆಟ್‌ಗಳಿಂದ ಭಾರತ ತಂಡವನ್ನು ಸೋಲಿಸಿತು. ಅದರೊಂದಿಗೆ, ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ಪಡೆಯ ಅಭಿಯಾನ ಗುಂಪು ಹಂತದಲ್ಲಿಯೇ ಅಂತ್ಯಗೊಂಡಿತು.

ಲಾರ್ಡ್ಸ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ನಿರ್ಣಾಯಕ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸೂಕ್ತ ಸಮಯದಲ್ಲಿ ಲಯಕ್ಕೆ ಮರಳಿದ ಹರ್ಮನ್‌ಪ್ರೀತ್ ಕೌರ್ ಹೊಡೆದ ಅರ್ಧಶತಕದ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 170 ರನ್ ಗಳಿಸಿತು. ಹರ್ಮನ್ 27 ಎಸೆತಗಳಲ್ಲಿ 56 ರನ್ ಗಳಿಸಿದರು. ಅದರಲ್ಲಿ ಅರ್ಧಡಜನ್ ಬೌಂಡರಿ ಮತ್ತು 3 ಸಿಕ್ಸರ್ ಇದ್ದವು.

ಸವಾಲಿನ ಮೊತ್ತ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡದ ಆರಂಭ ವೇನೂ ಉತ್ತಮವಾಗಿರಲಿಲ್ಲ. ಆರಂಭ ಆಟಗಾರ್ತಿ ಜಾರ್ಜಿಯಾ ವೋಲ್ 4 ರನ್‌ಗಳಿಗೆ ಔಟಾದರು. ಅವರ ನಿರ್ಗಮನದ ಬಳಿಕ, ಬೆತ್ ಮೂನಿ (22;20ಎ), ಫೋಬಿ ಲಿಚ್‌ಫೀಲ್ಡ್ (24; 25ಎ) ಉಪಯುಕ್ತ ಕಾಣಿಕೆ ನೀಡಿದರು. ಪೆರಿ (56; 38ಎ) ಹಾಗೂ ಗಾರ್ಡನರ್ (ಔಟಾಗದೆ 53; 29ಎ) ನಾಲ್ಕನೇ ವಿಕೆಟ್‌ಗೆ ಬರೋಬ್ಬರಿ 100 ರನ್ ಸೇರಿಸಿದರು. ಆಸ್ಟ್ರೇಲಿಯಾ ಪಡೆ 19 ಓವರ್‌ಗಳಲ್ಲಿ 4 ವಿಕೆಟ್‌ಗೆ 172 ರನ್ ಗಳಿಸಿ, ಜಯ ಸಾಧಿಸಿತು. ಎ ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ (10 ಅಂಕ) ಸೆಮಿಫೈನಲ್‌ಗೆ ಲಗ್ಗೆ ಹಾಕಿತು.

ಇದಕ್ಕೆ ಮೊದಲು, ಭಾರತ ತಂಡದ ಸ್ಮೃತಿ ಮಂದಾನ (38; 37ಎ, 4X6) ಮತ್ತು ಶಫಾಲಿ ವರ್ಮಾ (34; 26ಎ, 4X3, 6X2) ಮೊದಲ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು. ಹತ್ತನೇ ಓವರ್‌ನಲ್ಲಿ ಆಸ್ಟ್ರೇಲಿಯಾ ತಂಡದ ನಾಯಕಿ ಸೋಫಿ ಮಾಲಿನೆ ಅವರು ಶಫಾಲಿಯನ್ನು ಕ್ಲೀನ್‌ಬೌಲ್ಡ್ ಮಾಡಿ ಜೊತೆಯಾಟ ಮುರಿದರು. ಸ್ಮೃತಿ ಅವರು ರನೌಟ್ ಆಗುವುದರೊಂದಿಗೆ ಆತಂಕ ಮೂಡಿತು.

ಕ್ರೀಸ್‌ಗೆ ಬಂದ ಹರ್ಮನ್ ಅವರು ಆಸರೆಯಾದರು. ಜೆಮಿಮಾ ಜೊತೆಗೂಡಿ ಒಟ್ಟು 45 ಎಸೆತಗಳಲ್ಲಿ 64 ರನ್ ಸೇರಿಸಿದರು. ಆದರೆ ಈ ಹೊತ್ತಿನಲ್ಲಿ ಗಾಯಗೊಂಡ ಜೆಮಿಮಾ ಅವರು ಇನಿಂಗ್ಸ್‌ನಲ್ಲಿ ಇನ್ನೂ ಒಂದು ಓವರ್ ಬಾಕಿಯಿದ್ದಾಗ ನಿವೃತ್ತರಾಗಿ ಮರಳಿದರು.

ಅದೇ ಓವರ್‌ನಲ್ಲಿ ಹರ್ಮನ್ ಅವರು ಸೋಫಿ ಬೌಲಿಂಗ್‌ನಲ್ಲಿ ಎಲಿಸ್ ಪೆರಿಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4ಕ್ಕೆ170 (ಸ್ಮೃತಿ ಮಂದಾನ 38, ಶಫಾಲಿ ವರ್ಮಾ 34, ಜೆಮಿಮಾ ರಾಡ್ರಿಗಸ್ 34, ಹರ್ಮನ್‌ಪ್ರೀತ್ ಕೌರ್ 56, ಸೋಫಿ ಮಾಲಿನೆ 46ಕ್ಕೆ2). ಆಸ್ಟ್ರೇಲಿಯಾ: 19 ಓವರ್‌ಗಳಲ್ಲಿ 4ಕ್ಕೆ172 (ಬೆತ್ ಮೂನಿ 22, ಫೋಬಿ ಲಿಚ್‌ಫೀಲ್ಡ್ 24 ಎಲಿಸ್ ಪೆರಿ 56, ಆ್ಯಷ್ಲೆ ಗಾರ್ಡನರ್ 53, ಶ್ರೀಚರಣಿ 32ಕ್ಕೆ2).

ಪಂದ್ಯದ ಆಟಗಾರ್ತಿ: ಎಲಿಸ್ ಪೆರಿ

ಅಜೇಯ ಅರ್ಧಶತಕ ಗಳಿಸಿದ ಆ್ಯಷ್ಲೆ ಗಾರ್ಡನರ್ ಎಎಫ್‌ಪಿ ಚಿತ್ರ

ನಾಲ್ಕರ ಘಟ್ಟಕ್ಕೆ ದಕ್ಷಿಣ ಆಫ್ರಿಕಾ ಲಗ್ಗೆ

ಲಂಡನ್ (ಪಿಟಿಐ): ಮರಿಝಾನ್ ಕಾಪ್ ಅವರ ಆಲ್‌ರೌಂಡ್ ಆಟದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ 4 ವಿಕೆಟ್‌ಗಳಿಂದ ಬಾಂಗ್ಲಾದೇಶವನ್ನು ಮಣಿಸಿತು. ಆ ಮೂಲಕ (8 ಅಂಕ) ನಾಲ್ಕರ ಘಟ್ಟ ಪ್ರವೇಶಿಸಿತು.

ಟಾಸ್ ಗೆದ್ದ ಬಾಂಗ್ಲಾದೇಶ ತಂಡವು ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 117 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 19.2 ಓವರ್‌ಗಳಲ್ಲಿ 6ಕ್ಕೆ118 ರನ್ ಗಳಿಸಿ ಗೆದ್ದಿತು.

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಐರ್ಲೆಂಡ್‌ಗೆ ಚಾರಿತ್ರಿಕ ಸರಣಿ ಜಯ

ಮೂಂದ್ರಾಗೆ 3 ವಿಕೆಟ್ • ಶ್ರೇಯಸ್ ಪಡೆಗೆ ಮುಖಭಂಗ

ಬೆಲ್‌ಫಾಸ್ಟ್ (ಪಿಟಿಐ): ಆತಿಥೇಯ ಐರ್ಲೆಂಡ್ ತಂಡವು ಭಾರತದ ಎದುರು ಟಿ20 ಕ್ರಿಕೆಟ್ ಸರಣಿಯನ್ನು ಗೆದ್ದು ಚಾರಿತ್ರಿಕ ಸಾಧನೆ ಮಾಡಿತು.

ಭಾನುವಾರ ಇಲ್ಲಿ ನಡೆದ ಸರಣಿಯ ಅಂತಿಮ ಮತ್ತು ಎರಡನೇ ಪಂದ್ಯದಲ್ಲಿ ಐರ್ಲೆಂಡ್ ತಂಡವು 1 ರನ್ ಅಂತರದ ರೋಚಕ ಜಯ ಸಾಧಿಸಿತು. 155 ರನ್ ಗೆಲುವಿನ ಗುರಿಯನ್ನು ಬೆನ್ನಟ್ಟಿದ್ದ ಭಾರತ ತಂಡವು 9 ವಿಕೆಟ್‌ಗಳಿಗೆ 153 ರನ್ ಸೇರಿಸಿ ಸೋತಿತು. ಐರ್ಲೆಂಡ್ ಬೌಲರ್‌ಗಳಾದ ಜೈ ಮೂಂದ್ರಾ (32ಕ್ಕೆ3) ಹಾಗೂ ಮ್ಯಾಥ್ಯೂ ಹೊಲಾರ್ಡ್ ಭಾರತದ ಸೋಲಿಗೆ ಕಾರಣರಾದರು.

ಇದೇ ಮೊದಲ ಬಾರಿ ಐರ್ಲೆಂಡ್ ತಂಡವು ಭಾರತದ ಎದುರು ಸರಣಿ 2–0ಯಿಂದ ಗೆದ್ದಿತು.

ಟಾಸ್ ಗೆದ್ದ ‘ಹಾಲಿ ವಿಶ್ವ ಚಾಂಪಿಯನ್’ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಈ ಪಂದ್ಯದಲ್ಲಿಯೂ ವೈಭವ್ ಸೂರ್ಯವಂಶಿಗೆ ಪದಾರ್ಪಣೆಯ ಅವಕಾಶ ಲಭಿಸಲಿಲ್ಲ.

ಎಡಗೈ ವೇಗಿ ಅರ್ಷದೀಪ್ ಸಿಂಗ್ (35ಕ್ಕೆ2), ಪ್ರಿನ್ಸ್ ಯಾದವ್ (22ಕ್ಕೆ3) ಮತ್ತು ಶಿವಂ ದುಬೆ (25ಕ್ಕೆ2) ಅವರು ಉತ್ತಮ ದಾಳಿ ನಡೆಸಿದರು. ಅದರ ನಡುವೆಯೂ ಹ್ಯಾರಿ ಟಕರ್ (53; 47ಎ, 4X5, 6X1) ಅವರ ಅಮೋಘ ಅರ್ಧಶತಕ ಗಮನ ಸೆಳೆಯಿತು. ತಂಡವು 20 ಓವರ್‌ಗಳಲ್ಲಿ 8ಕ್ಕೆ154 ರನ್ ಗಳಿಸಿತು.

ನಂತರ ಶಿಸ್ತಿನ ಫೀಲ್ಡಿಂಗ್ ಮತ್ತು ಬೌಲಿಂಗ್ ಮೂಲಕ ಜಯಿಸಿತು. ಭಾರತದ ಆರಂಭಿಕ ಬ್ಯಾಟರ್‌ಗಳಾದ ಸಂಜು ಸ್ಯಾಮ್ಸನ್ ಮತ್ತು ಅಭಿಷೇಕ್ ಶರ್ಮಾ ಅವರಿಬ್ಬರೂ ಸೊನ್ನೆ ಸುತ್ತಿದರು. ಮೊದಲ 4 ಎಸೆತಗಳಲ್ಲಿ ಇಬ್ಬರೂ ನಿರ್ಗಮಿಸಿದಾಗ ಸ್ಕೋರ್ ಬೋರ್ಡ್‌ನಲ್ಲಿ ಕೇವಲ 1 ರನ್ ಇತ್ತು. ಎರಡೂ ವಿಕೆಟ್‌ಗಳನ್ನು ಜೈ ಮೂಂದ್ರಾ ಕಬಳಿಸಿದರು. ಇಶಾನ್ ಕಿಶನ್ 12 ರನ್ ಗಳಿಸಿ ರನೌಟ್ ಆದರು. ನಾಯಕ ಶ್ರೇಯಸ್ ಅಯ್ಯರ್ 10 ರನ್ ಗಳಿಸಿ ಜೈ ಮೂಂದ್ರಾ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ತಿಲಕ್ ಮತ್ತು ದುಬೆ (20ರನ್) ಅವರ ಹೋರಾಟದಿಂದ ಮತ್ತೆ ಗೆಲುವಿನ ಆಸೆ ಚಿಗುರಿತ್ತು. ಆದರೆ ಕೈಗೂಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 20 ಓವರ್‌ಗಳಲ್ಲಿ 8ಕ್ಕೆ154 (ಹ್ಯಾರಿ ಟೆಕ್ಟರ್ 53, ರಾಸ್ ಅಡೇರ್ 16, ಲಾರ್ಕನ್ ಟಕರ್ 15, ಬೆಂಜಮಿನ್ ಕ್ಯಾಲಿಜ್ 37, ಜಾರ್ಜ್ ಡಾಕ್ರೆಲ್ 19, ಅರ್ಷದೀಪ್ ಸಿಂಗ್ 35ಕ್ಕೆ2, ಪ್ರಿನ್ಸ್ ಯಾದವ್ 22ಕ್ಕೆ3, ಶಿವಂ ದುಬೆ 25ಕ್ಕೆ2) ಭಾರತ: (ತಿಲಕ್ ವರ್ಮಾ 55, ಅಕ್ಷರ್ ಪಟೇಲ್ 14, ಇಶಾನ್ ಕಿಶನ್ 12, ಶಿವಂ ದುಬೆ 20, ಜೈ ಮೂಂದ್ರಾ 32ಕ್ಕೆ3 ಮ್ಯಾಥ್ಯೂ ಹೊಲಾರ್ಡ್ 26ಕ್ಕೆ3)

ಫಲಿತಾಂಶ: ಐರ್ಲೆಂಡ್ ತಂಡಕ್ಕೆ 1 ರನ್ ಜಯ. ಸರಣಿಯಲ್ಲಿ 2–0 ಗೆಲುವು

ಪಂದ್ಯ ಮತ್ತು ಸರಣಿಯ ಆಟಗಾರ: ಜೈ ಮೂಂದ್ರಾ

ಸರಣಿ ಗೆದ್ದ ಸಂಭ್ರಮದಲ್ಲಿ ಐರ್ಲೆಂಡ್ ತಂಡದ ಆಟಗಾರರು ‘ಎಕ್ಸ್’ ಚಿತ್ರ

ಕಿಂಗ್ಸ್‌ಗೆ ಶರಣಾದ ಯೋಧಾಸ್

ಮಹಾರಾಜ ಟ್ರೋಫಿ ಕ್ರಿಕೆಟ್; ರತನ್‌ಗೆ ಮೂರು ವಿಕೆಟ್

• ಸತೀಶ ಬಿ.

ಹುಬ್ಬಳ್ಳಿ: ಮಳೆಯ ಕಣ್ಣಾಮುಚ್ಚಾಲೆ ನಡುವೆಯೂ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶಿವಮೊಗ್ಗ ಯೋಧಾಸ್ ಎದುರು ಎಂಟು ವಿಕೆಟ್‌ಗಳಿಂದ ಸುಲಭವಾಗಿ ಜಯಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಭಾನುವಾರ ಮಳೆ ಸುರಿದಿದ್ದರಿಂದ ಪಂದ್ಯವನ್ನು 17 ಓವರ್ ಗಳಿಗೆ ಸೀಮಿತಗೊಳಿಸಲಾಯಿತು. ಶಿವಮೊಗ್ಗ ತಂಡ ನೀಡಿದ 113 ರನ್‌ಗಳ (ವಿಜೆಡಿ ನಿಯಮ) ಗುರಿಯನ್ನು ಮಂಗಳೂರು ತಂಡವು 26 ಎಸೆತಗಳು ಬಾಕಿ ಇರುವಂತೆಯೇ ಮುಟ್ಟಿತು. ಈ ಗೆಲುವಿನೊಂದಿಗೆ ಮಂಗಳೂರು ತಂಡ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಮಂಗಳೂರು ತಂಡಕ್ಕೆ ಆರಂಭಿಕ ಬ್ಯಾಟರ್‌ಗಳಾದ ವೆಂಕಟೇಶ್ ಎಂ. (45 ರನ್, 25 ಎ, 4X4, 6X3) ಮತ್ತು ನಿಕಿನ್ ಜೋಸ್ (31 ರನ್, 25 ಎ, 4X2, 6X2) ಉತ್ತಮ ಆರಂಭ ನೀಡಿದರು. ಈ ಜೋಡಿ ಮೊದಲ ವಿಕೆಟ್ ಜತೆಯಾಟದಲ್ಲಿ 81 (47 ಎ) ರನ್ ಕಲೆ ಹಾಕಿತು. ನಂತರ ಸಿದ್ಧಾರ್ಥ್ ಅಖಿಲ್ (ಔಟಾಗದೆ 22), ರಾಜ್‌ವೀರ್ ವಾಧ್ವಾ (ಔಟಾಗದೆ 10) ಅವರು ತಂಡಕ್ಕೆ ನೆರವಾದರು.

ಇದಕ್ಕೂ ಮುನ್ನ ಟಾಸ್ ಸೋತು ಬ್ಯಾಟ್ ಮಾಡುವ ಅವಕಾಶ ಪಡೆದ ಶಿವಮೊಗ್ಗ ಪವರ್‌ಪ್ಲೇ ಅವಧಿಯಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ನಾಯಕ ಸ್ಮರಣ್ ಆರ್., (6) ನಿರಾಶೆ ಮೂಡಿಸಿದರು. ಇನ್ನೊಂದು ಬದಿಯಲ್ಲಿ ವಿಕೆಟ್ ಉರುಳುತ್ತಿದ್ದರೂ ತಾಳ್ಮೆಯಿಂದ ಆಡಿದ ಲವನೀತ್ ಸಿಸೋಡಿಯಾ (35 ರನ್, 28 ಎ) ಅವರು ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದರು. ಅವರು ಸಿದ್ಧಾರ್ಥ್ ಎಸೆತದಲ್ಲಿ ನಿಕಿನ್ ಜೋಸ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ವಾಸವ್ ವೆಂಕಟೇಶ್ ಹೆಚ್ಚು ಹೊತ್ತು ನಿಲ್ಲಲಿಲ್ಲ. ಹರ್ಷಿಲ್ ಧರ್ಮಾನಿ (28 ರನ್, 26 ಎ) ಕಾಣಿಕೆ ನೀಡಿದರು. ಎಡಗೈ ಸ್ಪಿನ್ನರ್ ರತನ್ ಬಿ.ಆರ್ (16ಕ್ಕೆ 3) ಮತ್ತು ಮಧ್ಯಮವೇಗಿ ವಿ.ಕೌಶಿಕ್ (15ಕ್ಕೆ 2) ಎದುರಾಳಿ ತಂಡವನ್ನು ನಿಯಂತ್ರಿಸಿದರು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಯೋಧಾಸ್: 17 ಓವರ್‌ಗಳಲ್ಲಿ 8ಕ್ಕೆ 113 (ಲವನೀತ್ ಸಿಸೋಡಿಯಾ 35, ಹರ್ಷಿಲ್ ಧರ್ಮಾನಿ 28; ರತನ್ ಬಿ.ಆರ್ 16ಕ್ಕೆ 3, ವಿ.ಕೌಶಿಕ್ 15ಕ್ಕೆ 2). ಕೋಸ್ಟಲ್ ಕಿಂಗ್ಸ್ ಮಂಗಳೂರು: 12.4 ಓವರ್‌ಗಳಲ್ಲಿ 2 ವಿಕೆಟ್‌ಗೆ 118 (ವೆಂಕಟೇಶ್ ಎಂ., 45, ನಿಕಿನ್ ಜೋಸ್ 31; ಭೀಮರಾವ್ ನವಲೆ 24ಕ್ಕೆ 2).

ಪಂದ್ಯದ ಆಟಗಾರ: ರತನ್ ಬಿ.ಆರ್

ಮೂರು ವಿಕೆಟ್ ಪಡೆದ ರತನ್ ಬಿ.ಆರ್ ಚಿತ್ರ: ಗೋವಿಂದರಾಜ ಜವಳಿ

ಇಂದಿನ ಪಂದ್ಯಗಳು:
ಗುಲ್ಬರ್ಗ ಮಿಸ್ಟಿಕ್ಸ್–ಹುಬ್ಬಳ್ಳಿ ಟೈಗರ್ಸ್
ಆರಂಭ: ಮಧ್ಯಾಹ್ನ 2
ಬೆಂಗಳೂರು ಬ್ಲಾಸ್ಟರ್ಸ್–ಕೋಸ್ಟಲ್ ಕಿಂಗ್ಸ್ ಮಂಗಳೂರು
ಆರಂಭ: ರಾತ್ರಿ 7

ವಿಂಬಲ್ಡನ್ ಟೆನಿಸ್ ಟೂರ್ನಿ ಇಂದಿನಿಂದ: ಜೊಕೊ, ಸೆರೆನಾ, ಅರಿನಾ ಮೇಲೆ ಕಣ್ಣು

ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿ ಸಿನ್ನರ್

ಲಂಡನ್ (ಎಪಿ/ಎಎಫ್‌ಪಿ): ಐತಿಹಾಸಿಕ ಆಲ್ ಇಂಗ್ಲೆಂಡ್ ಟೆನಿಸ್ ಕ್ಲಬ್‌ನಲ್ಲಿ ಹಸಿರಿನಿಂದ ಕಂಗೊಳಿಸುತ್ತಿರುವ ಅಂಕಣಗಳಲ್ಲಿ ಸೋಮವಾರದಿಂದ ಟೆನಿಸ್ ಕ್ರೀಡೆಯ ಸೊಬಗು ಗರಿಗೆದರಲಿದೆ.

ಪ್ರತಿಷ್ಠಿತ ವಿಂಬಲ್ಡನ್ ಟೆನಿಸ್ ಟೂರ್ನಿಯ 140ನೇ ಆವೃತ್ತಿಯಲ್ಲಿ ತಾರೆಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲು ಸಜ್ಜಾಗಿದ್ದಾರೆ. ವಿಶ್ವದ ನಾಲ್ಕು ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಒಂದಾಗಿರುವ ಈ ಟೂರ್ನಿಯು 1877ರಲ್ಲಿ ಮೊದಲ ಬಾರಿ ಆಯೋಜನೆಗೊಂಡಿತ್ತು.

ಪ್ರಸ್ತುತ ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಕಾರ್ಲೋಸ್ ಅಲ್ಕರಾಜ್ ಅವರ ಗೈರಿನಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದ್ದಾರೆ. ಅಗ್ರಶ್ರೇಯಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಈ ವರ್ಷದಲ್ಲಿ ಮೊದಲ ‘ಮೇಜರ್’ (ಗ್ರ್ಯಾನ್‌ಸ್ಲಾಮ್) ಕಿರೀಟ ಗೆಲ್ಲುವ ‘ಫೇವರಿಟ್’ ಆಗಿದ್ದಾರೆ. ಅಲ್ಕರಾಜ್ ಅವರು ಮಣಿಕಟ್ಟಿನ ಗಾಯದಿಂದಾಗಿ ಕಣಕ್ಕಿಳಿಯುತ್ತಿಲ್ಲ. ಫ್ರೆಂಚ್ ಓಪನ್ ಟೂರ್ನಿಯಲ್ಲಿಯೂ ಅವರು ಆಡಿರಲಿಲ್ಲ.

ಪ್ರಧಾನ ಕೋರ್ಟ್‌ನಲ್ಲಿ ನಡೆಯುವ ಉದ್ಘಾಟನೆ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಸಿನ್ನರ್ ಅವರು ಸರ್ಬಿಯಾದ ಮಿಯೊಮಿರ್ ಕೆಕ್ಮಾನೊವಿಚ್ ಅವರನ್ನು ಎದುರಿಸಲಿದ್ದಾರೆ. ಫ್ರೆಂಚ್ ಓಪನ್ ಟೂರ್ನಿಯ ಎರಡನೇ ಸುತ್ತಿನಲ್ಲೇ ಹೊರಬಿದ್ದಿದ್ದ ಅವರು ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ. ಸಬಲೆಂಕಾ ಅವರು ಸರ್ಬಿಯಾದ ಟಿಯೊಡಾರಾ ಕೊಸ್ಟೊವಿಚ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಟ್ರೋಫಿ ಮೇಲೆ ಕಣ್ಣಿಟ್ಟಿರುವ ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಹಾಗೂ ವೃತ್ತಿಪರ ಟೆನಿಸ್‌ಗೆ ಪುನರಾಗಮನ ಮಾಡಿರುವ ಅಮೆರಿಕದ ದಿಗ್ಗಜ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಅವರು ಟೂರ್ನಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಏಳು ಬಾರಿಯ ಚಾಂಪಿಯನ್ ಜೊಕೊವಿಚ್ ಅವರು ಏಳನೇ ಶ್ರೇಯಾಂಕ ಪಡೆದಿದ್ದಾರೆ. 39 ವರ್ಷ ವಯಸ್ಸಿನ ಆಟಗಾರ ಮೊದಲ ಸುತ್ತಿನಲ್ಲಿ ಚೀನಾದ ವು ಯಿಬಿಂಗ್ ಅವರನ್ನು ಎದುರಿಸುವರು. ವೈಲ್ಡ್ ಕಾರ್ಡ್ ಪಡೆದಿರುವ 44 ವರ್ಷ ವಯಸ್ಸಿನ ಸೆರೆನಾ ಅವರು ಮೊದಲ ಸುತ್ತಿನಲ್ಲಿ ಆಸ್ಟ್ರೇಲಿಯಾದ ಯುವ ಆಟಗಾರ್ತಿ ಮಾಯಾ ಜಾಯ್ಂಟ್ ಅವರನ್ನು ಎದುರಿಸಲಿದ್ದಾರೆ. ಇಲ್ಲಿ ಏಳು ಬಾರಿ ಸಿಂಗಲ್ಸ್ ಚಾಂಪಿಯನ್ ಆಗಿರುವ ಅವರು ಅಕ್ಕ ವೀನಸ್ ವಿಲಿಯಮ್ಸ್ ಜೊತೆಗೂಡಿ ಡಬಲ್ಸ್‌ನಲ್ಲೂ ಕಣಕ್ಕಿಳಿಯಲಿದ್ದಾರೆ.

ಈಚೆಗಷ್ಟೇ ನಡೆದ ಫ್ರೆಂಚ್ ಓಪನ್ ಟೂರ್ನಿಯ ಚಾಂಪಿಯನ್‌ಗಳಾದ ಇಟಲಿಯ ಅಲೆಕ್ಸಾಂಡರ್ ಜ್ವರೇವ್ ಮತ್ತು ರಷ್ಯಾದ ಮಿರಾ ಅಂದ್ರೆಯೇವಾ ಅವರು ಇಲ್ಲಿಯೂ ಪ್ರಶಸ್ತಿ ಗೆಲ್ಲುವ ಉತ್ಸಾಹದಲ್ಲಿದ್ದಾರೆ.

ಐದನೇ ಶ್ರೇಯಾಂಕ ಪಡೆದಿರುವ ಮಿರಾ ಅವರು ಪೋಲೆಂಡ್‌ನ ಮ್ಯಾಗ್ಡಾ ಲಿನೆಟ್ ವಿರುದ್ಧ ಹಾಗೂ ಜ್ವರೇವ್ ಅವರು ಬೆಲ್ಜಿಯಂನ ಅಲೆಕ್ಸಾಂಡರ್ ಬ್ಲಾಕ್ಸ್ ಎದುರು ಅಭಿಯಾನ ಆರಂಭಿಸಲಿದ್ದಾರೆ. ಮಹಿಳೆಯರ ಸಿಂಗಲ್ಸ್ ಹಾಲಿ ಚಾಂಪಿಯನ್ ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಮೊದಲ ಸುತ್ತಿನಲ್ಲಿ ಅಮೆರಿಕದ ಟೇಲರ್ ಟೌನ್‌ಸೆಂಡ್ ಅವರನ್ನು ಎದುರಿಸಲಿದ್ದಾರೆ.

ಕಜಾಕಸ್ತಾನದ ಎಲಿನಾ ರಿಬಾಕಿನಾ ಹಾಗೂ ಅಮೆರಿಕದ ಜೆಸಿಕಾ ಪೆಗುಲಾ ಅವರೂ ಪೈಪೋಟಿಗೆ ಸಿದ್ಧರಾಗಿದ್ದಾರೆ.

ಇಟಲಿಯ ಯಾನಿಕ್ ಸಿನ್ನರ್ —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದತ್ತ ನೊವಾಕ್ ಜೊಕೊವಿಚ್ ಚಿತ್ತ
- ವೃತ್ತಿಪರ ಟೆನಿಸ್‌ಗೆ ಮರಳಿರುವ ಸೆರೆನಾ
- ಲಯಕ್ಕೆ ಮರಳುವ ಒತ್ತಡದಲ್ಲಿ ಅರಿನಾ

ಟೂರ್ನಿಯ ಅಗ್ರ ಶ್ರೇಯಾಂಕದ ಆಟಗಾರರು

ಶ್ರೇಯಾಂಕ	ಪುರುಷರು	ಮಹಿಳೆಯರು
1	ಯಾನಿಕ್ ಸಿನ್ನರ್	ಅರಿನಾ ಸಬಲೆಂಕಾ
2	ಅಲೆಕ್ಸಾಂಡರ್ ಜ್ವರೇವ್	ಎಲಿನಾ ರಿಬಾಕಿನಾ
3	ಫಿಲಿಕ್ಸ್ ಊಜರ್ ಆ್ಯಲಿಯಾಸಿಮ್	ಇಗಾ ಶ್ವಾಂಟೆಕ್
4	ಬೆನ್ ಶೆಲ್ಟನ್	ಜೆಸಿಕಾ ಪೆಗುಲಾ
5	ಅಲೆಕ್ಸ್ ಡಿ ಮಿನೋರ್	ಮಿರಾ ಅಂದ್ರೆಯೇವಾ
6	ಟೇಲರ್ ಫ್ರಿಟ್ಝ್	ಅಮಾಂಡ ಅನಿಸಿಮೋವಾ
7	ನೊವಾಕ್ ಜೊಕೊವಿಚ್	ಕೊಕೊ ಗಾಫ್
8	ಡೇನಿಯಲ್ ಮೆಡ್ವೆಡೇವ್	ಎಲಿನಾ ಸ್ವಿಟೋಲಿನಾ

ಸಿಂಗಲ್ಸ್ ವಿಜೇತರಿಗೆ ₹44 ಕೋಟಿ

ಸುಮಾರು ₹800 ಕೋಟಿ (64 ದಶಲಕ್ಷ ಯೂರೊ) ಬಹುಮಾನ ಮೊತ್ತದ ಈ ಟೂರ್ನಿಯ ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಜೇತರಿಗೆ ತಲಾ ₹44 ಕೋಟಿ ಸಿಗಲಿದೆ. ರನ್ನರ್ಸ್‌ಅಪ್ ಆದವರು ₹22 ಕೋಟಿ ಪಡೆಯಲಿದ್ದಾರೆ. ಡಬಲ್ಸ್ ಪ್ರಶಸ್ತಿ ಗೆದ್ದ ಜೋಡಿ ಸುಮಾರು ₹9 ಕೋಟಿ ಹಣವನ್ನು ಜೇಬಿಗಿಳಿಸಿಕೊಳ್ಳಲಿದೆ